ಶಿಷ್ಟ ಸಾಹಿತ್ಯ ಮತ್ತು ಜಾನಪದ ಸಂವೇದನೆ ಮಾಲಿಕೆ

# ಕುಮಾರವ್ಯಾಸ ಮತ್ತು ಜಾನಪದ

ಪ್ರೊ. ಎಂ. ಆರ್. ಲಕ್ಷ್ಮೀದೇವಿ



ಕರ್ನಾಟಕ ಜಾನಪದ ಮತ್ತು ಯಕ್ಷಗಾನ
ಅಕಾಡೆಮಿ ಬೆಂಗಳೂರು ೫೬೦ ೦೦೨

ಶಿಷ್ಟ ಸಾಹಿತ್ಯ ಮತ್ತು ಜಾನಪದ ಸಂವೇದನೆ-೫

# ಕುಮಾರವ್ಯಾಸ ಮತ್ತು ಜಾನಪದ

ಪ್ರೊ. ಎಂ. ಆರ್. ಲಕ್ಷ್ಮೀದೇವಿ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು - ೫೬೦ ೦೦೨

*KUMARAVYASA MATTU JANAPADA* (Classic Literature & Folklore Series-5) : *Written By.Prof. M.R. Lakshmidevi , Pub. M.S. Siddegowda Registrar, Janapada and Yakshagana Academy, Nrupatunga Road, Bangalore - 560 002.*

Pages XIV + 131 Price : Rs. 35/

© Publisher

*ಪ್ರಧಾನ ಸಂಪಾದಕರು :*

ಪ್ರೊ. ಎಚ್. ಜೆ. ಲಕ್ಕಪ್ಪಗೌಡ

*ಸಂಪಾದಕರು :*

ಪ್ರೊ. ಹಂಪ. ನಾಗರಾಜಯ್ಯ

ಮೊದಲ ಮುದ್ರಣ : ೧೯೯೭

ಬೆಲೆ : ರೂ. ೩೫/-

**ಛಾಯಾಕ್ಷರ ಜೋಡಣೆ:**

ವರ್ಷಿಣಿ ಗ್ರಾಫಿಕ್ಸ್, ಬೆಂಗಳೂರು - ೪೦ ✆ : 3402575

**ಮುದ್ರಕರು :**

ಸ್ನೇಹಾ ಪ್ರಿಂಟರ್ಸ್

೨೨, ೨ನೇ ಮೈನ್, ಅತ್ತಿಗುಪ್ಪೆ

ವಿಜಯನಗರ ೨ನೇ ಹಂತ

ಬೆಂಗಳೂರು - ೪೦ ✆ : 3302417

# ಪ್ರಧಾನ ಸಂಪಾದಕರ ಮಾತು

೧

ಲೋಕದ ಜ್ಞಾನ - ವಿಜ್ಞಾನಗಳ ತಾಯಿಬೇರು ಜಾನಪದ ಎಂಬುದು ಈಗಾಗಲೇ ಎಲ್ಲರಿಗೂ ಗೊತ್ತಿರುವ ಸಂಗತಿ. ಎಲ್ಲಾ ಸಾಹಿತ್ಯ, ಕಲೆ, ಸಮಾಜ ವಿಜ್ಞಾನಗಳು ಹಾಗೂ ಕೆಲಮಟ್ಟಿಗೆ ಎಲ್ಲಾ ಜೀವ ವಿಜ್ಞಾನಗಳು ಜಾನಪದದ ಪ್ರೇರಣೆಯಿಂದ ತಮ್ಮ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿವೆ, ಮುಖ್ಯ ಉದ್ದೇಶವನ್ನು ಎತ್ತರಿಸಿಕೊಂಡಿವೆ, ಸತ್ವವನ್ನು ಸಮೃದ್ಧಿಸಿಕೊಂಡಿವೆ ಎಂಬುದನ್ನು ಮರೆಯುವಂತಿಲ್ಲ. ಹಾಗೆಯೇ ಇದು ನಮ್ಮ ಸಾಹಿತ್ಯದ ಎಲ್ಲಾ ಸ್ತರಗಳಲ್ಲಿಯೂ ಒಂದಲ್ಲಾ ಒಂದು ರೀತಿಯಲ್ಲಿ ತನ್ನ ಉಸಿರನ್ನು ಬೆರೆಸಿದೆ ಎಂಬುದು ಆಳವಾದ ಸಂಶೋಧನೆಯ ಮೂಲಕ ವಿದಿತವಾಗಿದೆ.

೨

ಶಿಷ್ಟ ಸಾಹಿತ್ಯ ಅಕ್ಷರಸ್ಥರ ಸೃಷ್ಟಿಯಾದರೆ ಜನಪದ ಸಾಹಿತ್ಯ ಅನಕ್ಷರಸ್ಥರ ಸೃಜನಶೀಲ ಪ್ರತಿಭೆಯ ಅತಿ ಸಹಜವಾದ ಶಕ್ತ ಅಭಿವ್ಯಕ್ತಿ. ಆದ್ದರಿಂದ ಶಿಷ್ಟ ಸಾಹಿತ್ಯ ಹುಟ್ಟುವ ಮೊದಲೇ ಆದಿ ಮಾನವರು ತಮ್ಮ ದೈನಂದಿನ ನೋವು - ನಲಿವುಗಳನ್ನು, ಅನಿಸಿಕೆ-ಅನುಭವಗಳನ್ನು, ಕನಸು- ಕಲ್ಪನೆಗಳನ್ನು, ಕ್ರಿಯೆ-ಪ್ರತಿಕ್ರಿಯೆಗಳನ್ನು ಮೌಖಿಕವಾಗಿ ಹಾಡಿನ ಮೂಲಕ, ಕಥೆಯ ಮೂಲಕ, ಗಾದೆ ಒಗಟು ಒಡಪುಗಳ ಮೂಲಕ ತೋಡಿಕೊಂಡರು. ಇದು ಆಡು ಮಾತಿಗಿಂತ ವಿಶೇಷವಾದ ಧ್ವನಿಯನ್ನು, ಬನಿಯನ್ನು, ಶಕ್ತಿಯನ್ನು, ಪರಿಣಾಮವನ್ನು, ಹೊಸ ಹೊಳಹುಗಳನ್ನು ಒಳಗೊಂಡ ಕಾರಣದಿಂದ ಅವುಗಳನ್ನು ಮರೆಯುವುದು ಸುಲಭವಾಗಲಿಲ್ಲ. ಹೀಗಾಗಿ ಅವುಗಳನ್ನು ಮೊದಲು ಕೇಳಿದ ಜನ ಮತ್ತೊಬ್ಬರಿಗೆ,

ಮಗದೊಬ್ಬರಿಗೆ, ಇಡೀ ಸಮುದಾಯಕ್ಕೆ ತಮ್ಮ ಕಂಠ ಮತ್ತು ನಾಲಿಗೆಗಳ ಮೂಲಕ ದಾಟಿಸುತ್ತಾ ಬಂದರು. ಹೀಗಾಗಿ ಅದು ಅಂಬುತೀರ್ಥದಲ್ಲಿ ಹುಟ್ಟುವ ಶರಾವತಿಯಂತೆ ಚಿಕ್ಕದಾಗಿ, ಅಪ್ರಸಿದ್ಧವಾಗಿ ಹುಟ್ಟಿ, ಬರುಬರುತ್ತಾ ತೊರೆಯಾಗಿ ನೆರೆಯಾಗಿ ಮಹಾಪ್ರವಾಹವಾಗಿ ಹರಿಯಿತು. ಈ ಪ್ರವಾಹದಲ್ಲಿ ಜನತೆಯ ಜೀವನದ ಎಲ್ಲಾ ಮಗ್ಗುಲುಗಳು ಬಹುಮಟ್ಟಿಗೆ ಮೈ ತೆರೆದುಕೊಂಡವು. ಲಿಪಿಯ ಉಗಮದೊಡನೆ, ಅಕ್ಷರ ಕಲಿಕೆಯೊಡನೆ, ಶಿಕ್ಷಣ ಸಿಕ್ಕಿದಂತೆಲ್ಲಾ ಈ ಮೌಖಿಕ ಪರಂಪರೆಯ ಅನುಭವಗಳು ಪ್ರತಿಭಾವಂತ ಕವಿಗಳ ಮನಸ್ಸಿನ ಭೂಮಿಯಲ್ಲಿ ನೆಟ್ಟು ಅವರ ಕೃತಿಗಳಿಗೆ ಜೀವಧಾತುವನ್ನು ಒದಗಿಸಿದವು. ಈ ಸಂಗತಿ ಜಗತ್ತಿನ ಎಲ್ಲಾ ಸಾಹಿತ್ಯಕ್ಕೂ ಅನ್ವಯಿಸುತ್ತದೆ. ಏಕೆಂದರೆ ಸಾಹಿತ್ಯ ಎನ್ನುವುದು ಜನಜೀವನದಿಂದ ಹೊರತಾದುದಲ್ಲ. ಜನರಿಂದಲೇ ಹುಟ್ಟಿ, ಜನರಿಗಾಗಿ ಹುಟ್ಟಿ, ಜನರಿಗೆ ಪ್ರೇರಣೆಯನ್ನು ಕೊಡುವುದು ಈ ಸಾಹಿತ್ಯ. ಆದ್ದರಿಂದ ಒಂದು ಸಾಹಿತ್ಯ ಶಕ್ತವೂ ಉಪಯುಕ್ತವೂ ಪರಿಣಾಮಕಾರಿಯೂ ಪ್ರಾಮಾಣಿಕವೂ ಜೀವನಬದ್ಧವೂ ಮತ್ತು ಚಿರಂತನವೂ ಆಗಬೇಕಾದರೆ ಅದರಲ್ಲಿ ಜಾನಪದ ಜೀವನದ ಮುಖ್ಯಾಂಶಗಳು ಕಣ್ಣಡೆಯಬೇಕು. ಈ ದೃಷ್ಟಿಯಿಂದ ನೋಡಿದಾಗ ಜಾನಪದವನ್ನು ಹೊರತುಪಡಿಸಿದ ಯಾವ ಮಹಾಕೃತಿಯೂ ಸಾಹಿತ್ಯ ಲೋಕದಲ್ಲಿ ಆವಿರ್ಭವಿಸಿಲ್ಲ ಎಂಬ ಸತ್ಯ ಮನದಟ್ಟಾಗುತ್ತದೆ.

ಭಾರತದ ರಾಮಾಯಣ, ಮಹಾಭಾರತಗಳನ್ನೇ ಉದಾಹರಣೆಗೆ ತೆಗೆದುಕೊಂಡರೆ ಈ ಸಂಗತಿ ಸ್ಪಷ್ಟವಾಗುತ್ತದೆ. ರಾಮಾಯಣದ ವಸ್ತು ಮತ್ತು ಅದರ ಪಾತ್ರಗಳು ಇಂದಿಗೂ ಭಾರತೀಯರಿಗೆ ಆದರ್ಶದ ಸೆಲೆಗಳಾಗಿವೆ. ಈ ರಾಮಾಯಣದ ಕತೆ ಕೂಡ ಮೂಲತಃ ಜನಪದ ಗಾಯಕರಿಂದಲೇ ಸೃಷ್ಟಿಗೊಂಡಿದ್ದು ಮತ್ತು ಪ್ರಸಾರಗೊಂಡಿದ್ದು. ರಾಮಾಯಣದ ಬಾಲಕಾಂಡದಲ್ಲಿ ಕ್ರೌಂಚವಧೆಯ ಕಾರಣದಿಂದ ವ್ಯಾಧನಿಗೆ ಶಾಪಕೊಟ್ಟ ವಾಲ್ಮೀಕಿ ತನ್ನ ಎಲೆಮನೆಗೆ ಹೋದಮೇಲೆ ತಾನು ಕೊಟ್ಟ ಶಾಪ ಹೇಗೆ ತಂತ್ರೀಲಯ ಸಮನ್ವಿತವಾಗಿ, ಶ್ಲೋಕವಾಗಿ ಪರಿಣಮಿಸಿದೆ ಎಂಬುದನ್ನು ಕಂಡುಕೊಳ್ಳುತ್ತಾನೆ. ಅದೇ ವೇಳೆಗೆ ನಾರದ ಮಹರ್ಷಿ ಬಂದು ಶ್ರೀರಾಮನ ಕತೆಯನ್ನು ಹೇಳಿ ರಾಮಾಯಣ ಕೃತಿಯನ್ನು ರಚಿಸುವಂತೆ ಆಶೀರ್ವದಿಸುತ್ತಾನೆ. ಅಂದರೆ ಈಗಾಗಲೇ ರಾಮನೆಂಬ ಆದರ್ಶ ನಾಯಕನ, ಸೀತೆ ಎಂಬ ಆದರ್ಶ ಸತಿಯ, ಲಕ್ಷ್ಮಣ-ಭರತರೆಂಬ ಆದರ್ಶ ಸಹೋದರರ,

ಹನುಮಂತನೆಂಬ ಆದರ್ಶ ಸೇವಕನ ಕತೆ ತಲೆಮಾರಿನಿಂದ ತಲೆಮಾರಿಗೆ ಹಬ್ಬಿ ಜನಮನದಲ್ಲಿ ಹರಡಿ ಅತ್ಯಂತ ಪರಿಪಕ್ವ ಸ್ಥಿತಿಗೆ ಬೆಳೆದು ಬಂದಿತ್ತು ಎಂಬುದು ಸ್ಪಷ್ಟವಾಗುತ್ತದೆ. ಆದರೆ ವಾಸ್ತವವಾಗಿ ವಾಲ್ಮೀಕಿ ನಾರದ ಹೇಳಿದಂಥ ಕತೆಯಿಂದ ಪ್ರಭಾವಿತಗೊಂಡು ನಾಡಿನ ಉದ್ದಗಲಕ್ಕೂ ಕಾಡು, ಹಳ್ಳಿ, ನಗರಗಳೆನ್ನದೆ ಸಂಚರಿಸಿ ಜನಮನದಲ್ಲಿ ಸ್ಥಾಯಿಯಾಗಿದ್ದ ರಾಮ ಕತೆಯ ವಿವಿಧ ರೂಪಗಳನ್ನು ಸಂಗ್ರಹಿಸಿರಬೇಕು. ಹೀಗೆ ತಾನು ಸಂಗ್ರಹಿಸಿದ ರಾಮ ಕತೆಗೆ ಸಂಬಂಧಪಟ್ಟ ವೈವಿಧ್ಯಮಯ ಘಟನೆಗಳಿಗೆ ಒಂದು ಸುಸಾಂಗತ್ಯವನ್ನು ಕಲ್ಪಿಸಿ ಮಹಾಕಾವ್ಯವಾಗಿ ಹೆಣೆದಿರಬೇಕು. ರಾಮಾಯಣದಲ್ಲಿ ಬರುವ ಅಯೋಧ್ಯೆಯ, ಕಿಷ್ಕಿಂಧೆಯ ಮತ್ತು ಲಂಕೆಯ ಜನಜೀವನದ ಚಿತ್ರಗಳು ಆ ಕಾಲದ ಜನರ ಚಿತ್ರಗಳೇ ಆಗಿವೆ. ತಮ್ಮ ವಿವೇಚನೆಗೆ ಮೀರಿದ ಸಂಗತಿಗಳಿಗೆ, ತಮ್ಮ ಅಳತೆಗೆ ದಕ್ಕಲಾರದ ವ್ಯಕ್ತಿಗಳ ಜೀವನಕ್ಕೆ ಅತಿಮಾನುಷತೆಯನ್ನು ಆರೋಪಿಸುವುದು ಜನಪದರ ವಿಶಿಷ್ಟ ಗುಣ. ಅದರಂತೆ ಮಾನವನಾಗಿದ್ದ ರಾಮನನ್ನು ದೈವ ಸಮಾನನನ್ನಾಗಿ, ಅನಂತರ ದೇವತಾ ಅವತಾರವನ್ನಾಗಿ ನಮ್ಮ ಜನ ಕಲ್ಪಿಸಿದರು. ಹಾಗೆಯೇ ಸ್ವಭಾವದಲ್ಲಿ ಪಕ್ವವಾಗಿಲ್ಲದ ಮತ್ತು ಆಚರಣೆಯಲ್ಲಿ ಸ್ವಲ್ಪ ಅನಾಗರಿಕತೆಯನ್ನು ಮೈಗೂಡಿಸಿಕೊಂಡಿದ್ದ ಜನರನ್ನು ವಾನರರೆಂದೂ; ದೈಹಿಕ ಶಕ್ತಿಯಲ್ಲಿ, ಭಾವೋನ್ಮಾದದಲ್ಲಿ ಮತ್ತು ರೂಕ್ಷತನದಲ್ಲಿ ತಮ್ಮ ಜೀವನವನ್ನು ನಡೆಸುತ್ತಿದ್ದ ಜನರನ್ನು ರಾಕ್ಷಸರೆಂದೂ ಮತ್ತು ಇತರರೆಲ್ಲರಿಗಿಂತ ಮೇಲ್ಮಟ್ಟದ ಹಾಗೂ ನಿಗ್ರಹಾನುಗ್ರಹ ಸಮರ್ಥರಾಗಿದ್ದ ಜನಾಂಗವನ್ನು ದೇವರೆಂದೂ ನಮ್ಮವರು ಪರಿಭಾವಿಸಿರಬೇಕು. ಈ ಕಲ್ಪನೆಗಳೇ ಮುಂದೆ ವಾಲ್ಮೀಕಿ ರಾಮಾಯಣದಲ್ಲಿ ಪ್ರತಿಭಾಪೂರ್ಣವಾಗಿ ಬೆಳೆದಿರುವುದನ್ನು ಕಾಣಬಹುದು. ಇದಲ್ಲದೆ ಉತ್ತರಕಾಂಡದಲ್ಲಿ ವಾಲ್ಮೀಕಿ ಲವಕುಶರಿಗೆ ರಾಮಾಯಣವನ್ನು ಬಾಯಿಪಾಠ ಮಾಡಿಸಿದನೆಂದೂ, ಅವರಿಬ್ಬರೂ ಮಧುರ ಕಂಠದಿಂದ ಆ ಕಾವ್ಯವನ್ನು ಹಾಡಿದರೆಂದೂ ಉಲ್ಲೇಖವಿದೆ. ವಾಸ್ತವವಾಗಿ ಈ ಉಲ್ಲೇಖ ಭಾರತದ ಮೊತ್ತಮೊದಲ ಜನಪದ ಗಾಯಕರನ್ನು ಕುರಿತದ್ದು ಎಂದು ಊಹಿಸಬಹುದು. ಅಕ್ಷರ ನಾಗರಿಕತೆ ಇಲ್ಲದಿದ್ದ ಅಥವಾ ಕಡಿಮೆ ಇದ್ದ ಕಾಲದಲ್ಲಿ ತನ್ನ ರಾಮಾಯಣವನ್ನು ಜನಪ್ರಿಯಗೊಳಿಸಲು ಈ ಕುಶಲವರೆಂಬ ಗಾಯಕದ್ವಯರನ್ನು ಮಾಧ್ಯಮವನ್ನಾಗಿ ಉಪಯೋಗಿಸಿಕೊಂಡಿರಬಹುದು. ಇವರೇ ಮುಂದೆ ರಾಮನ ಮಕ್ಕಳೆಂಬ ಕಲ್ಪನೆಯ ಪರಿವೇಷದಲ್ಲಿ ಸಿಕ್ಕಿಹಾಕಿಕೊಂಡರು. ಇಷ್ಟೇ ಅಲ್ಲ, ವಾಲ್ಮೀಕಿ

ರಾಮಾಯಣದಲ್ಲಿ ಬರುವ ವಿವಿಧ ಜನರ ಸ್ವಭಾವಗಳು, ನಡವಳಿಕೆಗಳು, ಆಚರಣೆಗಳು ಆ ಕಾಲದ ಜನಜೀವನವನ್ನು ಸಾಕಷ್ಟು ಶಕ್ತಿಯುತವಾಗಿ ಪ್ರತಿಬಿಂಬಿಸಿವೆ. ನೇಗಿಲ ತೆರೆಯಲ್ಲಿ ಸೀತೆ ಹುಟ್ಟಿದಳು ಎಂಬ ಕಲ್ಪನೆ, ಅವಳು ಜನಕನಿಗೆ ಯಜ್ಞಭೂಮಿಯಲ್ಲಿ ದೊರೆತಳೆಂಬ ಕಲ್ಪನೆ ಕೂಡ ಯಾವುದೋ ಕಾರಣಕ್ಕಾಗಿ ಭೂಮಿಗೆ ಬಿಸಾಡಲ್ಪಟ್ಟ ಅನಾಥ ಹೆಣ್ಣೊಂದರ ಕತೆಯ ಅತಿಮಾನುಷ ಸ್ವರೂಪ ಮಾತ್ರ ಎಂದು ಊಹಿಸಲಿಕ್ಕೆ ಆಸ್ಪದವಿದೆ. ಬೇಡನಾಗಿ, ದಲಿತನಾಗಿ ಹುಟ್ಟಿ ವಾಲ್ಮೀಕಿಯಾದ ಕವಿ ಈ ಮೂಲಕ ಪರಿತ್ಯಜಿತ ಹೆಣ್ಣು ಮಗುವೊಂದನ್ನು ನಾಯಕಿಯನ್ನಾಗಿ ಮಾಡಿ ಆಕೆ ಸಕಲ ಸ್ತ್ರೀಯರ ಆದರ್ಶ ಮಾತೆಯಾಗಿ ಹೇಗೆ ಬೆಳೆದಳು ಎಂಬ ರೋಚಕ ಚಿತ್ರವನ್ನು ನೀಡಿ ಮತ್ತೊಂದು ರೀತಿಯಲ್ಲಿ ದಲಿತ ಯಶೋಗಾಥೆಯನ್ನು ಹಾಡಿದ್ದಾನೆಂದು ಊಹಿಸಲು ಅವಕಾಶವಿದೆ. ಈ ಕೃತಿಯಲ್ಲಿರುವ ಅತಿಮಾನುಷ ಮುಖವಾಡವನ್ನು ಸರಿಸಿ ಯಾವುದೇ ಸಂಪ್ರದಾಯಶೀಲ ಕನ್ನಡಕವನ್ನು ಹಾಕದೆ ಪರಿಶೀಲಿಸಿದಾಗ ಇಂತಹ ಜಾನಪದೀಯ ತಥ್ಯಗಳು ಹೊಮ್ಮುತ್ತವೆ. ಹಾಗೆಯೇ ಅಣ್ಣನ ಹೆಂಡತಿಯನ್ನು ತಮ್ಮನೂ, ತಮ್ಮನ ಹೆಂಡತಿಯನ್ನು ಅಣ್ಣನೂ ಇಟ್ಟುಕೊಳ್ಳುವ ಅಥವಾ ಮದುವೆ ಮಾಡಿಕೊಳ್ಳುವ ಗುಡ್ಡುಗಾಡು ಜನರ ಸಂಪ್ರದಾಯವನ್ನು ಯಾವುದೇ ಅಶ್ಲೀಲತೆಯ ಅಥವಾ ಜಿಗುಪ್ಸೆಯ ಸೋಂಕಿಲ್ಲದೆ ಅತ್ಯಂತ ಸಹಜವಾಗಿ ವರ್ಣಿಸಿದ್ದಾನೆ. ತಮ್ಮ ರಾಕ್ಷಸ ಬಲದಿಂದ ಮನ ಬಂದವರನ್ನು ಅಪಹರಿಸುವ ಮತ್ತು ಭೋಗಿಸುವ ರಾಕ್ಷಸ ಸಂಸ್ಕೃತಿ ಕೂಡ ಆದಿಮಾನವ ಜನಾಂಗದ್ದೇ ಆಗಿದೆ. ಮಹಾಭಾರತದ ಕತೆ ಕೂಡ ಇದಕ್ಕಿಂತ ಭಿನ್ನವಾಗಿಲ್ಲ. ಸ್ವಲ್ಪಮಟ್ಟಿಗೆ ಪ್ರಸಿದ್ಧವಾಗಿದ್ದ ಒಂದು ಗುಂಪಿನಲ್ಲಿ ನಡೆದ ದಾಯಾದಿಗಳ ಕಲಹದ ದುರಂತ ಕತೆ ಕರ್ಣಾಕರ್ಣಿಯಾಗಿ ತಲೆಮಾರಿನಿಂದ ತಲೆಮಾರಿಗೆ ಹಾದು ಬಂದು ವ್ಯಾಸ ಎನ್ನುವ ಪ್ರತಿಭಾಶೀಲ ಸಂಯೋಜಕ ಕವಿಯ ಕೈಗೆ ಸಿಕ್ಕಿ ಈಗಿನ ರೂಪವನ್ನು ತಳೆದಿದೆ. ವ್ಯಾಸ ಎಂಬ ಹೆಸರು ಕೂಡ ಜಿಜ್ಞಾಸೆಗೆ ಅರ್ಹವಾಗಿದೆ. ವ್ಯಾಸ ಎಂದರೆ ಸುದೀರ್ಘವಾದುದು ಎಂದು ಅರ್ಥ. ಆದ್ದರಿಂದ ಜನಪದ ಕವಿಗಳ ಒಂದು ಸುದೀರ್ಘ ಸರಣಿಯೇ ಇಷ್ಟು ಬೃಹತ್ ಕತೆಯ ನಿರ್ಮಾಣಕ್ಕೆ ಕಾರಣವಾಗಿದೆ ಎಂದು ಊಹಿಸುವುದು ತಪ್ಪಲ್ಲ. ಮಹಾಭಾರತ ಕಾಲದ ವಿವಿಧ ಜನಗಳ ಸಂಪ್ರದಾಯಗಳು ಇಲ್ಲಿ ವೈಭವೀಕೃತವಾಗಿದ್ದರೂ ಅವುಗಳ ಮೂಲ ಏನು ಎಂಬುದನ್ನು ಅರಿಯುವುದು ಕಷ್ಟವಲ್ಲ. ಬೆಸ್ತರ ಹೆಣ್ಣಿಗೆ ಋಷಿ

ಮರುಳಾಗುವುದು, ಆ ಕಾಲದಲ್ಲಿ ಮೇಲ್ವರ್ಗದವರು ಕೆಳವರ್ಗದ ಹೆಣ್ಣುಗಳನ್ನು ತಮ್ಮ ಉಪಭೋಗದ ವಸ್ತುಗಳೆಂದು ಭಾವಿಸಿದ್ದರ ಸಂಕೇತ. ಪರಾಶರ ಅವಳನ್ನು ಯೋಜನಗಂಧಿಯನ್ನಾಗಿ ಮಾಡಿದ ಎಂಬುದು ಕೇವಲ ಕಲ್ಪನೆ ಅಥವಾ ಅವಳು ಬೆಸ್ತ ಜೀವನವನ್ನು ತೊರೆದು ಸ್ವಲ್ಪ ಮಟ್ಟಿಗೆ ನಾಗರಿಕ ಜೀವನಕ್ಕೆ ಕಾಲಿಟ್ಟಳು ಎಂಬುದರ ಸಂಕೇತ. ಹಾಗೆಯೇ ಗಂಡಂದಿರಲ್ಲಿ ಮಕ್ಕಳಾಗದಿದ್ದಾಗ ಹಿರಿಯರ ಅನುಮತಿ ಪಡೆದು ಬೇರೊಬ್ಬ ಗಂಡಸಿನಲ್ಲಿ ಮಕ್ಕಳನ್ನು ಪಡೆಯುವ ನಿಯೋಗ ಪದ್ಧತಿ ಆಗಿನ ಕಾಲದ ಜನಜೀವನದಲ್ಲಿದ್ದ ಜಾನಪದ ಪದ್ಧತಿಯೇ ಆಗಿದೆ. ಕುಂತಿಗೆ ದೂರ್ವಾಸರು ಕೊಟ್ಟ ವರಗಳ ಪ್ರಸಂಗವನ್ನು ಹೀಗೆಯೇ ಅರ್ಥೈಸಬೇಕಾಗುತ್ತದೆ. ಪಾಂಡುರಾಜ ಶಾಪಗ್ರಸ್ತನಾದ ಮೇಲೆ ಯಮಧರ್ಮ, ಇಂದ್ರ, ವಾಯು, ಅಶ್ವಿನಿ ದೇವತೆಗಳಿಂದ ಪಾಂಡವರು ಹುಟ್ಟುವ ಕ್ರಿಯೆ ಕೂಡ ಗಂಡನ ಅನುಮತಿಯನ್ನು ಪಡೆದು ಪರಪುರುಷರಲ್ಲಿ ಮಕ್ಕಳನ್ನು ಪಡೆಯುವ ಸಂಪ್ರದಾಯದ ವೈಭವೀಕರಣ. ಹಾಗೆಯೇ ಅಲ್ಲಿ ಬರುವ ಹಿಡಿಂಬೆ, ಘಟೋದ್ಗಜ ಮುಂತಾದ ರಾಕ್ಷಸರು ಎನ್ನಲಾದ ಜನಾಂಗ ಕೂಡ ಕಾಡಿನ ನಾಡಿನ ಅನಾಗರಿಕ ಜನಾಂಗದ ಕಾಲ್ಪನಿಕ ರೂಪ. ಮಹಾಭಾರತದಲ್ಲಿ ಮೊದಲಿನಿಂದ ಕೊನೆಯವರೆಗೂ ಬೇರೆ ಬೇರೆ ಜನಾಂಗಗಳು, ಭಿನ್ನ ಭಿನ್ನವಾದ ಸಂಸ್ಕೃತಿಯ ವಿಧಾನಗಳ ಚಿತ್ರ ಸಾಮಾಜಿಕ ಮಾನವಶಾಸ್ತ್ರದ ದೃಷ್ಟಿಯಿಂದ ಪರಿಶೀಲನಾರ್ಹವಾಗಿದೆ. ಅಲ್ಲಿ ಬರುವ ಬೇಡ ಏಕಲವ್ಯ ಸಮಸಪ್ತಕರೆಂಬ ರಾಕ್ಷಸರು, ಅರಸು ಮನೆತನದ ಕಟ್ಟು ಕಟ್ಟಳೆಗಳು ಮುಂತಾದುವೆಲ್ಲಾ ಜಾನಪದೀಯವೇ. ಸಮಾಜದ ಶ್ರೇಣಿಯಲ್ಲಿ ಅತ್ಯಂತ ಮೇಲ್ದರ್ಜೆಯಲ್ಲಿದ್ದ ಜನರನ್ನು ದೇವತೆಗಳೆಂದು ಕಲ್ಪಿಸಿ, ಸಾಮಾನ್ಯ ಮಾನವರ ಜೀವನದಲ್ಲಿ ಅವರು ನಿರ್ಣಾಯಕ ಪಾತ್ರವನ್ನು ವಹಿಸಿದಂಥ ಚಿತ್ರಣ ಕೂಡ ಜಾನಪದೀಯ ಕಲ್ಪನೆಯೇ. ದ್ರೌಪದಿ ಪಂಚ ಪಾಂಡವರ ಪತ್ನಿಯಾದರೂ ಅವಳಿಗೆ ಪತಿವ್ರತೆ ಎಂಬ ಪಟ್ಟವನ್ನು ಕಟ್ಟಿದ ಬಗೆ ಆ ಕಾಲದಲ್ಲಿದ್ದ ವಿವಾಹ ಪದ್ಧತಿಯನ್ನು ಸಂಕೇತಿಸುತ್ತದೆ. ಕೆಲವು ಗುಡ್ಡಗಾಡು ಜನಾಂಗಗಳಲ್ಲಿ ಅಣ್ಣತಮ್ಮಂದಿರೆಲ್ಲರೂ ಒಬ್ಬಳೇ ಹೆಣ್ಣನ್ನು ಮದುವೆಯಾಗುವ ಸಂಪ್ರದಾಯವಿದೆ. ಅದೇ ಸಂಪ್ರದಾಯದಂತೆ ಪಾಂಡವರು ಬಹುಶಃ ದುರ್ಯೋಧನನನ್ನು ಗೆಲ್ಲಲು ಅವರಿಗೆ ಅನಿವಾರ್ಯವಾಗಿದ್ದ ಐಕ್ಯಮತ್ಯ ದೃಷ್ಟಿಯಿಂದ ಕೂಡ ದ್ರೌಪದಿಯನ್ನು ಎಲ್ಲರೂ ಮದುವೆಯಾದರು. ಮಹಾಭಾರತದಲ್ಲಿ ಬರುವ ಇಂತಹ ಹಲವಾರು ಪ್ರಸಂಗಗಳು ಸಾಹಿತ್ಯದ ಮೂಲವಾಹಿನಿಯಾಗಿ ಜಾನಪದ

ಹೇಗೆ ಹರಿದಿದೆ-ಸಾಹಿತ್ಯ ರೂಪದಲ್ಲಿ ಮಾತ್ರವಲ್ಲ ಜೀವನ ರೂಪದಲ್ಲೂ ಎಂಬುದನ್ನು ತೋರ್ಪಡಿಸುತ್ತದೆ.

ಗ್ರೀಸಿನ ಮಹಾಕಾವ್ಯಗಳಾದ ಇಲಿಯಡ್ ಮತ್ತು ಒಡಿಸ್ಸಿ ಕಾವ್ಯಗಳು ಸಹ ಮೂಲತಃ ಜನಪದ ಕಾವ್ಯಗಳೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಇವುಗಳ ಕರ್ತೃ ಹೋಮರನೆಂದು ಹೇಳಲಾಗಿದ್ದರೂ ಹೋಮರ್ ಎಂಬ ಪದ ಹೋಮರಾಯ್ಡ್ ಪದದಿಂದ ನಿಷ್ಪತ್ತಿಯಾಗಿದೆಯೆಂದೂ, ಹೋಮರಾಯ್ಡ್ ಎಂದರೆ ಅಂಧ ಗಾಯಕರ ಗುಂಪು ಎಂದೂ ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ. ಹೀಗಾಗಿ ಗ್ರೀಸ್‌ನಲ್ಲಿ ಪ್ರಚಲಿತವಾಗಿದ್ದ ವೀರರ ಕತೆಗಳನ್ನು ಹಾಡುಗಳನ್ನಾಗಿ ಕಟ್ಟಿ ಅಲ್ಲಿನ ಜನಪದ ಗಾಯಕರು ಹಾಡಿ ರಾಷ್ಟ್ರದ ತುಂಬಾ ಪ್ರಚಾರ ಮಾಡಿದರು. ಆ ಸತ್ಯ ಕತೆಗಳಿಗೆ ಶುದ್ಧ ಜನಪದ ಕಲ್ಪನೆಗಳು ಹೆಣೆದುಕೊಂಡು ಅವರಿಗೆಲ್ಲಾ ಅತಿಮಾನುಷ ಪರಿವೇಷ ಸೃಷ್ಟಿಯಾಯಿತು. ಇವೆರಡೂ ಕಾವ್ಯಗಳನ್ನು ಈಗಲೂ ಓದಿದಾಗ ಇಲ್ಲಿನ ಮಾನವರು, ದೇವತೆಗಳೆಲ್ಲರೂ ಮೂಲತಃ ಜಾನಪದೀಯವಾಗಿ ದೈಹಿಕ ಶಕ್ತಿ ಮತ್ತು ಭಾವ ತೀವ್ರತೆಗಳನ್ನು ಒಳಗೊಂಡಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಅಲ್ಲಿ ಬರುವ ಎಷ್ಟೋ ಪ್ರಸಂಗಗಳು ಜನಪದ ಕಥೆಗಳು ನೇರವಾಗಿ ಸಾಹಿತ್ಯ ಗರ್ಭವನ್ನು ಪ್ರವೇಶ ಮಾಡಿದುದರ ಕುರುಹಾಗಿದೆ. ವರ್ಜಿಲನ 'ಈನಿಯಡ್' ಕೂಡ ಇಂತಹ ಜನಪದ ಕತೆಯ ಮರು ಸೃಷ್ಟಿಯಾಗಿದೆ. ಮಿಲ್ಟನ್‌ನ 'ಪ್ಯಾರಡೈಸ್ ಲಾಸ್ಟ್' ಬೈಬಲಿನ ಕತೆಗೆ ಕ್ರಿಸ್ತನ ಸುತ್ತ ಹೆಣೆದ ಜನಪದ ಕಲ್ಪನೆಯ ಸೃಷ್ಟಿಯಾಗಿದೆ. ಇಂತಹ ಉದಾಹರಣೆಗಳನ್ನು ನೂರಾರು ಸಂಖ್ಯೆಯಲ್ಲಿ ಕೊಡುತ್ತಾ ಹೋಗಬಹುದು. ಹೀಗೆ ಜಾನಪದ ನಮ್ಮ ಪ್ರಾಚೀನ ಸಾಹಿತ್ಯದ ಒಂದು ಅವಿಭಾಜ್ಯವೂ ಅನನ್ಯವೂ ಮತ್ತು ಅರ್ಥಪೂರ್ಣವೂ ಆದ ಅಂಗವಾಗಿದೆ.

ಸಾವಿರಾರು ವರ್ಷಗಳ ಕನ್ನಡ ಸಾಹಿತ್ಯವನ್ನು ಅಭ್ಯಸಿಸಿದಾಗ ಕೂಡ ನಮ್ಮ ಜಾನಪದದ ವಿವಿಧ ಮುಖಗಳು ಇದರಲ್ಲಿ ಅಂತರ್ಗತವಾಗಿರುವುದನ್ನು ಮತ್ತು ಅದಕ್ಕೆ ಒಂದು ಜೀವಶಕ್ತಿಯನ್ನು ಒದಗಿಸಿರುವುದನ್ನು ಗುರುತಿಸಬಹುದಾಗಿದೆ. ಪಂಪ, ರನ್ನ, ನಾಗವರ್ಮ, ನಯಸೇನ, ಬಂಧುವರ್ಮ, ಶಿವಕೋಟ್ಯಾಚಾರ್ಯ, ಬ್ರಹ್ಮಶಿವ, ಮುಂತಾದ ಎಲ್ಲಾ ಪ್ರಾಚೀನ ಕವಿಗಳಲ್ಲಿ, ವಚನ ಕೀರ್ತನೆ ರಗಳೆಗಳಲ್ಲಿ; ಕುಮಾರವ್ಯಾಸ, ಲಕ್ಷ್ಮೀಶ, ಸರ್ವಜ್ಞ; ಆಧುನಿಕ ಕತೆ, ಕಾದಂಬರಿ, ನಾಟಕ,

ಕವಿತೆಗಳಲ್ಲಿ ಒಂದಲ್ಲ ಒಂದು ಪ್ರಮಾಣದಲ್ಲಿ ಈ ಜಾನಪದ ಅಂಶಗಳು ಜೀವಸತ್ವಗಳಾಗಿರುವುದನ್ನು ಸೂಕ್ಷ್ಮ ಪರಿಶೀಲನೆಯಿಂದ ಗುರುತಿಸಬಹುದಾಗಿದೆ.

೩

ಪ್ರಾಚೀನ ಕನ್ನಡ ಸಾಹಿತ್ಯವೆಲ್ಲ ಬಹುಮಟ್ಟಿಗೆ ಪಂಡಿತ ಸಮ್ಮುಖಿವಾಗಿದ್ದ ಕಾರಣ ಮತ್ತು ಅದರ ವಸ್ತುವಿನ್ಯಾಸ, ಪಾತ್ರ ಚಿತ್ರಣ, ನಿರೂಪಣಾ ವಿಧಾನ, ಭಾಷಾ ಪ್ರಯೋಗ ಮುಂತಾದವುಗಳೆಲ್ಲಾ ಸಂಸ್ಕೃತದ ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟು ನಡೆದ ಕಾರಣ ಅನಕ್ಷರಸ್ಥ ಗ್ರಾಮೀಣರ ದೈನಂದಿನ ಜೀವನವನ್ನು ಅವರನ್ನಾಳುವ ನಂಬಿಕೆಗಳನ್ನು, ಅವರು ಅನುಸರಿಸುವ ಸಂಪ್ರದಾಯಗಳನ್ನು, ಅವರ ಮನೋಲಹರಿಗಳನ್ನು ಅವುಗಳ ಮೂಲ ಸ್ವರೂಪದಲ್ಲಿ ಹಿಡಿದಿಡುವ ಅಸಲು ಕಸುಬನ್ನು ಈ ಕವಿಗಳು ಮಾಡಲಿಲ್ಲ. ಈ ಕವಿಗಳ ಒಂದು ಕಣ್ಣು ತಮ್ಮ ಆಶ್ರಯದಾತನಾದ ರಾಜನ ಮೇಲೆ, ಮತ್ತೊಂದು ಕಣ್ಣು ಅವರನ್ನು ಹಾಡಿ ಹೊಗಳಿ ಅಟ್ಟಕ್ಕೇರಿಸುವ ಕವಿ - ವಿದ್ವಾಂಸರ ಮೇಲೆ ಇದ್ದ ಕಾರಣ ಅವರು ಜನರಿಗಾಗಿ ಜನರದ್ದೇ ಆದ ಜೀವನ ರೇಖೆಗಳನ್ನು ಹೆಚ್ಚಾಗಿ ಕಾವ್ಯ ಗರ್ಭದಲ್ಲಿ ಅಳವಡಿಸಿಕೊಳ್ಳಲಿಲ್ಲ. ಆದರೆ ಸಾಹಿತ್ಯ ಹಿಡಿ ಮಂದಿಗಲ್ಲ, ಬಹುಮಂದಿಗೆ ಮತ್ತು ಬಹುಮಂದಿಯ ಜೀವನ ಸಾಕ್ಷಾತ್ಕಾರಕ್ಕೆ ಎಂಬ ಪ್ರಧಾನ ಕಾಳಜಿಯನ್ನು ವಚನಕಾರರು ಅನನ್ಯವಾಗಿ ತಮ್ಮ ವಚನಗಳಲ್ಲಿ ಪುನರವತಾರ ಮಾಡಿಸಿದ ಕಾರಣದಿಂದಾಗಿ ಸಹಜವಾಗಿ ವಚನ ಸಾಹಿತ್ಯ ಮತ್ತು ಅದರ ಜಾಡನ್ನೇ ಹಿಡಿದ ರಗಳೆ, ತ್ರಿಪದಿ ಸಾಹಿತ್ಯಗಳು ತಮ್ಮ ಸಾಹಿತ್ಯದ ಕೇಂದ್ರ ನೆಲೆಗಳನ್ನಾಗಿ ಜನರ ಭಾಷೆ, ಅನುಭವ ಮತ್ತು ಆಶಯಗಳನ್ನು ಆಶ್ರಯಿಸಿದವು. ಹಾಗೆಯೇ ರಾಜರನ್ನು ರಾಜಾಸ್ಥಾನವನ್ನು ಧಿಕ್ಕರಿಸಿ ಉದ್ದೇಶಪೂರ್ವಕವಾಗಿ ಜನದೆಡೆ ಕಣ್ಣು ತೆರೆದ ಕವಿಗಳು ಪುರಾಣ ಲೋಕಕ್ಕಿಂತ ವಿಶಿಷ್ಟವಾದ ಭಿನ್ನವಾದ ಮತ್ತು ಜೀವಂತವಾದ ಹೊಸ ಅನುಭವ ಲೋಕವನ್ನು ತಮ್ಮದನ್ನಾಗಿ ಮಾಡಿಕೊಂಡರು. ಹೀಗಾಗಿ ಸಾಹಿತ್ಯದ ವಸ್ತುವಿನಲ್ಲಿ, ಭಾಷೆಯಲ್ಲಿ, ಛಂದಸ್ಸಿನಲ್ಲಿ, ಪಾತ್ರ ಸೃಷ್ಟಿಯಲ್ಲಿ, ಆವರಣ ನಿರ್ಮಾಣದಲ್ಲಿ ಹಾಗೂ ನಿರೂಪಣೆಯಲ್ಲಿ ಜಾನಪದ ಆಶಯಗಳನ್ನು ಸಹಜವಾಗಿ ತುಂಬಿಕೊಂಡು ಈ ಸಾಹಿತ್ಯವನ್ನು ಜಡ್ಡು ಕಟ್ಟಿದ ರಾಜಾಸ್ಥಾನ ಸಾಹಿತ್ಯದ ಸಂಕೋಲೆಗಳಿಂದ ಹೊರಗೆಳೆದು ಜನರ ನಡುವೆ ತಂದವು.

ಹಳಗನ್ನಡ ಮತ್ತು ನಡುಗನ್ನಡ ಸಾಹಿತ್ಯ ಮಾತ್ರವಲ್ಲದೆ ಆಧುನಿಕ ಸಾಹಿತ್ಯವೂ ಸಹ ಜಾನಪದದ ಪ್ರೇರಣೆಯಿಂದ ದೂರವಾಗಿಲ್ಲ. ಅಷ್ಟೇ ಅಲ್ಲ, ಹಿಂದಿನ ಸಾಹಿತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲೇ ಜಾನಪದ ಸಂವೇದನೆಯನ್ನು ಇದು ಗರ್ಭೀಕರಿಸಿಕೊಂಡಿದೆ. ಆಧುನಿಕ ಯುಗ ಎಲ್ಲ ವರ್ಗದ ಮತ್ತು ಸ್ತರದ ಜನರಿಗೆ ವಿದ್ಯಾಭ್ಯಾಸದ ಬೆಳಕು ಮುಕ್ತವಾಗಿ ದೊರೆಯಲು ಅನುವು ಮಾಡಿಕೊಟ್ಟ ಕಾರಣ ಮೇಲ್ವರ್ಗದ ಜನ ಮಾತ್ರವಲ್ಲದೆ ಅಕ್ಷರ ವಂಚಿತರಾಗಿದ್ದ ಈ ವರ್ಗದ ಜನ ಸಹ ಸುಪ್ತವಾಗಿದ್ದ ತಮ್ಮ ಜೀವನದ ಅನುಭವಗಳನ್ನು ಮುಕ್ತವಾಗಿ ತೋಡಿಕೊಳ್ಳಲು ಇದು ಅವಕಾಶ ಮಾಡಿಕೊಟ್ಟಿದೆ. ಇದರಿಂದಾಗಿ ಗ್ರಾಮೀಣ ಅನುಭವಗಳಿಂದ ಪುಷ್ಟರಾಗಿರುವ ಲೇಖಕರು ಹೊರಹೊಮ್ಮಿ ಜಾನಪದ ಜೀವನವನ್ನೇ ಬೃಹತ್ ಪ್ರಮಾಣದಲ್ಲಿ ಅಳವಡಿಸಿಕೊಂಡಿರುವ ಸಾಹಿತ್ಯವನ್ನು ರಚಿಸಲು ತೊಡಗಿದರು. ನವೋದಯ, ಪ್ರಗತಿಶೀಲ, ದಲಿತ ಮತ್ತು ಬಂಡಾಯ ಸಾಹಿತ್ಯ ಪಂಥಗಳು ಮುಖ್ಯವಾಗಿ ಈ ನೆಲೆಯಿಂದಲೇ ಆವಿರ್ಭವಿಸಿವೆ. ತುಂಬಾ ವ್ಯಾಪಕವಾಗಿ ಬೆಳೆದಿರುವ ಆಧುನಿಕ ಸಾಹಿತ್ಯ ಈ ಕಾರಣದಿಂದಲೇ ಜಾನಪದದ ಸಂವೇದನೆಯನ್ನು ಅತ್ಯಂತ ದಟ್ಟವಾಗಿ ಅಭಿವ್ಯಕ್ತಿಸುವ ಮೂಲಕ ಪ್ರಾಚೀನ ಸಾಹಿತ್ಯಕ್ಕಿಂತ ವಿಭಿನ್ನವಾದ ವಿಶಿಷ್ಟ ಅನುಭವಲೋಕಗಳನ್ನು ನಮ್ಮ ಮುಂದೆ ತೆರೆದಿಟ್ಟು, ಸತ್ವಶಾಲಿಯಾಗಿ ಕಂಗೊಳಿಸುತ್ತಿದೆ.

ಹೀಗಾಗಿ ನಮ್ಮ ಸಾವಿರ ವರ್ಷಕ್ಕೂ ಹೆಚ್ಚುಕಾಲ ಬೆಳೆದು ಬಂದಿರುವ ಕನ್ನಡದ ಶಿಷ್ಟ ಸಾಹಿತ್ಯ ಎಷ್ಟು ಮತ್ತು ಹೇಗೆ ಜಾನಪದ ಸಂವೇದನೆಯನ್ನು ಕಲಾಪೂರ್ಣವಾಗಿ ಪ್ರಕಟಿಸಿದೆ ಎಂಬುದನ್ನು ತೌಲನಿಕವಾಗಿ ಅಧ್ಯಯನ ಮಾಡುವುದು ಅತ್ಯಂತ ಫಲಪ್ರದವೆಂದು ಭಾವಿಸಲಾಗಿದೆ. ಆದ್ದರಿಂದ ಅಕಾಡೆಮಿ 'ಶಿಷ್ಟ ಸಾಹಿತ್ಯ ಮತ್ತು ಜಾನಪದ ಸಂವೇದನೆ' ಎಂಬ ವಿಶಿಷ್ಟ ಮಾಲಿಕೆಯನ್ನು ಆರಂಭಿಸಿ ಪ್ರಾಚೀನ ಸಾಹಿತ್ಯದಿಂದ ಹಿಡಿದು ಇತ್ತೀಚಿನ ಸಾಹಿತ್ಯವನ್ನು ಜಾನಪದೀಯ ದೃಷ್ಟಿಯಿಂದ ತೌಲನಿಕವಾಗಿ ಅಧ್ಯಯನಕ್ಕೆ ಒಳಪಡಿಸುವ ಪ್ರಯತ್ನವೊಂದನ್ನು ಮಾಡುತ್ತಿದೆ. ಅದರ ಫಲವೇ ಈಗ ಬೆಳಕು ಕಾಣುತ್ತಿರುವ ಹನ್ನೆರಡು ಪುಸ್ತಕಗಳು. ಸಾಹಿತ್ಯ ಕ್ಷೇತ್ರದಲ್ಲಿ ಈಗಾಗಲೇ ಹೆಸರು ಮಾಡಿರುವ ಹಿರಿ ಕಿರಿಯ ಲೇಖಕರು ಈ ಮಾಲಿಕೆಯ ಗ್ರಂಥಗಳನ್ನು ತುಂಬಾ ಪರಿಶ್ರಮದಿಂದ ರಚಿಸಿಕೊಟ್ಟಿದ್ದಾರೆ. ಇವುಗಳಲ್ಲಿ

ಅವರ ಆಳವಾದ ಅಧ್ಯಯನ, ಸೂಕ್ಷ್ಮವಾದ ವಿಶ್ಲೇಷಣಾ ಶಕ್ತಿ, ಜಾನಪದದ ಬಗೆಗಿನ ದಟ್ಟವಾದ ಪ್ರಜ್ಞೆ ಹಾಗೂ ನಿರೂಪಣೆಯ ಸೊಗಸುಗಳು ಮೇಳಗೊಂಡಿವೆ. ಈ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಇವು ತೋರುಗಂಬಗಳಾಗುತ್ತವೆ ಎಂದು ನಾನು ಭಾವಿಸಿದ್ದೇನೆ. ಅಕಾಡೆಮಿಯ ಕೋರಿಕೆ ಮೇರೆಗೆ ಈ ಕೃತಿಗಳನ್ನು ರಚಿಸಿಕೊಟ್ಟ ಲೇಖಕ ಮಿತ್ರರಿಗೆ ನಾನು ಆಭಾರಿಯಾಗಿದ್ದೇನೆ. ಕನ್ನಡದ ಪ್ರಸಿದ್ಧ ಪ್ರಾಧ್ಯಾಪಕರೂ ವಿದ್ವಾಂಸರೂ ಆದ ಮಾನ್ಯ ಮಿತ್ರರಾದ ಪ್ರೊ. ಹಂಪ. ನಾಗರಾಜಯ್ಯನವರು ಈ ಮಾಲೆಯ ಸಂಪಾದಕರಾಗಿ ತಮ್ಮ ಬಿಡುವಿರದ ಕಾರ್ಯಕ್ರಮಗಳ ನಡುವೆಯೂ ಲೇಖಕರೊಡನೆ ಪತ್ರ ವ್ಯವಹಾರ ಮಾಡಿ ಲೇಖನಗಳನ್ನು ತರಿಸಿಕೊಂಡು ಅವುಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಸಂಪಾದಿಸಿಕೊಟ್ಟಿದ್ದಾರೆ. ಅವರು ಅಕಾಡೆಮಿಯ ಮೇಲೆ ಹೊರಿಸಿರುವ ಋಣಭಾರ ಕೃತಜ್ಞತೆಗೆ ಮೀರಿದ್ದು. ಅವರನ್ನು ನಾನು ಹೃತ್ಪೂರ್ವಕವಾಗಿ ಇಲ್ಲಿ ನೆನೆಯುತ್ತೇನೆ. ಹಾಗೆಯೇ ಈ ಕೃತಿಗಳನ್ನು ಸುಂದರವಾಗಿ ಅಚ್ಚಿಸಿಕೊಟ್ಟ ಸ್ನೇಹಾ ಮುದ್ರಣಾಲಯದ ಮಾಲೀಕರು ಮತ್ತು ಸಿಬ್ಬಂದಿ ವರ್ಗಕ್ಕೆ ನನ್ನ ನಮನಗಳನ್ನು ಸಲ್ಲಿಸುತ್ತೇನೆ.

೫-೧೨-೯೭ ಡಾ. ಎಚ್. ಜೆ. ಲಕ್ಕಪ್ಪಗೌಡ

# ಸಂಪಾದಕರ ಮಾತು

ಕನ್ನಡ ಸಾಹಿತ್ಯ ಭಾರತೀಯ ಭಾಷೆಗಳಲ್ಲಿ ಪ್ರಾಚೀನವಾದದ್ದು, ಪ್ರೌಢವಾದದ್ದು. ಒಂದೂವರೆ ಸಾವಿರ ವರ್ಷಗಳ ಅಖಂಡತೆ ಹಾಗೂ ಸಾತತ್ಯ ಇರುವ ಈ ಶಿಷ್ಟಪದ ಕನ್ನಡ ಸಾಹಿತ್ಯದಲ್ಲಿ ಸೇರಿಕೊಂಡಿರುವ ಜಾನಪದ ಅಂಶಗಳು ಗಮನಾರ್ಹ ಪ್ರಮಾಣದಲ್ಲಿವೆ. ಶಿಷ್ಟಪದ ಸಾಹಿತ್ಯಾಂತರ್ಗತವಾಗಿರುವ ಜಾನಪದೀಯ ಸತ್ವ-ಸ್ವರೂಪವನ್ನು ಪೃಥಕ್ಕರಿಸಿ ತೋರಿಸುವ ದಿಕ್ಕಿನ ಕೆಲಸ, ಅಲ್ಲೊಂದು ಇಲ್ಲೊಂದು ಪ್ರಾಸಂಗಿಕ ಬಿಡಿ ಬರೆಹದ ಹೊರತು, ವ್ಯವಸ್ಥಿತವಾಗಿಯೂ ವ್ಯಾಪಕವಾಗಿಯೂ ನಡೆದಿರಲಿಲ್ಲ. ಅಂಥ ಅಧ್ಯಯನದ ಅಗತ್ಯವಿತ್ತು. ಬಹುಕಾಲದ ಈ ಕೊರತೆಯನ್ನು ಮನಗಂಡು ಕಾರ್ಯೋನ್ಮುಖರಾದ ಆದ್ಯ ಪುರುಷರು ಕರ್ನಾಟಕ ಜಾನಪದ-ಯಕ್ಷಗಾನ ಅಕಾಡೆಮಿಯ ಈಗಿನ ಹಾಲಿ ಅಧ್ಯಕ್ಷರಾದ ಡಾ.ಎಚ್.ಜೆ. ಲಕ್ಕಪ್ಪಗೌಡರು. ಅವರಿಗೆ ಏಕಕಾಲದಲ್ಲಿ ಅತ್ತ ಜಾನಪದ ಪರಂಪರೆಯ ಹಾಗೂ ಇತ್ತ ಕನ್ನಡ ಸಾಹಿತ್ಯ ಪರಂಪರೆಯ ತಲಸ್ಪರ್ಶಿ ಪಾಂಡಿತ್ಯ ಭಾಗ್ಯವಿದ್ದುದರಿಂದ ಈ ಹೊಸ ಯೋಜನೆಯ ಅಗತ್ಯ ಮತ್ತು ಮಹತ್ವವನ್ನು ಅನಾಯಾಸವಾಗಿ ಅವಲೀಲೆಯಿಂದ ಗ್ರಹಿಸಿದರು. ಶಿಷ್ಟ ಸಾಹಿತ್ಯ ಪ್ರಕಾರದ ತವನಿಧಿಯೊಳಗೆ ಕುಳಿತ ಜಾನಪದ ನಿಧಿಯನ್ನು ತನಿಯಾಗಿ ತೆಗೆದು ತೋರಿಸುವ ಕೆಲವು ಪುಸ್ತಕಗಳನ್ನು ಪ್ರಕಟಿಸಲು ಒಂದು ಪ್ರತ್ಯೇಕ ಮಾಲೆಯನ್ನು ಹಮ್ಮಿಕೊಂಡು ವಿಳಂಬವಿಲ್ಲದೆ ಕಾರ್ಯತತ್ಪರರಾದರು. 'ಶಿಷ್ಟ ಸಾಹಿತ್ಯ ಮತ್ತು ಜಾನಪದ ಸಂವೇದನೆ' ಎಂಬ ಈ ಪುಸ್ತಕ ಮಾಲೆ ಅವರ ಕನಸು.

ಈ ಯೋಜನೆಯ ಸಂಪಾದಕನಾಗಿ ಕಾರ್ಯ ನಿರ್ವಹಿಸುವ ಹೊಣೆಗಾರಿಕೆಯನ್ನು ಡಾ.ಎಚ್.ಜೆ. ಲಕ್ಕಪ್ಪಗೌಡರು ನನಗೆ ವಹಿಸಿದಾಗ ನಾನು ಒಪ್ಪಿಕೊಳ್ಳಲು ಎರಡು ಪ್ರಬಲ ಕಾರಣಗಳಿದ್ದುವು: ೧. ಈ ಕೆಲಸದ ಅಗತ್ಯ

ಎಷ್ಟು ಜರೂರಿನದೆಂಬ ಅರಿವು ನನಗೂ ಇದ್ದುದು. ೨. ಡಾ.ಎಚ್.ಜೆ. ಲಕ್ಕಪ್ಪಗೌಡರು ಹಮ್ಮಿಕ್ಕೊಂಡಿರುವ ಈ ಸಕಾಲಿಕವಾದ, ಯೋಗ್ಯವಾದ ಯೋಜನೆಯ ಯಶಸ್ಸಿಗೆ ಸಹಕರಿಸುವುದು ನನ್ನ ಕರ್ತವ್ಯವೆಂಬ ಭಾವನೆ. ಈ ಅವಕಾಶಕ್ಕಾಗಿ ಅಕಾಡೆಮಿಯ ಅಧ್ಯಕ್ಷರಿಗೂ ಇತರ ಕಾರ್ಯ ಸಮಿತಿ ಸದಸ್ಯರಿಗೂ ನಾನು ಕೃತಜ್ಞನಾಗಿದ್ದೇನೆ.

'ಶಿಷ್ಟಸಾಹಿತ್ಯ ಮತ್ತು ಜಾನಪದ ಸಂವೇದನೆ' ಮಾಲೆಯಲ್ಲಿ ಪ್ರಕಟಿಸಲು ನಮ್ಮಕೋರಿಕೆಯ ಮೇರೆಗೆ ಪ್ರೊ. ಎಂ. ಆರ್. ಲಕ್ಷ್ಮೀದೇವಿ ಅವರು **'ಕುಮಾರವ್ಯಾಸ ಮತ್ತು ಜಾನಪದ'** ಎಂಬ ಗ್ರಂಥವನ್ನು ಬರೆದುಕೊಟ್ಟಿರುತ್ತಾರೆ. ಅವರಿಗೆ ಅಕಾಡೆಮಿ ಹಾಗೂ ನನ್ನ ವತಿಯಿಂದ ಕೃತಜ್ಞತೆಗಳು. ಈ ಮಾಲೆಯ ಪುಸ್ತಕಗಳನ್ನು ಮುದ್ರಿಸಿದ ಸ್ನೇಹಾ ಪ್ರಿಂಟರ್ಸ್ ಅವರ ಸಹಾಯವನ್ನು ಸ್ಮರಿಸುತ್ತೇನೆ.

ಈ ಮಾಲೆಯಲ್ಲಿ ಸುಮಾರು ನೂರು ಪುಸ್ತಕಗಳನ್ನು ಹೊರತರುವದು ಮೊದಲ ಯೋಜನೆಯಾಗಿತ್ತು. ಈಗ ಅದರ ಪ್ರಾರಂಭದ ಹಂತವೆಂದು ಪ್ರಾತಿನಿಧಿಕವಾದ ಕನ್ನಡ ಕವಿ-ಕಾವ್ಯಗಳನ್ನು ಆರಿಸಿಕೊಂಡು ಹನ್ನೆರಡು ಪುಸ್ತಕಗಳ ಒಂದು ಕಂತು ಬಿಡುಗಡೆ ಆಗುತ್ತಿದೆ. ಹಣದ ಅನುಕೂಲ ಮತ್ತು ಲೇಖಕರ ಸಕಾಲಿಕ ಬೆಂಬಲದಿಂದ ಯಥಾವಕಾಶ ಉಳಿದ ಪುಸ್ತಕಗಳನ್ನು ಪ್ರಕಟಿಸುವ ಉದ್ದೇಶವಿದೆ.

**ಹಂಪ. ನಾಗರಾಜಯ್ಯ**

# ಪರಿವಿಡಿ

೧. ಕುಮಾರವ್ಯಾಸ ಮತ್ತು ಜಾನಪದ / ೧

೨. ಜಾನಪದ ಕಾವ್ಯ ಮತ್ತು ಶಿಷ್ಟ ಕಾವ್ಯ ಸ್ವರೂಪ / ೧೨

೩. ಕುಮಾರವ್ಯಾಸ ಭಾರತದ ಕಥೆಗಳಲ್ಲಿ
ಜಾನಪದೀಯಾಂಶಗಳು / ೨೨

೪. ಜಾನಪದೀಯ ನಂಬಿಕೆ, ಆಚರಣೆಗಳು / ೫೨

೫. ಜ್ಯೋತಿಷ / ೬೮

೬. ವೀಳೆಯ ಪದ್ಧತಿ / ೭೯

೭. ಕಲೆ ಮತ್ತು ವೃತ್ತಿಗಳಲ್ಲಿ ಜಾನಪದಾಂಶಗಳು / ೮೮

೮. ಕುಮಾರವ್ಯಾಸನ ಭಾಷೆ - ಶೈಲಿ / ೧೦೫

# ಕುಮಾರವ್ಯಾಸ ಮತ್ತು ಜಾನಪದ

ಕನ್ನಡ ಸಾಹಿತ್ಯ ನಡೆದು ಬಂದ ದಾರಿಯನ್ನು ವೀಕ್ಷಿಸಿದವರಿಗೆ ಜೈನ, ವೀರಶೈವ, ವೈಷ್ಣವ ಧರ್ಮಗಳ ಹಿನ್ನೆಲೆಯಲ್ಲಿ ಮೂರು ಘಟ್ಟಗಳು ಎದ್ದು ಕಾಣುತ್ತವೆ. ಜೈನಧರ್ಮದ ಹಿನ್ನೆಲೆಯಲ್ಲಿ ಪಂಪರನ್ನರು ಚಂಪೂ ಮಾಧ್ಯಮದಲ್ಲಿ ಮೇರು ಕೃತಿಗಳನ್ನು ರಚಿಸಿದರೆ, ವೀರಶೈವ ಧರ್ಮದ ಹಿನ್ನೆಲೆಯಲ್ಲಿ ಹರಿಹರ ರಾಘವಾಂಕರು ರಗಳೆ-ಷಟ್ಪದಿಗಳಲ್ಲಿ ವಿಶಿಷ್ಟಕೃತಿಗಳನ್ನು ರಚಿಸಿದರು. ಅಂತೆಯೇ ವೈಷ್ಣವ ಧರ್ಮದ ಹಿನ್ನೆಲೆಯಲ್ಲಿ ಭಾಮಿನಿ, ವಾರ್ಧಕ ಷಟ್ಪದಿಗಳಲ್ಲಿ ಕುಮಾರವ್ಯಾಸ, ಲಕ್ಷ್ಮೀಶರು 'ಶ್ರವಣ ಸುಧಾ ವಿನೂತನ ಕಥನ ಕಾರಣ'ವಾದ ಕೃಷ್ಣಭಕ್ತಿಯ ಕೃತಿಗಳನ್ನು ರಚಿಸಿದರು. ಹೀಗೆ "ಸಂಭವಾಮಿ ಯುಗೇಯುಗೇ" ಎಂಬಂತೆ, ಜನಮನದ ಪ್ರತೀಕವಾಗಿ, ಆಯಾ ಯುಗದ ಪ್ರಾತಿನಿಧಿಕ ಕಾವ್ಯ ಎಂಬಂತೆ ಕನ್ನಡದಲ್ಲಿ ಮಹಾಕೃತಿಗಳು ರಚಿತವಾಯಿತು ಎನ್ನಬಹುದು. ಇಂಥ ಮಹಾಕೃತಿಗಳ ಪೈಕಿ ಕನ್ನಡದಲ್ಲಿ ರಚಿತವಾದ ಭಾರತದ ಕಾವ್ಯಗಳಲ್ಲಿ "ನಡುಗನ್ನಡದ ತಲೆಯ ಕಿರೀಟ"ವೆನ್ನಿಸುವಂಥ ಕಾವ್ಯವಾದ ಕುಮಾರವ್ಯಾಸ ಭಾರತವು 'ಕುಂತೋದದೆಯುಂ ಕಾವ್ಯಪ್ರಯೋಗ ಪರಿಣತ'ರಾಗಲು ಗಮಕಕಲೆಯ ಮೂಲಕ ನಾಡಿನ ಜನರನ್ನು ತಣಿಸಿದ ಕಾವ್ಯವಾಗಿದೆ. ಪಂಪರನ್ನರ ಕಾವ್ಯ ಪಂಡಿತರ ಮನಸೆಳೆವ ಆಸ್ಥಾನ ಕೃತಿಗಳಾದರೆ, ಕುಮಾರವ್ಯಾಸ ಭಾರತ ಪಂಡಿತ-ಪಾಮರರಿಬ್ಬರನ್ನು ಮೆಚ್ಚಿಸುವ ಕೃತಿಯಾಗಿದೆ. ಜನತಾಕೃತಿಯಾಗಿದೆ.

ಕುಮಾರವ್ಯಾಸ ಭಾರತ, ಗದುಗಿನ ಭಾರತ, ನಾರಣಪ್ಪನ ಭಾರತ, ಕನ್ನಡ ಭಾರತ, ಕರ್ನಾಟ ಭಾರತ ಕಥಾಮಂಜರಿ- ಇವೇ ಮೊದಲಾದ ಹೆಸರುಗಳಿಂದ ಜನಪ್ರಿಯವಾಗಿರುವ ಈ ಕಾವ್ಯವನ್ನು ಕುರಿತು ಕುಮಾರವ್ಯಾಸನು 'ಇಳೆಯ ಜಾಣರು ಮೆಚ್ಚುವಂತಿರೆ ಕೃಷ್ಣಕಥೆಯನು ತಿಳಿಯಹೇಳುವೆ' ಎನ್ನುತ್ತಾನೆ. 'ತಿಳಿಯಹೇಳುವೆ ಎಂಬ ಮಾತು ಓದು-ಬರಹ ಬಾರದ ಪಾಮರರೂ ತಿಳಿದುಕೊಳ್ಳುವ ರೀತಿಯಲ್ಲಿ

ಸರಳವಾಗಿ, ದೇಸೀ ಮಾರ್ಗದಲ್ಲಿ ಜನಪದರ ಬದುಕಿನ ಅಂಶಗಳನ್ನು ಅಳವಡಿಸಿಕೊಂಡು ನಿರೂಪಿಸಿರುವ ಅಂಶವನ್ನು ತಿಳಿಸಿದರೆ, 'ಇಳೆಯ ಜಾಣರು ಮೆಚ್ಚುವಂತಿರೆ' ಎಂಬ ಮಾತು ಪಾಮರರನ್ನಷ್ಟೇ ಅಲ್ಲದೆ ಪಂಡಿತೋತ್ತಮರನ್ನೂ ಮೆಚ್ಚಿಸುವಂಥ ಶಿಷ್ಟ ಕಾವ್ಯವಾಗಿದೆ ಎಂದು ಸಾರುತ್ತದೆ.

ಕುಮಾರವ್ಯಾಸನು ಎಷ್ಟು ಜನಪ್ರಿಯ ಕವಿಯಾಗಿರುವನೋ, ಅಷ್ಟೇ ಅವನ ಜೀವನ ವಿಚಾರಗಳು ಸಂದಿಗ್ಧವಾಗಿವೆ. ಪಂಪನಂತೆ ಇವನು ತನ್ನ ಇತಿವೃತ್ತವನ್ನು ವಿವರವಾಗಿ ಹೇಳಿಕೊಂಡವನೇ ಅಲ್ಲ. ಇನ್ನು ಅವನಿಗೆ ಸಂಬಂಧಿಸಿದ ವಿಷಯಗಳು ಅವನ ಕೃತಿಗಳಲ್ಲಾಗಲೀ ಇಲ್ಲವೇ ಬೇರೆಡೆಗಳಲ್ಲಾಗಲೀ ಖಚಿತವಾಗಿ, ಸಮಗ್ರವಾಗಿ ದೊರಕುವುದಿಲ್ಲ. ಹೀಗಾಗಿ ದೊರೆತಿರುವ ಶಾಸನ, ಗ್ರಂಥ, ಕವಿಯ ಅನಂತರದ ಇತರ ಕೃತಿಗಳಲ್ಲಿ ಕಂಡು ಬರುವ ವಿಚಾರ - ಇವುಗಳ ಆಧಾರದ ಮೇಲೆ ಕೆಲವು ಸಂಗತಿಗಳನ್ನು ಗಮನಿಸಬಹುದಾಗಿದೆ.

ಕುಮಾರವ್ಯಾಸನ ಕಾಲದ ಬಗ್ಗೆ ವಿಮರ್ಶಕರು ಸಾಕಷ್ಟು ಚರ್ಚೆ ನಡೆಸಿದ್ದಾರೆ. ಆದರೂ 'ಇದಮಿತ್ಥಂ' ಎಂದು ಅವನ ಜೀವಿತಾವಧಿಯ ಕಾಲವಾಗಲಿ, ಕೃತಿ ರಚನೆಯ ಕಾಲವಾಗಲಿ, ನಿರ್ಧಾರವಾಗಿಲ್ಲ. ಆದರೆ ಭಾಸ್ಕರ (೧೪೨೪) ಕವಿಗಿಂತ ಹಿಂದೆ ಸು. ೧೪೦೦ರಲ್ಲಿ ಇದ್ದಿರಬಹುದು ಎಂದು ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿಯವರು ಅಭಿಪ್ರಾಯಪಡುತ್ತಾರೆ. ಕೃತಿರಚನೆಯ ಕಾಲವನ್ನು ಸು. ೧೩೫೦ರಿಂದ ೧೪೦೦ರ ನಡುವೆ ಎಂದಿದ್ದಾರೆ.[೧] ಸದ್ಯಕ್ಕೆ ಕ್ರಿ.ಶ. ೧೪೦೦ ಎಂದಿಟ್ಟುಕೊಳ್ಳಬಹುದು.

ಕುಮಾರವ್ಯಾಸನೆಂಬ ಹೆಸರು ಕವಿಯ ಬಿರುದೋ ಅಥವಾ ನಿಜನಾಮವೋ ಎಂಬ ಬಗ್ಗೆಯೂ ಸಾಕಷ್ಟು ಚರ್ಚೆ ನಡೆದಿದೆ. ಆದರೆ ಕವಿಯ ಮೂಲನಾಮ 'ನಾರಣಪ್ಪ'ನೆಂದೂ 'ಕುಮಾರವ್ಯಾಸ' ಎನ್ನುವುದು ಅವನ ಬಿರುದೆನ್ನುವುದು ಬಹುಜನಾಭಿಪ್ರಾಯವಾಗಿದೆ.

ಕುಮಾರವ್ಯಾಸನು ಗದುಗಿನ ಕೋಳಿವಾಡ ಗ್ರಾಮದಲ್ಲಿ ಜನಿಸಿದವನೂ, ಅಗಸ್ತ್ಯಗೋತ್ರದ ಋಗ್ವೇದೀ ಬ್ರಾಹ್ಮಣ ಮನೆತನದವನೂ, ಶ್ಯಾನುಭೋಗ ವೃತ್ತಿಕುಲಕ್ಕೆ

---

೧. ಕನ್ನಡ ಸಾಹಿತ್ಯ ಚರಿತ್ರೆ, ಸಂ-೫, ಭಾಗ-೧, ಕನ್ನಡ ಅಧ್ಯಯನ ಸಂಸ್ಥೆ, ಪು. ೧೬
ಡಾ. ಟಿ.ವಿ.ವಿ. ಅವರ ಲೇಖನ

ಸೇರಿದವನೂ ಎನ್ನುತ್ತಾರೆ. ಗದುಗಿನ ವೀರನಾರಾಯಣ ಇವನ ಕುಲದೈವ. ಈ ಕವಿಯ ವಂಶಸ್ಥರು ವಿಜಯನಗರದ ದೊರೆಗಳ ಆಶ್ರಯದಲ್ಲಿ ಗಜಸೇನಾಪತಿಗಳಾಗಿದ್ದರು ಎಂದೂ ಹೇಳುತ್ತಾರೆ. ಕುಮಾರವ್ಯಾಸನ ಕಾವ್ಯದಲ್ಲಿ ಬರುವ ಸಮರ ವರ್ಣನೆಗಳನ್ನು ಕಂಡಾಗ ಕವಿಯ ವಂಶಸ್ಥರು ರಾಜಾಶ್ರಯದಲ್ಲಿ ಸೇನಾವಿಭಾಗದಲ್ಲಿ ಉನ್ನತಾಧಿಕಾರಿಗಳಾಗಿದ್ದರು ಎಂಬುದು ವಿದಿತವಾಗುತ್ತದೆ. ಈ ಕಾರಣದಿಂದ ಕುಮಾರವ್ಯಾಸನಿಗೆ ರಾಜಕೀಯ ಸಂಗತಿಗಳು ಮತ್ತು ಸೇನಾವಿದ್ಯಮಾನಗಳು ಸುಪರಿಚಿತವಾಗಿದ್ದವು ಎನ್ನಬಹುದು.

ಕುಮಾರವ್ಯಾಸ ತನ್ನ ಕೃತಿಯಲ್ಲಿ 'ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ' ತನ್ನದು ಎಂದು ಹೇಳಿಕೊಂಡಿದ್ದಾನೆ. ಈ ಮಾತು ಕೇವಲ ಅವನ ವಿನಯಕ್ಕೆ ಸಾಕ್ಷಿಯೇ ಹೊರತು, ವಸ್ತು ಸಂಗತಿಯಲ್ಲ. ಒಂದು ರೀತಿಯಲ್ಲಿ ಅವನು ಸಕಲ ವಿದ್ಯಾಪಾರಂಗತ ಎನ್ನಬಹುದು. ಕವಿ ಪಾಂಚಾಲಿಯ ಸ್ವಯಂವರಕ್ಕೆ ಬಂದ ಬ್ರಾಹ್ಮಣರನ್ನು ವರ್ಣಿಸುವ ಮಾತುಗಳು ಕವಿಗೇ ಹೆಚ್ಚು ಅನ್ವಯವಾಗುತ್ತದೆ ಎನ್ನಬಹುದು. ಆ ಸಂದರ್ಭದ ವರ್ಣನೆ ಹೀಗಿದೆ:

"ಸಾಂಗವೇದ ಪದಕ್ರಮದ ಸರ್ವಾಂಗ ವಿಷಯದಲಖಿಲ ಪೌರಾಣಂಗಳಲಿ ಮೀಮಾಂಸೆಯೊಳ್ ಸ್ಮೃತಿ ತರ್ಕಶಾಸ್ತ್ರದಲಿ" "ಭರತದಲಿ ವೈದ್ಯದಲಿ ಕಾವ್ಯ ಸುವಿರಚಿತಾಲಂಕಾರದಲಿ ಗಜ ತುರಗಲಕ್ಷಣದಲಿ ಸಮಾಹಿತ ಮಂತ್ರತಂತ್ರದಲಿ ಸರಸಕವಿತಾರಚನೆಯಲಿ ವಿಸ್ತರದುಪನ್ಯಾಸದಲಿ" (ಆ.ಪ. ೧೫-೫,೬) ಪರಿಣತನಾಗಿದ್ದರು ಅಲ್ಲದೆ ಸಂಗೀತ, ಜ್ಯೋತಿಷಗಳೂ ಅವನಿಗೆ ಪರಿಚಿತವಾಗಿದ್ದವು. ಆವನ ಕಾಲದ ಮತ್ತು ಅವನಿಗಿಂತ ಹಿಂದಿದ್ದ ಕನ್ನಡ ಮತ್ತು ಮರಾಠಿ ಭಾಷಾ ಸಾಹಿತ್ಯಗಳು ಅವನಿಗೆ ತಿಳಿದಿತ್ತು. ಪಂಪ ರನ್ನ ಕಾಳಿದಾಸ, ಭಾಸ, ಭಾರವಿ, ಭಟ್ಟ ನಾರಾಯಣ ಮೊದಲಾದವರ ಪ್ರಭಾವವನ್ನು ಅವನ ಕಾವ್ಯದಲ್ಲಿ ಗುರುತಿಸಬಹುದು.

ಈ ಎಲ್ಲ ಶಾಸ್ತ್ರ ಪರಿಣತಿಯಿಂದ ಕುಮಾರವ್ಯಾಸನು ಶಿಷ್ಟಕಾವ್ಯವನ್ನು ರಚಿಸಿದರೂ ವೈದ್ಯ, ಜ್ಯೋತಿಷ, ಮಂತ್ರ-ತಂತ್ರ, ನಾಟ್ಯ, ಶಕುನ ಮೊದಲಾದ ವಿಷಯಗಳನ್ನು ನಿರೂಪಿಸುವಾಗ ದೇಸೀ ಪದ್ಧತಿಯ ವಿಚಾರಗಳನ್ನೂ ತಿಳಿಸುತ್ತಾನೆ. ಅಲ್ಲದೆ ಭಾಷಾ ನಿರೂಪಣೆಯಲ್ಲಿ ಜಾನಪದೀಯ ಅಂಶಗಳನ್ನು ನಿರೂಪಿಸುತ್ತಾನೆ. ಇದರಿಂದ ಅವನ ಕಾವ್ಯ ಪಂಡಿತ- ಪಾಮರರಿಬ್ಬರಿಗೂ ಪ್ರಿಯವಾಗಲು ಸಾಧ್ಯವಾಗಿದೆ.

ಕವಿ ದ್ವೈತಿಯೋ? ಅದ್ವೈತಿಯೋ? ಅನ್ಯ ಪಂಥೀಯನೋ, ಭಾಗವತ ಸಂಪ್ರದಾಯಸ್ಥನೋ? ಎಂಬುದರ ಬಗ್ಗೆ ವಿದ್ವಾಂಸರು ಸಾಕಷ್ಟು ಚರ್ಚಿಸಿದ್ದಾರೆ. ಈ ವಾದಗಳನ್ನು ಗಮನಿಸಿದಾಗ ಕವಿ ಹರಿಹರ ಭೇದವೆಣಿಸದ, ಆದರೆ ಕೃಷ್ಣಪಾರಮ್ಯವನ್ನು ಎತ್ತಿ ಹಿಡಿಯುವ, ಭಕ್ತಿ ನಿರೂಪಣೆಗೆ ಪ್ರಾಶಸ್ತ್ಯ ನೀಡುವ ಸ್ಮಾರ್ತ ಭಾಗವತ ಪಂಥಕ್ಕೆ ಸೇರಿದವನು ಎನ್ನಬಹುದು. ಕಾವ್ಯದ ದೃಷ್ಟಿಯಿಂದ ಹೇಳುವುದಾದರೆ ಈ ಕನ್ನಡ ಕವಿ ಮತತತ್ತ್ವದಿಂದಲ್ಲ ಕವಿತ್ವದಿಂದ 'ಮಹಾಕವಿ' ಎಂಬ ಮಾತನ್ನು ಒಪ್ಪಬಹುದು.

'ಐರಾವತ' ಎಂಬ ಕಾವ್ಯವನ್ನೂ ಕುಮಾರವ್ಯಾಸನೇ ಬರೆದದ್ದು ಎಂಬ ಹೇಳಿಕೆ ಇದೆ. ಆದರೆ ಈ ಮಾತನ್ನು ವಿದ್ವಜ್ಜನರೆಲ್ಲರೂ ಅಂಗೀಕರಿಸಿಲ್ಲವಾದ್ದರಿಂದ ಸದ್ಯಕ್ಕೆ 'ಕರ್ನಾಟ ಭಾರತ ಕಥಾಮಂಜರಿ' ಯೊಂದೇ ಕವಿಯ ಏಕೈಕ ಮಹಾಕಾವ್ಯವಾಗಿದೆ.

ಕುಮಾರವ್ಯಾಸ ಭಾರತದ ದಶಪರ್ವದ ಅನಂತರದ ಕಥೆಯನ್ನು ತಿಮ್ಮಣ್ಣ ಕವಿ (ಸು. ೧೫೧೦) ವಿಜಯನಗರದ ಕೃಷ್ಣದೇವರಾಯನ (೧೫೦೯-೧೫೨೬) ಅಪ್ಪಣೆಯ ಮೇರೆಗೆ 'ಕೃಷ್ಣರಾಜ ಭಾರತ'ವೆಂಬ ಹೆಸರಿನಲ್ಲಿ ಭಾಮಿನೀ ಷಟ್ಪದಿಯಲ್ಲಿ ಕಾವ್ಯವನ್ನು ರಚಿಸಿದ್ದಾನೆ. ಇವನು ನಾರಣಪ್ಪನ ಹಾದಿಯಲ್ಲೇ ಸಾಗಿ, ಭಗವದ್ಭಕ್ತರಿಗೆ ಭಾರತದ ಕಥೆಯನ್ನು ಪೂರ್ಣವಾಗಿ ದೊರಕಿಸಿ ಕೊಡುವಲ್ಲಿ ನೆರವಾಗಿದ್ದಾನೆ. ಇವನ ಕಾವ್ಯ ಕುಮಾರವ್ಯಾಸನ ಕಾವ್ಯದಷ್ಟು ರಸಪೂರ್ಣವಾಗಿ ಸಶಕ್ತ ಶೈಲಿಯಲ್ಲಿ ಮೂಡಿ ಬಂದಿಲ್ಲವಾದ್ದರಿಂದ, ಕುಮಾರವ್ಯಾಸ ಭಾರತದಷ್ಟು ಇವನ ಕೃತಿ ಜನಪ್ರಿಯವಾಗಿಲ್ಲ. ತಿಮ್ಮಣ್ಣಕವಿಯಂತೆಯೇ ಪರಮದೇವ ಕವಿಯು (೧೭೨೧-೧೮೦೫) ಕುಮಾರವ್ಯಾಸನ ಪ್ರಭಾವಕ್ಕೆ ಒಳಗಾಗಿ ತುರಂಗಲಯದಲ್ಲಿ ರಚಿಸಿದ ವಾರ್ಧಕಷಟ್ಪದಿಯ ತುರಂಗಭಾರತವು ಸಂಪೂರ್ಣ ಭಾರತ ಕಥೆಯನ್ನೊಳಗೊಂಡಿದ್ದು ಕುಮಾರವ್ಯಾಸನ ಜಾಡಿನಲ್ಲೇ ಸಾಗಿದ್ದರೂ, ಕುಮಾರವ್ಯಾಸನ ಕಾವ್ಯದಷ್ಟು ಜನಪ್ರಿಯ ಕೃತಿಯಾಗಿಲ್ಲ. ಹೀಗಾಗಿ ಕುಮಾರವ್ಯಾಸನೆಂದರೆ ಕನ್ನಡ ಭಾರತ, ಕನ್ನಡ ಭಾರತವೆಂದರೆ ಕುಮಾರವ್ಯಾಸ ಎಂಬ ಪ್ರತೀತಿ ಉಂಟಾಗಿದೆ.

ಕುಮಾರವ್ಯಾಸ ವ್ಯಾಸಭಾರತವನ್ನು ಆಧರಿಸಿ ತನ್ನ ಕಾವ್ಯವನ್ನು ರಚಿಸಿದ್ದರೂ ಅದು ಕೇವಲ ಸಂಸ್ಕೃತದಿಂದ ಕನ್ನಡಕ್ಕೆ ತದ್ವತ್ತಾಗಿ ಅನುವಾದಿಸಿದ ಕೃತಿಯಾಗಿಲ್ಲ.

ಕಥಾದೃಷ್ಟಿಯಿಂದ ಸಾಕಷ್ಟು ಭಾಗಗಳನ್ನು ಅನುವಾದಿಸಿದ್ದರೂ, ಅನುವಾದದ ರೀತಿಯಲ್ಲಿ 'ಪರರೊಡ್ಡವದ ರೀತಿಯ ಕೊಳ್ಳದಗ್ಗಳಿಕೆ' ಕಂಡು ಬರುತ್ತದೆ. ವ್ಯಾಸರ ಕೃತಿಯನ್ನು ಕನ್ನಡಕ್ಕೆ ತರುವಲ್ಲಿ ಸ್ವತಂತ್ರ ಕೃತಿಯನ್ನೇ ನಿರ್ಮಾಣ ಮಾಡಿದ್ದಾನೆ ಎನ್ನಬಹುದು. ಮೂಲದಲ್ಲಿ ಇರುವ ಸಂಗತಿಗಳನ್ನು ತನಗೆ ಸೂಕ್ತ ಕಂಡಂತೆ ಬದಲಿಸಿಕೊಂಡು ಹೇಳುವಲ್ಲಿ, ಮೂಲದಲ್ಲಿ ಕಂಡು ಬರದ ಸಂಗತಿಗಳನ್ನು ಬೇರೆ ಮೂಲಗಳಿಂದ ಸ್ವೀಕರಿಸಿ ನಿರೂಪಿಸುವಲ್ಲಿ ಕವಿಯ ಸ್ವಂತಿಕೆಯನ್ನು ಕಾಣಬಹುದು. ವಿಶೇಷವಾಗಿ ಕುಮಾರವ್ಯಾಸನ ಸ್ವಂತಿಕೆ, ಸ್ವೋಪಜ್ಞತೆಗಳು, ಪಾತ್ರಚಿತ್ರಣ, ಯುದ್ಧವರ್ಣನೆ ಮತ್ತು ಭಾಷೆಯ ಬಳಕೆಗಳಲ್ಲಿ ಎದ್ದುಕಾಣುತ್ತವೆ. ಭಾಷೆಯ ಬಳಕೆಯಲ್ಲಿ "ಕನ್ನಡ ಭಾಷೆಯ ಸಂಪನ್ಮೂಲಗಳನ್ನೆಲ್ಲ ಅವನಂತೆ ಸೂರೆಗೊಂಡ ಕವಿ ಇನ್ನೊಬ್ಬನಿಲ್ಲ." ೧ ಅಸಭ್ಯ, ಅಶ್ಲೀಲ ಎನಿಸಬಹುದಾದ ಮಾತುಗಳನ್ನು ವಿಶಿಷ್ಟ ರೀತಿಯಲ್ಲಿ ಬಳಸಿ, ಪಾತ್ರಗಳಲ್ಲಿ ಜೀವಂತಿಕೆಯನ್ನು ತರಿಸುವ ಪರಿ ಕುಮಾರವ್ಯಾಸನಲ್ಲಿ ಅದ್ಭುತವಾಗಿದೆ. ಶಸ್ತ್ರ ವಿಚಾರವೇ ಆಗಲಿ ಶಾಸ್ತ್ರ ವಿಚಾರವೇ ಆಗಲಿ ಪಾರಿಭಾಷಿಕ ಪದಗಳಿಂದಲೂ, ವೀರ್ಯವತ್ತಾದ ಪ್ರಯೋಗಗಳಿಂದಲೂ ಕಾವ್ಯದ ಸಂಗತಿಗಳನ್ನು ಕಣ್ಣೆದುರಿಗೆ ತಂದು ನಿಲ್ಲಿಸುತ್ತಾನೆ.

ವರ್ಣನೆಗಳು ಕುಮಾರವ್ಯಾಸನ ವೈಶಿಷ್ಟ್ಯಗಳಲ್ಲೊಂದು. ಅದರಲ್ಲೂ ಯುದ್ಧ ವರ್ಣನೆಗಳು ಕೇಳುಗರ ಮೈ-ಮನಗಳು ರೋಮಾಂಚನಗೊಳ್ಳುವಂತೆ ಪರಿಣಾಮಕಾರಿಯಾಗಿವೆ. ಕಾವ್ಯದ ಉತ್ತರಾರ್ಧದ ಐದು ಪರ್ವಗಳು ಯುದ್ಧ ವರ್ಣನೆಗಳ ನಿರೂಪಣಾ ವೈಶಿಷ್ಟ್ಯದಿಂದಾಗಿ "ಯುದ್ಧಪಂಚಕ"ಗಳೆಂದೇ ಪ್ರಸಿದ್ಧವಾಗಿವೆ. ಈ ಸಂದರ್ಭದಲ್ಲಿ ಯುದ್ಧವರ್ಣನೆಯನ್ನು ಕುರಿತು ಸಿ.ಪಿ.ಕೆ. ಅವರು ಆಡಿರುವ ಮಾತುಗಳು ಗಮನಾರ್ಹವಾಗಿವೆ. "ನಾರಣಪ್ಪನ ಸಿದ್ಧಹಸ್ತದಲ್ಲಿ ಸಮರವರ್ಣನೆಗಳಿಗೆ ಅನಂತ ವೈವಿಧ್ಯ, ಸ್ವಾರಸ್ಯಗಳು ಲಭಿಸಿವೆ. ವೀರರ ಕೈದು ಗಾಳೆಗದಂತೆಯೇ ವಾಗ್ಯುದ್ಧವೂ ತುಂಬಾ ರೋಚಕವಾಗಿರುತ್ತದೆ. ಇನ್ನೂ ಮುಖ್ಯವಾದ ಮಾತೆಂದರೆ ಕುಮಾರವ್ಯಾಸ ಬಹಿರಂಗ ಯುದ್ಧದ ಜೊತೆ ಜೊತೆಯಲ್ಲೇ ಪಾತ್ರಗಳ ಅಂತರಂಗಯುದ್ಧವನ್ನೂ ಅನಾವರಣಗೊಳಿಸುತ್ತಾ ಹೋಗುತ್ತಾನೆಂಬುದು. ಹೀಗಾಗಿ ಸಮರರಂಗದಲ್ಲಿ ರಣವಾದ್ಯಗಳ ಅಬ್ಬರ, ಆನೆಗಳ

---

೧. ಕುಮಾರವ್ಯಾಸ : ಕೆ.ಡಿ, ಕುರ್ತಕೋಟಿ.

ಬೃಂಹಿತ, ಕುದುರೆಗಳ ಹೇಷಾರವ, ಶಸ್ತ್ರಾಸ್ತ್ರಗಳ ಮೊಳಗು ಒಂದು ಕಡೆಯಾದರೆ ಮಾನವೀಯ ಭಾವಗಳು ಇನ್ನೊಂದೆಡೆ ಜಿನುಗುತ್ತವೆ, ಪುಟಿಯುತ್ತವೆ. ಭೀಷ್ಮ ಕರ್ಣ, ಅರ್ಜುನ ಮುಂತಾದ ಪಾತ್ರಗಳ ಮಾನಸಿಕ ಸಂಘರ್ಷವನ್ನು ಇಲ್ಲಿ ನೆನೆಯಬಹುದು."[೧]

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪಂಪ- ಕುಮಾರವ್ಯಾಸರು, ಅನೇಕ ಹಿರಿಮೆಗಳ ಕಾರಣಗಳಿಂದ ಯುಗಪುರುಷರಾಗಿದ್ದಾರೆ. ಸಾಹಿತ್ಯ ಚರಿತ್ರಕಾರರು ಚಂಪೂ ಘಟ್ಟವನ್ನು 'ಪಂಪಯುಗ'ವೆಂದೂ ಷಟ್ಪದೀ ಘಟ್ಟವನ್ನು 'ಕುಮಾರವ್ಯಾಸ' ಯುಗವೆಂದೂ ಗುರುತಿಸಿದ್ದಾರೆ. ಈ ಇಬ್ಬರೂ 'ವ್ಯಾಸ ಮುನೀಂದ್ರ ರುಂದ್ರ ವಚನಾಮೃತವಾರ್ಧಿ'ಯನ್ನು ಸಮರ್ಥವಾಗಿ ದಾಟಿದ ವೀರರಾಗಿದ್ದಾರೆ. ಇವರಿಬ್ಬರ ಭಾರತ ಕಾವ್ಯಗಳಲ್ಲಿ 'ಆಯಾ ಕಾಲದ ಯುಗಮೌಲ್ಯಗಳ' ಶ್ರೇಷ್ಠ ಅಭಿವ್ಯಕ್ತಿಯನ್ನು ಪಡೆದಿವೆ. ಭಕ್ತಿ- ವೀರರಸಗಳು ಕಾವ್ಯದ ಅಭಿವ್ಯಕ್ತಿಯಾಗಿ ಪಂಪನಲ್ಲಿ ಆದಿಪುರಾಣ- ವಿಕ್ರಮಾರ್ಜುನ ವಿಜಯಗಳೆಂಬ ಎರಡು ಪ್ರತ್ಯೇಕ ಕಾವ್ಯಗಳಲ್ಲಿ ಕಂಡುಬಂದರೆ, ಕುಮಾರವ್ಯಾಸನಲ್ಲಿ 'ಕರ್ನಾಟ ಭಾರತ' ಕೃತಿಯೊಂದರಲ್ಲೇ ಕಾಣಿಸಿಕೊಂಡಿದೆ. ಭಾಷೆ- ಶೈಲಿಗಳಲ್ಲಂತೂ ಮಾರ್ಗ-ದೇಸಿ, ಶಿಷ್ಟ - ಜಾನಪದ, ಅಭಿಜಾತ-ಜನಪದ ಪ್ರಾಚೀನ- ನವೀನ, ವಸ್ತುಕ-ವರ್ಣಕ, ನಾಗರಿಕ- ಗ್ರಾಮ್ಯ ವಿಧಾನಗಳಲ್ಲಿ ನುಡಿ ಪ್ರಯೋಗಗಳು ಹಾಗೂ ಪದ ಸಂಪತ್ತು ವಿಶಿಷ್ಟರೀತಿಯಲ್ಲಿ ಬಳಕೆಯಾಗಿವೆ.

ಕುಮಾರವ್ಯಾಸನು ಒಂದು ಲಕ್ಷಕ್ಕೂ ಹೆಚ್ಚಿನ ಶ್ಲೋಕಗಳಿಂದ ಕೂಡಿರುವ ಮಹಾಭಾರತದ ಮೊದಲ ಹತ್ತು ಪರ್ವಗಳನ್ನು ನಡುಗನ್ನಡ ಭಾಷೆಯ ಭಾಮಿನಿ ಷಟ್ಪದಿಯಲ್ಲಿ ಸುಮಾರು ೧೫೨-೧೭೦ ಸಂಧಿಗಳಲ್ಲಿ ೮-೯ ಸಾವಿರ ಪದ್ಯಗಳಲ್ಲಿ ಕನ್ನಡಿಸಿದ್ದಾನೆ. ಜನಪ್ರಿಯತೆಯ ಕಾರಣದಿಂದ, ಲಿಪಿಕಾರರ ಸ್ಖಾಲಿತ್ಯ ಮತ್ತು ಕೈವಾಡಗಳಿಂದ, ರಚನಕಾರರ ಪ್ರಭಾವದಿಂದ ಕುಮಾರವ್ಯಾಸನ ಮೂಲಕೃತಿ ಯಾವ ಸ್ವರೂಪದಲ್ಲಿತ್ತು ಎಂಬುದನ್ನು ನಿರ್ದಿಷ್ಟವಾಗಿ ಹೇಳಲು ಕಷ್ಟವಾಗಿದೆ. ಪ್ರಕ್ಷಿಪ್ತ ಭಾಗಗಳು, ಪಾಠಾಂತರ ಸಮಸ್ಯೆಗಳು, ದೇಸಿ ಪದಗಳ ಅರ್ಥ ನಿರ್ಣಯದ ಕಷ್ಟ- ಇವೇ ಮೊದಲಾದವು ಸಾಕಷ್ಟು ಸಮಸ್ಯೆಗಳನ್ನು ತಂದೊಡ್ಡಿವೆ. ಕುಮಾರವ್ಯಾಸ ಭಾರತದ ಸಾಂಸ್ಕೃತಿಕ ಅಧ್ಯಯನವಾಗಲಿ, ಜಾನಪದ ಅಧ್ಯಯನವಾಗಲಿ

---

೧. ಕುಮಾರವ್ಯಾಸ ಭಾರತ: ಒಂದು ನೋಟ- ಸಿ.ಪಿ.ಕೆ. ಪು. ೨೩

ಸರ್ವಸಮರ್ಪಕವಾಗಿ ಸಾಕಷ್ಟು ನಡೆದಿಲ್ಲ. ಈ ದಿಸೆಯಲ್ಲಿ ಒಂದೆರಡು ಗಮನಾರ್ಹ ಪ್ರಯತ್ನಗಳು ನಡೆದಿವೆ ಅಷ್ಟೆ. ಈ ಸಂದರ್ಭದಲ್ಲಿ ದೇಜಗೌ, ಎನ್ಕೆ ಅವರ ಪ್ರಯತ್ನಗಳು ಉಲ್ಲೇಖನೀಯ.

ಕುಮಾರವ್ಯಾಸ ಭಾರತದ ವೈಶಿಷ್ಟ್ಯಗಳಲ್ಲಿ ಮತ್ತೊಂದು ಮುಖ್ಯ ಅಂಶವೆಂದರೆ ಕನ್ನಡನಾಡಿನ ಮೂಲೆ ಮೂಲೆಯಲ್ಲಿ ಕುರಿತೋದದ ಜನರಲ್ಲೂ ಜನತಾ ಕಾವ್ಯವಾಗಿ ಉಳಿದಿರುವುದು. ಇದಕ್ಕೆ ಮುಖ್ಯ ಕಾರಣವೆಂದರೆ ಕನ್ನಡ ನಾಡಿನ ಗಮಕಿಗಳೂ ಹಾಗೂ ಗಮಕವಾಚನ ಪದ್ಧತಿ. ಚಂಪೂ-ಷಟ್ಪದಿಗಳೆರಡೂ ಶಿಷ್ಟ ಕಾವ್ಯಗಳ ಮಾಧ್ಯಮವಾದರೂ, ಹಾಡುಗಬ್ಬವಾಗಿ ಷಟ್ಪದಿ ಕಾವ್ಯಗಳು ಜನರಲ್ಲಿ ಪ್ರಚುರವಾದಂತೆ ಚಂಪೂ ಕಾವ್ಯಗಳಾಗಲಿಲ್ಲ. ಇದಕ್ಕೆ ಹಳಗನ್ನಡ ಭಾಷೆಯೇ ಮುಖ್ಯ ಕಾರಣವೆನ್ನಬಹುದು. ಅಲ್ಲದೆ ಷಟ್ಪದಿ ಕಾವ್ಯಗಳಲ್ಲಿ ದೇಸೀಯ ಪ್ರಾಚುರ್ಯ ಹೆಚ್ಚಿದ್ದು, ನಡುಗನ್ನಡ ಭಾಷೆ ಜನರಿಗೆ ಹತ್ತಿರವಿದ್ದು, ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶ ಚಾಮರಸ, ನರಹರಿ, ರತ್ನಾಕರ ಮೊದಲಾದ ನಡುಗನ್ನಡದ ಪ್ರತಿಭಾವಂತ ಕವಿಗಳ ಹಿರಿಮೆಯೇ ಕಾರಣವಾಗಿದೆ. ಈ ಕವಿಗಳ ಪೈಕಿ ಕುಮಾರವ್ಯಾಸ ಅತ್ಯಂತ ಜನಪ್ರಿಯನಾಗಿದ್ದಾನೆ.

ಕುಮಾರವ್ಯಾಸ ಭಾರತದ ಜನಪ್ರಿಯತೆಯ ಜೀವಾಳವೆಂದರೆ 'ಶ್ರೀಕೃಷ್ಣ ಪಾತ್ರ'. ಭೀಷ್ಮ, ದ್ರೋಣ, ಅಭಿಮನ್ಯು, ಉತ್ತರಕುಮಾರ, ಭೀಮ- ದುರ್ಯೋಧನ, ಅರ್ಜುನ-ಕರ್ಣ, ದ್ರೌಪದಿ, ಗಾಂಧಾರಿ ಮೊದಲಾದ ಪಾತ್ರಗಳು ಜಾಜ್ವಲ್ಯಮಾನ್ಯವಾಗಿ ವಿರಾಜಿಸಿದರೂ, ಈ ಎಲ್ಲ ಪಾತ್ರಗಳ ಪ್ರೇರಕ- ಕಾರಕ ಶಕ್ತಿಗಳಾಗಿ ಶ್ರೀಕೃಷ್ಣಪಾತ್ರ ಮೂಡಿ ಬಂದಿದೆ. ಇಲ್ಲಿ ಶ್ರೀಕೃಷ್ಣನು ಪಾತ್ರಧಾರಿಗಳ ಸೂತ್ರಧಾರಿಯಾಗಿ, ನಾಯಕನೆನಿಸಿಕೊಂಡು, 'ಶ್ರವಣ ಸುಧಾವಿನೂತನ ಕಥನ ಕಾರಣ'ನಾಗಿದ್ದಾನೆ- ಗದುಗಿನ ವೀರನಾರಾಯಣನ ಕಿಂಕರನಾದ ಕುಮಾರವ್ಯಾಸನ ಪ್ರತಿಭೆಯ ಮಿಂಚಿನಲ್ಲಿ ಪ್ರಕಾಶಿಸಿದ್ದಾನೆ. ದುಷ್ಟ ಶಿಕ್ಷಣ- ಶಿಷ್ಟ ರಕ್ಷಣದ ಮೂಲ ಸೂತ್ರಕ್ಕೆ ಅನುಗುಣವಾಗಿ 'ಭಕ್ತ ಕುಟುಂಬಿ', 'ಸೆಣಸು ಸೇರದ ದೇವ', 'ಕೈತವದ ಶಿಕ್ಷಾಗುರು', 'ಕಪಟನಾಟಕಸೂತ್ರಧಾರ', 'ಕಾರಣಿಕ', 'ಯಂತ್ರಿಕೃಷ್ಣ'- ಇತ್ಯಾದಿಯಾಗಿ ಕಾಣಿಸಿಕೊಂಡು 'ನರರಾಚರಣೆಗಳ ನಾಟಕವ ತಾನೇ ನಟಿಸಿ' ತೋರಿಸಿದ್ದಾನೆ. ಕುಮಾರವ್ಯಾಸನ ಕೃಷ್ಣ ಅತಿಮಾನುಷ ಮತ್ತು ದಿವ್ಯಮಾನುಷ ಪಾತ್ರಗಳಲ್ಲಿ

ಕಾಣಿಸಿಕೊಂಡಿದ್ದು. ಮಾನವಶ್ರೇಷ್ಠನಾಗಿ, ದೀನರಕ್ಷಕನಾಗಿ, ಭಕ್ತರೊಡೆಯನಾಗಿ ಜನಪ್ರೀತಿಯನ್ನು ಗಳಿಸಿದ್ದಾನೆ. ಕುಮಾರವ್ಯಾಸನ ಕಾವ್ಯದ ಯಶಸ್ಸಿಗೆ ಶ್ರೀಕೃಷ್ಣಪಾತ್ರದ ಮಹೋನ್ನತ ಚಿತ್ರಣ ಒಂದು ಕಾರಣವಾದರೆ, ಕವಿ ಇವನನ್ನು ದೇಸೀಯ ಚಿತ್ರಣದಲ್ಲಿ ಮೂಡಿಸಿರುವುದೂ ಮತ್ತೊಂದು ಕಾರಣವಾಗಿದೆ.

ಕುಮಾರವ್ಯಾಸನ ಕಾವ್ಯದ ಭಾಷೆಯಲ್ಲಿ ಎದ್ದು ಕಾಣುವ ಅಂಶವೆಂದರೆ ಜಾನಪದ ದೇಸಿಯ ಬಳಕೆ. ಅವನು ಕೊಡುವ ಉಪಮೆ, ರೂಪಕ, ಪ್ರತಿಮೆ, ಪಡೆನುಡಿ, ಗಾದೆ, ಒಗಟು- ಮೊದಲಾದವುಗಳಲ್ಲೆಲ್ಲಾ ಪಾಂಡಿತ್ಯಕ್ಕಿಂತಲೂ ಜಾನಪದ ದೇಸಿ ಕಾಣಿಸಿಕೊಳ್ಳುತ್ತದೆ. "ಉರುವ ಜಯವಧು ಒಕ್ಕತನದಲಿ **ಮುರಿದಕಡ್ಡಿ** ಇದೆನಲು ಕರದಿಂ ಮುರಿದು ಬಿದ್ದದು....." "**ನಾಲಗೆಯ ಸಾಲವನೀಗ** ಕೈಯಲಿ ತಿದ್ದುವೊಡೆ', '**ಏಸಬಡ್ಡಿಯ**' ಲಸುವ ಕೊಂಬೆನು", "**ಕೊಳಚಿ** ಉದಕಕೆ ಕೊಂಬುದೇ ಹರಿಗೋಲ ಬಾಡಿಗೆಯ', '**ಕೆರಹು** ನಿಮ್ಮಯ ಬಾಯಲಿ', 'ಕಲಿತನಕೀಸು **ಮೊಲೆಗಳು ಮೂಡಿದವೇ**', '**ಬತ್ತಿದ ಕೆರೆಗೆ ಬಲೆಯೇಕೆ**' ಇವೇ ಮೊದಲಾದ ಮಾತುಗಳಲ್ಲಿ ಕವಿಯ ಸಮಕಾಲೀನ ಜನಪದ ಸಂಸ್ಕೃತಿಯ ದೇಸಿ ಮನೋಜ್ಞವಾಗಿ ಶೋಭಿಸಿದೆ. ಜನಭಾಷೆಯಿಂದ ಶಬ್ದ ಭಂಡಾರವನ್ನು ತೆಗೆದುಕೊಂಡ ಕವಿ ಅವುಗಳನ್ನು ವ್ಯಾಕರಣ- ಗೀಕರಣದ ಎಲ್ಲೆಕಟ್ಟನ್ನು ಮೀರಿ ಬಳಸುತ್ತಾನೆ. ಮರಾಠಿ, ಸಂಸ್ಕೃತ, ಪ್ರಾಕೃತ ಮೊದಲಾದ ಅನ್ಯಭಾಷಾ ಪದಗಳನ್ನು ಯಾವುದೇ ಮಡಿವಂತಿಕೆಯಿಲ್ಲದೆ ಬಳಸಿದ್ದಾನೆ. ಅಲ್ಲದೆ ಅನ್ಯಭಾಷೆಯ ಪದಗಳನ್ನು ಕನ್ನಡ ಪದಗಳನ್ನು 'ಮಧುರಮಿಶ್ರಣ' ಮಾಡುವುದರ ಮೂಲಕ ದೇಶೀಯ ಪದದ ಸೊಗಡನ್ನೂ, ಸಂಸ್ಕೃತ ಮಾರ್ಗಪದಗಳ ಸೊಗಸನ್ನೂ ವಿಶೇಷ ಅರ್ಥವಂತಿಕೆಯಿಂದ ಒಗ್ಗೂಡಿಸುತ್ತಾನೆ. ನಿದರ್ಶನಕ್ಕೆ 'ದ್ರೌಪದಿಯ ಶ್ರೀಮುಡಿ'ಯನ್ನು ಕುಮಾರವ್ಯಾಸನು ವರ್ಣಿಸುವಾಗ "ಆ ಮಹೀಶಕ್ರತುವರದೊಳು/ ದ್ದಾಮ ಮುನಿಜನರಚಿತಮಂತ್ರ/ ಸ್ತೋಮ ಪುಷ್ಕಲಪೂತ ಪುಣ್ಯಜಲಾಭಿಷೇಚನದ/ ಶ್ರೀ ಮುಡಿಗೆ ಕೈಯಿಕ್ಕಿದನು...." (ಸ. ಪ.೧೪-೭೬) ಎನ್ನುವಲ್ಲಿ 'ಕೈಯಿಕ್ಕು' ಎನ್ನುವ ಪ್ರಯೋಗ ಕನ್ನಡ ದೇಸಿಯಾಗಿದ್ದು, ದುಶ್ಶಾಸನನ ಗ್ರಾಮ್ಯವರ್ತನೆಗೆ ಸಂಕೇತವಾಗಿದ್ದರೆ, ಇತರ ಸಂಸ್ಕೃತ ಸಮಾಸಭೂಯಿಷ್ಠ ಪದಗಳು ಮಾರ್ಗಶೈಲಿಯ ಸ್ವರೂಪದ್ದಾಗಿದ್ದು 'ಶ್ರೀಮುಡಿಯ' ಶ್ರೇಷ್ಠತೆ, ಪಾವಿತ್ರ್ಯಗಳನ್ನು ಸೂಚಿಸುತ್ತವೆ. (ಒಂದು ಕಾಲದಲ್ಲಿ ಸಂಸ್ಕೃತ ಪವಿತ್ರ

ಭಾಷೆಯೆಂದೂ- ಕೆಲವು ಸಂದರ್ಭಗಳಲ್ಲಿ ಕನ್ನಡ ದೇಸಿಯಾಗಿ ಮೈಲಿಗೆ ಭಾಷೆಯಾಗಿ ಪರಿಗಣಿಸಿದ ಕೆಲವು ಮಡಿವಂತ ಜನ-ದೇವರ ಪೂಜಾ ಸಮಯದಲ್ಲಿ ಕನ್ನಡ ಮಾತನಾಡುವುದು ಮೈಲಿಗೆಯೆಂದು ಭಾವಿಸಿದ್ದರು. ಆದರೆ ಈ ಪರಂಪರೆ ಶ್ರೀಪಾದರಾಜರಂಥ ಕನ್ನಡ ಮಹನೀಯರ ಪ್ರಯತ್ನದ ಫಲವಾಗಿ ಕೊನೆಗೊಂಡಿತು. ಶ್ರೀಪಾದರಾಜರು ದೇವತಾರಾಧನೆಗೆ ಸಂಸ್ಕೃತದಷ್ಟೇ ಕನ್ನಡ ಬಳಕೆಯು ಶ್ರೇಷ್ಠ ಎಂದು ತಮ್ಮ ದೇವಪೂಜಾ ಕೈಂಕರ್ಯದಲ್ಲಿ ಕನ್ನಡದ ದೇವರ ನಾಮಗಳನ್ನು ಬಳಸಿದರು.)

ಕುಮಾರವ್ಯಾಸನ ಕಾವ್ಯದಲ್ಲಿ ಶಿಷ್ಟಾಂಶಗಳು ಮತ್ತು ಜಾನಪದಾಂಶಗಳು ಯಾವ ರೀತಿ ನಿರೂಪಿತವಾಗಿವೆ ಎಂಬುದನ್ನು ಗಮನಿಸಿದಾಗ ಭಾಷೆ ಮತ್ತು ಭಾವ (ವಸ್ತು ಮತ್ತು ನಿರೂಪಣೆ) ಎರಡರಲ್ಲಿಯೂ ಜೊತೆ ಜೊತೆಯಾಗಿ ಶಿಷ್ಟ ಮತ್ತು ಜಾನಪದ ಲಕ್ಷಣಗಳು ಸಮಾವೇಶವಾಗಿರುವುದನ್ನು ಕಾಣುತ್ತೇವೆ. ಕೆಲವು ಜಾನಪದ ವಿದ್ವಾಂಸರು ಭಾಷೆ ಮತ್ತು ಭಾವಗಳೆರಡೂ ಜಾನಪದವಾಗಿರಬೇಕು, ಹಾಗಲ್ಲದೆ "ಕೆಲವೊಮ್ಮೆ ನಮ್ಮ ಭಾವನೆ, ಅನುಭವಗಳು ಜಾನಪದವಾಗಿದ್ದು, ಭಾಷೆ ನಾಗರಿಕವಾಗಿರಬಹುದು, ಭಾಷೆ ಜಾನಪದವಾಗಿದ್ದು ಭಾವ ನಾಗರಿಕವಾಗಿರಬಹುದು. ಹೀಗಿದ್ದಾಗ ಜನಪದ ಪ್ರಜ್ಞೆಯ ಮನೋಧರ್ಮದ ಸ್ವಾಭಾವಿಕ ಅಭಿವ್ಯಕ್ತಿ ಸಾಧ್ಯವಾಗದೆ ನಮ್ಮ ರಚನೆ ಡೋರ್‌ಸನ್ ಹೇಳುವಂತೆ 'ಫೋಕ್‌ಲೋರ್'ನ ಬದಲು 'ಫೇಕ್‌ಲೋರ್' ಅಂದರೆ ನಕಲಿ ಜಾನಪದವಾಗುತ್ತದೆ ಎಂದಿದ್ದಾರೆ."[೧] ಪಾಶ್ಚಾತ್ಯ ವಿದ್ವಾಂಸರ ಈ ಅಭಿಪ್ರಾಯ ಕನ್ನಡಕ್ಕೆ ಅದರಲ್ಲೂ ಕುಮಾರವ್ಯಾಸಭಾರತಕ್ಕೆ ಅನ್ವಯವಾಗಲಾರದು. ಏಕೆಂದರೆ ಕಾವ್ಯದ ಕಥಾಸಂದರ್ಭದ ಹಿನ್ನೆಲೆಗೆ ತಕ್ಕಂತೆ ಶಿಷ್ಟಜನರಿರುವಾಗ ಭಾಷೆ ಶಿಷ್ಟವಾಗಿರುತ್ತದೆ. ಆದರೆ ಅಂಥ ಸಂದರ್ಭಗಳಲ್ಲಿ ಆ ಪಾತ್ರಗಳ ನಡವಳಿಕೆ ಗ್ರಾಮ್ಯವಾಗಿದ್ದಲ್ಲಿ, ಅಂಥ ವರ್ತನೆ ದೇಸೀಯ ಭಾವದಲ್ಲೇ ಹೊರಹೊಮ್ಮಬೇಕಾಗುತ್ತದೆ. ಉದಾ : ಶ್ರೀಕೃಷ್ಣ ಪಾಂಡವ ರಾಯಭಾರಿಯಾಗಿ ಕೌರವನ ಆಸ್ಥಾನಕ್ಕೆ ಬಂದಾಗ ಅವನನ್ನು ದುರ್ಯೋಧನನು ದೂಷಿಸುವ ಸಂದರ್ಭದಲ್ಲಿ ಬರುವ "ತೊತ್ತಿನ ಮಗ" 'ನಿನ್ನಯ ವರಜನನಿಗೆ ಆದಿಯಲಿ ಅಪಾರು ಗಂಡ' ಎಂಬ ಮಾತುಗಳಲ್ಲಿ 'ಭಾಷೆ' ಶಿಷ್ಟವಾದರೂ ಅದರ

---

೧. ವಿಮರ್ಶಾತ್ಮಕ ಲೇಖನಗಳು : ಡಾ. ಎಂ.ಬಿ. ಕೊಟ್ರಶೆಟ್ಟಿ, ಪು. ೧೨, ಭಾ. ೨.

ಭಾವ 'ಗ್ರಾಮ್ಯ'ವಾಗಿರುವುದನ್ನು ಕಾಣಬಹುದು. ದ್ಯೂತ ಪ್ರಸಂಗದಲ್ಲಿ ದ್ರೌಪದಿ ಸಭೆಯಲ್ಲಿ 'ಗಂಡರೋ ನೀವ್ ಷಂಡರೋ' ಎಂದು ಹೇಳಿದಾಗ ಭಾಷೆ ಗ್ರಾಮ್ಯವೆನಿಸಿದರೂ ಸನ್ನಿವೇಶದ ಗಾಂಭೀರ್ಯದ ಹಿನ್ನೆಲೆಯಲ್ಲಿ 'ಭಾವ' ಶಿಷ್ಟವಾಗಿರುವುದನ್ನು ಕಾಣಬಹುದು. ಹೀಗೆ ಭಾಷೆ- ಭಾವಗಳು, ಶಿಷ್ಟ- ಜಾನಪದಾಂಶಗಳು ಜೊತೆಜೊತೆಯಾಗಿಯೇ ಕೂಡಿಕೊಂಡು ಬರುವ ಅನೇಕ ಪ್ರಸಂಗಗಳನ್ನು ಕುಮಾರವ್ಯಾಸನ ಕೃತಿಯಲ್ಲಿ ಕಾಣಬಹುದು. ಇಲ್ಲಿ ಕೇವಲ ಜಾನಪದ ಪ್ರಜ್ಞೆಯೊಂದನ್ನೇ ಗಮನಿಸಿಕೊಂಡು ಕಾವ್ಯವನ್ನು ಅಸಲಿ ಜಾನಪದ, ಅಥವಾ ನಕಲಿ ಜಾನಪದ, ಅಸಲಿ ಶಿಷ್ಟ ಅಥವಾ ನಕಲಿ ಶಿಷ್ಟ ಇತ್ಯಾದಿಯಾಗಿ ವರ್ಗೀಕರಿಸುವುದು ಅರ್ಥಹೀನವಾಗುತ್ತದೆ. ಭಾರತೀಯ ಅದರಲ್ಲೂ ಕರ್ನಾಟಕ ಜಾನಪದ ಸಂಸ್ಕೃತಿ ತನ್ನದೇ ಆದ ಸ್ವಂತಿಕೆಗಳಿಂದ ವಿಶಿಷ್ಟವಾಗಿದ್ದು ಪಾಶ್ಚಾತ್ಯ ವಿದ್ವಾಂಸರ ಅನೇಕ ಪರಿಕಲ್ಪನೆ ಕನ್ನಡದ ಜಾಯಮಾನಕ್ಕೆ ಅನ್ವಯಿಸುವುದು ಕೆಲವೊಮ್ಮೆ ಉಚಿತವೆನಿಸುವುದಿಲ್ಲ. ಡೋರ್‌ಸನ್ನಿನ ವ್ಯಾಖ್ಯೆ ಇದಕ್ಕೊಂದು ನಿದರ್ಶನ.

ಬದುಕು ಮತ್ತು ಭಾಷೆ ಎರಡೂ ಪರಿವರ್ತನೀಯ ಸ್ವಭಾವಗಳನ್ನೇ ಹೊಂದಿದ್ದರೂ ಬದುಕಿನಲ್ಲಿ ಮತ್ತು ಭಾಷೆಯಲ್ಲಿ ಆಗುವ ಬದಲಾವಣೆಯ ವೇಗ ಭಿನ್ನ ಭಿನ್ನವಾಗಿರುತ್ತವೆ. ಬದುಕಿನ ಕೆಲವು ಸ್ತರಗಳಲ್ಲಿ ಬದಲಾವಣೆ ತೀವ್ರಗತಿಯಲ್ಲಿ ಸಾಗುತ್ತಿದ್ದರೆ ಮತ್ತೆ ಕೆಲವು ಕಡೆ ಮಂದವಾಗಿರುತ್ತದೆ. ಭಾಷೆಯಲ್ಲಿ ಇರುವ ಸ್ಥಿತಿ ಮತ್ತು ಬದಲಾಗುತ್ತಿರುವ ಸ್ಥಿತಿ ಎರಡೂ ಜೊತೆ ಜೊತೆಯಲ್ಲಿಯೇ ಸಾಗುತ್ತಿರುತ್ತವೆ. ಉದಾ : ನಡುಗನ್ನಡದ ಭಾಷೆಯಲ್ಲಿ ಹಳಗನ್ನಡ ಹಾಗೂ ಹೊಸಗನ್ನಡದ ರೂಪಗಳೆರಡೂ ಮಿಶ್ರವಾಗಿರುವುದನ್ನು ಕಾಣುತ್ತೇವೆ. ಹೀಗೆ ಭಾಷೆ ಮತ್ತು ವಸ್ತುಗಳ ವ್ಯತ್ಯಾಸದಿಂದ ಒಂದು ಕಾಲದ ಕಾವ್ಯ ಸಂಕೀರ್ಣಗೊಂಡಿರುತ್ತದೆ. ಇದರಿಂದ ಒಂದು ಕಾಲದ ವಸ್ತು ಇನ್ನೊಂದು ಕಾಲದ ಭಾಷೆಯಲ್ಲಿ ಹೊರ ಹೊಮ್ಮಿರುತ್ತದೆ. ಕುಮಾರವ್ಯಾಸನ ಕಾವ್ಯದಲ್ಲಿ ಪ್ರಾಚೀನ ಕಾಲದ ಜಾನಪದೀಯ ಸಂಪ್ರದಾಯ, ಅವನ ಸಮಕಾಲೀನ ಸಂಗತಿ, ಕವಿ ಪ್ರತಿಭೆಯಿಂದ ಹೊರಹೊಮ್ಮಿದ್ದ ನವೀನ ಕಲ್ಪನೆ- ಇವೆಲ್ಲವೂ ಮೇಳವಿಸಿರುವುದನ್ನು ಕಾಣಬಹುದು. ಹಾಗಾಗಿ ಇವನ ಕಾವ್ಯವನ್ನು ಶುದ್ಧ ಶಿಷ್ಟ ಇಲ್ಲವೇ ಶುದ್ಧ ಜಾನಪದ ಎಂದು ಹೆಸರಿಸಲಾಗದು. ಜಾನಪದ ಮಿಶ್ರ ಶಿಷ್ಟಕಾವ್ಯವೆಂದು ಹೇಳಬಹುದು. ಏಕೆಂದರೆ ಕುಮಾರವ್ಯಾಸನ

ಕಾವ್ಯದಲ್ಲಿ 'ಗುರುವೆನಲು ರಚಿಸಿದ', 'ಪದವಿಟ್ಟಳುಪದೊಂದಗ್ಗಳಿಕೆ', ಶಿಷ್ಟಕಾವ್ಯದ ಲಕ್ಷಣಗಳನ್ನು ಸೂಚಿಸಿದರೆ, 'ಶ್ರವಣಸುಧಾ ವಿನೂತನ ಕಥನ', 'ಕೇಳುವ ಸೂರಿಗಳು', 'ತಿಳಿಯ ಹೇಳುವೆ', 'ಕೇಳು ಜನಮೇಜಯ', 'ಒಂದಕ್ಷರವ ಕೇಳ್ದರಿಗೆ', 'ಹೇಳಿದನು ವಿಸ್ತಾರದಲಿ' - ಇವೇ ಮೊದಲಾದ ಮಾತುಗಳು ಜಾನಪದ ಲಕ್ಷಣವಾದ 'ಹೇಳಿ- ಕೇಳುವ' ತೋಂಡಿ ಸಂಪ್ರದಾಯವನ್ನು ಪ್ರತಿನಿಧಿಸುತ್ತವೆ. ಹೀಗೆ ಪದಪ್ರಯೋಗಗಳು, ನಾಣ್ನುಡಿಗಳೂ ಕಥಾಪ್ರಸಂಗಗಳು ಮೊದಲಾದ ಅನೇಕ ವಿಷಯಗಳಲ್ಲಿ ಜಾನಪದಾಂಶ ಮತ್ತು ಶಿಷ್ಟಾಂಶಗಳೆರಡನ್ನು ಕಾಣುವುದರಿಂದ ಇವನ ಕಾವ್ಯವನ್ನು 'ಜಾನಪದ ಮಿಶ್ರ ಶಿಷ್ಟ ಕಾವ್ಯ' ಎಂದು ಹೆಸರಿಸಬಹುದು.

# ಜಾನಪದ ಕಾವ್ಯ ಮತ್ತು ಶಿಷ್ಟ ಕಾವ್ಯ ಸ್ವರೂಪ

ಜಗತ್ತಿನ ಯಾವುದೇ ಸಾಹಿತ್ಯದ ಬೆಳವಣಿಗೆಯ ಇತಿಹಾಸವನ್ನು ಗಮನಿಸಿದಾಗ ಆ ಸಾಹಿತ್ಯವನ್ನೊಳಗೊಂಡ ಭಾಷೆಯನ್ನಾಡುವ ಜನರ ಸಂಸ್ಕೃತಿಯ ಇತಿಹಾಸವನ್ನು ಗಮನಿಸಬೇಕಾಗುತ್ತದೆ. ಪ್ರತಿಜನಾಂಗವೂ ಆದಿಮಾನವನ ಸ್ಥಿತಿಯಲ್ಲಿದ್ದು ಅನಂತರ ಕ್ರಮಕ್ರಮವಾಗಿ ಹಲವು ಹಂತಗಳನ್ನು ತಲುಪಿ, ಆಧುನಿಕ ಸಂಸ್ಕೃತಿಯ ಘಟ್ಟವನ್ನು ಮುಟ್ಟಿವೆ. ಜಗತ್ತಿನಲ್ಲಿ ಎಷ್ಟೋ ಜನಾಂಗಗಳು ಸಂಸ್ಕೃತಿಯ ವಿಕಾಸದ ವಿವಿಧ ಹಂತಗಳಲ್ಲಿ ಎಲ್ಲೋ ಒಂದೆಡೆ ಸ್ಥಗಿತವಾಗಿರುವುದನ್ನು ಕಾಣುತ್ತೇವೆ. ಕೆಲವು ಜನಾಂಗಗಳು ಇಂದೂ ಸಹ ಆದಿಮಾನವನ ಸ್ಥಿತಿಯಲ್ಲೇ ಅಥವಾ ಸ್ವಲ್ಪನಂತರದ ಪ್ರಗತಿಯ ಹಂತದಲ್ಲಿ ಒಂದು ರೀತಿಯ ಸಾಂಪ್ರದಾಯಿಕ ಜೀವನ ನಡೆಸುತ್ತಿರುವುದನ್ನು ಜಗತ್ತಿನ ಕೆಲವೆಡೆ ಕಾಣಬಹುದು. ಸ್ಥೂಲವಾಗಿ ಜಗತ್ತಿನ ಸಮಕಾಲೀನ ಜನಾಂಗಗಳನ್ನು ಗಮನಿಸಿದಾಗ ಅನಾಗರಿಕ, ಅರೆನಾಗರಿಕ ಮತ್ತು ನಾಗರಿಕ ಎಂಬ ಮೂರು ಘಟ್ಟಗಳಲ್ಲಿ ಸಂಸ್ಕೃತಿಯ ವಿಕಾಸದ ಮೂರು ಘಟ್ಟಗಳನ್ನು ಕಾಣಬಹುದು. ಈ ಪೈಕಿ ಸಂಸ್ಕೃತಿಯ ಮೂಲ ಸೆಲೆಯಾದ ಮೌಖಿಕ ಪರಂಪರೆಯನ್ನು ಅನಾಗರಿಕ ನೆಲೆಯಲ್ಲಿ ಕಂಡರೆ, ಸಂಸ್ಕೃತಿಯ ವಿಕಾಸದ ಈಚಿನ ಹಂತವನ್ನು ಶಿಷ್ಟಪದ್ಧತಿಯ ನಾಗರಿಕ ಹಂತದಲ್ಲಿ ಕಾಣುತ್ತೇವೆ. ಅನಾಗರಿಕ ಹಂತದ ಜಾನಪದ ಸಂಸ್ಕೃತಿ, ನಾಗರಿಕ ಹಂತದ ಶಿಷ್ಟ ಸಂಸ್ಕೃತಿ - ಇವೆರಡರ ಮಿಶ್ರಣವಾದ ಮಧ್ಯಮ ವರ್ಗದ ಅರೆನಾಗರಿಕ ಸಂಸ್ಕೃತಿಯನ್ನು ಜಗತ್ತಿನ ಪ್ರಮುಖ ಜನಾಂಗಗಳ ಸಾಹಿತ್ಯದಲ್ಲಿ ಪ್ರತಿಬಿಂಬಿತವಾಗಿರುವುದನ್ನು ಕಾಣುತ್ತೇವೆ. ಆದರೆ ಅಧ್ಯಯನದ ದೃಷ್ಟಿಯಿಂದ ಸಾಮಾನ್ಯವಾಗಿ ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯವೆಂದು ವರ್ಗೀಕರಿಸುತ್ತಾರೆ.

ಶಿಷ್ಟಸಾಹಿತ್ಯಕ್ಕೆ ವಿಶಿಷ್ಟ ಲಕ್ಷಣಗಳಿರುವಂತೆ ಜನಪದ ಸಾಹಿತ್ಯಕ್ಕೂ ವಿಶಿಷ್ಟ ಲಕ್ಷಣಗಳಿವೆ. ಅಂತೆಯೇ ಎರಡರಲ್ಲೂ ಸಾಮಾನ್ಯಲಕ್ಷಣಗಳೂ ಕಂಡುಬರುತ್ತವೆ. ಜಾನಪದ ಸಾಹಿತ್ಯ ಸಂಸ್ಕೃತಿಗಳು ಭಿನ್ನಭಿನ್ನ ಸ್ವರೂಪಗಳಲ್ಲಿ ಹಂತಹಂತಗಳಲ್ಲಿ ಪರಿವರ್ತಿತಗೊಂಡು, ಶಿಷ್ಟ ಸಾಹಿತ್ಯದಲ್ಲಿ ಅಂತರ್ಗತವಾಗುತ್ತ ಬಂದಿರುವುದರಿಂದ. ಸಂಪೂರ್ಣ ಶುದ್ಧ ಶಿಷ್ಟ ಸಾಹಿತ್ಯವನ್ನಾಗಲಿ, ಸಂಪೂರ್ಣ ಶುದ್ಧ ಜಾನಪದ ಸಾಹಿತ್ಯವನ್ನಾಗಲಿ ಕಾಣುವುದು ಕಷ್ಟ. ಆದರೆ ಶಿಷ್ಟಸಾಹಿತ್ಯದಲ್ಲಿ ಅಳವಟ್ಟಿರುವಷ್ಟು ಜಾನಪದ ಸಾಹಿತ್ಯದ ಪ್ರಮಾಣವನ್ನು, ಜಾನಪದ ಸಾಹಿತ್ಯದಲ್ಲಿ ಕಂಡುಬರುವ ಶಿಷ್ಟಸಾಹಿತ್ಯದ ಪ್ರಮಾಣದಲ್ಲಿ ಕಾಣಲಾಗುವುದಿಲ್ಲ. ಅದೇನೇ ಇರಲಿ ಶಿಷ್ಟ ಮತ್ತು ಜಾನಪದ ಸಾಹಿತ್ಯಗಳು ಪ್ರತ್ಯೇಕ ಅಧ್ಯಯನದ ವಿಷಯಗಳಾಗಿವೆ. ಇತ್ತೀಚೆಗೆ ಇವೆರಡರ ಕವಲಾದ ಜನಪ್ರಿಯ ಸಾಹಿತ್ಯವೆಂಬ ಪ್ರಕಾರವೂ ಹುಟ್ಟಿಕೊಂಡಿದೆ. ಇಂದು ಯಾವುದೇ ಭಾಷೆಯ ಮಹಾಕವಿಯೊಬ್ಬನ ಸಾಹಿತ್ಯದ ಶ್ರೇಷ್ಠ ಕೃತಿಯೊಂದನ್ನು ಅಧ್ಯಯನ ಮಾಡುವಾಗ ಅದು ಶಿಷ್ಟಸಾಹಿತ್ಯವೇ ಆಗಿದ್ದರೂ ಅದರಲ್ಲಿನ ಜಾನಪದೀಯ ಅಂಶಗಳು ಸಾಕಷ್ಟು ಗಮನ ಸೆಳೆಯುತ್ತವೆ. ಆದ್ದರಿಂದ ಇಂದು ಶಿಷ್ಟ- ಜಾನಪದಗಳೆರಡರ ಅಧ್ಯಯನ ಯಾವುದೇ ಮಹಾಕೃತಿಯ ಶಿಷ್ಟಸಾಹಿತ್ಯಕ್ಕಾಗಲಿ ಇಲ್ಲವೇ ಜನಪದ ಸಾಹಿತ್ಯಕ್ಕಾಗಲಿ ಮೂಲಧಾರವಾದುದೆಂದರೆ ಜನಪದ (ಫೋಕ್) ಎನ್ನಬಹುದು. "ಜನಪದವೆಂದರೆ ನಗರ ಜೀವನದ ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಗಳನ್ನು ಆದಷ್ಟು ಕಡಿಮೆ ಪ್ರಮಾಣದಲ್ಲಿ ಹೊಂದಿರುವ ಸಮಾಜ ಎಂದು ಸ್ಥೂಲವಾಗಿ ಹೇಳಬಹುದು."[೧] ನಾಗರಿಕ ಹಾಗೂ ಗ್ರಾಮೀಣ ಸಮಾಜಗಳೆರಡರಲ್ಲೂ ಒಂದೇ ರೀತಿ ಕಾಣಿಸಿಕೊಳ್ಳುವುದರಿಂದ ನಾಗರಿಕ ಸಮಾಜದಲ್ಲಿ ಅಡಗಿರುವ ಜಾನಪದದ ಸ್ವರೂಪವನ್ನು ಅರ್ಥೈಸುವುದು ಕಷ್ಟ. ಆದರೆ ಗ್ರಾಮೀಣ ಜನರಲ್ಲಿ ಕಂಡುಬರುವ ಜಾನಪದ ಮನೋಧರ್ಮದಲ್ಲಿ ಬುದ್ಧಿಗಿಂತ ಭಾವಾವೇಶಕ್ಕೂ, ಚಿಂತನೆಗಿಂತ ಕಲ್ಪನೆಗೆ ಹೆಚ್ಚು ಒತ್ತು ಕಾಣುತ್ತದೆ. ಇವರ ಮನೋಧರ್ಮದಲ್ಲಿ ನಿಸರ್ಗ ಮತ್ತು ಅಚೇತನ ವಸ್ತುಗಳೂ ಸಹ ಜೀವಂತ ಅಭಿವ್ಯಕ್ತಿಯನ್ನು ಹೊಂದಿರುತ್ತದೆ. ಈ ಅಭಿವ್ಯಕ್ತಿಯನ್ನು ಒಳಗೊಂಡ "ಜಾನಪದ ಸಂಪ್ರದಾಯ ನಂಬಿಕೆಗಳು ಕಾಲಕ್ರಮೇಣ ಬದಲಾವಣೆಯನ್ನು ಹೊಂದಿದರೂ

---

೧. ಜಾನಪದ ಸಾಹಿತ್ಯ ದರ್ಶನ, ಪು. ೩೩.

ಅವು ಚಿರಂತನವಾಗಿರುತ್ತವೆ."[1] ಈ ಅಭಿವ್ಯಕ್ತಿ ಜಾನಪದ ಸಾಹಿತ್ಯದಲ್ಲಿ ಒಬ್ಬ ವ್ಯಕ್ತಿಯ ವೈಯಕ್ತಿಕ ಭಾವನೆಗಳಾಗಿ ಕಾಣಿಸಿಕೊಳ್ಳದೆ ಸಮಾಜದ ಸಮಷ್ಟಿ ಪ್ರಜ್ಞೆಯ ಪ್ರತೀಕವಾಗಿ ಕಾಣಿಸಿಕೊಳ್ಳುತ್ತದೆ. ಈ ಸಮಷ್ಟಿಪ್ರಜ್ಞೆಗೆ ಪಂಡಿತರಿಂದ ಶಾಸ್ತ್ರದ ಆವರಣ ಉಂಟಾದಾಗ ಅದು ಮಾರ್ಗ ಸಾಹಿತ್ಯವಾಗುತ್ತದೆ. ಆದ್ದರಿಂದ ಸಮಷ್ಟಿ ಪ್ರಜ್ಞೆ ಅರ್ಥಾತ್ ದೇಸಿ ಇಲ್ಲದೆ ಮಾರ್ಗಸಾಹಿತ್ಯವಿಲ್ಲ ಎಂಬ ಮಾತು ನಿಜ.

ಜಾನಪದ ಸಂಸ್ಕೃತಿ ಎನ್ನುವುದು ಜಗತ್ತಿನ ಕೆಲವು ಪ್ರಸಿದ್ಧ ನಾಗರಿಕತೆಗಳ ಇತಿಹಾಸದಂತೆ ಒಂದು ಕಾಲದಲ್ಲಿ ಉಜ್ವಲವಾಗಿದ್ದು ಅನಂತರ ಮುಗಿದು ಹೋದ ಅವಸ್ಥೆಯಲ್ಲ. ಅದು ಇತಿಹಾಸದುದ್ದಕ್ಕೂ ಜೀವಂತವಾಗಿ ನಡೆದು ಬಂದ ಒಂದು ಸ್ಥಿತಿಯಾಗಿದೆ. ಈ ಜೀವಂತ ಸಂಸ್ಕೃತಿಯಲ್ಲಿ ಕಂಡುಬರುವ ವಿಷಯಗಳು ಅಪಾರವಾದುದು. "ಪುರಾಣಗಳು , ಕಟ್ಟುಕಥೆಗಳು, ಕತೆಗಳು, ಚೇಷ್ಟೆ, ಒಡಪು, ಬೈಗಳು, ಆಣೆಮಾಡುವಾಗ ಭೆಟ್ಟಿಯಾದಾಗ, ಅಗಲುವಾಗ ಹೇಳುವ ಮಾತುಗಳು, ಧಾರ್ಮಿಕ, ವ್ಯಾವಹಾರಿಕ ನಡವಳಿಕೆಗಳೂ, ಹಾಡು, ಕುಣಿತ, ಆಟಪಾಠಗಳು, ಬಯಲಾಟ, ಸಂಗೀತ, ಉಪಭಾಷೆ ಇತ್ಯಾದಿಗಳೂ ದೇವರಿಗೆ ನಡೆದುಕೊಳ್ಳುವ ರೀತಿ, ಆಚರಿಸುವ ಆರಾಧನೆಗಳು, ಉತ್ಸವ, ಹಬ್ಬ-ಹರಿದಿನಗಳು, ಮದುವೆ ಪದ್ಧತಿಗಳು, ಹೆಂಗಸರಿಗೆ ಸಂಬಂಧಪಟ್ಟ ಆಚರಣೆಗಳು ಇದರಲ್ಲೇ ಸೇರುತ್ತವೆ."[2]

ಜಾನಪದ ಸಂಸ್ಕೃತಿಯ ತಲೆಮಾರಿನಿಂದ ತಲೆಮಾರಿಗೆ ಶಾಬ್ದಿಕವಾಗಿ ತೋಂಡಿ ಸಂಪ್ರದಾಯದ ಮೂಲಕ ಮುಂದುವರಿಯುತ್ತದೆ. ಈ ಸಂಸ್ಕೃತಿಯಲ್ಲಿ ಶಾಬ್ದಿಕವಾಗಿ ಕಲಾರೂಪಗಳಾದ ಮೂಢನಂಬಿಕೆ, ನೃತ್ಯ, ಆಟಪಾಠಗಳು ಮೊದಲಾದವುಗಳಿದ್ದರೂ ಮುಖ್ಯವಾಗಿ ತೋಂಡಿ ಗುಣಧರ್ಮವೇ ಅದರ ಉಸಿರೆಂದು ಹೇಳಬಹುದು.

ವಿಶಾಲಾರ್ಥದಲ್ಲಿ ಜಾನಪದ ಎಂಬ ಪದವನ್ನು ವಿದ್ಯಾವಂತರಾದ ಅಥವಾ ವಿದ್ಯಾವಂತರಲ್ಲದ ಎಲ್ಲ ಬಗೆಯ ಜನರ 'ಸಾಹಿತ್ಯಿಕ ಅಲಿಖಿತ ದಾಖಲೆ'[3] ಎಂದು ಅರ್ಥೈಸಬಹುದು. ಇನ್ನೊಂದು ರೀತಿಯಲ್ಲಿ ಹೇಳಿದರೆ ಜಾನಪದ ಸಂಸ್ಕೃತಿ ಎಂದರೆ "ಲಕ್ಷಾಂತರ ವರ್ಷಗಳ ಮಾನವರ ಅನುಭವದ ವೈಜ್ಞಾನಿಕ ಹಾಗೂ ಸಾಂಸ್ಕೃತಿಕ

---

೧. ಜಾನಪದ ಸಾಹಿತ್ಯ ದರ್ಶನ, ಪು. ೩೬

೨. ಕನ್ನಡ ಜಾನಪದ ವಿಶ್ವಕೋಶ, ಸಂ. ೧, ಪು. ೮೬೨

೩. ಕನ್ನಡ ಜಾನಪದ ವಿಶ್ವಕೋಶ, ಸಂ.೧, ಪು. ೮೬೨.

ರಸಘಟ್ಟಿ"[೧] ಒಟ್ಟಿನಲ್ಲಿ ಹೇಳುವುದಾದರೆ ಅದು ಜನಪ್ರಿಯ ಸಂಪ್ರದಾಯವೊಂದರ ಭಂಡಾರ ಮತ್ತು ಸಮಗ್ರ ಜನಪ್ರಿಯ ನಡವಳಿಕೆಗಳ ಕೋಶ." ಪಾಶ್ಚಿಮಾತ್ಯ ವಿದ್ವಾಂಸರ ಮೇಲ್ಕಂಡ ಹೇಳಿಕೆಗಳನ್ನು ಗಮನಿಸಿದಾಗ ಜಾನಪದ ಸಂಸ್ಕೃತಿಯ ನಂಬಿಕೆ, ಪದ್ಧತಿ. ಸಂಪ್ರದಾಯಗಳನ್ನು ಒಳಗೊಂಡ ದೈಹಿಕಾಚರಣೆಗಳು, ಮಾನಸಿಕವಲಯದ ಶಾಬ್ದಿಕ ಸಾಹಿತ್ಯ ಮತ್ತು ಬೇಸರ ಕಳೆಯುವ ಕಲೆ, ಆಟಪಾಠಗಳು - ಇತ್ಯಾದಿಗಳೆಲ್ಲವೂ ಸಮಾವೇಶಗೊಂಡು ವಿಶಾಲಾರ್ಥ ಪಡೆದಿವೆ ಎನ್ನಬಹುದು.

ಜನಪದ ಸಾಹಿತ್ಯದ ಬಗ್ಗೆ ಅನೇಕ ವಿದ್ವಾಂಸರು ನೀಡಿರುವ ವ್ಯಾಖ್ಯೆಗಳಲ್ಲಿ ಒಂದೆರಡು ಹೀಗಿವೆ: "ಜನಪದ ಸಾಹಿತ್ಯ ಎಂಬ ಮಾತಿನಲ್ಲಿ ಜನಪದ ಎಂಬುದು ಸಮಾಜ ಸೂಚಕವಾದ ಪದವಾಗುವುದಕ್ಕಿಂತಲೂ ಜನರ ಮಾನಸಿಕ ಸ್ಥಿತಿ, ಪ್ರಜ್ಞಾವಲಯ ಇಲ್ಲವೇ ಮನೋಧರ್ಮವನ್ನು ಸೂಚಿಸುತ್ತವೆ"[೨] (ಈ ಜನಪದ. ಪ್ರಜ್ಞೆ, ಭಾಷೆಯ ಮೂಲಕ ಅಭಿವ್ಯಕ್ತಗೊಂಡಾಗ ಜಾನಪದ ಸಾಹಿತ್ಯವೆನಿಸುತ್ತದೆ) "ಒಂದು ದೇಶದ ಸಮಗ್ರಸಾಹಿತ್ಯವನ್ನು ಬರವಣಿಗೆಯೊಳಗೆ ಬದುಕಿ ಬಂದ ಲಿಖಿತರೂಪ, ಬಾಯೊಳಗೆ ಬದುಕಿ ಬಂದ ಅಲಿಖಿತ ರೂಪ ಎಂದು ವರ್ಗೀಕರಿಸಬಹುದು. ಇವುಗಳಲ್ಲಿ ಒಂದು ಪಂಡಿತವರ್ಗ ನಿರ್ಮಿತ ಶಿಷ್ಟಪದ ಸಾಹಿತ್ಯ; ಇನ್ನೊಂದು ಪಾಮರವರ್ಗ ನಿರ್ಮಿಸುವ ಜನಪದ ಸಾಹಿತ್ಯ"[೩] "ಜನಪದ ಸಾಹಿತ್ಯ ಶುಷ್ಕ ವೈಯಾಕರಣರ ಪರೀಕ್ಷೆಗೆ ನಿಲ್ಲತಕ್ಕ ಸಾಹಿತ್ಯವಲ್ಲ. ಸಹೃದಯರ ರಸಾಸ್ವಾದನೆಗೆ ಮಾತ್ರ ಯೋಗ್ಯವಾದುದು."[೪] "ಜನಪದ ಸಾಹಿತ್ಯವೆಂದರೆ ಜನತೆಯ ಬದುಕಿನಲ್ಲಿ ಸಹಜವಾಗಿ ಉದಿಸಿದ ಸಾಹಿತ್ಯ, ಉದ್ದೇಶಪೂರ್ವಕವಾಗಿ ಸೃಷ್ಟಿಯಾದ ಸಾಹಿತ್ಯವಲ್ಲ"[೫] ಜಮೀನುದಾರಿ ಪದ್ಧತಿ, ಪ್ರಧಾನ ಸಂಸ್ಕೃತಿ, ವೈದಿಕ ಸಂಸ್ಕೃತಿ, ಮಾರ್ಗ ಸಂಪ್ರದಾಯ, ನಗರ ಸಂಸ್ಕೃತಿ - ಇವೆಲ್ಲವನ್ನು ಶಿಷ್ಟ ವರ್ಗವೆನ್ನುತ್ತೇವೆ.

---

೧. ಕನ್ನಡ ಜಾನಪದ ವಿಶ್ವಕೋಶ, ಸಂ.೧, ಪು. ೮೬೨

೨. ಜನಪದ ಸಾಹಿತ್ಯದರ್ಶನ, ಸಂ.೧, ಪು. ೪.

೩. ಉತ್ತರ ಕರ್ನಾಟಕ ಜನಪದ ಸಾಹಿತ್ಯ : ಎಂ.ಎಂ. ಕಲ್ಬುರ್ಗಿ, ಪು. ೨

೪. ಜಾನಪದ ಸೌಂದರ್ಯ, ದೇಜಗೌ, ಪು. ೧೨೬

೫. ಜಾನಪದ ಸ್ವರೂಪ, ಕ.ಸಾ.ಪ, ಪು. ೧೦

ಅರಸೊತ್ತಿಗೆ ಮತ್ತು ಆಳುವವರ್ಗದವರು ಶಿಷ್ಟವರ್ಗಕ್ಕೆ ಸೇರಿದ್ದು, ಇವರೆಲ್ಲರಿಗೆ ಸಂಬಂಧಿಸಿದ ಸಾಹಿತ್ಯವನ್ನು ಶಿಷ್ಟ ಸಾಹಿತ್ಯವೆನ್ನುತ್ತಾರೆ. ಶಿಷ್ಟ ಸಾಹಿತ್ಯದಲ್ಲಿ ಜನಪದ ಪ್ರಜ್ಞೆ, ಮಣ್ಣಿನ ವಾಸನೆ ಬಹುಮಟ್ಟಿಗೆ ಇರುವುದಿಲ್ಲವೆಂದೇ ಹೇಳಬಹುದು. ಒಂದು ವೇಳೆ ಇದ್ದರೂ ಅದು ಪ್ರಮುಖವಾಗಿರುವುದಿಲ್ಲ. ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಇವೇ ಮೊದಲಾದ ಆಧುನಿಕ ಸಾಹಿತ್ಯಗಳಲ್ಲಿ ಜನಪದ ಭಾಷೆ, ಜನಪದ ವಸ್ತು ಆಂಶಿಕವಾಗಿ ಇರುವುದು ಕಂಡರೂ ಇವು ಶಿಷ್ಟವರ್ಗಕ್ಕೇ ಸೇರುತ್ತವೆ. ವಚನ ಸಾಹಿತ್ಯ ಮತ್ತು ಕೀರ್ತನ ಸಾಹಿತ್ಯಗಳಲ್ಲಿ ಹೆಚ್ಚು ಪ್ರಮಾಣದಲ್ಲಿ ಜಾನಪದೀಯ ಅಂಶಗಳು ಕಂಡುಬರುವುದಾದರೂ, ಕೇವಲ ಜಾನಪದರೇ ಅಲ್ಲದೆ ಶಿಷ್ಟವರ್ಗದವರೂ ಇದನ್ನು ರಚಿಸಿರುವುದರಿಂದ, ಇವು ಶಿಷ್ಟ ಸಾಹಿತ್ಯದ ಗುಂಪಿಗೇ ಸೇರುತ್ತವೆ. ಶುದ್ಧ ಜನಪದ ಸಾಹಿತ್ಯ ಅನಕ್ಷರಸ್ಥರ ಸೃಷ್ಟಿಯಾಗಿದ್ದು ಅಕ್ಷರಸ್ಥರು ಪಾಲ್ಗೊಂಡಾಗ ಅದು ಶುದ್ಧ ಜಾನಪದವೆನಿಸುವುದಿಲ್ಲ.

ಶುದ್ಧ ಜಾನಪದ ಸಾಹಿತ್ಯವನ್ನು ಕಾಣಲು ಸಾಧ್ಯವಿದ್ದರೂ ಶುದ್ಧ ಶಿಷ್ಟಸಾಹಿತ್ಯವನ್ನು ಕಾಣಲು ಸಾಧ್ಯವಿಲ್ಲ. ಶಿಷ್ಟ ಕಾವ್ಯದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಜನಪದ ಗಾದೆ, ಪಡೆನುಡಿ, ಕಥೆ, ಐತಿಹ್ಯ ಮೊದಲಾದವುಗಳು ಅಡಕವಾಗಿರುತ್ತವೆ. ಭಾಷೆ ಮೊದಲು ವ್ಯಾಕರಣ ಅನಂತರ ಎಂದ ಹಾಗೆ ಜನಪದ ಸಾಹಿತ್ಯ ಮೊದಲು, ಶಿಷ್ಟ ಸಾಹಿತ್ಯ ಆಮೇಲೆ. ಶಿಷ್ಟ ಸಾಹಿತ್ಯದ ಪ್ರೇರಣೆ ಶಕ್ತಿಮೂಲಗಳು ಜಾನಪದವಾಗಿರುವ ಪ್ರಯುಕ್ತ, ಯಾವುದೇ ಶಿಷ್ಟ ಕಾವ್ಯವಾದರೂ 'ಜನವಾಣಿ ಬೇರು, ಕವಿವಾಣಿ ಹೂವು' ಎಂಬ ಕವಿ ಮಾತಿಗೆ ನಿದರ್ಶನವಾಗಿರುತ್ತದೆ.

ಶಿಷ್ಟ ಅಥವಾ ಮಾರ್ಗ, ದೇಸಿ ಅಥವಾ ಜಾನಪದ ಸಾಹಿತ್ಯಗಳು ತಮ್ಮದೇ ಆದ ವಿಶಿಷ್ಟ ಲಕ್ಷಣಗಳನ್ನು ಹೊಂದಿವೆ. ಉದಾಹರಣೆಗೆ, ಶಿಷ್ಟಸಾಹಿತ್ಯ ಜನಪದ ಸಾಹಿತ್ಯಕ್ಕಿಂತ ಭಿನ್ನವಾಗಿದ್ದು, ವ್ಯಕ್ತಿಯೊಬ್ಬನಿಂದ ರಚಿತವಾಗಿದ್ದು, ಬೇರೆಬೇರೆ ಕಾಲಗಳಲ್ಲಿ ಬೇರೆ ಬೇರೆ ಕವಿಗಳು ರಚಿಸಿದ ಕೃತಿಗಳಾಗಿದ್ದು, ನಿರ್ದಿಷ್ಟರೂಪದಲ್ಲಿ ಸಿಗುತ್ತವೆ. ಶಿಷ್ಟ ಸಾಹಿತ್ಯಕ್ಕೆ ರಾಜಾಶ್ರಯ ಕಂಡುಬರುವುದರ ಜೊತೆಗೆ ಸಾಹಿತ್ಯ ಸೃಷ್ಟಿಯಲ್ಲಿ ಪಂಡಿತರು ಹೆಚ್ಚಾಗಿ ಪಾಲ್ಗೊಂಡಿರುವುದನ್ನು ಕಾಣುತ್ತೇವೆ. ಶಿಷ್ಟ ಸಾಹಿತ್ಯ ಕಾಲ ಮತ್ತು ವ್ಯಕ್ತಿ ವಿಚಾರಗಳನ್ನು ಖಚಿತಾಂಶಗಳನ್ನು ಬರಹದಲ್ಲಿ ತಿಳಿಸುವುದರಿಂದ ಆ ಬಗ್ಗೆ ಇತಿಹಾಸ ರಚಿಸಲು ಸಾಧ್ಯ,

ಶಿಷ್ಟಸಾಹಿತ್ಯದಲ್ಲಿ ವೈದಿಕ ಸಂಸ್ಕೃತಿ ಕಂಡುಬಂದರೆ, ಜನಪದ ಸಾಹಿತ್ಯದಲ್ಲಿ ಗ್ರಾಮೀಣ ಸಂಸ್ಕೃತಿ ಕಂಡುಬರುತ್ತದೆ. ರಾಜಾಶ್ರಯದಲ್ಲಿ ಪಂಡಿತರಿಂದ ರಚಿಸಲ್ಪಟ್ಟ ಶಿಷ್ಟಸಾಹಿತ್ಯ ಒಂದು ಕಡೆ ಬೆಳೆಯುತ್ತಾ ಬಂದರೆ ಪ್ರಜಾಶ್ರಯದಿಂದ ಜನಪ್ರಿಯಗೊಂಡ ಜಾನಪದ ಸಾಹಿತ್ಯ, ಜನ ಕುರಿತೋದದೆಯು ಕಾವ್ಯ ಪ್ರಯೋಗ ಪರಿಣತರಾಗಲು ಬೆಳೆದು ಬಂದಿರುವುದನ್ನು ಕಾಣುತ್ತೇವೆ. ಮೊದಲಿಗೆ ಎರಡು ಪ್ರಕಾರಗಳನ್ನು ಮಾರ್ಗ - ದೇಸಿಗಳ ಮೂಲಕ ಗುರುತಿಸಿದರೆ ಈಗ ಶಿಷ್ಟಪದ - ಜಾನಪದ, ಲಿಖಿತ- ಮೌಖಿಕ, ಅಭಿಜಾತ- ಜಾನಪದ, ಪಂಡಿತ-ಪಾಮರ ಮೊದಲಾದ ಹೆಸರುಗಳಿಂದ ಗುರುತಿಸುತ್ತಾರೆ. ಶಿಷ್ಟ ಸಾಹಿತ್ಯದಲ್ಲಿ ಕೆಲವು ವಿಶಿಷ್ಟ ಲಕ್ಷಣಗಳನ್ನು ಕಾಣಬಹುದಾದರೂ, ಒಂದಲ್ಲ ಒಂದು ರೀತಿಯಲ್ಲಿ ಜನಪದ ಸಾಹಿತ್ಯದ ಲಯಗಳು, ಆಶಯಗಳೂ, ಭಾಷಾವೈಶಿಷ್ಟ್ಯಗಳು ಸೇರ್ಪಡೆಯಾಗಿರುವುದನ್ನು ಕಾಣಬಹುದು.

ಲಿಖಿತ ಸಾಹಿತ್ಯದ ಪರಂಪರೆಯನ್ನು ಸ್ಪಷ್ಟವಾಗಿ ಗುರುತಿಸುವಂತೆ ಜಾನಪದ ಸಾಹಿತ್ಯದ ಇತಿಹಾಸವನ್ನು ರಚಿಸುವುದು ಸಾಧ್ಯವಿಲ್ಲ. ಏಕೆಂದರೆ ತಲೆಮಾರುಗಳು ಬದಲಾದಂತೆಲ್ಲ ಜಾನಪದ ಸ್ವರೂಪಗಳು, ಅಸ್ತಿತ್ವದಲ್ಲಿರುತ್ತಿದ್ದ ರೀತಿ, ಪರಿವರ್ತನೆ ಉಂಟಾಗುವ ಕಾರಣ ಮೊದಲಾದವುಗಳು ಖಚಿತವಾಗಿ ತಿಳಿಯುವುದಿಲ್ಲ. ಆದರೂ ಸಹ ಶಿಷ್ಟಸಾಹಿತ್ಯದಲ್ಲಿ ಮೊದಲಿನಿಂದಲೂ ಇಂದಿನವರೆಗೂ ಕೆಲವರು 'ಗೊರವರ ಡುಂಡುಚಿ, ಬೀದಿವರೆ ಬೀರನಕತೆ' ಎಂದು ದೂರೀಕರಿಸಿದರೂ ಗ್ರಾಮೀಣ ಜನತೆಯಲ್ಲಿ ಜೀವಂತ ಸಾಹಿತ್ಯವಾಗಿದ್ದು, ಅರಮನೆಯ ಬದುಕಿನಲ್ಲಿ ನಿರ್ಮಿತವಾದ ಶಿಷ್ಟಸಾಹಿತ್ಯದಲ್ಲಿ ಜಾನಪದ ನಾನಾರೀತಿಯಲ್ಲಿ ನುಸುಳಿಕೊಂಡಿರುವುದನ್ನು ಕಾಣಬಹುದು. ಶಾಸನ ಸಾಹಿತ್ಯದಲ್ಲಿ ಬಳಕೆಯಾದ ಪದಸಂಪತ್ತು, ಛಂದಸ್ಸು ಮತ್ತು ಸಂಗತಿಗಳು ಅಂದಿನ ಜಾನಪದ ಸಾಹಿತ್ಯದ ಸುಳುಹುಗಳನ್ನು ಕೊಡುತ್ತವೆ. ಕನ್ನಡದ ಲಭ್ಯ ಲಿಖಿತಸಾಹಿತ್ಯದ ಆಕರಗ್ರಂಥಗಳಲ್ಲಿ ಪ್ರಸಿದ್ಧವಾದ ಕವಿರಾಜಮಾರ್ಗದಲ್ಲಿ ವ್ಯಕ್ತವಾಗಿರುವ ಚತ್ತಾಣ, ಬೆದಂಡೆಗಳು, ವಡ್ಡಾರಾಧನೆಯಲ್ಲಿ ಕಂಡುಬರುವ ಪಗರಣ ಮೊದಲಾದವು ಅಂತೆಯೇ ಆಕಾಲದಲ್ಲಿ ಇದ್ದು ಇಂದು ಜಾನಪದವು ಅಲಭ್ಯವಾಗಿರುವ ಇತರ ಕೃತಿಗಳಿಂದ ಅದು ಶಿಷ್ಟ ಸಾಹಿತ್ಯದಲ್ಲಿ ಒಳಹೊಕ್ಕಿರುವುದನ್ನು ಕಾಣಬಹುದು. ಚಂಪೂ ಪರಂಪರೆಯಲ್ಲಂತೂ ಮಾರ್ಗ - ದೇಸಿಗಳ ಸಮನ್ವಯದಲ್ಲಿ ದೇಸಿ ಜಾನಪದವನ್ನು ಪ್ರತಿನಿಧಿಸುತ್ತದೆ. ಮಾರ್ಗ

ಸಾಹಿತ್ಯ ರೂಪದಲ್ಲಿ ಶಿಷ್ಟವಾಗಿ ಕಂಡರೂ ಮೂಲದ್ರವ್ಯ ದೇಸಿ ಅಥವಾ ಜಾನಪದ ವಸ್ತುವಾಗಿರುವುದನ್ನು ಕಾಣಬಹುದು. ಇದಕ್ಕೆ ನಿದರ್ಶನವಾಗಿ ಜನಪದ ಜೀವನದಲ್ಲಿ ಬಳಕೆಯಲ್ಲಿರುವ ಮಾತುಗಳು ಹೇಗೆ ಪಂಪನ ಕಾವ್ಯದಲ್ಲಿ ಶಿಷ್ಟರೂಪತಾಳಿದೆ ಎನ್ನುವುದನ್ನು ಗಮನಿಸಬಹುದಾಗಿದೆ. "ಪಡೆನೋಡಲ್ ಬಂದವರಂ ಗುಡಿವೊರಿಸಿದರೆಂಬವೊಲಾಯ್ತು" (ದಂಡನೋಡಲಾಕ ಬಂದರ ದಂಡಿಗಿ ಹೊರಿಸಿದರು), "ನೀಳ್ದಮಾವಿನಪೋಳಂದದಕಣ್ಗೆ ಬಾಷ್ಪಜಲಮಂ" (ಮಾವಿನ ಹೋಳS ನಿನ ಕಣ್ಣS), "ಪಗೆವರ ನಿಟ್ಟೆಲ್ವಂ ಮುರಿವೊಡೆನಗೆ ಪಟ್ಟಂಗಟ್ಟಾ" (ಗೌಡ್ಕಿಕೊಟ್ಟರ ಹೆಡಕ ಮುರಿತೀನಿ), " ಹೆಸರ್ ಎನಗೆ ಮೊಸರ್ ಪರರ್ಗೆ" (ಹೆಸರು ಹೆಗಡೇಗ ಮೊಸರ ಕುಲಕರ್ಣಿಗೆ) , ಪಂಪನ ಈ ನುಡಿಗಳನ್ನು ಅವುಗಳ ದೇಸಿರೂಪಗಳನ್ನು ಕಂಡಾಗ ಅವನೇ ಹೇಳಿಕೊಂಡಂತೆ "ಬಗೆ ಪೊಸತಪ್ಪುದಾಗಿ ಮೃದಪದಬಂಧದೊಳೊಂದುವುದೊಂದಿ ದೇಸಿಯೊಳ್‌ಪ್ಪುಗುವುದು....." ಎಂಬ ಮಾತು ಮಾರ್ಗ- ದೇಸಿಗಳ ಸಮನ್ವಯ ಸೂತ್ರದಂತೆ ಕಾಣುತ್ತದೆ.[೧]

ಜೀವಂತ ಪರಂಪರೆಯನ್ನೊಳಗೊಂಡು ಕಂಠಸ್ಥವಾಗಿ ಪರಂಪರಾಗತವಾಗಿ ಹರಿದು ಬಂದ ಜಾನಪದ ಸಾಹಿತ್ಯ, ಶಿಷ್ಟ ಸಾಹಿತ್ಯದಂತೆ ನಿರ್ಜೀವ ವಸ್ತು (ಕಾಗದ, ಓಲೆಗರಿ ಇತ್ಯಾದಿ) ಮಾಧ್ಯಮವನ್ನು ಹೊಂದಿರುವುದಿಲ್ಲ. ಹೀಗೆ ಜೀವಂತ ಜನಪದ ಮಾಧ್ಯಮವನ್ನು ಹೊಂದಿದ ಈ ಸಾಹಿತ್ಯ ಆಯಾ ವ್ಯಕ್ತಿಯ ಭಾವಗ್ರಹಣ ಶಕ್ತಿ, ಸೃಜನಶೀಲತೆ, ಅಭಿವ್ಯಕ್ತಿಯ ಸಾಮರ್ಥ್ಯಗಳಿಗೆ ತಕ್ಕಂತೆ ಭಾಷಿಕ ಅಥವಾ ಭಾವನಾತ್ಮಕ ಬದಲಾವಣೆಗಳಿಗೆ ಒಳಗಾಗುತ್ತದೆ. ಇದರಿಂದಾಗಿ ಒಂದೇ ಹಾಡಿನ ಹತ್ತಾರು ಭಿನ್ನ ರೂಪಗಳನ್ನು ಕಾಣಬಹುದಾಗಿದೆ. ಕೃತಕತೆ, ಮಡಿವಂತಿಕೆಗಳಿಲ್ಲದೆ ಪ್ರಾಮಾಣಿಕ ಹಾಗೂ ನಿರ್ಭೀತ ಅಭಿವ್ಯಕ್ತಿಯನ್ನು ಜಾನಪದ ಸಾಹಿತ್ಯದಲ್ಲಿ ಕಾಣುವುದರಿಂದ ನಿಷ್ಠುರ ಸತ್ಯದ ಅಶ್ಲೀಲವೆನಿಸುವ ಭಾವವನ್ನೊಳಗೊಂಡ ಬೈಗಳು, ಗಾದೆಗಳು ಪಡೆನುಡಿಗಳು ಮೊದಲಾದುವನ್ನು ಕಾಣುತ್ತೇವೆ. ಇಡಿ ಮಾನವ ಲೋಕದ ಮೂಲ ಸತ್ವವನ್ನು ಜಾನಪದ ಸಾಹಿತ್ಯ ಒಳಗೊಂಡಿರುವುದರಿಂದ ನಾನಾದೇಶಗಳ ಸಾಹಿತ್ಯದಲ್ಲಿ ಹತ್ತಾರು ವಿಷಯಗಳಲ್ಲಿ ಸಮಾನಾಂಶಗಳನ್ನು, ಸಾದೃಶ್ಯಗಳನ್ನು ಕಾಣಲು ಸಾಧ್ಯ.

---

೧. ಜಾನಪದ ಸಾಹಿತ್ಯದರ್ಶನ, ಸಂ. ಡಾ.ಆರ್. ಸಿ. ಹಿರೇಮಠ, ಪು. ೩೬.

ಕನ್ನಡ ಸಾಹಿತ್ಯ ಚರಿತ್ರೆಗ್ರಂಥಗಳನ್ನು ಅಧ್ಯಯನಮಾಡಿದಾಗ ಬಹುಮಟ್ಟಿಗೆ ಸಾಹಿತ್ಯ ಚರಿತ್ರಕಾರರೆಲ್ಲ ಶಿಷ್ಟ ಸಾಹಿತ್ಯವಾದ ಲಿಖಿತ ಕೃತಿಗಳನ್ನು (ಅಚ್ಚಾದ ಹಾಗೂ ಅಚ್ಚಾಗದ) ಆಧರಿಸಿ ಸಾಹಿತ್ಯ ಚರಿತ್ರೆ ರಚಿಸಿದ್ದಾರೆ. ಲಿಖಿತ ಕೃತಿಗಳು ಅಚ್ಚಾಗಲು ಪ್ರಾರಂಭವಾದಂತೆಯೇ, ಅಲಿಖಿತ ಸಾಹಿತ್ಯ ಸಂಗ್ರಹಣೆ ಮತ್ತು ಮುದ್ರಣವು ಪ್ರಾರಂಭವಾಯಿತು. ಕುಮಾರವ್ಯಾಸಭಾರತ, ಜೈಮಿನಿ ಭಾರತ, ವಚನಗಳು, ದಾಸಸಾಹಿತ್ಯ, ಸರ್ವಜ್ಞನ ವಚನಗಳು ಇವೇ ಮೊದಲಾದ ಕಾವ್ಯಗಳು ಅಚ್ಚಾದವು. ಇದರೊಂದಿಗೆ ಕಾಲಕ್ರಮೇಣ ಅಲಿಖಿತ ಸಾಹಿತ್ಯವನ್ನು ಮುಖ್ಯವಾಗಿ ಜಾನಪದ ಗೀತೆಗಳನ್ನು ಸಂಗ್ರಹಿಸುವ, ಪ್ರಕಟಿಸುವ ಕಾರ್ಯ ಹೆಚ್ಚಾಗಿ, ಜಾನಪದ ಸಾಹಿತ್ಯಾಧ್ಯಯನವೇ ಒಂದು ಪ್ರತ್ಯೇಕ ವಿಷಯವಾಯಿತು.

ಹೀಗಾಗಿ ಇಂದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಲಿಖಿತ ಸಾಹಿತ್ಯದ ಅಧ್ಯಯನ ಅಲಿಖಿತ ಸಾಹಿತ್ಯದ ಅಧ್ಯಯನ ಎರಡೂ ಪ್ರತ್ಯೇಕವಾಗಿ ನಡೆಯುತ್ತಾ ಬಂದಿದೆ. ಈಗ ಮುಂದಿನ ಹೆಜ್ಜೆಯಾಗಿ ಲಿಖಿತ ಸಾಹಿತ್ಯದಲ್ಲಿ ಅಲಿಖಿತ ಸಾಹಿತ್ಯದ ಪ್ರಭಾವವನ್ನು ಗುರುತಿಸುವ ಕಾರ್ಯವೂ ಆಗಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಕನ್ನಡದ ಮಹಾಕವಿಗಳ ಕೃತಿಗಳಲ್ಲಿ ಜಾನಪದ ಅಂಶಗಳನ್ನು ಅಲ್ಲಲ್ಲಿ ಸಾಂದರ್ಭಿಕವಾಗಿ ಅನೇಕರು ಗುರುತಿಸಿದ್ದಾರೆ. ಆದರೆ ಶಿಷ್ಟ ಕಾವ್ಯಗಳನ್ನು ಕೇವಲ ಜಾನಪದ ದೃಷ್ಟಿಯಿಂದಲೇ ಅಧ್ಯಯನ ಮಾಡಿದ ಪ್ರಸಂಗಗಳು ವಿರಳ. ಇಲ್ಲಿ ಬಹುಶಃ ಮೊದಲ ಬಾರಿಗೆ ಕೇವಲ ಜಾನಪದೀಯ ದೃಷ್ಟಿಯಿಂದ ಕನ್ನಡದ ಶ್ರೇಷ್ಠ ಮಹಾಕಾವ್ಯಗಳಲ್ಲಿ ಒಂದಾದ ಕುಮಾರವ್ಯಾಸಭಾರತವನ್ನು ಪರಿಶೀಲಿಸಲಾಗುತ್ತಿದೆ. ಇಂದು ಮೊದಲಿಗಿಂತ ಕನ್ನಡದಲ್ಲಿ ಜಾನಪದ ಅಧ್ಯಯನವು ವಿಶೇಷವಾಗಿ ನಡೆದಿರುವುದರಿಂದ ಒಂದು ಕೃತಿಯನ್ನು ಹೊಸ ಹೊಸ ಆಯಾಮಗಳಿಂದ ಅಧ್ಯಯನ ಮಾಡಲು ಸಾಧ್ಯವಾಗಿದೆ. ಈ ಮೊದಲು ಜಾನಪದ ಸಾಹಿತ್ಯವೆಂದರೆ ಜನಪದ ಗೀತೆಗಳು, ಜಾನಪದ ವೈಶಿಷ್ಟ್ಯವೆಂದರೆ ಅದರ ಭಾಷೆ- ವೈಶಿಷ್ಟ್ಯಗಳು ಎಂದು ತಿಳಿದಿದ್ದ ಕಲ್ಪನೆ ಇಂದು ಮಾಯವಾಗಿದೆ. ಸಂಸ್ಕೃತಿ, ಕಲೆ, ಇತಿಹಾಸ, ಸಾಹಿತ್ಯ, ಭಾಷೆ, ಅನ್ಯಭಾಷೆಗಳು - ಮೊದಲಾದ ದೃಷ್ಟಿಗಳಿಂದ ಅಧ್ಯಯನ ಮಾಡುವ ಪರಿಪಾಠವುಂಟಾಗಿದೆ. ಇಂದು ತೌಲನಿಕ ಅಧ್ಯಯನವು ಕೇವಲ ಒಂದು ಕಾಲದ ಇಲ್ಲವೇ ಒಂದು ಭಾಷೆಯ ಕೃತಿಗಳಿಗೆ ಸೀಮಿತವಾಗದೆ ಭಿನ್ನಭಿನ್ನ ದೇಶ- ಕಾಲ- ಭಾಷೆಗಳ ಅಧ್ಯಯನಕ್ಕೆ ವಿಸ್ತೃತಗೊಂಡಿದೆ.

ಜಾನಪದ ಸಾಹಿತ್ಯವನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡುವವರ ಅನುಕೂಲಕ್ಕಾಗಿ ಜನಪದ ವಿದ್ವಾಂಸರು ಹಲವಾರು ಬಗೆಯ ಅಧ್ಯಯನದ ಕ್ರಮಗಳನ್ನು ರೂಪಿಸಿದ್ದಾರೆ. ಜಾನಪದ ವರ್ಗೀಕರಣ ವಿಚಾರವೇ ಒಂದು ಪ್ರತ್ಯೇಕ ಅಧ್ಯಯನದ ಸಂಗತಿಯಾಗಿದೆ. ಈ ಕ್ಷೇತ್ರದಲ್ಲಿ ಪಾಶ್ಚಾತ್ಯ ವಿದ್ವಾಂಸರನೇಕರು ವರ್ಗೀಕರಣ ವಿಧಾನಗಳನ್ನು ವೈಜ್ಞಾನಿಕವಾಗಿ ರೂಪಿಸಿ ಯಶಸ್ವಿಯಾಗಿದ್ದಾರೆ. ಫ್ರಾನ್ಸಿಸ್‌ಲೀಅಟ್ಲಿ, ಅಲೆನ್ ಡಂಡೆಸ್, ಅಲೆಗ್ಸಾಂಡರ್ ಎಚ್. ಕ್ರಾಫ್, ಸ್ಮಿತ್ ಥಾಂಸನ್, ಆರ್.ಎಸ್. ಬಾಗ್ಸ್ ಮೊದಲಾದವರು ಈ ಕ್ಷೇತ್ರದಲ್ಲಿ ಪ್ರಸಿದ್ಧರಾಗಿದ್ದಾರೆ. ಇವರ ವರ್ಗೀಕರಣ ಪದ್ಧತಿಗಳನ್ನು ಅಧ್ಯಯನ ಮಾಡಿದ ಕನ್ನಡ ವಿದ್ವಾಂಸರು ಕನ್ನಡ ಜಾನಪದದ ಹಿನ್ನೆಲೆಯಲ್ಲಿ ಸಾಕಷ್ಟು ವಿವೇಚನೆ ಮಾಡಿ, ಕನ್ನಡಕ್ಕೆ ಈ ವರ್ಗೀಕರಣವನ್ನು ಅಳವಡಿಸಲು ಪ್ರಯತ್ನಿಸಿದ್ದಾರೆ.

ಪ್ರಸ್ತುತ ಬರಹದಲ್ಲಿ ಮುಖ್ಯವಾಗಿ ಶಿಷ್ಟಕಾವ್ಯವಾದ ಕುಮಾರವ್ಯಾಸ ಭಾರತದಲ್ಲಿ ಜಾನಪದೀಯ ಅಂಶಗಳು ಯಾವುವು, ಅವು ಹೇಗೆ ಅಂತರ್ಗತವಾಗಿವೆ ಎಂಬುದನ್ನು ಹೆಕ್ಕಿ ತೆಗೆಯುವುದು ಮುಖ್ಯಗುರಿಯಾಗಿರುವುದರಿಂದ ವರ್ಗೀಕರಣಕ್ಕಿಂತ ಇಲ್ಲಿ ವಸ್ತುವಿನ ಅನ್ವೇಷಣೆ ಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ ಕುಮಾರವ್ಯಾಸನ ಭಾರತದ ವಿಷಯ ವೈವಿಧ್ಯ ಮತ್ತು ವೈಶಿಷ್ಟ್ಯಗಳಿಗೆ ತಕ್ಕಂತೆ ಅಧ್ಯಾಯಗಳನ್ನು ರೂಪಿಸಲಾಗಿದೆ. ಬಾಗ್ಸ್‌ನ ಪ್ರಕಾರ ವರ್ಗೀಕರಣವು ಹೀಗಿದೆ:

೧. ಸಾಹಿತ್ಯಿಕ ಬಗೆ (ಪುರಾಣ, ಐತಿಹ್ಯ, ಕಥೆ, ಕಾವ್ಯಗಳು)
೨. ಭಾಷಿಕ ಬಗೆ (ಮಾತು, ಸಂಖ್ಯೆ, ಗಾದೆ, ಒಗಟು, ಪಡೆನುಡಿ, ಇತ್ಯಾದಿ)
೩. ವೈಜ್ಞಾನಿಕ ಬಗೆ (ಚಿಕಿತ್ಸೆ, ಭವಿಷ್ಯ, ಮಾಟ, ನಂಬಿಕೆ, ಇತ್ಯಾದಿ)
೪. ಕ್ರಿಯಾತ್ಮಕ ಬಗೆ (ಸಂಗೀತ, ನೃತ್ಯ, ಆಟ, ಹಬ್ಬ, ಸಂಪ್ರದಾಯ, ಅಡಿಗೆ, ನಾಟಕಕಲೆ ಇತ್ಯಾದಿ)

ಈ ವರ್ಗೀಕರಣದ ಹಿನ್ನೆಲೆಯಲ್ಲಿ ಕುಮಾರವ್ಯಾಸ ಭಾರತದ ಜಾನಪದೀಯ ಅಂಶಗಳನ್ನು ಜಾನಪದ ಕಲೆ, ಜಾನಪದ ಭಾಷೆ, ಜಾನಪದ ಸಾಹಿತ್ಯ, ಜಾನಪದ ವೃತ್ತಿ, ಜನಪದ ಜೀವನ ಎಂದು ಪಂಚಮುಖಿ ವರ್ಗೀಕರಣದಲ್ಲಿ ವಿಷಯಗಳನ್ನು ಗಮನಿಸಿ ಕುಮಾರವ್ಯಾಸ ಭಾರತದ ವಸ್ತುವಿನ ಹಿನ್ನೆಲೆಯಲ್ಲಿ ವಿಷಯಾನುಸಾರ ಅಧ್ಯಾಯಗಳನ್ನು ಮಾಡಿಕೊಂಡಿದೆ.

ಕನ್ನಡದಲ್ಲಿ ಕಾವ್ಯಾಭ್ಯಾಸಿಗಳಿಗೆ ಶಿಷ್ಟ ಕಾವ್ಯ ಮತ್ತು ಜಾನಪದ ಕಾವ್ಯಗಳು ಪ್ರತ್ಯೇಕವಾಗಿ ಕಂಡರೂ, ಅವುಗಳ ಪೈಕಿ ಶಿಷ್ಟ ಕಾವ್ಯದಲ್ಲಿ ಜಾನಪದೀಯ ಅಂಶಗಳು ಆಧುನಿಕ ಕಾವ್ಯಗಳಿಗಿಂತ ಹೆಚ್ಚಾಗಿ ಪ್ರಾಚೀನ ಹಾಗೂ ನಡುಗನ್ನಡದ ಕಾವ್ಯಗಳಲ್ಲಿ ಬೆರೆತಿರುವುದನ್ನು ಕಾಣುತ್ತೇವೆ. ಮುಖ್ಯವಾಗಿ ಇತಿಹಾಸವೆನಿಸಿಕೊಂಡಿರುವ ಮಹಾಭಾರತ ವಸ್ತುವುಳ್ಳ "ಭಾರತಕಾವ್ಯ"ಗಳಲ್ಲಿ ಪಂಪ ಭಾರತ, ಕುಮಾರವ್ಯಾಸ ಭಾರತ, ತುರಂಗಭಾರತ, ಸಾಳ್ವ ಭಾರತ, ಜೈಮಿನಿ ಭಾರತ ಮೊದಲಾದವು ಅಧ್ಯಯನ ಯೋಗ್ಯವಾಗಿವೆ. ಇಲ್ಲಿ ಕೇವಲ ಕುಮಾರವ್ಯಾಸ ಭಾರತವೊಂದನ್ನೇ ಕೇಂದ್ರೀಕರಿಸಿ, ಅದರಲ್ಲಿರುವ ಜಾನಪದೀಯ ಅಂಶಗಳನ್ನು ಗಮನಿಸುವುದರ ಮೂಲಕ ಶ್ರೇಷ್ಠ ಶಿಷ್ಟ ಕಾವ್ಯದಲ್ಲಿ ಜಾನಪದೀಯ ಅಂಶಗಳು ಯಾವ ಸ್ವರೂಪದಲ್ಲಿ ಅಂತರ್ಗತವಾಗಿರುತ್ತವೆ ಎಂಬುದನ್ನು ವಿಶ್ಲೇಷಿಸಲಾಗಿದೆ.

ಂ

# ಕುಮಾರವ್ಯಾಸ ಭಾರತದ ಕಥೆಗಳಲ್ಲಿ ಜಾನಪದೀಯಾಂಶಗಳು

ಜಾನಪದ ಕಥೆಯನ್ನು ಸಾಮಾನ್ಯವಾಗಿ ಅಜ್ಜಿಕಥೆಯೆಂದು ಕರೆಯುತ್ತಾರೆ. ಏಕೆಂದರೆ ಅಜ್ಜಿ ಹೇಳುವ ಕಥೆಗಳಲ್ಲಿ ಜಾನಪದ ಕಥೆಗಳ ಲಕ್ಷಣಗಳನ್ನೆಲ್ಲ ಬಹುಮಟ್ಟಿಗೆ ಕಾಣಬಹುದು. ಬಾಯಿಂದ ಬಾಯಿಗೆ, ದೊಡ್ಡವರಿಂದ ಚಿಕ್ಕವರಿಗೆ ಪರಂಪರಾಗತವಾಗಿ ಕೇಳಿ ಬರುವ ಕಥೆಗಳ ಮೂಲವನ್ನು ಹುಡುಕುವುದು, ಸುಲಭವಲ್ಲ. ಕಥೆ ಹೇಳುವವರ ವ್ಯಕ್ತಿತ್ವಕ್ಕೆ ತಕ್ಕಂತೆ ಕಥೆಯ ಶೈಲಿ, ವರ್ಣನೆ, ಸಂಗತಿ ಮೊದಲಾದವು ಬದಲಾಯಿಸುತ್ತಿರುತ್ತವೆ. ಎಷ್ಟೋ ಸಲ 'ಕರಿಕಾಗೆ ಬಿಳಿಕಾಗೆ ಆದಂತೆ', 'ಯಾರೋ ಅಂದರಂತೆ' ಕಥೆಯ ಹಾಗೆ ಬಾಯಿಂದ ಬಾಯಿಗೆ ಕಥೆ ಬದಲಾಯಿಸುತ್ತಾ ಹೋಗಿ ಹತ್ತಾರು ಅವತಾರಗಳನ್ನೇ ತಾಳುತ್ತದೆ. ಇದರಿಂದ ಮುಖ್ಯ ಕಥಾವಸ್ತು ಒಂದೇ ಆದರೂ ಒಂದೇ ಕಥೆಯನ್ನು ಒಬ್ಬರು ಹೇಳುವುದಕ್ಕೂ ಇನ್ನೊಬ್ಬರು ಹೇಳುವುದಕ್ಕೂ, ಅದೇ ಕಥೆ ಒಂದು ಸ್ಥಳದಲ್ಲಿ ಪ್ರಚಾರದಲ್ಲಿರುವ ರೀತಿಗೂ, ಮತ್ತೊಂದು ಜಾಗದಲ್ಲಿ ಪ್ರಚಾರದಲ್ಲಿ ಇರುವ ರೀತಿಗೂ ಸಾಕಷ್ಟು ವ್ಯತ್ಯಾಸಗಳನ್ನು ಕಾಣುತ್ತೇವೆ. ಇನ್ನು ಇದರ ಬದಲಾವಣೆಯ ಮೂಲವನ್ನು ಹುಡುಕುವುದೂ ದುಸ್ಸಾಧ್ಯವೇ ಸರಿ. ಗೋವಿನ ಹಾಡು, ಆಕಳ ಹಾಡು, ಮಳೆಯ ಹಾಡು, ಇತ್ಯಾದಿಗಳನ್ನು ಈ ಮಾತಿಗೆ ನಿದರ್ಶನವಾಗಿ ನೋಡಬಹುದು. ನಿಜವಾದ ಜಾನಪದ ಕಥೆಯೆಂದರೆ ಹಳ್ಳಿಯ ಕಥೆಗಾರನಿಂದಲೇ ಕೇಳುವ ಕಥೆ. ಕಥೆಗಳು ಲಿಖಿತರೂಪದಲ್ಲಿ ಮೂಡಿದರೆ ಕಥೆಯ ಕೇಳುವಿಕೆಯಿಂದ ಬರುವ ಜೀವಂತಿಕೆ ಸೊಗಸುಗಳು ಕಂಡು ಬರುವುದಿಲ್ಲ. ಉದಾಹರಣೆಗೆ, ರಾಕ್ಷಸ ಅಬ್ಬರಿಸಿದ್ದನ್ನು ಕಥೆಗಾರ ಅಬ್ಬರಿಸಿ ಹೇಳಿದಾಗ ಆಗುವ ಅನುಭವ, ಲಿಖಿತ ಕಥೆಯಲ್ಲಿ 'ಅಬ್ಬರಿಸಿದನು' ಎಂದು ಓದಿದಾಗ ಆಗುವುದಿಲ್ಲ. ಆದರೆ ಎಲ್ಲ ಕಾಲದಲ್ಲೂ ಎಲ್ಲರಿಗೂ ಜನಪದ

ಕಥನಕಾರರಿಂದಲೇ ಕಥೆ ಕೇಳಲು ಸಾಧ್ಯವಿಲ್ಲ. ಅಂಥ ಕಥನಕಾರನು ಹೇಳಿದ್ದನ್ನು ಬರೆದುಕೊಂಡ, ಇಲ್ಲವೇ ಮುದ್ರಿಸಿದ ಅಥವಾ ವೈಜ್ಞಾನಿಕವಾಗಿ ಧ್ವನಿ ಸುರುಳಿಗೊಳಿಸಿದ ಕಥಾಸಾಹಿತ್ಯವನ್ನೇ ಅಧ್ಯಯನಕ್ಕೆ ಬಳಸಿಕೊಳ್ಳಬೇಕಾಗುತ್ತದೆ.

ಮಹಾಭಾರತ ಒಂದು ಕಾಲದಲ್ಲಿ ತೋಂಡಿ ಸಂಪ್ರದಾಯದ ಜಾನಪದ ಕಥನವಾಗಿದ್ದು, ಅನಂತರ ವ್ಯಾಸಭಾರತವಾಗಿದೆಯೆಂದು ಊಹಿಸಬಹುದು. ಇಂದು ಸ್ವಲ್ಪ ಶಿಷ್ಟ ಸಂಪ್ರದಾಯಗಳೊಂದಿಗೆ ಗ್ರಂಥಸ್ಥಗೊಂಡಿರುವ, ಆದರೆ ಒಂದು ಕಾಲದಲ್ಲಿ ಹೇಳುವ ಕಥೆಯಾಗಿ ಪ್ರಚಾರದಲ್ಲಿದ್ದ ಗ್ರಂಥಗಳಲ್ಲಿ ಬೃಹತ್ಕಥೆ, ಕಥಾಸರಿತ್ಸಾಗರ, ಪಂಚತಂತ್ರ, ಹಿತೋಪದೇಶ, ಭೇತಾಳ ಪಂಚವಿಂಶತಿ, ಭಟ್ಟಿ ವಿಕ್ರಮಾದಿತ್ಯನ ಕಥೆಗಳು ಮೊದಲಾದವು ಜಾನಪದ ಕಥೆಗಳನ್ನು ಒಳಗೊಂಡ ಗ್ರಂಥಗಳಾಗಿವೆ. ಜಾನಪದ ಕಥಾರೂಪದಲ್ಲಿದ್ದ ಜಾನಪದ ಕಥೆಗಳನ್ನು ಸಿದ್ಧಾಂತಗಳ ಪ್ರಚಾರಕ್ಕೆ ಧರ್ಮದ ಚೌಕಟ್ಟಿನಲ್ಲಿ ಅಳವಡಿಸಿ ಪ್ರಚಾರ ಮಾಡಿದ್ದರಿಂದ ಇವು ಶಿಷ್ಟ ಕಥೆಗಳಾಗಿ ಪರಿಣಮಿಸಿದುವು. ಈ ಗ್ರಂಥಗಳಲ್ಲಿರುವ ಧಾರ್ಮಿಕ ವಿಚಾರಗಳನ್ನು ಬೇರೆ ಮಾಡಿ ಕೇವಲ ಕಥಾಸಂಗತಿಗಳನ್ನಷ್ಟೇ ಗಮನಿಸಿದರೆ ಅವುಗಳಲ್ಲಿ ಜಾನಪದ ಸ್ವರೂಪಗಳನ್ನು ಗುರುತಿಸಬಹುದು.

ಜನಪದ ಸಾಹಿತ್ಯದಲ್ಲಿ ಕಂಡುಬರುವ ಕಥೆಗಳು ಶಿಷ್ಟ ಸಾಹಿತ್ಯದಲ್ಲಿ ಕಂಡುಬರುವ ಕಥೆಗಳಿಗಿಂತ ಅನೇಕ ವಿಚಾರಗಳಲ್ಲಿ ಭಿನ್ನವಾಗಿರುತ್ತವೆ. ಸಾಮಾನ್ಯವಾಗಿ ಜನಪದ ಕಥೆಗಳಲ್ಲಿ ಭೂತ, ದೆವ್ವ, ಪಿಶಾಚಿ, ಮಾಟ- ಮಂತ್ರ ರಾಕ್ಷಸ, ಕಿನ್ನರ- ಮೊದಲಾದವುಗಳಿಗೆ ಸಂಬಂಧಿಸಿದ ಅತಿರಂಜನೆಯ ಅತಿಮಾನುಷ ಅಂಶಗಳು ಹೆಚ್ಚಾಗಿರುವುದುಂಟು. ಜಾನಪದ ಕಥೆಗಳಲ್ಲಿ ಎಲ್ಲ ಬಗೆಯ ಕನಸುಗಳು ಆಸೆಗಳೂ ನೆರವೇರುತ್ತವೆ. ಈ ಕಥೆಗಳು ಕಥನ ರೂಪದಲ್ಲಿ ಗದ್ಯ- ಪದ್ಯಗಳೆರಡರಲ್ಲೂ ಸಿಗುತ್ತವೆ. ಜನಪದ ಕಥನಗಳಲ್ಲಿ ದೀರ್ಘ ಕಥೆಗಳು ಹೆಚ್ಚಾಗಿ ಕಾಣುತ್ತವೆ. ಅದ್ಭುತ ಕಥೆಗಳು, ಹಾಸ್ಯದ ಕಥೆಗಳು, ರಾಕ್ಷಸ ಕಥೆಗಳೂ, ಕಿನ್ನರ ಕಥೆಗಳು, ಅಜ್ಜಿ ಕಥೆಗಳು ಸಾಮಾನ್ಯವಾಗಿ ಗದ್ಯದಲ್ಲಿರುವುದೇ ಹೆಚ್ಚು. ಮಹಾಭಾರತದ ಕಥೆಗಳು ಜಾನಪದದಲ್ಲಿ ಹೆಚ್ಚಾಗಿ ಕಥನ ಕಾವ್ಯಗಳ ರೂಪದಲ್ಲಿ ಸಿಗುತ್ತವೆ.

ಜಾನಪದ ಕಥೆಗಳನ್ನು ಅಧ್ಯಯನ ಮಾಡುವಲ್ಲಿ ಕಥೆಗಳ ಆಶಯ ವರ್ಗಗಳನ್ನು ಗುರುತಿಸುವುದೂ ಅದಕ್ಕೆ ಅನುಸಾರವಾಗಿ ಕಥೆಗಳನ್ನು ವರ್ಗೀಕರಣ ಮಾಡುವುದೂ

ಒಂದು ಪದ್ಧತಿಯಾಗಿದೆ. ಇದು ಪಾಶ್ಚಾತ್ಯ ವಿದ್ವಾಂಸರಿಂದ ಬಂದ ಪದ್ಧತಿ. ಈ ಪದ್ಧತಿಯು ಹಲವು ವಿಷಯಗಳಲ್ಲಿ ಉಪಯುಕ್ತವೆನಿಸಿದರೂ ಪ್ರಸ್ತುತ ಅಧ್ಯಯನದಲ್ಲಿ ಅಷ್ಟೇನೂ ಅಗತ್ಯವಿಲ್ಲದಿರುವುದರಿಂದ ಈ ಬಗೆಗೆ ಹೆಚ್ಚಾಗಿ ಪ್ರಸ್ತಾಪಿಸಿಲ್ಲ. ಪಾಶ್ಚಾತ್ಯ ವಿದ್ವಾಂಸರು ಅನುಸರಿಸುವ ವರ್ಗೀಕರಣ ಪದ್ಧತಿಗಳು ಎಷ್ಟೇ ಮಹತ್ವವೆನಿಸಿದರೂ, ನಮ್ಮ ಸಾಹಿತ್ಯದ ದೃಷ್ಟಿಯಿಂದ ಭಿನ್ನ ವರ್ಗೀಕರಣ ಪದ್ಧತಿಯ ಅಗತ್ಯವಿದೆ. ಕನ್ನಡದಲ್ಲಿ ಜಾನಪದ ಕಥೆಗಳನ್ನು ಸಂಪಾದಿಸಿರುವ ಜೀ.ಶಂ.ಪ. ರಾ.ಗೌ, ಲಕ್ಕಪ್ಪಗೌಡ, ಎಂ.ಎ. ಜಯಚಂದ್ರ, ಸಿ.ವೀರಣ್ಣ, ಸಿಂಪಿ ಲಿಂಗಣ್ಣ ಮೊದಲಾದವರು ತಮ್ಮ ತಮ್ಮ ಅಗತ್ಯಗಳಿಗೆ ಅನುಸಾರವಾಗಿ ಜನಪದ ಕಥಾಪ್ರಕಾರಗಳನ್ನು ವಿಂಗಡಿಸಿಕೊಂಡಿದ್ದಾರೆ. ಪಾಶ್ಚಾತ್ಯ ವಿದ್ವಾಂಸರ ವರ್ಗೀಕರಣವನ್ನು ಇವರು ಗಮನದಲ್ಲಿರಿಸಿಕೊಂಡಿದ್ದರೂ, ಅಕ್ಷರಶಃ ಅನುಸರಿಸಿಲ್ಲ. ಮಹಾಭಾರತದಲ್ಲಿ ಬರುವ ಕಥೆಗಳನ್ನು ಕಂಡಾಗ, ಅದರಲ್ಲೂ ಕುಮಾರವ್ಯಾಸ ಭಾರತದಲ್ಲಿ ಬರುವ ಕಥೆಗಳಲ್ಲಿ ಕಂಡುಬರುವ ಜಾನಪದಾಂಶಗಳನ್ನು ಗುರುತಿಸುವ ದೃಷ್ಟಿಯಿಂದ ೧. ರಾಕ್ಷಸ ಕಥೆಗಳು ೨. ಪವಾಡದ ಕಥೆಗಳು ೩. ಹಾಸ್ಯದ ಕಥೆಗಳು ೪. ಸಮಸ್ಯೆಯ ಕಥೆಗಳು (ಒಗಟು ಕಥೆಗಳು) ೫. ನೀತಿ ಕಥೆಗಳು ೬. ಪ್ರಾಣಿ ಕಥೆಗಳು ಎಂದು ವರ್ಗೀಕರಿಸಿಕೊಂಡು ಪರಿಶೀಲಿಸಬಹುದಾಗಿದೆ. ಈ ಒಂದೊಂದು ಬಗೆಯ ಕಥೆಗಳಿಗೂ ವಿಶಿಷ್ಟ ಲಕ್ಷಣಗಳಿವೆ ಎನ್ನುವುದನ್ನು ಜಾನಪದ ವಿದ್ವಾಂಸರು ಗುರುತಿಸಿದ್ದಾರೆ. ಉದಾ: ಪುರಾಣಕಥೆಗಳಿಗೆ ಧಾರ್ಮಿಕ ಮಹತ್ವ ಹೆಚ್ಚಿದ್ದರೆ ಸ್ಥಳೀಯ (ಐತಿಹ್ಯ) ಕಥೆಗಳಿಗೆ ಐತಿಹಾಸಿಕ ಮಹತ್ವ ಹೆಚ್ಚಿರುತ್ತದೆ. ಅದ್ಭುತ ಕಥೆಗಳು ಅಥವಾ ರಾಕ್ಷಸ ಕಥೆಗಳು ಯಾವುದೇ ಒಂದು ದೇಶಕಾಲಗಳಿಗೆ ಬದ್ಧವಾಗಿರದೆ 'ಒಂದು ಊರಿನಲ್ಲಿ ಒಬ್ಬ ರಾಜ ಇದ್ದ', 'ಒಂದು ಕಾಡಿನಲ್ಲಿ ಒಬ್ಬ ರಾಕ್ಷಸ ಇದ್ದ' ಎಂದು ಪ್ರಾರಂಭವಾಗುತ್ತವೆ. ಪ್ರಾಣಿ ಕಥೆಗಳಲ್ಲಿ ಪ್ರಾಣಿಗಳ ಪಾತ್ರವೇ ಮುಖ್ಯವಾಗಿರುತ್ತವೆ. ಜೊತೆಗೆ ಎಷ್ಟೋ ವೇಳೆ ಅವು ನೀತಿ ಕಥೆಗಳಾಗಿರುತ್ತವೆ. ಒಗಟು ಕಥೆಗಳಲ್ಲಿ ಮತ್ತು ಹಾಸ್ಯಕಥೆಗಳಲ್ಲಿ ಮನರಂಜನೆಯ ದೃಷ್ಟಿ ಇರುವುದರೊಂದಿಗೆ ಬುದ್ಧಿ, ಚಮತ್ಕಾರ ಮತ್ತು ಪದ ಚಮತ್ಕಾರಗಳು ಕಂಡುಬರುತ್ತವೆ. ಹೀಗೆ ವಿವಿಧ ಕಥೆಗಳ ಲಕ್ಷಣ, ಸ್ವರೂಪಗಳನ್ನು ಕುರಿತು ಜಾನಪದ ವಿದ್ವಾಂಸರು ಈಗಾಗಲೇ ಸಾಕಷ್ಟು ಪ್ರಸ್ತಾಪಿಸಿರುವುದರಿಂದ ಇಲ್ಲಿ ಅವುಗಳ ವಿಸ್ತೃತ ವಿವರಣೆ ನೀಡಲು ಹೋಗಿಲ್ಲ. ಮತ್ತು ಕುಮಾರವ್ಯಾಸ ಭಾರತದ ಕಥಾಭಾಗಕ್ಕೆ ಸಂಬಂಧಿಸಿದಂತೆ ಪವಾಡದ ಕತೆ, ನೀತಿ ಕಥೆ, ರಾಕ್ಷಸಕಥೆ

ಪ್ರಾಣಿಕತೆ ಹಾಸ್ಯಕಥೆಗಳನ್ನು ಗಮನಿಸಿ ಅವುಗಳಲ್ಲಿ ಜಾನಪದ ಕಥಾಭಾಗ ಇಲ್ಲವೇ ಜಾನಪದೀಯ ಅಂಶಗಳು ಎಷ್ಟರಮಟ್ಟಿಗೆ ಇವೆ ಎಂಬುದನ್ನು ಗುರುತಿಸಲು ಯತ್ನಿಸಿದೆ.

## ಪವಾಡ ಪ್ರಸಂಗಗಳುಳ್ಳ ಕಥೆಗಳು

ಅಲೌಕಿಕ ಇಲ್ಲವೇ ಅಘಟಿತ ಘಟನೆಗಳನ್ನು 'ಪವಾಡ'ಗಳೆಂದು ಕರೆಯುವುದುಂಟು. ಆಶ್ಚರ್ಯ ಹಾಗೂ ಅದ್ಭುತ ಘಟನೆಗಳೂ ಪವಾಡಗಳೆನಿಸುತ್ತವೆ. ಇಂಗ್ಲಿಷಿನ ಮಿರಾಕಲ್ ಪದಕ್ಕೆ ಸಂವಾದಿಯಾಗಿ 'ಪವಾಡ' ಪದವನ್ನು ಬಳಸುವುದುಂಟು. ಪವಾಡಕ್ಕೆ ಸಂಬಂಧಿಸಿದ ಘಟನೆಗಳು ಜನನ, ಮರಣ ಮತ್ತು ಜೀವನದ ಇತರ ಪ್ರಮುಖ ಸಂಗತಿಗಳಿಗೆ ಸಂಬಂಧಿಸಿರುತ್ತವೆ. ಸಾಮಾನ್ಯವಾಗಿ ಧಾರ್ಮಿಕ ಮಹಾಪುರುಷರ ಜನನ ಕುರಿತ ಪವಾಡ ಕಥೆಗಳನ್ನು ಜಗತ್ತಿನ ಬಹುಸಂಖ್ಯೆಯ ಮತಧರ್ಮಗಳ ಸಾಹಿತ್ಯದಲ್ಲಿ ಕಾಣಬಹುದು. ಸಾಮಾನ್ಯವಾಗಿ ಮಹಾಪುರುಷರ ಜನನ ಅಲೌಕಿಕ ರೀತಿಯಲ್ಲಿ ಸಂಭವಿಸಿತು ಎಂದು ಹೇಳುವುದನ್ನು ಎಲ್ಲ ಧರ್ಮಗಳಲ್ಲೂ ಕಾಣಬಹುದು. ಝುರಾತ್ರುಷ್ಟ್ರ, ಬುದ್ಧ, ಏಸು, ಸೀತೆ, ದ್ರೌಪದಿ ಮೊದಲಾದವರೆಲ್ಲ ಜನ್ಮತಾಳಿದ್ದು ಅಲೌಕಿಕ ರೀತಿಯಲ್ಲೇ. ವೀರಶೈವ ಸಾಹಿತ್ಯದಲ್ಲೂ ರೇವಣಸಿದ್ಧ, ಚನ್ನಬಸವಣ್ಣ ಮೊದಲಾದವರು ಅಲೌಕಿಕವಾಗಿ ಜನಿಸಿದ್ದನ್ನು ಕಾಣಬಹುದು. ಹೀಗೆ ಮಹಾಪುರುಷರ ಜನನವನ್ನು ಅಲೌಕಿಕವಾದ ರೀತಿಯಲ್ಲಿ ಜನಿಸಿದರು ಎಂದು ಹೇಳಲು ಕಾರಣವೇನು? ಎಂಬುದರ ಬಗ್ಗೆ ವಿಶೇಷ ಅಧ್ಯಯನ ಮಾಡಿದ ಡಾ.ವಿ.ಜಿ. ಪೂಜಾರರ ವಿಚಾರ ಹೀಗಿದೆ. "ಸಾಮಾನ್ಯ ಜನರಂತೆ ಅವರು ರಕ್ತಮಾಂಸಗಳಿಂದ ಕೂಡಿದ ಶರೀರಿಗಳಲ್ಲ, ಅವರು ವಿಭೂತಿ ಪುರುಷರು, ಅವತಾರಿಗಳು ಎಂದು ಜನಸಾಮಾನ್ಯರಿಗೆ ಬಿಂಬಿಸುವುದೇ ಆಗಿದೆ. ಮತ್ತು ಹೀಗೆ ವರ್ಣಿಸಿದಾಗಲೇ ಜನ ಸಾಮಾನ್ಯರು ಅವರನ್ನು ಅಸಾಮಾನ್ಯರೆಂದು ನಂಬುತ್ತಿದ್ದಂತಿದೆ. ಅದಕ್ಕೆ ಹೀಗೆ ಬಣ್ಣಿಸುವ ಸಂಪ್ರದಾಯ ಎಲ್ಲ ಧಾರ್ಮಿಕ ಸಾಹಿತ್ಯದಲ್ಲೂ ಮುಂದುವರಿದುಕೊಂಡು ಬಂದಿದೆ ಎನ್ನಬಹುದು."[೧]

ಕುಮಾರವ್ಯಾಸ ಭಾರತದಲ್ಲಿ ಪವಾಡ ಸದೃಶ ಜನನ ಪ್ರಸಂಗಗಳು ಹಲವಾರು ಕಂಡುಬರುತ್ತವೆ. ಅವುಗಳಲ್ಲಿ ಋಷಿಗಳ ಮಂತ್ರಮಹಿಮೆಯಿಂದ ಮಕ್ಕಳಾಗುವುದೂ,

---

೧. ವೀರಶೈವ ಸಾಹಿತ್ಯದಲ್ಲಿ ಪವಾಡಕತೆಗಳು, ಡಾ.ವಿ.ಜಿ. ಪೂಜಾರ, ಪು. ೨೧೭

ಗರ್ಭಪಾತವಾದಾಗ ಮಂತ್ರ ಶಕ್ತಿಯಿಂದ ಮಾಂಸಪಿಂಡಗಳು ಶಿಶುಗಳಾಗುವುದು, ಅಗ್ನಿ ಕುಂಡದಿಂದ ಮಕ್ಕಳು ಉದ್ಭವಿಸುವುದು ಇವೇ ಮೊದಲಾದ ಪ್ರಸಂಗಗಳು ಗಮನಾರ್ಹವಾಗಿವೆ.

'ಮುನಿಹತಿಯ ಪಾತಕದ ಫಲವಾಗಿ' ಪಾಂಡುವಿನಿಂದ ಮಕ್ಕಳನ್ನು ಹೊಂದಲು ಸಾಧ್ಯವಿಲ್ಲದ ಶಾಪಸ್ಥಿತಿ ಉಂಟಾದಾಗ, ದುರ್ವಾಸರ ಮಂತ್ರೋಪದೇಶದ ಫಲವಾಗಿ ಕುಂತಿ- ಮಾದ್ರಿಯರಿಗೆ ಪಾಂಡವರೈವರು ಜನಿಸುತ್ತಾರೆ.

ತನಗಿಂತ ಮೊದಲು ಕುಂತಿ ಪುತ್ರವತಿಯಾದುದನ್ನು ಕೇಳಿ ಅಸೂಯೆಯಿಂದ ಗಾಂಧಾರಿ 'ಬಸುರನೊಡೆಮುರಿದು' ಹೊಸೆಯುತ್ತಾಳೆ. ಪರಿಣಾಮವಾಗಿ ಗರ್ಭವು 'ನೂರೊಂದು ಬಲುಮಾಂಸದ ಸುರಕ್ತದ ಘಟ್ಟಿಗಳಾಗಿ...." ಹೊರಬೀಳುತ್ತದೆ. ಆ ಸಮಯಕ್ಕೆ ಅಲ್ಲಿಗೆ ಆಗಮಿಸಿದ ವ್ಯಾಸಮುನಿಗಳು ಅವುಗಳನ್ನು ಘೃತಪೂರಿತವಾದ ನೂರೊಂದು ಕೊಪ್ಪರಿಗೆಗಳಲ್ಲಿಟ್ಟು, ರಕ್ಷೆಗಳ ರಚಿಸಿ ಮಂತ್ರಿಸಿದ ನೀರನ್ನು ತಳಿಯುತ್ತಾರೆ. ಇದರ ಫಲವಾಗಿ ಕಾಲಕ್ರಮೇಣ ನೂರೊಂದು ಕೌರವರ ಜನನವಾಗುತ್ತದೆ.[೧]

ದ್ರೋಣರು ಅರ್ಜುನನ ಮೂಲಕ ದ್ರುಪದನ ಮೇಲೆ ಸೇಡು ತೀರಿಸಿದುದರಿಂದ ಅಪಮಾನಿತನಾದ ದ್ರುಪದನು, ಪಟ್ಟಣಕ್ಕೆ ಹಿಂದಿರುಗದೆ ಗಂಗಾತೀರದಲ್ಲಿ ಪುತ್ರಕಾಮ್ಯಾಧ್ವರವ ಮಾಡಿದಾಗ (ಆ.ಪ. ೭-೬೯), ಯಜ್ಞಕುಂಡದಿಂದ 'ಭಾಸುರಮಹಾನಲನಪರ ರೂಪೋ' ಎನ್ನುವಂತೆ ಶಸ್ತ್ರಧಾರಿಯಾದ ಧೃಷ್ಟದ್ಯುಮ್ನನೂ, 'ತ್ರೈಲೋಕ್ಯ ಮೋಹನ ಮಂತ್ರದೇವತೆಯೊ' ಎನ್ನುವಂತಿದ್ದ ದ್ರೌಪದಿಯೂ ಆವಿರ್ಭವಿಸುತ್ತಾರೆ.. (ಆ.ಪ. ೭-೭೧, ೭೨)

ಜರಾಸಂಧನ ಜನನವೂ ಒಂದು ಪವಾಡವೇ ಆಗಿದೆ. ಋಷಿಕೊಟ್ಟ ಮಾವಿನಹಣ್ಣು ಜನನಕ್ಕೆ ಕಾರಣವಾಗಿದ್ದು, ಅದನ್ನು ಎರಡು ಹೋಳುಗಳಾಗಿ ಮಾಡಿ ಇಬ್ಬರು ರಾಣಿಯರಿಗೆ ಕೊಟ್ಟಿದ್ದರಿಂದ, ಎರಡು ಹೋಳು (ಭಾಗ) ಗಳಾಗಿ ಇಬ್ಬರು ರಾಣಿಯರಲ್ಲಿ ಜನಿಸುತ್ತಾನೆ. ಆ ಎರಡು ಹೋಳು ಗಳನ್ನು 'ಜರೆ' ಎಂಬ ರಾಕ್ಷಸಿ ಸೇರಿಸಿದಾಗ (ಸಂಧಿಸಿದಾಗ) ಜರಾಸಂಧನಾಗಿ ಜೀವಪಡೆಯುತ್ತಾನೆ.

---

೧. ಕರ್ನಾಟ ಭಾರತ ಕಥಾಮಂಜರಿ : ಆ.ಪ. ೪-೪೨, ೪೩

ಹೀಗೆ ಪವಾಡ ಸದೃಶ ಜನನ ಪ್ರಸಂಗಗಳು ಕುಮಾರವ್ಯಾಸಭಾರತದಲ್ಲಿ ಕಂಡು ಬರುತ್ತವೆ. ಇದೇ ಬಗೆಯ ಜನನ ಪ್ರಸಂಗಗಳು ಜಾನಪದ ಕಥನಗಳಲ್ಲೂ ಕಂಡುಬರುವುದರಿಂದ, ಜನಜನಿತವಾದ ಸಂಗತಿಗಳು ಶಿಷ್ಟಕಾವ್ಯಗಳಲ್ಲಿ ಸಹಜವಾಗಿ ರೂಪುತಳೆಯುತ್ತವೆ ಎಂದು ವ್ಯಕ್ತವಾಗುತ್ತದೆ. ಈ ಬಗೆಗೆ ಜನಪದದಲ್ಲಾಗಲಿ ಶಿಷ್ಟಸಮಾಜದಲ್ಲಾಗಲಿ ಇಂದಿಗೂ ಪ್ರಶ್ನಾತೀತವಾದ ನಂಬಿಕೆಯಿರುವುದನ್ನು ಕಾಣಬಹುದು. ದೈವತ್ವದ ಹಿನ್ನೆಲೆಯ ಸಂಗತಿಗಳಾದ್ದರಿಂದ ಆಧುನಿಕ -ವೈಜ್ಞಾನಿಕ ವಿಚಾರಧಾರೆಗಳಿಗೆ ತಕ್ಕಂತೆ ಈ ವಿಚಾರಗಳನ್ನು ಪ್ರಶ್ನಿಸಲು ಜನ ಬಯಸುವುದಿಲ್ಲ ಎನ್ನುವುದು ಸುವ್ಯಕ್ತವಾಗುತ್ತದೆ. ವ್ಯಾಸಭಾರತದಲ್ಲಿ ಕಂಡುಬರುವ ಮೇಲಿನ ಸಂಗತಿಗಳು ಕುಮಾರವ್ಯಾಸ ಭಾರತದಲ್ಲೂ ಅದೇ ರೀತಿ ಅಳವಟ್ಟಿರುವುದನ್ನು ಕಂಡಾಗ, ಕುಮಾರವ್ಯಾಸನ ಕಾಲದಲ್ಲೂ ವ್ಯಾಸಭಾರತದ ಪವಾಡಗಳಿಗೆ ಮಾನ್ಯತೆ ಇತ್ತು ಎಂದು ಹೇಳಬಹುದು.

ಕುಮಾರವ್ಯಾಸ ಭಾರತದಲ್ಲಿ ಕಂಡುಬರುವ ಇತರ ಪ್ರಮುಖ ಪವಾಡಗಳೆಂದರೆ ಪಂಪಭಾರತದಲ್ಲಿಲ್ಲದ ದ್ರೌಪದಿಯ ಅಕ್ಷಯವಸ್ತ್ರ, ದುರ್ವಾಸಾತಿಥ್ಯ, ವಿಶ್ವರೂಪದರ್ಶನ ಮೊದಲಾದ ಪ್ರಸಂಗಗಳು. ಇವುಗಳಿಗೆ ಯಾವ ಜಾನಪದ ಮೂಲ ಕವಿಗೆ ದೊರಕಿತ್ತು ಎಂದು ಹೇಳಲಾಗದಿದ್ದರೂ, ಈ ಪ್ರಸಂಗಗಳು ಜನಪದ ಪವಾಡಕತೆಗಳಿಗೆ ಮಾದರಿಯಾಗಿವೆ.

### ಅಕ್ಷಯವಸ್ತ್ರ ಪ್ರಸಂಗ

ಧರ್ಮರಾಯನು ದ್ಯೂತದಲ್ಲಿ ಸಕಲರಾಜ್ಯಕೋಶಗಳನ್ನು ನಾಲ್ವರು ತಮ್ಮಂದಿರೊಂದಿಗೆ ದ್ರೌಪದಿಯ ಸಮೇತನಾಗಿ ಕೌರವನಿಗೆ ಸೋಲುತ್ತಾನೆ. ಸೋತ ದ್ರೌಪದಿಯನ್ನು ದಾಸಿಯೆಂದು ಪರಿಗಣಿಸಿದ ಕೌರವ, ಆವಳನ್ನು ಸಭೆಗೆ ಎಳೆದು ತರಿಸಿ, ತಮ್ಮ ದುಶ್ಯಾಸನನ ಮೂಲಕ ಅವಳ ವಸ್ತ್ರಾಪಹರಣಕ್ಕೆ ಪ್ರಯತ್ನಿಸುತ್ತಾನೆ. ಸಭೆಯಲ್ಲಿ ಐವರು ಪತಿಗಳನ್ನೊಳಗೊಂಡು, ಭೀಷ್ಮದ್ರೋಣಾದಿಗಳಂಥ ಹಿರಿಯರಿದ್ದರೂ, ಯಾರಿಂದಲೂ ಅವಳಿಗೆ ಸಹಾಯ ಸಿಗದೆ ಹೋದಾಗ, ದ್ರೌಪದಿಯ ಕೃಷ್ಣ ಭಕ್ತಿ ಅವಳನ್ನು ಆ ದುರಂತದಿಂದ ಪಾರುಮಾಡುತ್ತದೆ. ದುಶ್ಯಾಸನನು ಸೀರೆಯನ್ನು ಎಳೆದಷ್ಟೂ ಅದು ಅಕ್ಷಯವಾಗುತ್ತಾ ಸಾಗುತ್ತದೆ. ಇದು ಕುಮಾರವ್ಯಾಸ ನಿರೂಪಿತ ಅಕ್ಷಯವಸ್ತ್ರ ಪ್ರಸಂಗ.

ಶ್ರೀ ಕೃಷ್ಣನಿಂದಲೇ ದ್ರೌಪದಿಯ ಸೆಳೆ ಸೀರೆಯು ಅಕ್ಷಯವಾಯಿತೆಂದು ನೇರವಾಗಿ ಹೇಳುವ ಕುಮಾರವ್ಯಾಸನಿಗೆ ಅಕ್ಷಯ ವಸ್ತ್ರವನ್ನು ಕುರಿತ ಬೇರಾವುದೇ ಮೂಲವು ಸಿಕ್ಕಿತ್ತೇ? ಇಲ್ಲವೇ ಶ್ರೀಕೃಷ್ಣಪಾರಮ್ಯವನ್ನು ಸಾರಲು ಕವಿಯೇ ಕಲ್ಪಿಸಿಕೊಂಡಿರಬಹುದೇ? ಇಲ್ಲವೇ ಒಬ್ಬ ಹೆಣ್ಣು ಮಗಳ ಮಾನಭಂಗವನ್ನು ಸಹಿಸಲಾರದೆ ಈ ಅಕ್ಷಯವಸ್ತ್ರ ಸಂಗತಿಯನ್ನು ಜನಪದರು ಹುಟ್ಟಿಹಾಕಿದರೇ? ಎಂಬ ಹಲವಾರು ಪ್ರಶ್ನೆಗಳಿಗೆ ಖಚಿತ ಉತ್ತರ ಸಾಧ್ಯವಿಲ್ಲದಿದ್ದರೂ ಕುಮಾರವ್ಯಾಸಭಾರತದಲ್ಲಿನ ಈ ಪ್ರಸಂಗವು ಮಾನವನ ಶಕ್ತಿ ಸಾಮರ್ಥ್ಯಗಳನ್ನು ಮೀರಿದ ಒಂದು ಪವಾಡವೇ ಸರಿ!

ಆದರೆ ಒಂದು ಮಾತಂತೂ ನಿಜ. ಜಿನ ಪರಂಪರೆಯ ಭಾರತ- ಹಾಗೂ ಮೂಲವ್ಯಾಸ ಭಾರತಗಳಲ್ಲಿ ಕೇಶಾಪಕರ್ಷಣ ಮತ್ತು ವಸ್ತ್ರಾಪಹರಣ ಪ್ರಯತ್ನ ಪ್ರಸಂಗಗಳು ಸಂಕ್ಷೇಪವಾಗಿಯೋ ಪ್ರಕ್ಷಿಪ್ತವಾಗಿಯೋ ಕಂಡರೂ, ಕೃಷ್ಣನಿಂದ ವಸ್ತ್ರ ಅಕ್ಷಯವಾದ ಪ್ರಸಂಗ ಅಲ್ಲಿ ಕಂಡುಬರುವುದಿಲ್ಲವೆಂದು ವಿಮರ್ಶಕರು ಅಭಿಪ್ರಾಯಪಡುತ್ತಾರೆ. ಕೃಷ್ಣನನ್ನು ಕುರಿತ ಸ್ತುತಿಗಳು ಒಂದೇ ರೀತಿ ಇಲ್ಲದಿರುವುದೂ, ಕುಮಾರವ್ಯಾಸ ಭಾರತ ರಚನೆಯ ಕಾಲಕ್ಕೆ ಸಮಕಾಲೀನವಾಗಿರಬಹುದಾದ ವಿಲ್ಲಿ ಪುತ್ತೂರು ಭಾರತ ಮತ್ತು ನನ್ನಯ್ಯನ ಕೃತಿಗಳಲ್ಲಿ ಕಂಡುಬರುವ ದ್ರೌಪದಿ ಅಕ್ಷಯವಸ್ತ್ರ ಪ್ರಸಂಗ, ಮೂಲ ವ್ಯಾಸಭಾರತದ ಪಾಠದ ದೃಷ್ಟಿಯಿಂದ ಪ್ರಕ್ಷಿಪ್ತವೆನ್ನಬಹುದಾದರೂ ಅನಂತರದಲ್ಲಿ ಜಾನಪದ ಆಕರದಿಂದ, ಸೇರ್ಪಡೆಯಾಗಿ ಆ ಕೃತಿಯ ಭಾಗವೇ ಆಗಿ ಭಿನ್ನಪಾಠಗಳಿಂದ ಕೂಡಿದ ಕೃತಿ ಕುಮಾರವ್ಯಾಸ ಮೊದಲಾದವರಿಗೆ ದೊರಕಿರಬಹುದೆಂದು ಊಹಿಸಬಹುದಾಗಿದೆ.

ದ್ರೌಪದಿಗೆ ಸೂರ್ಯನಿಂದ ದೊರಕಿದ ಅಕ್ಷಯಪಾತ್ರೆ, ದೂರ್ವಾಸಾತಿಥ್ಯ ಪ್ರಸಂಗಗಳು ಜನಪದ ಕಥೆಗಳಲ್ಲಿ ಬರುವ ಮಂತ್ರದಂಡ ಅಥವಾ ಪಾತ್ರೆಯನ್ನು ಹೋಲುವ ಜಾನಪದ ಆಶಯವುಳ್ಳ ಪವಾಡ ಕಥೆಗಳೆಂದೇ ಹೇಳಬಹುದು. ಈ ಪ್ರಸಂಗವು ಅರೇಬಿಯಾ ಜಾನಪದ ಕಥೆಗಳಲ್ಲಿ ಬರುವ 'ಕೇಳಿದ್ದನ್ನು ಕೊಡುವ ಅದ್ಭುತದೀಪ, ಇಚ್ಛೆಸಿದಲ್ಲಿ ಕರೆದೊಯ್ಯುವ ಮಾಯಾ ಹಾಸು' (ಜಮಖಾನ)ಗಳನ್ನು ನೆನಪಿಸುತ್ತವೆ.

**ಶ್ರೀಕೃಷ್ಣರಾಯಭಾರ - ವಿಶ್ವರೂಪದರ್ಶನ**

ಪಾಂಡವರ ಪರವಾಗಿ ಸಂಧಿಮಾಡಲು ರಾಯಭಾರಿಯಾಗಿ ಕೃಷ್ಣ ಕೌರವನ ಆಸ್ಥಾನಕ್ಕೆ ಬಂದ ಸಂದರ್ಭದಲ್ಲಿ, ಇಡೀ ಸಭೆಯೇ ಎದ್ದು ಕೃಷ್ಣನಿಗೆ ಗೌರವ ಸೂಚಿಸಿದರೂ ಈ ಸಂದರ್ಭದಲ್ಲಿ ಉದ್ದೇಶಪೂರ್ವಕವಾಗಿ ಸಿಂಹಾಸನದಿಂದ ಕೌರವನು ಮೇಲೇಳುವುದಿಲ್ಲ. ಆಗ ಕೃಷ್ಣನು ಉಂಗುಟದ ತುದಿಯಿಂದ ಧರಣಿಯನ್ನೊತ್ತಲು, ಕೌರವನ ಸಿಂಹಾಸನದ ಗೋಣಸು ಮುರಿದು ಅವನು ಹರಿಯ ಚರಣದಲಿ ಕವಿದು ಬೀಳುವುದೂ, ಅಹಂಕಾರಿ, ಧೂರ್ತ ಕೌರವನು ರಾಯಭಾರಿ ಕೃಷ್ಣನನ್ನು ಕಟ್ಟಿಹಾಕಲು ಪ್ರಯತ್ನಿಸಿದಾಗ, ಶ್ರೀಕೃಷ್ಣ ವಿಶ್ವರೂಪವನ್ನು ತೋರಿಸುವುದೂ, ರಣಭೂಮಿಯಲ್ಲಿ ಎರಡು ಪಕ್ಷಗಳೂ ಯುದ್ಧಕ್ಕೆ ಸಜ್ಜಾಗಿ ನಿಂತಿರುವಾಗ ಗೀತೋಪದೇಶದ ಹಿನ್ನೆಲೆಯಲ್ಲಿ ಅರ್ಜುನನಿಗೆ ವಿಶ್ವರೂಪದರ್ಶನ ಮಾಡಿಸುವುದೂ, ಕರ್ಣನ ಅವಸಾನ ಸಮಯದಲ್ಲಿ ಕೃಷ್ಣನು ಅವನಿಗೆ ತನ್ನ ನಿಜರೂಪ ತೋರುವುದೂ ಇತ್ಯಾದಿ ಪ್ರಸಂಗಗಳನ್ನು ಗಮನಿಸಿದಾಗ ಮಾನುಷ ಘಟನೆಗಳ ನಡುವೆ ಅತಿಮಾನುಷ ಸಂಗತಿಗಳು ಕಾಣಿಸಿಕೊಳ್ಳುವ ಪದ್ಧತಿಯ ಕಥೆಯನ್ನು ಇಲ್ಲೆಲ್ಲ ಕಾಣುತ್ತೇವೆ. ಈ ಸಂದರ್ಭದಲ್ಲಿ ಶ್ರೀಕೃಷ್ಣನು ಲೌಕಿಕವ್ಯಕ್ತಿಯಾಗಿ ಕಾಣಿಸಿಕೊಳ್ಳುತ್ತಲೇ ಪವಾಡಗಳನ್ನು ಎಸಗುತ್ತಾನೆ. ಜಗತ್ತಿನ ಅನೇಕ ಮಹಾಪುರುಷರು ಲೌಕಿಕ ಪುರುಷರಿಗಾಗಿಯೇ ಪವಾಡಗಳನ್ನು ಎಸಗುವುದನ್ನು ಶಿಷ್ಟಕಾವ್ಯಗಳಲ್ಲಿ ಹೆಚ್ಚಾಗಿ ಕಾಣುತ್ತೇವೆ. ಆದರೆ ಜಾನಪದ ಕಾವ್ಯಗಳಲ್ಲಿ ಪೌರಾಣಿಕ ಕಾವ್ಯದ ಅತಿಮಾನುಷ ಸಂಗತಿಗಳಲ್ಲದೆ ಸಾಮಾಜಿಕ ಅಥವಾ ಕೌಟುಂಬಿಕ ನೆಲೆಯಲ್ಲಿ ಅವು ಸಾಮಾನ್ಯಸಂಗತಿಗಳಾಗಿ ಕಾಣಿಸಿಕೊಳ್ಳುತ್ತವೆ. ಇದಕ್ಕೆ "ಕೌಂತಮ್ಮ", "ದ್ರೌಪದಿ", "ಸುಭದ್ರೆ ಅರ್ಜುನ", "ಧರ್ಮರಪದ", "ಅರ್ಜುನ ಜೋಗಿ ಹಾಡು" ಹಾಗೂ "ಜನಪದ ಮಹಾಭಾರತ" ಮೊದಲಾದ ಮಹಾಭಾರತಕ್ಕೆ ಸಂಬಂಧಿಸಿದ ಕಥನಗೀತೆಗಳಲ್ಲಿ ನಿದರ್ಶನಗಳನ್ನು ಕಾಣಬಹುದು.

ಶಿಷ್ಟಕಾವ್ಯದಲ್ಲಿ ಪಾಂಡವರು ಜೂಜಿನಲ್ಲಿ ಸೋಲುವುದು ಅರಮನೆಯ ಹಿನ್ನೆಲೆಯಲ್ಲಿ ವರ್ಣಿತವಾಗಿದ್ದರೆ, ಜನಪದ ಭಾರತ ಕಥನಗೀತೆ 'ದ್ರೌಪದಿ'ಯಲ್ಲಿ 'ಹಟ್ಟಿ' ಹಿನ್ನೆಲೆಯಲ್ಲಿ ನಿರೂಪಿತವಾಗಿದೆ. ಪಾಂಡವರು ಜೂಜಿನಲ್ಲಿ ಸೋತವಸ್ತುಗಳನ್ನು ಕವಿ ಹೀಗೆ ವರ್ಣಿಸುತ್ತಾನೆ.' "ಉಟ್ಟ ಹಚ್ಚಡ ಸೋತ, ಹೊದ್ದ ಸೆಲ್ಯವ ಸೋತ, ಇದ್ದೋಟು ಬಂಗಾರ ಸೋತ ಧರ್ಮಣ್ಣ, ಭದ್ರೆ ದ್ರೌಪದಿ

ಸೋತು ಕಡೆಗೆದ್ದ." ಇಲ್ಲಿ ಹಳ್ಳಿಯ ಬದುಕಿನ ಬಳಕೆಯ ವಸ್ತುಗಳನ್ನು ಸೋಲುವುದು ಮತ್ತು ಧರ್ಮರಾಜ ರಾಜ್ಯವನ್ನು ಸೋತ, ಎನ್ನುವ ಬದಲು "ಹಟ್ಟಿಯೊಡೆಯ ಧರ್ಮಣ್ಣ ಸೋತ" ಎಂಬ ಮಾತು ಜನಪದ ಬದುಕನ್ನು ಚಿತ್ರಿಸುತ್ತದೆ. ಧರ್ಮರಾಯ ದ್ಯೂತನಲ್ಲಿ ಸೋತ ಅನಂತರ ಪಾಂಡವರೆಲ್ಲರೂ ಕಾಡಿಗೆ ಹೋಗುತ್ತಾರೆ. ಶಿಷ್ಟಕಾವ್ಯದಲ್ಲಿ ದ್ಯೂತದಲ್ಲಿ ಸೋತನಂತರ ಪಾಂಡವರು ದ್ರೌಪದಿಯೊಂದಿಗೆ ವನವಾಸಕ್ಕೆ ಹೋಗುತ್ತಾರೆ. ಆದರೆ ಜಾನಪದ ಕಥೆಯಲ್ಲಿ ದ್ರೌಪದಿ ದುರ್ಯೋಧನನ ಮನೆಗೆ ತೊತ್ತಾಗಿ ಹೋಗುತ್ತಾಳೆ. ಇಲ್ಲಿ ವಸ್ತ್ರಾಪಹರಣ, ಅಕ್ಷಯವಸ್ತ್ರ ಮೊದಲಾದ ಯಾವ ಪ್ರಸಂಗಗಳೂ ಇಲ್ಲ. "ಬಿತ್ತಿರುವ ಹೊಲದಾಗೆ ಅಟ್ಟೊಡೆದು ಹೋಗೋ ಅಮ್ಮ ಕಟ್ಟಮ್ಮ ನಿಮ್ಮ ಸಿರಿಮುಡಿಯ" ಎಂದು ಬಿಚ್ಚಿದ ಮುಡಿಯೊಂದಿಗೆ ಹೋಗುತ್ತಿದ್ದ ದ್ರೌಪದಿಯನ್ನು ನೋಡಿದ ಹೆಂಗಸರು ಹೇಳುತ್ತಾರೆ. ಅದಕ್ಕೆ "ಕಟ್ಟುವುದಕ್ಕೆ ನನ್ನದೊಂದು ವ್ರತವೈತೆ" ಎಂದು ಹೇಳಿ, ಮುಡಿಯನ್ನು ಕಟ್ಟುವುದಿಲ್ಲ. ಕೌರವನ ಮನೆ ಸೇರಿದಾಗ ಅಲ್ಲಿ ಅವಳನ್ನು ಊಟಕ್ಕೆ ಕರೆದರೆ "ಸೋತು ಬಂದೋಳೆಗೆ ಯಾತರ ಅಡಿಗಮ್ಮಾ ಕೊಡಿರಮ್ಮ ತೊಟ್ಟಿ ಪೊರಕೇಯ" ಎಂದು ಕೇಳಿ ಸೇವೆಗಿಳಿಯುತ್ತಾಳೆ. ಕೆಲವು ಕಾಲಾನಂತರ ದ್ರೌಪದಿ ತಾನೇ ಕೌರವನೊಂದಿಗೆ ಜೂಜಾಡಿ, ಧರ್ಮರಾಯನು ಸೋತಿದ್ದೆಲ್ಲವನ್ನು ಮತ್ತು ತನ್ನನ್ನು ಗೆದ್ದುಕೊಳ್ಳುತ್ತಾಳೆ. ದುರ್ಯೋಧನನೊಂದಿಗೆ ಪಗಡೆ ಆಡುತ್ತಿದ್ದಾಗ "ಲೆತ್ತ" ದುರ್ಯೋಧನನ ಹಣೆಗೆ ಬಡಿದು ರಕ್ತ ಸುರಿಯುತ್ತದೆ. ಆಗ "ದ್ರೌಪದಿ ನೆತ್ತುಲಾಗೆ ಹದ್ದಿ ತುರುಬಿಟ್ಟಾಳು", ಆ ರಕ್ತದಲ್ಲಿ ತನ್ನ ಮುಡಿಯನ್ನು ತೋಯಿಸಿ(ನಾದಿ) ಕಟ್ಟುತ್ತಾಳೆ. ಅನಂತರ ನಾರಾಯಣಪುರಕ್ಕೆ ಬಂದು ಪಾಂಡವರೊಡನೆ ಸಂತೋಷದಿಂದಿರುತ್ತಾಳೆ.[೧]

ಮೂಲ ಮಹಾಭಾರತದಲ್ಲಿ ದ್ಯೂತ ಪ್ರಸಂಗ ಅರಮನೆಯ ಜೀವನಕ್ಕೆ ಸಂಬಂಧಿಸಿದ್ದರೆ, ವೀರಾಧಿವೀರರ ನಡುವೆದುಶ್ಶಾಸನನ ರಕ್ತದಲ್ಲಿ ಮುಡಿಕಟ್ಟುವ ಪ್ರಸಂಗ ರಣರಂಗಕ್ಕೆ ಸಂಬಂಧಿಸುತ್ತದೆ. ಗ್ರಾಮೀಣ ಜೀವನದಲ್ಲಿ ಅರಮನೆ-ರಣರಂಗ ಎರಡೂ ಜನಪದರ ಬದುಕಿಗೆ ದೂರವಾದ ಸಂಗತಿ. ಆದ್ದರಿಂದ ಜಾನಪದದ ಹಿನ್ನೆಲೆಯಲ್ಲಿ ಧರ್ಮರಾಯ ಜೂಜಾಡಿ ಸೋತದ್ದು ದಾಯಾದಿ ಮನೆಯೊಳಗೆ ಪಣವಾಗಿಟ್ಟು ಸೋತ ವಸ್ತುಗಳು ಸಂಪೂರ್ಣ ಗ್ರಾಮೀಣ ಜೀವನದ 'ಸಿರಿ' ಗಳಾಗಿವೆ. "ಕುಂತಿ ಹಾಲು ಕರೆಯುತ್ತಿದ್ದ ಸೊಗಸಾದ ಏಳುನೂರು ಎಮ್ಮೆಗಳನ್ನು, ಹಾಲು ಕಾಯಿಸುತ್ತಿದ್ದಾಗ ಕಾಲು ಕಾಲಿಗೆ ಸುತ್ತುತ್ತಿದ್ದ ಎರಡು ಬೆಕ್ಕುಗಳನ್ನು, ಸೊಗಸಾಗಿ

---

೧. ಹಣತೆ ಉರಿಯುತಿದೆ: ಸಂ. ಕ.ರಾ.ಕೃ. ದ್ರೌಪದಿ ಹಾಡು ಪು-೬೫-೬೧

ತುಪ್ಪ ಬರುವ ಹಾಲು ಕರೆಯುತ್ತಿದ್ದ ಎಪ್ಪತ್ತು ಹಸುಗಳನ್ನು, ಹಟ್ಟಿಯನ್ನು ಗುಡಿಸಿ ಶುಚಿ ಮಾಡುತ್ತಿದ್ದ ಮುದುಕಿ ಮತ್ತು ಅವಳ ಕೈಯಲ್ಲಿದ್ದ ಪಚ್ಚೆ ಮತ್ತು ನೀಲ ದುಂಗುರಗಳನ್ನು ಮತ್ತು ಇತರ ಪಾಂಡವರನ್ನು, ಕೊನೆಗೆ ದ್ರೌಪದಿಯನ್ನೂ ಸೋಲುತ್ತಾನೆ. ವನವಾಸಕ್ಕೆ ಹೋಗುವ ಮೊದಲು 'ನನ್ನ ಮಕ್ಕಳು ಸುಖವಾಗಿ ಹಿಂದಿರುಗಿ ಬರಲಿ' ಎಂದು ಪ್ರಲಾಪಿಸುತ್ತ ಕುಂತಿ ನಾಲ್ಕು ಮೂಲೆಗಳಿಗೆ ನಾಲ್ಕು ದೀಪಗಳನ್ನು ಹಚ್ಚುತ್ತಾಳೆ.[೧] ಈ ನಿರೂಪಣಾ ರೀತಿ ನೀತಿಗಳನ್ನು ಗಮನಿಸಿದಾಗ ದ್ಯೂತದಲ್ಲಿ ಪಣವಾಗಿಟ್ಟ ವಸ್ತುಗಳು ಗ್ರಾಮ ಜೀವನದ ಬದುಕಿನ ವಸ್ತುಗಳಾಗಿವೆಯೇ ಹೊರತು ಅರಮನೆಯದಲ್ಲ ಎಂದು ತಿಳಿಯುತ್ತದೆ. ಕಷ್ಟದಿಂದ ಪಾರಾಗಲು ದೀಪವನ್ನು ಆರದಂತೆ ಬೆಳಗಿಸುವ ಜಾನಪದ ಆಚರಣೆಯನ್ನು ಇಲ್ಲಿ ಕಾಣಬಹುದಾಗಿದೆ. ಹೀಗೆ ಇನ್ನೂ ಮೂಲಭೂತವಾದ ಹಲವಾರು ಬದಲಾವಣೆಗಳನ್ನು ಜಾನಪದ ಮಹಾಭಾರತದಲ್ಲಿ ಕಾಣಬಹುದಾಗಿದೆ.

ಹೀಗೆ ಜನಪದ ಮಹಾಭಾರತದ ಎಲ್ಲ ಪ್ರಸಂಗಗಳನ್ನು ಗಮನಿಸಿದರೆ ಶಿಷ್ಟ ಕಾವ್ಯವೊಂದು ಜಾನಪದೀಕರಣಗೊಂಡು ಜನಪದ ಕಾವ್ಯವಾಗಿದೆಯೋ? ಅಥವಾ ಮೂಲಭಾರತದ ಕಥಾಸ್ವರೂಪ ಜಾನಪದ ಕಥನ ಸ್ವರೂಪದಲ್ಲಿ ಉಳಿದು ಬಂದಿದೆಯೋ ಎಂಬ ಅನುಮಾನ ಉಂಟಾಗುತ್ತದೆ. ಅದೇನೇ ಇರಲಿ, ಶಿಷ್ಟಕಾವ್ಯದಲ್ಲಿ ಕಂಡುಬರುವ ಅಕ್ಷಯವಸ್ತ್ರ ಪ್ರಸಂಗ, ದ್ಯೂತ ಪ್ರಸಂಗ ಮೊದಲಾದುವೆಲ್ಲವೂ ಕಾಣಿಸಿಕೊಳ್ಳದೆ ಅಥವಾ ಕಾಣಿಸಿಕೊಂಡರೂ ಸಂಪೂರ್ಣ ಭಿನ್ನರೂಪದಲ್ಲಿ ಕಾಣಿಸಿಕೊಂಡಿರುವುದನ್ನು ನೋಡಿದಾಗ ಜನಪದರು ತಮ್ಮ ಬದುಕಿನ ಸ್ವರೂಪದಲ್ಲೇ ಕಾವ್ಯವನ್ನು ನಿರ್ಮಿಸಿಕೊಂಡು ಆನಂದಿಸುತ್ತಾರೆ ಎಂದು ತಿಳಿಯುತ್ತದೆ. ಆದ್ದರಿಂದ ಪವಾಡಗಳು ಶಿಷ್ಟ ಮತ್ತು ಜಾನಪದಗಳೆರಡರಲ್ಲಿ ಕಂಡುಬಂದರೂ, ಭಿನ್ನ ಭಿನ್ನ ಕ್ಷೇತ್ರಗಳಲ್ಲಿ ವಿಭಿನ್ನ ರೀತಿಯಲ್ಲಿ ಕಂಡುಬರುತ್ತವೆ ಎನ್ನುವುದು ಇದರಿಂದ ತಿಳಿಯಬರುತ್ತದೆ.

**ಶಿಶುಪಾಲ ಪ್ರಸಂಗ**

ಪವಾಡಗಳು ಪ್ರಕೃತಿಯಲ್ಲಿ, ಗಿಡ ಮರ ಪ್ರಾಣಿ ಪಕ್ಷಿ ಮೊದಲಾದವುಗಳಿಗೆ ಸಂಬಂಧಿಸಿದಂತೆ ನಡೆಯಲು ಸಾಧ್ಯ. ಮರಕ್ಕೆ ಸಂಬಂಧಿಸಿದ ಪವಾಡವನ್ನು ಜಂಬೂಫಲ ಪ್ರಸಂಗದಲ್ಲಿ ಕಾಣಬಹುದು. ಮನುಷ್ಯರಿಗೆ ಸಂಬಂಧಿಸಿದ

---

೧. ಜನಪಜ ಗೀತೆಗಳಲ್ಲಿ ಮಹಾಭಾರತ: ಸಿ.ಎನ್. ಚೆನ್ನವೀರಯ್ಯ ಪು. ೨೬-೩೬.

ಪವಾಡಗಳಲ್ಲಿ ಹೆಚ್ಚಿನವು ಜನನಕ್ಕೆ ಇಲ್ಲವೇ ಮಹಾಪುರುಷರ ವ್ಯಕ್ತಿತ್ವವನ್ನು ಎತ್ತಿ ಹಿಡಿಯುವ ಘಟನೆಗಳಿಗೆ ಸಂಬಂಧಿಸಿವೆ. ಜನನಕ್ಕೆ ಸಂಬಂಧಿಸಿದ ಘಟನೆಗಳಲ್ಲಿ ಜನನಪೂರ್ವದಲ್ಲಿ, ಜನನ ಕಾಲದಲ್ಲಿ ಅಥವಾ ಜನನವಾದ ಕೂಡಲೇ ಪವಾಡಗಳು ಸಂಭವಿಸುವುದನ್ನು ಕಾಣುತ್ತೇವೆ. ಉತ್ತರೆಯ ಗರ್ಭಸಂರಕ್ಷಣೆಯ ಪ್ರಸಂಗ, ಜನನ ಪೂರ್ವ ಘಟನೆಗೆ ಸಂಬಂಧಿಸಿದರೆ, ಜನನಕಾಲದ ಪವಾಡಕ್ಕೆ ಜರಾಸಂಧ, ಪಾಂಚಾಲಿ, ಧೃಷ್ಟದ್ಯುಮ್ನ ಮೊದಲಾದ ಪ್ರಸಂಗಗಳ ನಿದರ್ಶನಗಳಾಗಿವೆ. ಶಿಸುಪಾಲನ ಜನನವು ಜನನಾನಂತರದಲ್ಲಿ ನಡೆವ ಪವಾಡಕ್ಕೆ ಉದಾಹರಣೆಯಾಗಿದೆ.

ರಾಜಸೂಯಯಾಗದ ಅಗ್ರಪೂಜೆಯ ಸಂದರ್ಭದಲ್ಲಿ ಶಿಶುಪಾಲನು ಕೃಷ್ಣನನ್ನು ಪರಿಪರಿಯಾಗಿ ದೂಷಿಸುತ್ತಿದ್ದಾಗ, ಭೀಮನು ಕೆರಳಿ ನಿಲ್ಲುತ್ತಾನೆ. ಆಗ ಭೀಷ್ಮರು ಅವನಿಗೆ ಸಮಾಧಾನ ಹೇಳುತ್ತಾ, 'ನೀನು ಅವನನ್ನು ಕೊಲ್ಲುವುದು ಅಸಾಧ್ಯ. ಇವನ ನಿಜ ನಿನಗೆ ತಿಳಿಯದು' ಎಂದು ಶಿಶುಪಾಲನ ಪೂರ್ವೋತ್ತರವನ್ನು ತಿಳಿಸುತ್ತಾರೆ. ಪೂರ್ವಜನ್ಮದ ಹಿರಣ್ಯಾಕ್ಷನೇ ರಾವಣನಾಗಿ ಜನ್ಮತಾಳಿದ ನಂತರ, ಈಗ ಶಿಶುಪಾಲನಾಗಿ ಜನ್ಮತಾಳಿದ್ದಾನೆ. ಇವನು ಹುಟ್ಟಿದಾಗ ಹಣೆಗಣ್ಣು, ನಾಲ್ಕು ಭುಜಗಳೂ ಇದ್ದವು. ಹುಟ್ಟಿದ ಕೂಡಲೇ ನೆಲಬಿರಿಯುವಂತೆ ಅದ್ಭುತ ಧ್ವನಿಯಿಂದ ಕೂಗಿದನು. ಆ ಧ್ವನಿಗೆ ಜನ ಬೆದರಿದರು. ಆಗ ಅಲ್ಲಿಗೆ ಆಗಮಿಸಿದ ನಾರದನಿಗೆ ಶಿಶುಪಾಲನ ತಾಯಿ ತನ್ನ ಮಗುವಿಗೆ ಹಣೆಗಣ್ಣು ಮತ್ತು ಚತುರ್ಭುಜಗಳಿರುವ ಸಂಗತಿ ತಿಳಿಸಿದಳು. ಆಗ ನಾರದನು ಈ ಮಗುವನ್ನು ಯಾರು ಕೈಯಲ್ಲಿ ತೆಗೆದುಕೊಂಡಾಗ ಹಣೆಗಣ್ಣು ಮತ್ತು ಭುಜಗಳು ನಾಶವಾಗುತ್ತದೋ ಆತನೇ ಇವನಿಗೆ ಮೃತ್ಯು ಎಂದು ಹೇಳಿ ಹೋಗುತ್ತಾನೆ. ಕೃಷ್ಣನು ಬಂದಾಗ ಅವನ ಕೈಗೆ ಮಗು ಶಿಶುಪಾಲನನ್ನು ಕೊಟ್ಟಕೂಡಲೇ 'ಅಧಿಕಾಕ್ಷಿ ಬಾಹುಗಳು' ಮಾಯವಾದವು. ಆದ್ದರಿಂದ ಇವನಿಗೆ ಕೃಷ್ಣನಿಂದಲ್ಲದೆ ಬೇರೆ ಯಾರಿಂದಲೂ ಸಾವಿಲ್ಲ' ಎಂದು ಭೀಷ್ಮರು ಹೇಳುತ್ತಾರೆ.

ಇಲ್ಲಿ ಕೃಷ್ಣನು ಅವತಾರ ಪುರುಷನಾದ್ದರಿಂದ ಅವನಿಂದ 'ಅಧಿಕಾಕ್ಷಿ ಬಾಹುಗಳು' ಮಾಯವಾದುದು ಒಂದು ದೃಷ್ಟಿಯಲ್ಲಿ ಪವಾಡವಾಗುವುದಿಲ್ಲ ಎನಿಸಿದರೂ ವಿಚಿತ್ರವಾಗಿ ಹುಟ್ಟಿದ ಕಣ್ಣು- ಬಾಹುಗಳು ಪವಾಡವಾಗಿ ಕಾಣುತ್ತದೆ.

ಇದು ದೈವ ಸಂಕಲ್ಪವೆಂದು ವಿಶೇಷವೇನಿಲ್ಲವೆಂದು ಸಮರ್ಥಿಸಬಹುದಾದರೂ ಲೋಕರೂಢಿಯ ಜನನದ ಹಿನ್ನೆಲೆಯಲ್ಲಿ ಪವಾಡವಾಗಿದೆ. ಜಾನಪದ ಕಥೆಗಳಲ್ಲಿ ಕಂಡುಬರುವ ಒಕ್ಕಣ್ಣರಾಕ್ಷಸ, ಕೊಂಬಿರುವ ರಾಕ್ಷಸ ಮೊದಲಾದವರ ಜನನದಲ್ಲಿ ಈ ಬಗೆಯ ಪವಾಡಗಳು ಸಂಭವಿಸಿವೆ ಎನ್ನಬಹುದು.

### ಜಂಬೂಫಲ ಪ್ರಸಂಗ

ಜಂಬೂಫಲ ಪ್ರಸಂಗದಲ್ಲಿ ಗಿಡದಿಂದ ಕಿತ್ತ ಹಣ್ಣು ಮತ್ತೆ ಮರದಲ್ಲಿ ಸ್ವಸ್ಥಾನವನ್ನು ಸೇರುವ ಘಟನೆ ಒಂದು ಪವಾಡವೇ ಆಗಿದೆ. ಏಕೆಂದರೆ ತೊಟ್ಟು ಕಳಚಿ ಬಿದ್ದ ಹಣ್ಣು ಮತ್ತೆ ಸ್ವಸ್ಥಾನವನ್ನು ಸೇರುವುದು ಪ್ರಕೃತಿ ಸಹಜವಲ್ಲ. ಆದ್ದರಿಂದ ಇದು ಪವಾಡವಾಗಿ ಕಾಣುತ್ತದೆ. ಕರ್ಣನ ಬಗ್ಗೆ ದ್ರೌಪದಿಯ ಅಂತರಾಳದಲ್ಲಿ ಹುದುಗಿದ್ದ ಕಾಮಾಸಕ್ತಿಯನ್ನು ಪ್ರಕಟಪಡಿಸುವ ಆಶಯವನ್ನು ಈ ಪ್ರಸಂಗದಲ್ಲಿ ನೆನೆಯಬಹುದು.

## ರಾಕ್ಷಸರ ಕಥೆಗಳು

### ಬಕಾಸುರ ಪ್ರಸಂಗ

ಕುಮಾರವ್ಯಾಸನಲ್ಲಿ ಬಕಾಸುರ ಪ್ರಸಂಗವು (ಆ.ಪ.೧೦) ಉಪಕಥೆಯಾಗಿ ಬರುತ್ತದೆ. ಏಕಚಕ್ರನಗರಿಯಲ್ಲಿ ಪಾಂಡವರು ಮಾರುವೇಷದಲ್ಲಿದ್ದಾಗ, ಸರದಿಯ ಮೇಲೆ ಬಂಡಿಗಟ್ಟಲೆ ಆಹಾರದ ಜೊತೆಗೆ ಒಬ್ಬೊಬ್ಬಮನುಷ್ಯನನ್ನೂ, ಪ್ರತಿದಿನವೂ ಊರಿನವರಿಂದ ಒಪ್ಪಿಸಿಕೊಳ್ಳುತ್ತಿದ್ದ 'ಬಕಾಸುರ'ನ ವೃತ್ತಾಂತ ತಿಳಿಯುತ್ತದೆ. ಒಮ್ಮೆ ಪಾಂಡವರ ನೆರಮನೆಯ ಬ್ರಾಹ್ಮಣರ ಮಗನೇ ಆಹಾರವಾಗಿ ಹೋಗಬೇಕಾಗಿ ಬಂದಾಗ, ಆ ಕುಟುಂಬದ ಸರದಿಯ ಬದಲಿಗೆ ಭೀಮನೇ ಬಂಡಿಗಟ್ಟಲೆ ಆಹಾರದೊಡನೆ ಹೋಗಿ, ಬಕಾಸುರನನ್ನು ವಧಿಸಿ, ಊರಿನವರನ್ನು ರಾಕ್ಷಸನ ಕಾಟದಿಂದ ಪಾರುಮಾಡುತ್ತಾನೆ. ನರಭಕ್ಷಕ ರಾಕ್ಷಸನೊಬ್ಬನು ಪ್ರಜೆಗಳನ್ನು ಪೀಡಿಸುವುದೂ, ಅವನಿಗೆ ಸರದಿ ಪ್ರಕಾರ ಪ್ರತಿದಿನವೂ ಬಂಡಿಗಟ್ಟಲೆ ಆಹಾರವನ್ನು ಒಬ್ಬ ಮನುಷ್ಯನೊಡನೆ ಕೊಡುವುದೂ, ಕೊನೆಗೆ ಜನಗಳ ಪಾಲಿಗೆ ರಕ್ಷಕನಾಗಿ ಒಬ್ಬ ರಾಜಕುಮಾರ (ಭೀಮ) ಬಂದು ರಾಕ್ಷಸನನ್ನು ಸಂಹರಿಸಿ, ಜನಗಳನ್ನು ಕಾಪಾಡುವುದು- ಈ ಮೂರು ಕಥಾಭಾಗಗಳು ಈ ಕಥೆಯಲ್ಲಿ ಕಾಣುತ್ತವೆ. ಇದೇ

ಬಗೆಯ ಆಶಯವುಳ್ಳ ಕಥೆಗಳನ್ನು ಬೇರೆ ಸಾಹಿತ್ಯದಲ್ಲೂ ಕಾಣುತ್ತೇವೆ. ಗ್ರಿಮ್ ಸೋದರರು ರಚಿಸಿರುವ 'ಅಣ್ಣಾತಮ್ಮಂದಿರು' ಕಥೆಯಲ್ಲೂ ಇಲ್ಲಿಯ ಆಶಯಗಳೇ ಕಂಡುಬರುತ್ತವೆ. ಆ ಕಥೆಯಲ್ಲಿ ಒಬ್ಬ ಕನ್ಯೆ ರಾಕ್ಷಸನಿಗೆ ಆಹಾರವಾಗಬೇಕಾಗುತ್ತದೆ. ಆದರೆ ಇಲ್ಲಿ ಒಬ್ಬ ಸಾಮಾನ್ಯವ್ಯಕ್ತಿ ಬಲಿಯಾಗಬೇಕಾಗುತ್ತದೆ. ಇಲ್ಲಿ ಭೀಮ ಬಕಾಸುರನನ್ನು ಕೊಂದು ಉಳಿಸಿದರೆ, ಅಲ್ಲಿಯ ಕಥೆಯಲ್ಲಿ ರಾಜಕುವರ ಡ್ರ್ಯಾಗನ್ ಅನ್ನು ಕೊಂದು ರಾಜಕುಮಾರಿಯನ್ನು ಉಳಿಸುತ್ತಾನೆ. ಹೀಗೆ ಸಮಾನ ಆಶಯವುಳ್ಳ ಬೇರೆ ಬೇರೆ ದೇಶದ ಜಾನಪದ ಕಥೆಗಳನ್ನು ಕಾಣಬಹುದು. ಜೈನ ಕಥಾ ಸಾಹಿತ್ಯದಲ್ಲೂ ಇದೇ ಬಗೆಯ ಕಥೆಗಳು ಕಂಡುಬರುತ್ತವೆ. ಉದಾಹರಣೆಗೆ ಶಾಂತಿಪುರಾಣ, ಚಾವುಂಡರಾಯ ಪುರಾಣ, ಕಮಲಭವನ ಶಾಂತಿಪುರಾಣ, ಬಂಧುವರ್ಮನ ಜೀವಸಂಬೋಧನಂ ಮೊದಲಾದ ಜೈನಗ್ರಂಥಗಳಲ್ಲಿ ಕೆಲವು ವ್ಯತ್ಯಾಸಗಳೊಡನೆ ಕಂಡುಬರುವ 'ಮುಂಡಕೌಶಿಕ'ನ ಕಥೆಯು ಬಕಾಸುರನ ಕಥೆಯನ್ನು ಹೋಲುತ್ತವೆ. ಬಕಾಸುರನ ಕಥೆ ಪಾಂಡವರ ಪರೋಪಕಾರ ಬುದ್ಧಿಗೂ, ಭೀಮನ ಶೌರ್ಯ ಸಾಹಸಗಳಿಗೂ ಪ್ರತೀಕವಾಗಿ ಬಂದಿದೆ. ಮಹಾಭಾರತದಲ್ಲಿರುವ ಬಕಾಸುರನ ಕಥೆ ಮೂಲತಃ ಜನಪ್ರಿಯವಾದ ಜಾನಪದ ಕಥೆಯಾಗಿತ್ತೆಂದು ಇದರಿಂದ ವ್ಯಕ್ತವಾಗುತ್ತದೆ. ಅದು ವ್ಯಾಸರ ಕಾಲದಲ್ಲೇ ಮಹಾಭಾರತದಲ್ಲಿ ಸೇರ್ಪಡೆಯಾಗಿರುವುದನ್ನು ಕಂಡರೆ, ಇದು ಪ್ರಾಚೀನ ಜಾನಪದ ಕಥೆಗಳಲ್ಲಿ ಒಂದಾಗಿದೆ ಎನ್ನಬಹುದು.

ಕುಮಾರವ್ಯಾಸನು ಬಕಾಸುರ ವಧಾ ಪ್ರಸಂಗವನ್ನು ನಿರ್ವಹಿಸಿರುವ ಹಾಗೂ ನಿರೂಪಿಸಿರುವ ರೀತಿಗಳಲ್ಲಿ ಸಾಕಷ್ಟು ಜಾನಪದಾಂಶಗಳು ಗಮನಾರ್ಹವಾಗಿ ಬಂದಿವೆ. ಬಹುವಿಧದ ಭಕ್ಷ್ಯಾವಳಿಯ 'ಹೆಡೆಗೆ'ಗಳನ್ನೂ, ಹಾಲುತುಪ್ಪದ ಹಲವು ಹರವಿಗಳನ್ನೂ, ವಿವಿಧ ಶಾಕಾವಳಿಯ ಬೋನದ ಬಿಗಿದ ಕುನಿಕಿಲ ಕಳವೆಯಕ್ಕಿಯ ಕೂಳ ರಾಶಿಯನ್ನೂ ಬಂಡಿಗಳಲ್ಲಿ ತುಂಬಲಾಯಿತು - ಎಂದು ಹೇಳುವಲ್ಲಿ ಹೆಡೆಗೆ, ಹರವಿ, ಕುನಿಕಿಲ ಮೊದಲಾದ ಮಾತುಗಳು ಹಳ್ಳಿಗಳಲ್ಲಿ ಆಹಾರವನ್ನೂ ದವಸಧಾನ್ಯಗಳನ್ನು ತುಂಬಿಡುವ ಸಾಧನ ಸಾಮಗ್ರಿಗಳು ಎನ್ನುವುದು ಗಮನಾರ್ಹ. (ಹೆಡೆಗೆ = ಬಿದಿರಬುಟ್ಟಿ, ಹರವಿ= ಸುಟ್ಟಮಣ್ಣಿನ ದೊಡ್ಡಗಡಿಗೆ, ಕುನಿಕಿಲ= ಚೀಲ) ಅಂತೆಯೇ ಆಹಾರದಿಂದ ಇಡಿಕಿರಿದ ಭೂಮಿ ತೂಕದ ಬಂಡಿಯನ್ನು ಬಕಾಸುರನ ಬಳಿಗೆ ಕೊಂಡೊಯ್ಯುವ ರೀತಿಯ ವರ್ಣನೆಯಲ್ಲಿ ದೇಸಿಯ ಸೊಗಡನ್ನು

ಕಾಣಬಹುದು. "ಬಂಡಿಯ ಶಿರದ ಹಲಗೆಯನು ಅಡರಿದನು ಬಲು ಹುರಿಯ ಹಗ್ಗವ ಹಿಡಿದು ಜಡಿದನು ಹೂಡಿದೆತ್ತುಗಳ" (ಆ.ಪ. ೧೦-೨೭) 'ಬಂಡಿಯ ಶಿರದ ಹಲಗೆಯನಡರಿದನು' ಎಂಬ ಮಾತು ಗ್ರಾಮೀಣ ಜೀವನದಲ್ಲಿ ವೇಗವಾಗಿ ಬಂಡಿಯನ್ನು ಹೊಡೆಯುವ ರೀತಿಯನ್ನು ಇದು ನೆನಪಿಸುತ್ತದೆ. ಸಾಮಾನ್ಯವಾಗಿ "ಬಂಡಿಯನ್ನು ವೇಗವಾಗಿ ಹೊಡೆಯುವವರು ಬಂಡಿಯ ಒಳಗೆ ಕೂಡುವುದಿಲ್ಲ. ಬದಲಾಗಿ "ಮೂಕಿ"ಯ ಮೇಲೆ ಕೂಡುತ್ತಾರೆ. ಹಾಗೆ ಕೂತರೆ ವೇಗದ ಜೊತೆಗೆ ಹತೋಟಿಯೂ ಇರುತ್ತದೆ. ಇದನ್ನು ಕುಮಾರವ್ಯಾಸನು 'ಬಂಡಿಯ ಶಿರದ ಹಲಗೆ' ಎಂದು ಹೇಳುತ್ತಾನೆ."[೧]

ರಾಕ್ಷಸನಲ್ಲದಿದ್ದರೂ ಭೀಮನ ದೈತ್ಯ ಸಾಮರ್ಥ್ಯವನ್ನು ಪ್ರತಿಪಾದಿಸುವ ಹಲವಾರು ರಾಕ್ಷಸಮರ್ದನ ಪ್ರಸಂಗಗಳನ್ನು ಕವಿ ಮನಮುಟ್ಟುವಂತೆ ಅತಿಶಯವಾಗಿ ನಿರೂಪಿಸುತ್ತಾನೆ. ಜರಾಸಂಧ, ಹಿಡಿಂಬಾಸುರ ಜಟಾಸುರ, ಕಿಮ್ಮೀರ ರಕ್ಕಸ ಮೊದಲಾದವರೊಡನೆ ನಡೆಸಿದ ಹೋರಾಟದ ಪ್ರಸಂಗಗಳು ಭೀಮನ ಅತುಳ ಪರಾಕ್ರಮ, ಅದ್ಭುತ ಸಾಹಸ, ಅತಿಮಾನುಷ ಶಕ್ತಿಗಳಿಗೆ ಪ್ರತೀಕವೆನಿಸುತ್ತವೆ.

ಈ ಮೇಲ್ಕಂಡ ಪ್ರಸಂಗಗಳಲ್ಲಿ ಭೀಮನು ರಾಕ್ಷಸರುಗಳ ಮರ್ದನ ಮಾಡಿದರೆ, 'ಮಣಿಮಾನ'ನೆಂಬ ರಕ್ಕಸರೂಪದ ದಾನವನನ್ನು ಸದೆಬಡಿಯುವುದರ ಮೂಲಕ, ಆ ರಾಕ್ಷಸ ರೂಪದ ಶಾಪಗ್ರಸ್ತ ಯಕ್ಷನನ್ನು ಶಾಪ ವಿಮೋಚನೆಗೊಳಿಸುವುದು ಗಮನಾರ್ಹವಾದ ಅಂಶವಾಗಿದೆ.

ಈ ಭೀಮ-ರಾಕ್ಷಸ ಪ್ರಸಂಗಗಳಲ್ಲಿ ನಾಯಕ ಮಾನವನಾಗಿದ್ದು ಪ್ರತಿನಾಯಕರೆಲ್ಲ ರಾಕ್ಷಸರಾಗಿದ್ದಾರೆ. ಮಾನವನೊಬ್ಬನ ದೈಹಿಕ ಸಾಹಸದಿಂದ ರಾಕ್ಷಸರನ್ನು ಸೋಲಿಸುವ ಇಲ್ಲಿನ ಘಟನೆಗಳನ್ನು ಕಂಡಾಗ ಈ ಪ್ರಸಂಗಗಳು ಅದ್ಭುತ ಕಥೆಗಳಾಗಿಯೂ ಪರಿಗಣಿತವಾಗುತ್ತವೆ. ಪ್ರತಿಸಲವೂ ಶಕ್ತಿ ಸಾಹಸಗಳಲ್ಲಿ ಮಾನವರಿಗೆ ಮಿಗಿಲಾದ ರಾಕ್ಷಸರಿಗೆ ಸೋಲು ಇಲ್ಲವೇ ಸಾವುಂಟಾಗುವುದು ಸಾಮಾನ್ಯ ಸಂಗತಿಯಾಗಿದೆ. ಹೀಗೆ ರಾಕ್ಷಸರಿಗೆ ಸೋಲು ಅಥವಾ ಸಾವುಂಟಾಗುವ ಅಂಶವನ್ನು ರಾಕ್ಷಸರು ಬರುವ ಜಾನಪದ ಕಥೆಗಳಲ್ಲಿ ಕಾಣುತ್ತೇವೆ.

---

೧. ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ ಗ್ರಂಥ, ಪು. ೮೦.

## ಜರಾಸಂಧ ಪ್ರಸಂಗ

ಮಹಾಭಾರತದಲ್ಲಿ ಬರುವ ರಾಕ್ಷಸರ ಕಥೆಗಳಲ್ಲಿ ವೈವಿಧ್ಯ ಎದ್ದು ಕಾಣುತ್ತದೆ. ಕೆಲವು ಕಥೆಗಳು ಹೆಚ್ಚಾಗಿ ಶಿಷ್ಟ ಕಥೆಗಳ ಲಕ್ಷಣಗಳನ್ನು ಹೊಂದಿದ್ದರೆ, ಕೆಲವು ಕಥೆಗಳು ಬಹುಮಟ್ಟಿಗೆ ಜಾನಪದ ಕಥೆಗಳ ಲಕ್ಷಣಗಳನ್ನು ಹೊಂದಿವೆ. ಕೆಲವೊಮ್ಮೆ ಶಿಷ್ಟ ಕಥೆಯ ನಡುವೆ ಜಾನಪದ ಕಥೆಯೊಂದು ನೆಪಕ್ಕಾಗಿ ಇಲ್ಲವೇ ಕಥನ ತಂತ್ರ ಕೌಶಲ್ಯದ ಅಂಗವಾಗಿ ಸೇರಿಬಿಟ್ಟಿದೆಯೋ ಎಂದು ಭಾಸವಾಗುತ್ತದೆ. ಇದಕ್ಕೆ ಜರಾಸಂಧನ ವಧಾಪ್ರಸಂಗದಲ್ಲಿ ಬರುವ ಅವನ ಪೂರ್ವಕಥೆಯೇ ಒಂದು ಉತ್ತಮ ನಿದರ್ಶನ.

ಜರಾಸಂಧನ ಜನನ ವೃತ್ತಾಂತವೇ ಪವಾಡದ ಕಥೆಯನ್ನು ಹೋಲುತ್ತದೆ. ರಾಜಸೂಯ ಯಾಗ ಸಂದರ್ಭದಲ್ಲಿ ಕೃಷ್ಣನು ಧರ್ಮಜನಿಗೆ ಜರಾಸಂಧನನ್ನು ಗೆಲ್ಲುವುದು ಸುಲಭಸಾಧ್ಯವಲ್ಲ. ಆದರೆ, ಅವನನ್ನು ಗೆದ್ದ ಹೊರತೂ ಉಳಿದ ರಾಜರಿಂದ ಯಾಗಕ್ಕಾಗಿ ಕಪ್ಪ ಕಾಣಿಕೆಪಡೆಯುವುದು ಸಾಧ್ಯವಿಲ್ಲ ಎಂದು ಹೇಳಿ, ಜರಾಸಂಧನ ಜನನ ವೃತ್ತಾಂತವನ್ನು ಹೇಳುತ್ತಾನೆ.

ಮಗಧ ದೇಶದ ಬೃಹದ್ರಥನೆಂಬ ಅರಸನಿಗೆ ಇಬ್ಬರು ರಾಣಿಯರಿದ್ದರೂ ಮಕ್ಕಳಾಗುವುದಿಲ್ಲ. ಆಗ ರಾಜನು ರಾಣಿಯರೊಡನೆ ತಪಸ್ಸಿಗಾಗಿ ಹೊರಟನು. ಕಾಡಿನಲ್ಲಿ ಚಂಡಕೌಶಿಕನೆಂಬ ಮುನಿ ಅವನಿಗೆ ಮಾವಿನ ಹಣ್ಣೊಂದನ್ನು ಕೊಟ್ಟು, 'ಇದನ್ನು ನಿನ್ನ ರಾಣಿಗೆ ಕೊಡು, ಮಕ್ಕಳಾಗುತ್ತವೆ' ಎಂದು ಹೇಳುತ್ತಾನೆ. ರಾಜನಿಗೆ ಇಬ್ಬರು ರಾಣಿಯರಲ್ಲೂ ಸಮಾನ ಪ್ರೀತಿಯಿದ್ದುದರಿಂದ ಹಣ್ಣನ್ನು ಎರಡು ಭಾಗಮಾಡಿ ಇಬ್ಬರಿಗೂ ಕೊಡುತ್ತಾನೆ. ಅನಂತರ ಮನುಷ್ಯ ದೇಹದ ಎರಡು ಹೋಳುಗಳು ಆ ಇಬ್ಬರು ರಾಣಿಯರಲ್ಲಿ ಹುಟ್ಟುತ್ತವೆ. ಅವನ್ನು ಕಂಡು ರಾಜನು ಜುಗುಪ್ಸೆಯಿಂದ ಊರಾಚೆಗೆ ಆ ಎರಡು ಭಾಗಗಳನ್ನು ಎಸೆಯುತ್ತಾನೆ. ಆಗ ಅಲ್ಲಿಗೆ ಆಹಾರ ಹುಡುಕುತ್ತಾ ಬಂದ 'ಜರಾ' ಎಂಬ ರಾಕ್ಷಸಿ ಆ ಎರಡು ಹೋಳುಗಳನ್ನು ಕಂಡು ಅವನ್ನು ಕೂಡಿಸಿದಾಗ ಅವು ಶಿಶುರೂಪತಾಳಿ ಮಹಾರಭಸದ ದನಿಯಿಂದ ಕೂಗುತ್ತದೆ. ಜನಗಳು ನಡುರಾತ್ರಿಯಲ್ಲಿ ಆ ಶಬ್ದ ಕೇಳಿ ಊರಹೊರವಲಯಕ್ಕೆ ಬಂದಾಗ ಅಲ್ಲಿ ಮಗುವನ್ನೂ ರಾಕ್ಷಸಿಯನ್ನೂ ಕಂಡು

ಬೇರೆಗಾಗುತ್ತಾರೆ. ರಾಜನು ಬಂದಾಗ ಅವನಿಗೆ ಆ ರಾಕ್ಷಸಿ 'ಇವನನ್ನು ಜರಾಸಂಧ' ಎಂಬ ಹೆಸರಿನಿಂದ ಕರೆಯಬೇಕು ಎಂದು ಹೇಳಿ ಮಗುವನ್ನು ಕೊಡುತ್ತಾಳೆ. ಹೀಗೆ 'ಜರಾ' ಎಂಬ ರಾಕ್ಷಸಿ ಸೀಳುಗಳನ್ನು ಕೂಡಿಸಿದ್ದರಿಂದ ಬಂದವನು 'ಜರಾಸಂಧ'.

ಅನಂತರ ಮುನಿಯ ವರಪ್ರಸಾದದಿಂದಲೋ, ಜರೆಯ ಪ್ರಭಾವದಿಂದಲೋ, ರಾಜನು ಸಾಕಿ ಶಿಕ್ಷಣ ನೀಡಿದ ಕಾರಣದಿಂದಲೋ ಏನೋ ಅಂತೂ ಅವನು ಮಹಾಸಾಹಸವಂತ ರಾಕ್ಷಸನಾಗಿದ್ದಾನೆ. ಇಂಥವನನ್ನು ಮೊದಲು ಗೆಲ್ಲುವುದು ಮುಖ್ಯ ಎಂದು ಕೃಷ್ಣನು ತಿಳಿಸುತ್ತಾನೆ.

ಈ ಕಥೆಯಲ್ಲಿ ಚಂಡಕೌಶಿಕ ಋಷಿ ಮಂತ್ರಿಸಿದ ಮಾವಿನಹಣ್ಣನ್ನು ಕೊಡುವುದೂ, ಅದರಿಂದ ಮಗುವಾಗುವುದೂ, ಅದು ವಿಚಿತ್ರ ರೀತಿಯಲ್ಲಿ ಎರಡು ಸೀಳುಗಳಾಗಿ ಜನಿಸುವುದೂ, ಆಹಾರಕ್ಕಾಗಿ ಹುಡುಕುತ್ತಾ ಬಂದಾಗ ರಾಕ್ಷಸಿ 'ಜರೆ'ಯು ತನಗೆ ಸಿಕ್ಕಿದ ಆ ಎರಡು ಮನುಷ್ಯನ ಹೋಳುಗಳನ್ನು ತಿನ್ನದೆ ವಿನೋದಕ್ಕಾಗಿ ಅವುಗಳನ್ನು ಜೋಡಿಸುವುದು ಇವೇ ಮೊದಲಾದ ಸಂಗತಿಗಳು ಅಪ್ಪಟ ಜಾನಪದ ಅಂಶಗಳು ಎನ್ನಲು ಅಡ್ಡಿಯಿಲ್ಲ. ಯಾವುದೋಒಂದು ಜಾನಪದ ಕಥೆ ಈ ರೂಪದಲ್ಲಿ ಇಲ್ಲಿ ಕಾಣಿಸಿಕೊಂಡಿದೆ ಎಂದರೆ ತಪ್ಪಲ್ಲ.

ಜರಾಸಂಧವಧೆಯ ಸಂದರ್ಭವು ಜಾನಪದ ಸ್ವರೂಪದ ಅಂಶಗಳಿಂದ ಕೂಡಿದೆ. ಬ್ರಾಹ್ಮಣರ ವೇಷದಲ್ಲಿ ಕೃಷ್ಣಭೀಮಾರ್ಜುನರು ಜರಾಸಂಧ ವಧೆಗಾಗಿ ಹೋಗುವುದೂ, ಅರಮನೆಯನ್ನು ಹಿಂಬಾಗಿಲಿನಿಂದ ಪ್ರವೇಶಿಸುವುದೂ, ಊರ ಹೊರಗಿನ ಮೂರು ನಗಾರಿಗಳನ್ನು ಮೂವರೂ ಬಡಿದಾಗ ಆ ಮೂರು ಭೇರಿಗಳು ಸಿಡಿದು ಸದ್ದುಮಾಡುತ್ತಾ ಕೆಳಗೆ ಬೀಳುವುದೂ, ಯುದ್ಧದಲ್ಲಿ ಭೀಮ ಜರಾಸಂಧನನ್ನು ಎರಡು ಹೋಳಾಗಿ ಸೀಳಿ ಪಲ್ಲಟಮಾಡಿ ಬಿಸಾಡುವುದೂ- ಈ ಎಲ್ಲ ಅಂಶಗಳೂ ಜನಪದ ಅಂಶಗಳನ್ನು ಒಳಗೊಂಡಿವೆ ಎನ್ನಬಹುದು.

ಮುನಿಯ ಅನುಗ್ರಹದಿಂದ ಜನಿಸಿದರೂ ರಾಕ್ಷಸನಾಗಿದ್ದರೂ ಮಾನವನಂತೆ ಸೆಣಸುವ ಜರಾಸಂಧನನ್ನು ಕಂಡಾಗ ಲೌಕಿಕ- ಅಲೌಕಿಕ ಘಟನೆಗಳು ಸೇರಿಕೊಂಡು ಶಿಷ್ಟವೇಷ ಧರಿಸಿದ ಜಾನಪದ ಕಥೆ ಇದಾಗಿದೆ ಎನ್ನಬಹುದು.

## ಘಟೋದ್ಘಟ ಪ್ರಸಂಗ

ಭೀಮ - ಹಿಡಿಂಬೆಯರ ಮಗನಾದ ಘಟೋತ್ಕಚನನ್ನು ಕುರಿತ ಪ್ರಸಂಗವೂ ರಾಕ್ಷಸರ ಅಥವಾ ಅತಿಮಾನುಷರ ಕಥೆಗೆ ಮತ್ತೊಂದು ಮಾದರಿಯಾಗಿದೆ. ಭೀಮನ ಮಗನಾದರೂ ತಾಯಿ ರಕ್ಕಸಿಯಾದುದರಿಂದ ರಾಕ್ಷಸನೆಂದೇ ಪ್ರತೀತಿಗೊಂಡ ಘಟೋತ್ಕಚನ ಬಾಹ್ಯ ರೂಪು, ಆಚರಣೆ, ನಡವಳಿಕೆಗಳೆಲ್ಲವೂ ಉಗ್ರವಾಗಿಯೇ ಇದ್ದವು. ದ್ರೋಣರು ಹೂಡಿದ ಇರುಳು ಕಾಳಗದಲ್ಲಿ ಪಾಂಡವರ ಪರವಾಗಿ ಹೋರಾಡಲು ಬಂದ ಘಟೋತ್ಕಚ "ಬೆಳೆದವೋ ಕೈಕಾಲು ನೀಲಾಚಲಕೆ ಹೇಳೆನೆ ಮುಗಿಲ ತುಡುಕುವ ತಲೆಯ ತೋಕೆಯ ತೋರಹತ್ತ" ನಾಗಿ ಭಯಂಕರ ರೂಪಿಯಾಗಿ, ಅತಿಮಾನುಷ ವ್ಯಕ್ತಿಯಾಗಿ ಕಾಣುತ್ತಿದ್ದ. ಯುದ್ಧದಲ್ಲಿ 'ರಥಚಯವ ನುಗ್ಗೊತ್ತಿ, ಸಾರಥಿಗಳ ಸೀಳಿ, ಸುಮಹಾರಥರ ಬಿಂಕದ ಬಿಗುಹನ್ನು ಮುರಿದು, ಕೆಲವರನ್ನು ನುಂಗಿ, ಕೆಲವರನ್ನು ಒದ್ದುಕೊಂಡು, ಕೆಲವರನ್ನು ಧನುವಿನಿಂದಲೂ, ಗದೆಯಿಂದಲೂ ಕೊಂದು, ಬಲಜಲಧಿಯನ್ನು ಕಲಕಿ, ಹೋರಾಡುತ್ತಾನೆ. ಮಾಯಾವೇಷದಿಂದ ಹುಲಿಯಾಗಿ, ಸಿಂಹವಾಗಿ, ಭೈರವನಾಗಿ ಶತ್ರುಗಳನ್ನು ಬಾಯಲ್ಲಿ ಅಡಸಿ, ಬಿರುಗಾಳಿಯಾಗಿ ಬಿರುದರನ್ನು ಬೀಳಹೊಯ್ದು, ಕಾಳುಗಿಚ್ಚಾಗಿ ವರೂಥಗಳ ಗುಂಪನ್ನು ಉರಿಸಿ, ಫಣಿಯಾಗಿ ತುಡುಕಿ, ಸಿಡಿಲಾಗಿ ಎರಗಿ, ಮಿಂಚಾಗಿ ಮಳೆ ಸುರಿಸಿ, ಆತಪತ್ರ ತನುತ್ರ ಸೀಸಕವನ್ನು ಹೊಗೆಯಾಗಿ ಕವಿದು, ಬೊಬ್ಬಿರಿದು ವಿವಿಧ ರೂಪಗಳನ್ನು ತಾಳಿ ಶತ್ರುವಿನೊಂದಿಗೆ ಮಾಯಾಯುದ್ಧವನ್ನು ಮಾಡುತ್ತಾನೆ. ಹೀಗೆ ರಾಕ್ಷಸರು ಮಾಯಾಯುದ್ಧ ಮಾಡುವುದನ್ನು ಅನೇಕ ರಾಕ್ಷಸ ಕಥೆಗಳಲ್ಲಿ ಕಾಣುತ್ತೇವೆ. ರಾಕ್ಷಸ ಕಥೆಗಳು ಜಾನಪದ ಹಾಗೂ ಶಿಷ್ಟ ಕಾವ್ಯಗಳೆರಡರಲ್ಲೂ ಬರುತ್ತವಾದರೂ, ಅವುಗಳ ಹಿನ್ನೆಲೆ ಮಾತ್ರ ಭಿನ್ನಭಿನ್ನವಾಗಿರುತ್ತವೆ. ರಾಮಾಯಣ, ಭಾರತ, ಭಾಗವತವೇ ಮೊದಲಾದ ಧಾರ್ಮಿಕ ಹಾಗೂ ಶಿಷ್ಟಕಾವ್ಯಗಳಲ್ಲಿ ರಾಕ್ಷಸ ಕಥೆಗಳು ಕಂಡುಬಂದರೆ, ಲೌಕಿಕವಾಗಿ ರಾಜಕುಮಾರನೊ ಅಥವಾ ಸಾಮಾನ್ಯವ್ಯಕ್ತಿಯೋ ಸಾಹಸಮಾಡಿ ಗೆಲ್ಲುವ ಅದ್ಭುತ ಘಟನೆಗಳುಳ್ಳ ಅಜ್ಜಿ ಕಥೆಗಳಲ್ಲಿ ಹೆಚ್ಚಾಗಿ ರಾಕ್ಷಸ ಚಿತ್ರಣವು ಕಂಡುಬರುತ್ತವೆ. ಈ ಕಾರಣದಿಂದಲೇ ವ್ಯಾಸಭಾರತದಲ್ಲಿ ಬರುವ ರಾಕ್ಷಸ ಚಿತ್ರಣಗಳಿಗೂ ಜನಪದ ಮಹಾಭಾರತದಲ್ಲಿ ಕಂಡುಬರುವುದಕ್ಕೂ ವ್ಯತ್ಯಾಸಗಳು ಎದ್ದುಕಾಣುತ್ತವೆ. ಮಹಾಭಾರತದ ಉಳಿದ ಕಥಾಭಾಗಗಳಲ್ಲಿ ಭೀಮ ಮಾನವನಂತೆ ಹೋರಾಡಿ ರಾಕ್ಷಸರ ವಿರುದ್ಧ ಗೆಲುವನ್ನು ಸಾಧಿಸಿದರೆ ಇಲ್ಲಿ

ಘಟೋತ್ಕಚ ರಾಕ್ಷಸನಾಗಿ ಹೋರಾಡಿ ಮಾನವರೊಂದಿಗೆ ಸಾಹಸತೋರಿಸಿ ಮೆರೆಯುತ್ತಾನೆ. ಇಲ್ಲಿ ಸಾಹಸಕ್ಕಿಂತ ಮಾಯಾಯುದ್ಧ ಎದ್ದುಕಾಣುತ್ತದೆ. ರಾಕ್ಷಸರೊಡನೆ ಭೀಮ ಹೋರಾಡುವಾಗ ಸಾಹಸಪ್ರದರ್ಶನ ಮುಖ್ಯವಾಗಿ ಕಂಡುಬರುತ್ತದೆ.

## ಸಾಹಸ ಕಥೆಗಳು

ಸೌಗಂಧಿಕಾ ಪುಷ್ಪ ಪ್ರಸಂಗವು ಒಂದು ಅದ್ಭುತ ರಮ್ಯ ಜಗತ್ತನ್ನು ನಮ್ಮೆದುರು ತೆರೆದಿಡುತ್ತದೆ. ದ್ರೌಪದಿ ಬಯಸಿದ ಸೌಗಂಧಿಕಾ ಪುಷ್ಪವನ್ನು ತರಲು ಹೊರಟ ಭೀಮನು ಕಾಡುಮೃಗಗಳು ಯೋಜನದೂರ ಓಡಿಹೋಗುವಂತೆ ಆರ್ಭಟಿಸುತ್ತಾ, ಬಾಳೆಯ ವನ ತುಳಿದ ದಿಗ್ಗಜದಂತೆ ಅಟ್ಟಹಾಸಗೈಯುತ್ತಾ ಹೊರಡುತ್ತಾನೆ. ಅವನ ಅಟ್ಟಹಾಸವನ್ನು ಕೇಳಿ ನಿದ್ರೆಯಿಂದ ತಿಳಿದೆದ್ದು (ಆಂಜನೇಯನು) ಮುದಿಕಪಿಯು ಭೀಮನನ್ನು ಪರೀಕ್ಷಿಸಲು, ತನ್ನ ಉದ್ದವಾದ ಬಾಲವನ್ನು ಅವನ ದಾರಿಗೆ ಅಡ್ಡವಾಗಿ ಹರಡಿಕೊಂಡು ಕುಳಿತುಕೊಳ್ಳುತ್ತದೆ. ತನ್ನ ದಾರಿಗೆ ಅಡ್ಡವಾಗಿದ್ದ ಬಾಲವನ್ನು ಕಂಡು ಭೀಮನು ವಿಸ್ಮಯದಿಂದ ಗದೆಯ ತುದಿಯಿಂದ ನೂಕಿ ಅತ್ತಸರಿಸಲು ಪ್ರಯತ್ನಿಸಿ ಸೋತು, ಕೊನೆಗೆ 'ನಾ ಬಲ್ಲಿದನು ಬಾಲದ ಕದವ ತೆಗೆಬಟ್ಟೆಯಲಿ' ಎಂದು ಗದರಿಸಿಕೊಳ್ಳುತ್ತಾನೆ. ಆಗ ಆ ಮುದಿಕಪಿಯು 'ನೀವು ಬಲ್ಲಿದರು ಇದಕೆ ಸಂಶಯವಿಲ್ಲ' ಆದರೆ ಮುದಿಯಾದ ತನಗೆ ಬಾಲವನ್ನು ಎತ್ತಲು ಆಗುತ್ತಿಲ್ಲ. ಆದ್ದರಿಂದ ಆ ಬಾಲವನ್ನು ನೀನೇ ಅತ್ತಸರಿಸಿಹೋಗು ಎನ್ನಲು ಭೀಮನು ತಾತ್ಸಾರದಿಂದ ಆ ಬಾಲವನ್ನು ಎತ್ತಲು ಹೋಗಿ ಸೋತು, ಕೊನೆಗೆ ತನ್ನೆಲ್ಲ ಶಕ್ತಿಯನ್ನು ಕೇಂದ್ರೀಕರಿಸಿ ಮತ್ತೊಮ್ಮೆ ಪ್ರಯತ್ನಿಸಿ ಸೋಲುತ್ತಾನೆ. ಆಗ ಅವನಿಗೆ ಇದು ಸಾಮಾನ್ಯ ಕಪಿಯಲ್ಲ, ಅಪಾರ ಸತ್ವಶಾಲಿಯಾದ ಹನುಮನೇ ಇರಬೇಕೆಂಬ ಅರಿವಾಗಿ, ಅವನಿಗೆ ಶರಣಾಗಿ ತಾನು ಯಾರು, ಇಲ್ಲಿಗೆ ಏಕೆ ಬಂದೆ ಎಂಬ ವೃತ್ತಾಂತವೆಲ್ಲವನ್ನು ತಿಳಿಸಿ, ತನ್ನ ಕಾರ್ಯಸಾಧನೆ ಯಶಸ್ವಿಗಾಗಿ ಅವನನ್ನು ಪ್ರಾರ್ಥಿಸುತ್ತಾನೆ. ಆಗ ಆ ಮುದಿ ಕಪಿಯು ತನ್ನ ನಿಜರೂಪದಲ್ಲಿ (ಆಂಜನೇಯ) ಪ್ರತ್ಯಕ್ಷನಾಗಿ, ಭೀಮನಿಗೆ ಆ ಸೌಗಂಧಿಕಾಪುಷ್ಪದ ವಿವರಗಳೆಲ್ಲವನ್ನು ತಿಳಿಸಿ, ಅದನ್ನು ಪಡೆಯುವಲ್ಲಿ ಯಶಸ್ವಿಯಾಗುವನೆಂದು ತಿಳಿಸುತ್ತಾನೆ. ಅನಂತರ ಅಲ್ಲಿಂದ ಮುಂದೆ ಸಾಗಿದ ಭೀಮ ಹಲವಾರು ವಿಘ್ನಗಳ ಮಧ್ಯೆಯೂ ಗಂಧರ್ವಲೋಕದಲ್ಲಿದ್ದ, ಸೌಗಂಧಿಕಾಪುಷ್ಪವನ್ನು ಯಶಸ್ವಿಯಾಗಿ ತರುತ್ತಾನೆ.

ಈ ಸೌಗಂಧಿಕಾಪುಷ್ಪ ಪ್ರಸಂಗವು ಬೇರೆಲೋಕಕ್ಕೆ ಸಾಹಸ ಯಾತ್ರೆಯನ್ನು ಕೈಗೊಂಡು ಸಪ್ತಸಮುದ್ರವನ್ನು ದಾಟಿ, ಅಪಾರ ವಿಘ್ನಗಳ ನಡುವೆಯೂ ರಾಜಕುಮಾರಿ ಬಯಸಿದ ಅಮೂಲ್ಯರತ್ನವನ್ನು ತಂದುಕೊಡುವ ರಾಜಕುಮಾರನ ಕತೆಯನ್ನು ಹೋಲುತ್ತದೆ. ಮಹಾಸಾಹಸಿ ಆದರೆ ಉದ್ಧಟನಾದ ಭೀಮನ ಶಕ್ತಿಸಾಹಸವನ್ನು ಕಪಿಯು ಪರೀಕ್ಷಿಸುವುದು, ಅನಂತರ ಆ ಕಪಿಯೇ ಅವನ ಕಾರ್ಯದಲ್ಲಿ ನೆರವಾಗುವುದು, ಪುಷ್ಪವನ್ನು ಪಡೆಯುವಲ್ಲಿ ಎದುರಿಸಬೇಕಾದ ವಿಘ್ನಗಳು - ಇವೆಲ್ಲವೂ ಜಾನಪದ ಕತೆಗಳಲ್ಲಿ ಬರುವ ಜನಪ್ರಿಯ ಮಾದರಿಯ ಆಶಯವನ್ನೇ ಹೋಲುತ್ತವೆ. ಈ ಬಗೆಯ ಕಥೆಗಳಲ್ಲಿ ನಾಯಕ ಅಸಾಧ್ಯ ಕಾರ್ಯಗಳನ್ನು ಸಾಧಿಸಲು ಸವಾಲುಗಳನ್ನು ಸ್ವೀಕರಿಸುತ್ತಾನೆ. ಅನೇಕ ಬವಣೆಗಳಿಗೊಳಗಾದರೂ ದೈವದ ಇಲ್ಲವೇ ಮಿತ್ರರ ನೆರವಿನಿಂದ ಅತಿಮಾನುಷ ಶಕ್ತಿಗಳನ್ನು ಗೆದ್ದು ಜಯಶಾಲಿಯಾಗುತ್ತಾನೆ. ನಮ್ಮಲ್ಲಿ ದೊರೆಯುವ ಅನೇಕ ಜಾನಪದ ಕಥೆಗಳು ಈ ವರ್ಗಕ್ಕೆ ಸೇರಿವೆ.

ಸೌಗಂಧಿಕಾ ಪುಷ್ಪದ ಪ್ರಾರಂಭದ ವರ್ಣನೆ ಪ್ರಾಣಿಕಥೆಗಳ ವರ್ಗಕ್ಕೆ ಸೇರುತ್ತದೆ ಎನ್ನಬಹುದು. ಇಲ್ಲಿ ಭೀಮನನ್ನು ಅವನ ತಂದೆ ಮಾರುತಿ ಮುದಿಕಪಿಯ ರೂಪದಲ್ಲಿ ಸತ್ವ ಪರೀಕ್ಷೆ ಮಾಡುವ ಪ್ರಸಂಗ ಬರುತ್ತದೆ. ಆದರೆ ಮುಂದಿನ ಭಾಗದ ಕಥೆ ಸಾಹಸದ ಕಥೆಗಳ ವರ್ಗಕ್ಕೆ ಸೇರುತ್ತದೆ. ಭೀಮ ಗಂಧರ್ವ ಲೋಕವನ್ನು ಪ್ರವೇಶಿಸುವುದೂ, ಅಲ್ಲಿ ಯಕ್ಷ ಗಂಧರ್ವ ಕಿನ್ನರರೇ ಮೊದಲಾದವರಿಂದ ಅಡ್ಡಿಗಳುಂಟಾಗುವುದು, ಅವನ್ನು ಎದುರಿಸಿ ಜಯಶಾಲಿಯಾಗುವುದು, ರಾಜಕುಮಾರರ ಕಿನ್ನರರ ಕಥೆಗಳನ್ನು ಹೋಲುತ್ತವೆ.

ಒಟ್ಟಿನಲ್ಲಿ ಅತಿಮಾನುಷ ಶಕ್ತಿಗಳನ್ನು ಮುಖಾಮುಖಿಯಾಗಿ ಎದುರಿಸಿ, ತಾನು ಕೈಗೊಂಡ ಕಾರ್ಯವನ್ನು ಪೂರೈಸುವ ಆಶಯವುಳ್ಳ ಈ ಪ್ರಸಂಗವು ಸಾಹಸಕಥೆಯ ಗುಂಪಿಗೆ ಸೇರುತ್ತದೆ ಎನ್ನಬಹುದು.

## ಪ್ರಾಣಿ ಕಥೆಗಳು

### ಅಜಗರ ವೃತ್ತಾಂತ

ಅಜಗರ ವೃತ್ತಾಂತ ಮತ್ತು ಯಕ್ಷ ಪ್ರಸಂಗಗಳು ಪ್ರಾಣಿಕಥೆಗಳಿಗೆ ಉತ್ತಮ ನಿದರ್ಶನಗಳಾಗಿವೆ. ಅನೇಕ ಜಾನಪದ ಕಥೆಗಳು ಧರ್ಮದ ವಿಚಾರಗಳನ್ನು ತಿಳಿಸಲು ದೃಷ್ಟಾಂತರೂಪವಾಗಿ ಬರುತ್ತವೆ. ಆ ಕಥೆಗಳಲ್ಲಿ ಬರುವ ಶಿಷ್ಟಲಕ್ಷಣಗಳನ್ನು ತೆಗೆದು

ಹಾಕಿದರೆ ಜಾನಪದದ ಸ್ವರೂಪ ವ್ಯಕ್ತವಾಗಲು ಸಾಧ್ಯ. ಪ್ರಾಣಿಕಥೆಗಳು ನೀತಿ ಪ್ರತಿಪಾದನೆಗಾಗಿ ರಚಿತವಾದುದನ್ನು ಪಂಚತಂತ್ರ, ಈಸೋಪನ ನೀತಿ ಕಥೆಗಳಲ್ಲಿ ಕಾಣುತ್ತೇವೆ. ಲೌಕಿಕ ಕತೆಗಳಲ್ಲಿ ನೀತಿಗಷ್ಟೇ ಅಲ್ಲದೆ ಸದ್ಗುಣ, ದುರ್ಗುಣಗಳ ನಿದರ್ಶನಕ್ಕಾಗಿಯೂ ಪ್ರಾಣಿಕಥೆಗಳು ರಚಿತವಾಗಿವೆ. ಮುಂಗುಸಿ ಹಾವನ್ನು ಕೊಂದು ಮಗುವನ್ನು ಬದುಕಿಸಿದ ಕಥೆಯಲ್ಲಿ ಪ್ರಾಣಿಯ ಸದ್ಗುಣವನ್ನು ಕಂಡರೆ, ಕಾಗೆ-ನರಿಯ ಕಥೆಯಲ್ಲಿ ಮೋಸ ಮಾಡುವ ನರಿಯ ದುರ್ಗುಣವನ್ನು ಕಾಣಬಹುದು.

ಪೌರಾಣಿಕ ಕತೆಗಳಲ್ಲಿ ಧರ್ಮದ ಲಕ್ಷಣಗಳ ಪ್ರತಿಪಾದನೆಗೆ ಪ್ರಾಣಿಕಥೆಗಳು ಬರುತ್ತವೆ. ಶಕ್ತಿ ಪ್ರದರ್ಶನದ ಜತೆಗೆ ಶಾಪ ವಿಮೋಚನೆಗಾಗಿ ಧರ್ಮಿಷ್ಠರಿಗೆ ಪ್ರಾಣಿಗಳು ತೊಂದರೆ ಕೊಡುವುದನ್ನು ನೋಡುತ್ತೇವೆ. ಇಲ್ಲಿ ಮುಖ್ಯ ಆಶಯ ಶಾಪವಿಮೋಚನೆಯೇ ಹೊರತು ಇತರರಿಗೆ ತೊಂದರೆ ಕೊಡುವುದಲ್ಲ. ಇತರರಿಗೆ ತೊಂದರೆ ಕೊಡುವುದೂ ಶಾಪದ ಅಂಗವೇ ಆಗಿರುತ್ತದೆ.

ಪಾಂಡವರು ವನವಾಸದಲ್ಲಿರುವಾಗ ಒಮ್ಮೆ ಬೇಟೆಗೆ ಹೋದ ಭೀಮ ಕಾಡುಹಂದಿಯೊಂದನ್ನು ಬೆನ್ನಟ್ಟಿ, ತನ್ನೊಂದಿಗಿದ್ದ ಕಿರಾತ ಸಮೂಹವನ್ನು ಬಿಟ್ಟು, ಕಾಡಿನೊಳಕ್ಕೆ ನುಸುಳುತ್ತಾನೆ. ಭೀಮನ ಅಬ್ಬರದ ಬೊಬ್ಬೆಗೆ ಹೆದರಿ ಕಂಗಾಲಾದ ಹಂದಿ ಗಿರಿಗಹನ ಗಹ್ವರವನ್ನು ಸೇರುತ್ತದೆ. ಮುಡುಹುಸೋಕಲು ಉಡಿದು ಬಿದ್ದ ಹೆಮ್ಮರದ ರಭಸ, ಭೀಮನ ಅಬ್ಬರದ ಬೊಬ್ಬಾಟಗಳಿಂದ ಬ್ರಹ್ಮಾಂಡವೇ ಜಡಿದು ಬಿದ್ದಿತೋ ಎಂಬ ಕಳಕಳ ರವದಿಂದ ಅಲ್ಲಿಯೇ ಮರದಡಿಯಲ್ಲಿದ್ದ ಮಹೋರಗನ ನಿದ್ರೆ ದೂರವಾಗುತ್ತದೆ. ತರಗೆಲೆಯ ಹೊದರಿನಲ್ಲಿದ್ದ ಆ ಅಜಗರವನ್ನು ಕಾಣದೆ ಅದರ ಮೇಲೆ ಭೀಮನು ಹಾಯಲು, ಅವನ ಹೆದ್ದೊಡೆಗಳು ಉರಗನ ತೆಕ್ಕೆಯಲ್ಲಿ ಡೆಂಢಣಿಸಿ, ಅವನ ಪೇರುರವನ್ನು ಆ ಫಣಿಪತಿಯು ಹಬ್ಬಿ ಬಿಗಿಯುತ್ತದೆ. ಭೀಮನು ಗದೆಯಿಂದ ಹೊಡೆದು ಬಂಧನದಿಂದ ಪಾರಾಗಲು ಪ್ರಯತ್ನಿಸಿದಷ್ಟೂ ಆ ಅಜಗರವು ಬಂಧದ ಬಿಗಿಯನ್ನು ಹೆಚ್ಚಿಸಲು "ಗಿಡಗನೆರಕೆಯಪುಟದ ಗಿಳಿಯಂದದಲಿ ಭೀಮನು ಗಿರಿಗಿರಿಗುಟ್ಟುತ್ತಾನೆ." ತನ್ನ ಭುಜ ಬಲ ಪರಾಕ್ರಮವು ಕುಂದಿಹೋಯಿತೇ ಎಂದು ಭೀಮ ಕಾತರಿಸಿ ಕಳವಳಿಸುತ್ತಾನೆ. ಕೊನೆಗೆ, ಧರ್ಮಜನಿಗೆ ಉಂಟಾದ ದುಶ್ಶಕುನಗಳಿಂದ ಭೀಮನಿಗೆ ಏನೋ ಕಂಟಕವೊದಗಿರಬಹುದೆಂದು ತಿಳಿದು, ಅವನನ್ನು ಹುಡುಕುತ್ತಾ ಬಂದು, ಅಜಗರನ ಬಿಗಿಹಿಡಿತದಲ್ಲಿ ಸಿಕ್ಕಿ ನರಳುತ್ತಿರುವ ಭೀಮನನ್ನು ಕಾಣುತ್ತಾನೆ. ಅತುಳ ಪರಾಕ್ರಮಿ ಭೀಮನನ್ನು ಅಜಗರನ ಹಿಡಿತದಿಂದ

ಬಿಡಿಸಲು, ಆ ಫಣಿಪತಿ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ನೀಡುತ್ತಾನೆ. ಧರ್ಮಜನ ಉತ್ತರದಿಂದ ತೃಪ್ತಿಗೊಂಡ ಅಜಗರವು ಹಿಂದಿನ ಜನ್ಮದಲ್ಲಿ ತಾನು ನಹುಷ ಚಕ್ರವರ್ತಿಯಾಗಿದ್ದು ನೂರು ಯಾಗಗಳನ್ನು ಮಾಡಿ ದೇವಲೋಕ ಸೇರಿದ್ದನ್ನೂ, ಅಲ್ಲಿ ಅಪ್ಸರೆಯರಿದ್ದಾಗ್ಯೂ, 'ಮಿಂಸಲಿನ ಮಾನಿನಿ' ಯಾದ ಶಚಿಯನ್ನು ಬಯಸಿದ ಕಾರಣದಿಂದ, ಸಪ್ತರ್ಷಿಗಳ ಶಾಪದಿಂದ ತಾನು ಈ ಸರ್ಪಗತಿ ಹೊಂದಿದ್ದನ್ನು ತಿಳಿಸುತ್ತದೆ. ಅಲ್ಲದೆ ಧರ್ಮಜನ ವಾಗ್ದರ್ಪಣದಿಂದ ತನಗೆ ಈ ಸರ್ಪಸ್ಥಿತಿಯಿಂದ ವಿಮೋಚನೆ ದೊರೆಯುವುದೆಂಬ ಋಷಿಗಳ ಹೇಳಿಕೆಯಿಂದ ತಾನು ಭೀಮನನ್ನು ಹಿಂಸಿಸಬೇಕಾಯಿತೆಂದು ತಿಳಿಸುತ್ತಿದ್ದಂತೆಯೇ ಅದರ ಅಜಗರಸ್ಥಿತಿ ಕಳೆದು ಮತ್ತೆ ಪೂರ್ವಸ್ಥಿತಿಯನ್ನು ಪಡೆದು ಸ್ವರ್ಗಕ್ಕೆ ತೆರಳುತ್ತಾನೆ.

ಈ ಅಜಗರ ವೃತ್ತಾಂತದಲ್ಲಿ ಅತುಳ ಪರಾಕ್ರಮಿ ಎಂಬ ಭೀಮನ ಹಮ್ಮನ್ನು ಇಳಿಸುವುದೂ, 'ಮಿಂಸಲಿನ ಮಾನಿನಿಯರ ಬಯಸುವುದು ಅಪರಾಧ' ಎಂಬ ಆಶಯಗಳು ಇಲ್ಲಿವೆ, ಇಲ್ಲಿ ಅಜಗರವೇ ಪ್ರಮುಖ ಪಾತ್ರ ವಹಿಸುವುದರಿಂದ ಇದು ಪ್ರಾಣಿ ಕಥೆಯಲ್ಲಿ ಸೇರುತ್ತದೆ.

## ಯಕ್ಷ ಪ್ರಶ್ನೆ

ಭಕ್ತರ ಪರೀಕ್ಷೆಗಾಗಿ ಪಶುಪಕ್ಷಿ, ಪ್ರಾಣಿರೂಪಗಳನ್ನು ಧರಿಸುವುದು, ಪೌರಾಣಿಕ ಕಾವ್ಯಗಳಲ್ಲಿ ಸಾಮಾನ್ಯ ಸಂಗತಿ. ಗಿಡುಗನ ವೇಷದಲ್ಲಿ ಇಂದ್ರ ಬಂದು ಶಿಬಿ ಚಕ್ರವರ್ತಿಯನ್ನು ಪರೀಕ್ಷಿಸಿ ಅವನ ದಾನಗುಣ ಮೆಚ್ಚಿ ಪ್ರತ್ಯಕ್ಷನಾದ ಕಥೆ ಎಲ್ಲರಿಗೂ ತಿಳಿದದ್ದೇ. ಕನಕದಾಸರ ಜೀವನ ಚರಿತ್ರೆಯಲ್ಲಿ, ದೇವರು ಹಾವಾಗಿ ನಾಯಾಗಿ ಬರುವ ಪ್ರಸಂಗಗಳನ್ನು ಈ ಸಂದರ್ಭದಲ್ಲಿ ಗಮನಿಸಬಹುದು. ಯಕ್ಷಪ್ರಶ್ನೆಯೂ ಸಹ ಇದೇ ಗುಂಪಿಗೆ ಸೇರಿದ ಜಾನಪದ ಆಶಯದಿಂದ ಕೂಡಿದ ಕಥೆಯಾಗಿದೆ.

ಯಕ್ಷಪ್ರಶ್ನೆಯ ಪ್ರಸಂಗದಲ್ಲಿ ಯಮಧರ್ಮರಾಯನು ಬಕಪಕ್ಷಿಯ ವೇಷದಲ್ಲಿ ಬಂದು, ಬಾಯಾರಿ, ನೀರಿಗಾಗಿ ಕೊಳದ ಬಳಿ ಬಂದ ಪಾಂಡವರು ನಾಲ್ವರನ್ನು ಪ್ರಶ್ನೆಕೇಳಿ, ಸರಿಯಾದ ಉತ್ತರ ಕೊಡಲಾರದ ಅವರು ಮರಣವನ್ನಪ್ಪುವಂತೆ ಮಾಡುತ್ತಾನೆ. ಕೊನೆಗೆ ತಮ್ಮಂದಿರನ್ನು ಹುಡುಕಿಕೊಂಡು ಬಂದ ಧರ್ಮರಾಜನು ಆ ಬಕನು ಕೇಳಿದ ಪ್ರಶ್ನೆಗಳಿಗೆಲ್ಲಾ ಸಮಂಜಸ ಉತ್ತರ ನೀಡಿ, ತಮ್ಮಂದಿರನ್ನು ಬದುಕಿಸಿಕೊಳ್ಳುತ್ತಾನೆ. ಧರ್ಮಜನ ನ್ಯಾಯ ಪಕ್ಷಪಾತ ಉತ್ತರಕ್ಕೆ ಮೆಚ್ಚಿದ ಯಮನು

ಮುಂದೆ ಅವರು ಕೈಗೊಳ್ಳಬೇಕಾಗಿರುವ ಅಜ್ಞಾತವಾಸಕ್ಕೆ ಕೆಲವು ಸಲಹೆ ಹಾಗೂ ನೈತಿಕ ಧೈರ್ಯವನ್ನು ನೀಡಿ ಮಾರ್ಗದರ್ಶನ ಮಾಡುತ್ತಾನೆ. ಈ ಕಥೆ ಗ್ರೀಕ್ ಜನಪದದಲ್ಲಿ ಬರುವ ಸ್ಪಿಂಕ್ಸ್ ಎಂಬ ಪಕ್ಷಿ ಕಥೆಯನ್ನು ಹೋಲುವಂತಿದೆ.

ಯಕ್ಷಪ್ರಶ್ನೆ ಇನ್ನೊಂದು ದೃಷ್ಟಿಯಿಂದ ಒಗಟುಕಥೆಗಳ ಗುಂಪಿಗೂ ಸೇರುತ್ತದೆ. ಯಮನ ಪ್ರಶ್ನೆಗಳು ಒಗಟಿನಂತಿವೆ. ಧರ್ಮಜ ಮಾತ್ರ ಉತ್ತರಿಸಲು ಶಕ್ತನಾಗುತ್ತಾನೆ. ಧರ್ಮಜನ ದಿವ್ಯಜ್ಞಾನ ಪರೀಕ್ಷೆಯೇ ಇಲ್ಲಿ ಮುಖ್ಯ ಆಶಯ.

ಈ ಪ್ರಸಂಗದಲ್ಲಿ ಬಕಪಕ್ಷಿಯೇ ಕಥನ ಕಾರಣವಾಗಿರುವುದರಿಂದ, ಯಕ್ಷಪ್ರಶ್ನೆಯ ಪ್ರಸಂಗವು 'ಪ್ರಾಣಿಕಥೆ'ಗಳ ಜನಪದ ಆಶಯಗಳಿಂದ ಕೂಡಿದ ಕಥೆಯೆಂದು ಹೇಳಬಹುದು.

**ಪಾಶುಪತಾಸ್ತ್ರ ಪ್ರಸಂಗ**

ವೇದವ್ಯಾಸರ ಆದೇಶದಂತೆ ಅರ್ಜುನನು ಪಾಶುಪತಾಸ್ತ್ರಕ್ಕಾಗಿ ತಪಸ್ಸು ಮಾಡುತ್ತಿದ್ದಾಗ, ಶಿವನು ಅವನನ್ನು ಪರೀಕ್ಷಿಸಲು ಕಿರಾತರೂಪದಲ್ಲಿ ಬರುತ್ತಾನೆ. ಶಿವನು ತನ್ನ ಭೂತಗಣಗಳೊಡನೆ ಬೇಟೆಗೆ ಅರ್ಜುನನ ಬಳಿಗೆ ಹೊರಟ ರೀತಿ, ಹಂದಿಯನ್ನು ಬೇಟೆಯಾಡಿದ ವಿಧಾನಗಳಲ್ಲಿ ಗ್ರಾಮೀಣ ಬದುಕಿನಲ್ಲಿ ಕಂಡುಬರುವ ವೇಷ ಭೂಷಣಗಳ ಬೇಟೆಯ ವಿಧಾನಗಳ ವರ್ಣನೆ ಸೊಗಸಾಗಿವೆ. ಬೇಟೆಗಾರರ ಸಾಧನಗಳಾದ ಹದಬಿಲ್ಲುಗಳು, ಬಡಿಕೋಲುಗಳು, ಸಂಕೋಲೆಹಾಕಿ ಹಿಡಿದ ನಾಯ್ಗಳು, ಕೋಲು ಬಲೆ, ಸಿಡಿಬಲೆ, ಮಿಡಿಬಲೆ, ಹೆಬ್ಬಲೆ, ಬೆಳ್ಳಾರವಲೆ ಮೊದಲಾದ ಬಗೆಬಗೆಯ ಬಲೆಗಳು, ಕಾಲಕಣ್ಣಿಗಳು, ಮಯಣದ ದಂಟು, ಮೇಲು ಕೊಂಬುಗಳೂ ಇವೇ ಮೊದಲಾದ ಬೇಟೆಯ ಸಾಧನಗಳನ್ನು ತೆಗೆದುಕೊಂಡ ಬೇಟೆಗಾರರು ಶಿವನೊಂದಿಗೆ ಹೊರಟರು ಎಂದು ಹೇಳುವಾಗ ಕಾಡಿನಲ್ಲಿ ಹಳ್ಳಿಗರು ದುಷ್ಟ ಮೃಗಗಳನ್ನು ಬೇಟೆಯಾಡಲು ಬಳಸುವ ಸಾಧನಗಳನ್ನು ಕವಿ ಇಲ್ಲಿ ಹೇಳುತ್ತಾನೆ. ಇವುಗಳಲ್ಲಿ ಎಷ್ಟೋ ಸಾಧನಗಳನ್ನು ಆದಿವಾಸಿಗಳ ಪ್ರಾಣಿಗಳ ಬೇಟೆಯಲ್ಲಿ ಕಾಣಬಹುದಾಗಿದೆ. ಉದಾ : ಮಯಣದಂಟು ಹಕ್ಕಿಗಳನ್ನು ಹಿಡಿಯಲು ಬಳಸುವ ಒಂದು ಬಗೆಯ ಬಲೆ. ಕುಮಾರವ್ಯಾಸನು ಪಾರಿಭಾಷಿಕ ಪದಗಳನ್ನು ಬಳಸುವುದರಲ್ಲಿ ಎತ್ತಿದ ಕೈ. ಹಂದಿ ಬೇಟೆಯ ಈ ಸಂದರ್ಭದಲ್ಲಿ ನೆಲದ ಮೇಲೆ ಕಾಡಿನಲ್ಲಿ ಬಳಸುವ ಬೇಟೆಯ ಸಾಧನಗಳನ್ನೂ ಹೇಳಿದಂತೆಯೇ, ನೀರಿನಲ್ಲಿರುವ

ಮೀನುಗಳನ್ನು ಹಿಡಿಯುವ ಬಗೆಬಗೆಯ ಜಲಪ್ರಾಣಿಗಳ (ಜಲಚರಗಳ) ಸಂಕೋಲೆಗಳ ಸಾಧನಗಳನ್ನು ಉಲ್ಲೇಖಿಸುತ್ತಾನೆ. ಮತ್ತೆ ಇವುಗಳನ್ನು ರೂಪಕದ ಮೂಲಕ ಹೇಳುವುದು, ಅವನ ವೈಶಿಷ್ಟ್ಯಗಳಲ್ಲಿ ಒಂದು. ಇದರಿಂದ ವಸ್ತುಗಳು ಜಾನಪದೀಯವಾದರೂ ನಿರೂಪಣೆ ಶಿಷ್ಟವಾಗುವುದನ್ನು ಕಾಣುತ್ತೇವೆ. ಉದಾ 'ಶಿವನನ್ನು ಬಳಸಿದ ಶಬರರನ್ನು ವರ್ಣಿಸುವಾಗ ಶ್ರುತಿಗಳೇ ಗಟ್ಟಿಯಾಗಿ ಕೂಗಿ ಊಳಿಡುವ ಸಾಧನ, ತರ್ಕಶಾಸ್ತ್ರಗಳ ಗತಿಯೇ ಮೃಗಗಳನ್ನು ತರುಬಿ ತರುವ ಸೋಹು, ವಿವಿಧ ಜಪ ಯಜ್ಞಾದಿಗಳೇ ಬಲೆಗಳು, ವ್ರತಗಳೇ ಯಂತ್ರಗಳು ಮತ್ತು ಕಣ್ಣಿಗಳು ಸತ್ಕೃತಿಗಳೇ ಕಲ್ಲುಗುಂಡುಗಳು, ಯೋಗಸ್ಥಿತಿಯೇ ಬಾಣಗಳು ಇತ್ಯಾದಿ ವಿವರಗಳನ್ನೊಳಗೊಂಡು 'ಭವವೆಂಬ ಮೃಗವನ್ನು ಸೀಳಿ ಕೆಡಹುವ ಸುಭಟರು' ಶಿವನ ಅಪ್ಪಣೆಯಂತೆ ಮುಂದೆ ಸಾಗುತ್ತಾರೆ. ಇಲ್ಲಿ ಯೋಗಿಗಳ ವರ್ಣನಾಂಶಗಳು ಶಿಷ್ಟವರ್ಗಕ್ಕೆ ಸೇರಿದರೆ, ಬೇಟೆಗಾರರ ಸಾಧನಗಳು ಜಾನಪದವಾಗಿದ್ದು, ಎರಡನ್ನೂ ಕುಮಾರವ್ಯಾಸನು ರೂಪಕದಲ್ಲಿ ಮೇಳೈಸಿದ್ದಾನೆ. ಇನ್ನು ಹಂದಿಯನ್ನೂ ಬಾಣಬಿಟ್ಟು ಕೊಂದ ರೀತಿಯಂತೂ ಇಂದೂ ಕಾಣುವ ಕಾಡು ಹಂದಿ ಬೇಟೆಗಿಂತ ಭಿನ್ನವಾದ ದೃಶ್ಯವೇನಲ್ಲ. ಈ ರೀತಿ ಗ್ರಾಮೀಣ ಬದುಕಿನಲ್ಲಿ ಕಾಣುವ ಸಾಧನಗಳನ್ನೇ ಬಳಸುತ್ತ ರೂಪಕದ ಮೂಲಕ ಶಿಷ್ಟ ವರ್ಣನೆಗಳನ್ನು ಮಾಡುವುದನ್ನು ಕುಮಾರವ್ಯಾಸ ಭಾರತದಲ್ಲಿ ಹಲವಾರು ಪ್ರಸಂಗಗಳಲ್ಲಿ ಕಾಣಬಹುದು. ಕರ್ಣ ಪರ್ವದಲ್ಲಿ ಕರ್ಣಾರ್ಜುನರ ಯುದ್ಧವನ್ನು ನಿರೂಪಿಸುವ ಸಂದರ್ಭದಲ್ಲಿ ಕರ್ಣಾರ್ಜುನರು ಪರಸ್ಪರ ಮೂದಲಿಸುವಾಗ ಸೂತಪುತ್ರನೆಂಬ ಹಿನ್ನೆಲೆಯಲ್ಲಿ ಕರ್ಣನನ್ನು 'ನನ್ನೊಡನೆ ಯುದ್ಧಮಾಡುವುದು ಧೀವರರ ಹಾಗೆ ತಡಿಕೆ ಬಲೆಯಲ್ಲಿ ಲಾವುಗೆಯನು ಹೊಯ್ದ ಹಾಗಲ್ಲ ಅಥವಾ ಹಂಜರ ಕೂಳಿ, ಮೊಗವಲೆ, ಬೀಸುವಲೆ, ಗಾಣ ಮೊದಲಾದವುಗಳನ್ನು ಬಳಸಿ ಸೆರೆಹಿಡಿಯಲು 'ತುಂಬಿದುದಕದ ಮಡುವಲ್ಲ, ಇದು ಸಂಗ್ರಾಮ ಭೂಮಿ, ಧೀರರಿಗೆ ಈ ನೆಲೆಯೇ ಹೊರತು ಧೀವರರಿಗಲ್ಲ ಎಂದು ವ್ಯಂಗ್ಯವಾಡುತ್ತಾನೆ. ಅದಕ್ಕೆ ಕರ್ಣನು 'ನೀನು ಹೇಳಿದ ಮಾತು ಸುಳ್ಳಲ್ಲ, ನಾನು ಒಪ್ಪಿಕೊಳ್ಳುತ್ತೇನೆ. ಕೂಳಿ, ಕೊಳಚೆಗಳನ್ನು ನಾವು ತುಂಬುತ್ತೇವೆ. ಬಾಣಾವಳಿಯ ತಡಿಕೆಯಲ್ಲಿ ನಕುಲ ಜಾತಿಯನ್ನು ಹೊಯ್ಯುತ್ತೇವೆ. ಹಾಗೆಯೇ ಧೀವರರಾದ ನಾವು ನಿಮ್ಮ ಹೃದಯ ಸರೋವರದಲ್ಲಿರುವ ಜೀವಮತ್ಸ್ಯಕೆ ಗಾಳವಿಕ್ಕುತ್ತೇವೆ'' ಎಂದು ಉತ್ತರಿಸುವಲ್ಲಿನ ಅರ್ಥಶ್ಲೇಷೆ ಗಮನಿಸುವಂಥದು. (ಕ.ಪ.೨೨-೨೮,೨೯)

ಹೀಗೆ ಕೆಲವು ಪ್ರಸಂಗಗಳಲ್ಲಿ ಜಾನಪದ ಕಥೆಯೇ ದಟ್ಟವಾಗಿ ಕಂಡು ಬಂದರೆ, ಮತ್ತೆ ಕೆಲವು ಪ್ರಾಣಿ ಪ್ರಸಂಗಗಳ ವರ್ಣನೆಗಳಲ್ಲಿ ಜಾನಪದ ಬದುಕಿನ ಅಂಶಗಳು, ಜನಪದರ ಬಳಕೆ ಸಾಧನಗಳು ರೂಪಕಗಳ ಮೂಲಕ ನಿರೂಪಿತವಾಗಿವೆ.

**ನೀತಿಕಥೆ**

ಇಡೀ ಮಹಾಭಾರತದ ಕಥೆಯೇ ಸದ್ಧರ್ಮವನ್ನು ಎತ್ತಿಹಿಡಿಯುವ ಆಶಯವನ್ನು ಹೊಂದಿದೆ. ಈ ಹಿನ್ನೆಲೆಯಲ್ಲಿ ಧರ್ಮದ ವಿವಿಧ ಸ್ವರೂಪಗಳನ್ನು ಪ್ರತಿಪಾದಿಸುವ ಅನೇಕ ಉಪಕಥೆಗಳು ಸಂದರ್ಭಾನುಸಾರ ಒಂದಕ್ಕೊಂದು ಸೇರಿಕೊಂಡು ಪ್ರತ್ಯೇಕಿಸಲಾಗದ ರೀತಿಯಲ್ಲಿ ಮೂಡಿವೆ. ಹೀಗೆ ಮೂಡಿದ ಕಥೆಗಳಲ್ಲಿ ವ್ಯಾಸ ಭಾರತದಲ್ಲಿ ಕಾಲಾನುಕ್ರಮದಲ್ಲಿ ಸೇರಿಕೊಂಡ ಕಥೆಗಳ ಜೊತೆಗೆ ಅಲ್ಲಿಲ್ಲದ ಎಷ್ಟೋ ಕಥೆಗಳು ವ್ಯಾಸಾನಂತರ ಭಾರತದಲ್ಲಿ ಸೇರಿಕೊಂಡು ಅಥವಾ ಬೇರೆ ಮೂಲದಲ್ಲಿ ಪ್ರಚಲಿತದಲ್ಲಿದ್ದು ಕುಮಾರವ್ಯಾಸ ಭಾರತದಲ್ಲಿ ಕಾಣಿಸಿಕೊಂಡಿವೆ. ಆದಕಾರಣ ಕುಮಾರವ್ಯಾಸ ಭಾರತದಲ್ಲಿ ಕಂಡುಬರುವ ಕಥೆಗಳ ಪ್ರಾಚೀನತೆಯನ್ನು ನಿರ್ಧರಿಸುವುದು ಕಷ್ಟ. ಅದೇನೇ ಇರಲಿ ಶಿಷ್ಟ ಕಥಾ ಪರಂಪರೆ ಮತ್ತು ಜಾನಪದ ಕಥಾ ಪರಂಪರೆ ಎರಡೂ ಕುಮಾರವ್ಯಾಸ ಭಾರತದಲ್ಲಿ ಸಮ್ಮಿಳಿತವಾಗಿವೆ ಎಂಬುದು ನಿಜ. ಅರಣ್ಯಪರ್ವದಲ್ಲಿ ಬರುವ ಧರ್ಮವ್ಯಾಧನ ಕಥೆ ಭಾರತದಲ್ಲಷ್ಟೇ ಅಲ್ಲದೆ ಹದಿಬದೆಯ ಧರ್ಮದಂಥ ಇತರ ಕಾವ್ಯಗಳಲ್ಲೂ ಕಂಡು ಬರುತ್ತದೆ. ಪತಿವ್ರತಾ ಧರ್ಮವನ್ನು ಎತ್ತಿ ಹಿಡಿಯುವ, ಜಾತಿಗಿಂತ ಭಾವಶುದ್ಧಿಯಿಂದ ಸದ್ಧರ್ಮಾಚಾರದಲ್ಲಿ ನಡೆಯುವುದು ಮುಖ್ಯ ಎಂಬ ನೀತಿಯನ್ನು ಪ್ರತಿಪಾದಿಸುವ ಕಥೆಯಾಗಿದೆ.

ಈ ಕಥೆಯಲ್ಲಿ ವಿಪ್ರನೊಬ್ಬನು ಮರದ ಕೆಳಗೆ ಶಿಷ್ಯರಿಗೆ ವೇದಪಾಠ ಮಾಡುತ್ತಿದ್ದಾಗ ಹಕ್ಕಿಯೊಂದರ ಹಿಕ್ಕೆ ಮೇಲೆ ಬಿದ್ದು, ಆ ಹಕ್ಕಿ ಬ್ರಾಹ್ಮಣನ ಕೋಪಕ್ಕೆ ತುತ್ತಾಗಿ ಸುಟ್ಟು ಸೀದು ಹೋಗುತ್ತದೆ. ಅನಂತರ ಆ ವಿಪ್ರ ಭಿಕ್ಷಾಟನೆಗೆ ಹೊರಟು ಒಂದು ಮನೆಯ ಬಳಿ ಬಂದಾಗ, ಆ ಮನೆಯೊಡತಿ 'ಪತಿಪರಿಚರ್ಯೆ' ಮುಗಿಸಿ, ಭಿಕ್ಷೆ ತರಲು ತಡವಾಯಿತು. ತಡವಾದುದಕ್ಕೆ ದ್ವಿಜನು ಮುನಿದು ಅವಳನ್ನು ದೃಷ್ಟಿಸಿದನು. ಆಗ ಅವಳು 'ಎಲೆ ಮರುಳೆ, ನಾನು ಮರದ ಮೇಲಿನ ಹಕ್ಕಿಯಲ್ಲ' ಎಂದಳು. ಆಗ ವಿಪ್ರನು ಅವಳ ದಿವ್ಯ ಜ್ಞಾನಕ್ಕೆ ಬೆರಗಾಗಿ, ಅವಳಿಂದ ಧರ್ಮರಹಸ್ಯ ತಿಳಿಯಲು ಬಯಸಿದಾಗ, ಅವಳು 'ನನಗಿಂತ ಶ್ರೇಷ್ಠನಾದ ಧರ್ಮವ್ಯಾಧ-

ನೊಬ್ಬನಿದ್ದಾನೆ. ಅವನಲ್ಲಿ ಹೋಗಿ ತಿಳಿದುಕೋ' ಎಂದು ಕಳುಹಿಸಿದಳು. ಬೇಡರ ಕೇರಿಯ ಮಾಂಸದ ಅಂಗಡಿಯಲ್ಲಿದ್ದ ಧರ್ಮವ್ಯಾಧನನ್ನು ಕಾಣುತ್ತಲೇ ಅವನು 'ಪತಿವ್ರತೆ ನನ್ನ ವಿಚಾರ ಹೇಳಿದಳೇ? ಎಂದು ಕೇಳಿದನು. ಅನಂತರ ತನ್ನ ಮನೆಗೆ ಕರೆದುಕೊಂಡು ಹೋಗಿ ವೃದ್ಧ ತಾಯಿ-ತಂದೆಗಳನ್ನು ತೋರಿಸಿ ಸದ್ಧರ್ಮದ ಸ್ವರೂಪದ ವಿಚಾರಗಳನ್ನು ತಿಳಿಸಿ 'ಜಾತಿಹೀನರಾಗಿದ್ದರೂ ಭಾವಶುದ್ಧಿಯಿಂದ ಸದ್ಧರ್ಮಾಚಾರದಲ್ಲಿ ನಡೆಯುತ್ತಿದ್ದೇವೆ. ಇದರಲ್ಲಿ ಯಾವ ಕೊರತೆಯೂ ಇಲ್ಲ. ದ್ವಿಜ - ದೇವ- ಗುರು ಪರಿಚರ್ಯೆಯಲ್ಲಿ ನಾವು ಸಂಭಾವಿತರಾಗಿದ್ದೇವೆ. ನಮ್ಮನ್ನು ನೋಡಿ ನಡೆ' ಎಂದನು. ಹೀಗೆ ಭಾವಶುದ್ಧಿಯಿಂದ ಕೂಡಿದ ಸದ್ಧರ್ಮಾಚಾರದ ನೀತಿಯನ್ನು ವಿವರಿಸುತ್ತಾನೆ. ಈ ಮಾತಿಗೆ ಸಮರ್ಥನೆಯೋ ಎಂಬಂತೆ ಸತ್ಯಭಾಮಾದೇವಿ ದ್ರೌಪದಿಯನ್ನು ಕುರಿತು 'ನಿನ್ನ ಐವರು ಪತಿಗಳನ್ನು ಹೇಗೆ ನಿಯಂತ್ರಿಸುತ್ತೀಯೆ? ಅದರ ರಹಸ್ಯವನ್ನು ಹೇಳು' ಎಂದಾಗ 'ನಾನು ಭಾವಶುದ್ಧಿಯಲ್ಲಿ ಐವರನ್ನು ಸಂಭಾವಿಸುತ್ತೇನೆ' ಎನ್ನುತ್ತಾಳೆ. ಹೀಗೆ ಪತಿವ್ರತೆಯರ ಕಥೆಗಳಲ್ಲಿ ಸಂಕಟದ ಪ್ರಸಂಗಗಳು ಬಂದಾಗಲೆಲ್ಲಾ ಭಾವಶುದ್ಧಿ, ಭಗವಧ್ಯಾನ, ಸದ್ಧರ್ಮಾಚರಣೆಗಳನ್ನು ಅನುಸರಿಸುವುದನ್ನು ಕಾಣುತ್ತೇವೆ. ಆದರೆ ಇದು ಈ ರೀತಿ ಪತಿವ್ರತೆಯರ ಹಿರಿಮೆಯನ್ನು ಧರ್ಮಸೂಕ್ಷ್ಮದ ಸಂಗತಿಗಳನ್ನು ಪ್ರತಿಪಾದಿಸುವುದು ಶಿಷ್ಟ ಪರಂಪರೆಯ ಕಥೆಗಳಾಗಿ ಕಂಡರೆ, ಜಾನಪದ ಕಥೆಗಳಲ್ಲಿ ನೀತಿಯುಕ್ತ ಹಾಗೂ ನೀತಿರಹಿತ ಮಹಿಳೆಯರ ಕಥೆಗಳನ್ನು ಹೇಳುವುದರ ಮೂಲಕ ನೀತಿ ಪ್ರತಿಪಾದಿಸುವುದನ್ನು ಕಾಣುತ್ತೇವೆ. ಈ ಬಗೆಯ ಕಥೆಗಳಲ್ಲಿ ಕಥೆಯ ಘಟನೆಗಳು ಜಾನಪದ ವರ್ಗಕ್ಕೆ ಸೇರಿದ್ದು, ಆದರಲ್ಲಿ ಬರುವ ನೀತಿ ಧರ್ಮೋಪದೇಶಗಳು ಶಿಷ್ಟ ಕಾವ್ಯದ ವಸ್ತುಗಳಾಗಿವೆ.

## ಹಾಸ್ಯ ಕಥೆಗಳು

ಕುಮಾರವ್ಯಾಸನ ಕಾವ್ಯದಲ್ಲಿ ಹಾಸ್ಯರಸ ಉತ್ತರನ ಪ್ರಸಂಗದಲ್ಲಿ ವಿಶೇಷವಾಗಿ ಮೂಡಿದ್ದರೂ ಕಾವ್ಯದ ಇತರ ಭಾಗಗಳಲ್ಲಿ ಸಾಕಷ್ಟು ಅಲ್ಲಲ್ಲೇ ನಗುವ ನಗಿಸುವ ಸನ್ನಿವೇಶಗಳು ಕಾಣಿಸಿಕೊಂಡಿವೆ. ಬಹುಶಃ ಕುಮಾರವ್ಯಾಸನ ಕಾವ್ಯದಲ್ಲಿ ಒಂದಲ್ಲ ಒಂದು ಸಂದರ್ಭದಲ್ಲಿ ನಗದವರು ಇಲ್ಲವೇ ಇಲ್ಲವೆಂದರೂ ಸಲ್ಲುತ್ತದೆ. ಆ ನಗೆಯ ಸಂದರ್ಭಗಳು ವ್ಯಂಗೋಕ್ತಿ, ಒರಟು ಹಾಸ್ಯ, ಮೃದು ಹಾಸ್ಯ ಯಾವುದೇ ಆಗಿರಲಿ ಜನ ನಕ್ಕಿದ್ದು ನಿಜ. 'ಕುಣಿಸಿ ನಗನೇ ಕುಮಾರವ್ಯಾಸನುಳಿದವರ, ಎಂಬ

ಮಾತಿನಲ್ಲಿ ಕವಿಯೂ ನಕ್ಕಿದ್ದಾನೆ. ಅಲ್ಲದೆ ಅವರು ಅರಮನೆಯವರಿರಲಿ ಸಾಮಾನ್ಯರಿರಲಿ, ಹಿರಿಯರಿರಲಿ ಕಿರಿಯರಿರಲಿ, ಸೈನಿಕರಿರಲಿ ದಾಸಿಯರಿರಲಿ - ಎಲ್ಲರೂ ನಕ್ಕಿದ್ದಾರೆ.

ಜಾನಪದರ ಬದುಕಿನಲ್ಲಿ ಕಂಡುಬರುವಂಥ ಪ್ರಸಂಗಗಳೇ ಇಲ್ಲಿ ವೇಷತೊಟ್ಟು ಬಂದಿವೆ ಎನ್ನಬಹುದು. ಇನ್ನೊಬ್ಬರಿಗುಂಟಾದ ಫಜೀತಿಯನ್ನು ನೋಡಿ ನಗುವುದು ಒಂದು ಬಗೆಯಾದರೆ (ದ್ರೌಪದಿ ರಾಜಸೂಯಯಾಗದಲ್ಲಿ ದುರ್ಯೋಧನನನ್ನು ನೋಡಿ ನಕ್ಕಿದ್ದು), 'ಅಭ್ಯಾಸವಿಲ್ಲದ ಬ್ರಾಹ್ಮಣ ಗಡ್ಡಸುಟ್ಟುಕೊಂಡ' ಎಂಬಂತೆ, 'ಏನ್ ಜೋಯಿಸರೆ ನಿಮಗ್ಯಾಕೆ ಈ ಬುದ್ಧಿ ಬಂತು' ಅಂತ ಅರ್ಜುನ ಪೆಚ್ಚು ಕೆಲಸ ಮಾಡಹೊರಟನೆಂದು ಧೂರ್ತ ವಟುನಿಕರ ನಕ್ಕದ್ದು ಸಹಜವಾಗಿದೆ. "ಏನು ಸಿದ್ಧಿಯುಪಾಧ್ಯರೆದ್ದಿರಿ। ದೇನು ಧನುವಿಂಗಲ್ಲಲೇ ತಾ। ನೇನು ಮನದಂಥವಣೆ ಬಯಸಿದಿರೇ ನಿತಂಬಿನಿಯ" (ಆ.ಪ. ೧೫-೧೦) ಎಂಬ ಮಾತು ಗಮನಾರ್ಹವಾದುದು.

ಸಾಂಪ್ರದಾಯಿಕ ವೇಷಭೂಷಣಗಳನ್ನು ನೋಡಿ ನಗುವುದನ್ನು ಹಳ್ಳಿ-ನಗರಗಳಲ್ಲಿ ಇಂದೂ ನೋಡಬಹುದು. ವಧು ಪರೀಕ್ಷೆಗೆ ಬರುವ ವರನ ವೇಷಭೂಷಣವನ್ನು ಟೀಕೆ ಮಾಡುವ, ಶಿಷ್ಟರ ವೇಷವನ್ನು ಹಳ್ಳಿಗರು ಧರಿಸಿದಾಗ ಹಾಸ್ಯ ಮಾಡುವ ಜನರನ್ನು ಕಾಣಬಹುದು. ಹಾಗೆಯೇ ಅರ್ಜುನ ಮತ್ಸ್ಯಯಂತ್ರದ ಬಳಿ ಬರುವುದನ್ನು ನೋಡಿ ದ್ರೌಪದಿಯ ಸಖಿಯರು "ಇತ್ತ ನೋಡಾ ತಾಯೆ ಹಾರುವ। ರತ್ತ ಗಡ್ಡದುಪಾಧ್ಯರನು ತಾ। ವೆತ್ತುವರು ಗಡ ಧನುವನಿಸುವರು ಗಡ ತಿಮಿಂಗಿಲನ। ಹೊತ್ತುಗಳೆವರೆ ಲೇಸು ಬಳಿಕಿ। ನ್ನುತ್ತಮರಲಾ ವಿಪ್ರರೆನೆ......." (ಆ.ಪ. ೧೫-೨೦) ಎಂಬಲ್ಲಿ ಶೃಂಗಾರಪೂರಿತನಗೆ ಹೊಮ್ಮಿದೆ. ಸ್ವಯಂವರವಾದ್ದರಿಂದ ಸಾಮಾನ್ಯ ಜನರ ಜೀವನದ ವರಪರೀಕ್ಷೆಯೇ ಇಲ್ಲಿ ಬೇರೆ ರೀತಿಯಲ್ಲಿ ಹೊರಹೊಮ್ಮಿದೆ ಅಷ್ಟೆ.

ಉತ್ತರನ ಪ್ರಸಂಗದಲ್ಲಿ ಗೋವಳರ ಮೂಗಿನ ಮೇಲೆ ಸುಣ್ಣವನ್ನು ಬಳಿದು ಹಗೆಯ ಪಟ್ಟಣಕ್ಕೆ ಬಿಟ್ಟರು ಎಂಬಲ್ಲಿ ಅವಮಾನದ ಸಂಗತಿಯೂ ಇದೆ. ಗರ್ವದ ಹಿನ್ನೆಲೆಯೂ ಇದೆ. ಅಂತೆಯೇ ಹಾಸ್ಯಾಸ್ಪದ ದೃಶ್ಯವೂ ಅಡಗಿದೆ. ಮೂಗಿನ ಮೇಲಿನ ಸುಣ್ಣದ ನೋಟ ಅವಮಾನಕಾರಿಯಾದರೂ, ನಗೆಗೀಡುಮಾಡುತ್ತದೆ.

ಕುಮಾರವ್ಯಾಸ 'ಅರಸುಗಳಿಗಿದು ವೀರ' ಇತ್ಯಾದಿ ಹೇಳುವಲ್ಲಿ 'ರಸಿಕರಿಗಿದು ಹಾಸ್ಯ' ಎಂದು ಹೇಳದಿದ್ದರೂ, ಹಾಸ್ಯವನ್ನು ಕಾವ್ಯದಲ್ಲಿ ಸಾಕಷ್ಟು ಪ್ರಸಂಗಗಳಲ್ಲಿ ಅನುಷಂಗಿಕವಾಗಿ ತಂದಿದ್ದಾನೆ. ಉತ್ತರನ ಕಥೆ ಹಾಸ್ಯಕಥೆಯೇ ಆಗಿದೆ. ಜಾನಪದ ಕಥೆಗಳಲ್ಲಿಮೂರ್ಖರ ಕಥೆ, ದಡ್ಡರ ಕಥೆ, ವಿದೂಷಕರ ಕಥೆಗಳು ತರುವ ಹಾಸ್ಯವನ್ನೇ ಇಲ್ಲಿನ ಪ್ರಸಂಗದಲ್ಲಿ ಉತ್ತರ ರಾಜಕುಮಾರನಾದರೂ ತೆನಾಲಿರಾಮಕೃಷ್ಣನ ಹಾಸ್ಯದಂತೆ ತಿಳಿಹಾಸ್ಯ ಒಡಮೂಡಿದೆ ಎನ್ನಬಹುದು. ಹಾಸ್ಯದೆಡೆಗಳಲ್ಲದೆ ವೀರಪ್ರಸಂಗಗಳಲ್ಲೂ ಹಾಸ್ಯವನ್ನು ತಂದಿರುವುದು ಕವಿಯ ವೈಶಿಷ್ಟ್ಯವಾಗಿದೆ.

### ಉತ್ತರನ ಪ್ರಸಂಗ

ಮಹಾಭಾರತವು ಅರಸುಗಳಿಗಿದು ವೀರಕೃತಿಯಾಗಿ ಭೀಷ್ಮ, ದ್ರೋಣ, ಕರ್ಣ, ಅರ್ಜುನ, ಭೀಮ ಮೊದಲಾದ ರಣಧೀರರ ಕಥನವಾಗಿದೆ. ಅದಕ್ಕೆ ದೃಷ್ಟಿಬೊಟ್ಟು ಇಟ್ಟಂತೆ ರಣಹೇಡಿಯೊಬ್ಬನ ಚಿತ್ರ ಉತ್ತರ ಕುಮಾರನ ಚಿತ್ರಣದಲ್ಲಿ ಮೂಡಿದೆ. "ಉತ್ತರನ ಪಾತ್ರವೂ ಕಥಾಸಂದರ್ಭವೂ ಮಹಾಭಾರತದ ಪೂರ್ವಪರ್ವಗಳೊಳಗಿನ ಶಾಂತ ಕರುಣಗಳ ರಸೋದಧಿಗೂ, ಉತ್ತರ ಪರ್ವಗಳೊಳಗಿನ ರೌದ್ರವೀರ ರಸಗಳ ಮಹಾಸಾಗರಕ್ಕೂ ಹಾಸ್ಯದ ಒಂದು ಸೇತುವೆಯಂತಿದೆ" ಎಂಬ ಬೇಂದ್ರೆಯವರ ಮಾತು ನಿಜ. ನಗೆಯ ಪ್ರಸಂಗಗಳು ಭಾರತದಲ್ಲಿ ಅಲ್ಲಲ್ಲಿ ಕಂಡು ಬಂದರೂ ಅವೆಲ್ಲಾ ಬಿಸಿನಗೆ, ಹುಸಿನಗೆ, ನಂಜುನಗೆ ಪ್ರಸಂಗಗಳು. ಇಲ್ಲಿಯೇ ರಸನಗೆಯ ಚಿಲುಮೆ ಎದ್ದು ಕಾಣುವುದು.

ಇಡೀ ಉತ್ತರನ ಪ್ರಸಂಗ ನಗೆಯ ಪ್ರಸಂಗವಾದರೂ ನಗು ಉಕ್ಕಿ ಹರಿಯುವುದು ರಣರಂಗದಲ್ಲಿ ಉತ್ತರ- ಬೃಹನ್ನಳೆಗೆ ನಡೆಯುವ ಸಂಭಾಷಣಾ ಚಾತುರ್ಯದಲ್ಲಿ, ಅಲ್ಲದೆ ಸಮರಕ್ಕೆ ಸಿದ್ಧನಾಗುವ ವೈಖರಿಯಲ್ಲೂ ನಗೆ ಉಕ್ಕುತ್ತದೆ. ಅರ್ಜುನ ಅರ್ಥಾತ್ ಬೃಹನ್ನಳೆ ತಲೆಕೆಳಕಾಗಿ ಕವಚ ಸೀಸಕಗಳನ್ನು ತೊಟ್ಟಾಗ ನಗೆ ಬುಗ್ಗೆ ಚಿಮ್ಮಿ, ಉತ್ತರನೇ ಕೊನೆಗೆ ಅವನ್ನು ತೊಡಿಸುತ್ತಾನೆ. 'ಘೊಳ್ಳೆಂದು ಕೈ ಹೊಯ್ದು ಮೂಡಿದ ನಗೆ' ಕೇಳುಗರಲ್ಲೂ ನಗೆ ಮೂಡಿಸುತ್ತದೆ. ಅರ್ಜುನನ ತೋರಿಕೆ ಇಲ್ಲವೇ ಬಡಾಯಿನಡೆ ಇಲ್ಲಿ ನಗೆಗೆ ಕಾರಣವಾಗಿದೆ. ಕೋಮಲೆಯರಿದಿರಿನಲಿ ಜಂಭಕೊಚ್ಚಿಕೊಂಡಾಗ ಉತ್ತರನ ಬಡಾಯಿ ಕೇಳಿ ನಗು ಬರುತ್ತದೆ. ಇನ್ನು ಅರ್ಜುನ ರಣರಂಗದ ಕಡೆ ರಥವನ್ನು ನಡೆಸಿದಾಗ ಅಂಜಿದ ಉತ್ತರನು ನಿಂದು ಮೆಲ್ಲನೆ

ರಥದ ಮೊದಲಿಗೆ ಬಂದು ಧುಮುಕಿ, ಬದುಕಿದೆಯೊ ಬಡಜೀವವೇ ಎಂದು 'ನಿಟ್ಟೋಟದಲಿ ಬಿಟ್ಟ ಮಂಡೆಯಲಿ ಹಾಯ್ದಾಗ, ಉತ್ತರನ ಪಲಾಯನ ವೈಖರಿಗೆ ನಗೆ ಉಕ್ಕುತ್ತದೆ, ಕೌರವನ ಸೇನೆ ಉತ್ತರನ ನಡವಳಿಕೆಯನ್ನು ಕಂಡು, 'ನಗೆಯ ಕಡಲೊಳಗೆ ಕೆಡೆ'ಯತ್ತದೆ. 'ಹಲುಗಿರಿದು ಬಾಯೊಳಗೆ ಬೆರಳ್ಗಳನಿಳುಹಿ ತಲೆವಾಗಿದ' ಆದೃಶ್ಯ, 'ಲೋಗರಿಂದವೆ ಕೊಲ್ಲಿಸದಿರು ನೀಂ ಕುತ್ತಿಕೆಡಹು ಕಠಾರಿಯಲಿ' ಎಂದಾಗ ಅರ್ಜುನ ಮನದೊಳು ಒಡಲೊಡೆವಂತೆ ನಗುತ್ತಾನೆ. ಹೀಗೆ ಉತ್ತರನ ಜಂಭ, ದೈನ್ಯ, ಪಲಾಯನ ಭೀತಿ ಎಲ್ಲ ನಗೆಗೆ ಕಾರಣವಾಗಿವೆ. ಅಂತಃಪುರ ನಾರಿಯರು, ರಣರಂಗದ ಸೈನಿಕರು, ಶತ್ರು ಪಕ್ಷದವರೂ ಸಹ ನಗುವಂತೆ ಮಾಡಿದ ಉತ್ತರನ ವರ್ತನೆ ಅವನ ವಾಗ್ಧಾಟಿ ಹಾರಿಸಿದ ನಗೆ ಚಟಾಕಿ, ಹಾಗೂ ಇಲ್ಲಿ ಹೊರಹೊಮ್ಮುವ ಹಾಸ್ಯ ಕನ್ನಡ ಸಾಹಿತ್ಯದಲ್ಲೇ ಅಪೂರ್ವ ಪ್ರಸಂಗವಾಗಿದೆ. ಸಾಮಾನ್ಯವಾಗಿ ಒಂದೆರಡು ವರ್ಗವನ್ನು ರಂಜಿಸುವ ಹಾಸ್ಯವೇ ನಮ್ಮ ಕಾವ್ಯಗಳಲ್ಲಿ ಹೆಚ್ಚು. ಆದರೆ ಉತ್ತರನ ಪ್ರಸಂಗ ಎಲ್ಲ ವರ್ಗದವರನ್ನು ರಂಜಿಸುವ ಧಗೆ- ಹೊಗೆಗಳಿಲ್ಲದೆ ತಿಳಿಹಾಸ್ಯವಾಗಿದ್ದು ಕುಮಾರವ್ಯಾಸನ ಹೆಗ್ಗಳಿಕೆಯಾಗಿದೆ.

## ಅಶ್ವತ್ಥಾಮನ ಕಥೆ

ಜನಪದ ಕಥೆಗಳಲ್ಲಿ ಜಾಣತನವನ್ನು ಪ್ರದರ್ಶಿಸುವ, ಶಕ್ತಿಯಿಂದಾಗದ ಕೆಲಸವನ್ನು ಯುಕ್ತಿಯಿಂದ ಮಾಡುವ ಅರ್ಥಾತ್ ಮೋಸದಿಂದ ವಂಚಿಸುವ ಅನೇಕ ಜಾನಪದ ಕಥೆಗಳನ್ನು ಕಾಣುತ್ತೇವೆ. ಮಹಾಭಾರತದಲ್ಲಿ ಕಾಣುವ 'ಅಶ್ವತ್ಥಾಮನೆಂಬ ಆನೆಯು ಸತ್ತಿತು' ಎಂದು ಹೇಳಿಸಿ, ದ್ರೋಣನು ಶಸ್ತ್ರ ಸಂನ್ಯಾಸ ಸ್ವೀಕರಿಸುವಂತೆ ಮಾಡಿದ ಪ್ರಸಂಗ ಕುಮಾರವ್ಯಾಸ ಭಾರತದಲ್ಲಿ ಕೆಲವು ವ್ಯತ್ಯಾಸಗಳೊಂದಿಗೆ ಕಾಣಿಸಿಕೊಂಡಿದೆ. ಮೂಲದಲ್ಲಿ 'ಅಶ್ವತ್ಥಾಮೋ ಹತಃ ಕುಂಜರಃ' ಎಂಬ ಮಾತಿನ ವಾಕ್ಯರಚನಾಕ್ರಮ ಯುಕ್ತಿಗೆ ಕಾರಣವಾಗಿದ್ದರೆ, ಕನ್ನಡದ ವಾಕ್ಯರಚನೆಯಲ್ಲಿ ಆ ರೀತಿಯ ಉಕ್ತಿ ಚಾತುರ್ಯವನ್ನು ತರುವುದು ಕಷ್ಟ. ಕರ್ತೃ, ಕರ್ಮ, ಕ್ರಿಯಾಪದಗಳು ಸಂಸ್ಕೃತದಲ್ಲಿ ಯಾವ ಕ್ರಮದಲ್ಲಾದರೂ ಬರಲು ಸಾಧ್ಯ, ಆದರೆ ಕನ್ನಡ ವಾಕ್ಯರಚನೆಯಲ್ಲಿ ಕರ್ತೃ, ಕರ್ಮ ಕ್ರಿಯೆಗಳು ಕ್ರಮವಾಗಿ ಬರುವುದು ಆ ಭಾಷಾ ಜಾಯಮಾನ. ಆದ ಕಾರಣ ಆ ಮಾತನ್ನು ಉಲ್ಲೇಖಿಸದೆ ಭೀಮನು ಹೇಳಿದ ಅಶ್ವತ್ಥಾಮನು ಮಡಿದನೆಂಬ ಮಾತನ್ನು ಕೇಳಿ, ದ್ರೋಣನು ಆ ಮಾತಿನ

ಸತ್ಯಾಸತ್ಯತೆಯನ್ನು ತಿಳಿಯಲು, ಧರ್ಮಜನ ಬಳಿಗೆ ಬಂದು ಅವನನ್ನು ಕೇಳಿದನೆಂದು ಪೂರ್ವ ಕಥೆಯನ್ನು ಬದಲಿಸಿದ್ದಾನೆ. ಇಲ್ಲಿ ಆನೆಯ ಸಾವು ಒಂದು ನೆಪವಾಗಿತ್ತು. ಅದನ್ನು ಹೇಳುವ ಮಾತಿನ ಚಮತ್ಕಾರ ದ್ರೋಣನ ಶಸ್ತ್ರ ಸಂನ್ಯಾಸ ಸ್ವೀಕರಣಕ್ಕೆ ನಾಂದಿಯಾದುದು ಗಮನಾರ್ಹವಾಗಿದೆ. ಜಾನಪದ ಕಥೆಗಳಲ್ಲಿ ವಂಚಿಸುವ ದೃಷ್ಟಿಯಿಂದ ಚಮತ್ಕಾರವಾಗಿ ಆಡುವ ಮಾತುಗಳಿಂದ ಕಾರ್ಯಸಾಧನೆ ಮಾಡಿಕೊಳ್ಳುವುದನ್ನು ಈ ಪ್ರಸಂಗದಲ್ಲಿ ಕಾಣಬಹುದು.

ಕುಮಾರವ್ಯಾಸನ ಭಾರತದಲ್ಲಿ ಬರುವ ಕಥಾಪ್ರಸಂಗಗಳನ್ನು ಸಮಗ್ರವಾಗಿ ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ಎದ್ದು ಕಾಣುತ್ತದೆ

೧. ಜಾನಪದ ಕಥನಗಳಲ್ಲಿ ಕಂಡುಬರುವ ಎಲ್ಲ ವೈವಿಧ್ಯಗಳನ್ನು ಕುಮಾರವ್ಯಾಸ ಭಾರತ ಕಥಾ ಪ್ರಸಂಗಗಳಲ್ಲೂ ಕಾಣಬಹುದು. ಪವಾಡ ಕಥೆಗಳು, ರಾಕ್ಷಸರ ಕಥೆಗಳು, ಪ್ರಾಣಿಕಥೆಗಳು ಇತ್ಯಾದಿ

೨. ಕೆಲವು ಸಂದರ್ಭಗಳಲ್ಲಿ ಪ್ರಾಚೀನವಾದ ಅಥವಾ ಪ್ರಸಿದ್ಧವಾದ ಜಾನಪದ ಕಥೆಗಳೇ ಕುಮಾರವ್ಯಾಸನ ಕಾವ್ಯದಲ್ಲಿ ಮಾರುವೇಷ ತೊಟ್ಟಿವೆ ಎನ್ನಬಹುದು.

೩. ಕಥೆಗಳ ನಡುವೆ ವರ್ಣನೆಗಳು ಬಂದಾಗ ಶಿಷ್ಟ ಕಲ್ಪನೆಗಳನ್ನು ಶಿಷ್ಟ ಪದಗಳನ್ನು ಬಳಸುವುದರ ಜೊತೆಜೊತೆಯಲ್ಲೇ ಜಾನಪದ ಪದಗಳನ್ನು ವಿವರಣೆಗಳನ್ನು ಸೇರಿಸಿ ರೂಪಕಗಳ ಮೂಲಕ ಹೇಳುತ್ತಾನೆ. ಹೀಗಾಗಿ ಶಿಷ್ಟಾಂಶ ಜಾನಪದಾಂಶಗಳೆರಡೂ ಸೇರಿದ ವರ್ಣನೆಗಳೂ ಅವನ ಕಾವ್ಯದುದ್ದಕ್ಕೂ ಸಿಗುತ್ತವೆ. ಅರಣ್ಯ ಪರ್ವ, ಕರ್ಣ ಪರ್ವಗಳಲ್ಲಿ ಇದಕ್ಕೆ ಸಾಕಷ್ಟು ನಿದರ್ಶನಗಳು ಸಿಗುತ್ತವೆ. ಈ ದೃಷ್ಟಿಯಿಂದ ಕೆಲವು ವಿಮರ್ಶಕರು ಹೇಳುವಂತೆ ಇವನು 'ಕೇವಲ ರೂಪಕ ಸಾಮ್ರಾಜ್ಯ ಚಕ್ರವರ್ತಿ ಅಷ್ಟೇ ಅಲ್ಲ. ಶಿಷ್ಟ ಜಾನಪದೀಯ ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂದು ಹೇಳುವುದು ಹೆಚ್ಚು ಸಮಂಜಸ.

೪. ಮೂಲ ಮಹಾಭಾರತವನ್ನು ಅನುಸರಿಸಿ ಕಾವ್ಯವನ್ನು ರಚಿಸಿದ್ದರೂ, ಮೂಲ ಭಾರತದಲ್ಲಿರುವ ಜಾನಪದಾಂಶವುಳ್ಳ ಕೆಲವು ಕಥೆಗಳನ್ನು ಬಿಟ್ಟಿದ್ದಾನೆ.

ಅಲ್ಲಿಲ್ಲದ ಕೆಲವನ್ನು ಸೇರಿಸಿದ್ದಾನೆ. ಅಲ್ಲದೆ ಸಮಕಾಲೀನ ಜಾನಪದ ಐತಿಹ್ಯ, ನಂಬಿಕೆ ಮತ್ತು ಕಥೆಗಳು ಅಲ್ಲಲ್ಲಿ ಹಾಸುಹೊಕ್ಕಾಗಿವೆ.

೫. ಕುಮಾರವ್ಯಾಸನ ಪಾತ್ರಗಳೂ, ಘಟನೆಗಳೂ ಮತ್ತು ಮೂಲ ವಸ್ತುವೂ ಸಂಪೂರ್ಣವಾಗಿ ಶಿಷ್ಟರೂಪದ್ದಾದರೂ ಅದನ್ನು ಕನ್ನಡಿಸುವಾಗ ಜಾನಪದ ಪರಿಭಾಷೆ, ಕಲ್ಪನೆ, ವರ್ಣನೆ, ಪದಸಂಪತ್ತು, ಭಾಷೆ- ಮೊದಲಾದ ಜಾನಪದೀಯ ಅಂಶಗಳನ್ನು ಧಾರಾಳವಾಗಿ, ಆದರೆ ವಿಶಿಷ್ಟ ರೀತಿಯಲ್ಲಿ ಬಳಸಿರುವುದರಿಂದ ಇದು ದೇಸಿ ಕನ್ನಡದ ಜಾನಪದ ಸೊಗಡಿನ ಸ್ವತಂತ್ರ ಕಾವ್ಯವಾಗಿ ಕಾಣಿಸಿಕೊಂಡಿದೆ. ಓದುಗರಿಗೆ/ ಕೇಳುಗರಿಗೆ ಮೂಲ ಸಂಸ್ಕೃತದ ಕಾವ್ಯದ ರೂಪಾಂತರ ಎಂಬ ನೆನಪೇ ಬಾರದಷ್ಟು ಜಾನಪದೀಯ ಅಂಶಗಳನ್ನು ಕಥನ ಪ್ರಸಂಗಗಳಲ್ಲಿ ಅಳವಡಿಸಿದ್ದಾನೆ.

# ಜಾನಪದೀಯ ನಂಬಿಕೆ, ಆಚರಣೆಗಳು

ಜಾನಪದ ಸಾಹಿತ್ಯ, ಜಾನಪದ ಆಚರಣೆಗಳು, ಜಾನಪದ ಕಲೆ, ಜಾನಪದ ಸಂಸ್ಕೃತಿ, ಜಾನಪದ ವಿಜ್ಞಾನ ಮೊದಲಾದ ಮಾತುಗಳು ಈಚೆಗೆ ಕೇಳಿ ಬರುತ್ತಿರುವ ಮಾತಷ್ಟೇ ಅಲ್ಲದೆ, ಜಾನಪದ ಅಧ್ಯಯನದ ವಿಭಾಗಗಳೂ ಆಗಿವೆ. ಸಾಮಾನ್ಯವಾಗಿ ಜಾನಪದ ಸಾಹಿತ್ಯಕ್ಕೆ ದೊರೆತ ಪ್ರಾಶಸ್ತ್ಯ ಉಳಿದವಕ್ಕೆ ಸಿಕ್ಕಿಲ್ಲ. ಆದರೆ ಈಚೀಚೆಗೆ ಉಳಿದ ವಿಷಯಗಳ ಬಗ್ಗೆ ವಿಶೇಷವಾದ ಆಸಕ್ತಿ ಬರುತ್ತಿದೆ. ಜನಪದ ಸಂಪ್ರದಾಯ, ನಂಬಿಕೆಗಳು, ಆಚರಣೆಗಳು, ಜನಪದರ ಜೀವನದ ಅವಿಭಾಜ್ಯ ಅಂಗಗಳಾಗಿವೆ. ಅವು ಜನಾಂಗದ ಸಂಸ್ಕೃತಿಯಲ್ಲಿ ಆಳವಾಗಿ ಬೇರು ಬಿಟ್ಟಿರುವ ರೂಢಿಗಳಾಗಿರುತ್ತವೆ. ಜಾನಪದವೆಂಬ ಮಾತನ್ನು ವಿಶಾಲಾರ್ಥದಲ್ಲಿ ಅರ್ಥೈಸಿದರೆ ಜೀವನ ವಿಧಾನ ಸಾಹಿತ್ಯ- ಸಂಸ್ಕೃತಿ ಅಜ್ಞಾನ-ವಿಜ್ಞಾನ, ವಿವಿಧ ಚಟುವಟಿಕೆಗಳೆಲ್ಲದರ ಮೊತ್ತ."[೧] ಎಂದು ಹೇಳಬಹುದು. ಜನಪದ ಆಚರಣೆಗಳು ಮತ್ತು ನಂಬಿಕೆಗಳು ಒಂದನ್ನೊಂದು ಒಳಗೊಂಡಿರುತ್ತವೆ. ಆಚರಣೆಗೆ ಹಿನ್ನೆಲೆಯಾಗಿ ನಂಬಿಕೆಗಳಿರುತ್ತವೆ. ಶುಭಾಶುಭ ಶಕುನಗಳು, ಜ್ಯೋತಿಷ, ಆರತಿ, ದೃಷ್ಟಿನಿವಾಳಿಕೆ, ಆಣೆ- ಪ್ರಮಾಣ, ವೀಳೆಯಪದ್ಧತಿ ಇವೇ ಮೊದಲಾದ ಹತ್ತಾರು ವಿಷಯಗಳು ಕುಮಾರವ್ಯಾಸನ ಕಾವ್ಯದಲ್ಲಿ ವಿಸ್ಮಯಗೊಳಿಸುವಷ್ಟು ಪ್ರಮಾಣದಲ್ಲಿ ಬಂದಿವೆ. ಜಾನಪದೀಯ ದೃಷ್ಟಿಯಿಂದ ನೋಡಿದಾಗ "ಜಾನಪದವೆಂದರೆ ಮಾನವನ ವಿವಿಧ ಆಶೆ-ಆಕಾಂಕ್ಷೆಗಳ, ನಾನಾ ವಿದ್ಯೆ ಕಲೆ, ನಂಬಿಕೆ, ಆಚಾರ- ವಿಚಾರ, ಆಚರಣೆ ಪದ್ಧತಿಗಳ; ಆತ್ಮೋನ್ನತಿಗೆ ಸಾಧನವಾದ ಮೂರ್ತಾಮೂರ್ತ ಸಂಗತಿಗಳೇ ಮುಂತಾದ ಸಾರಸರ್ವಸ್ವವನ್ನು ಗರ್ಭೀಕರಿಸಿಕೊಂಡ ಸಮಸ್ತಾನುಭವಗಳ ದೊಡ್ಡ ಸಂಚಯ. ಅದರ ವಿರಾಟ್ ಸ್ವರೂಪದಲ್ಲಿ ಸಮಸ್ತ ಶಾಸ್ತ್ರಗಳ ಮುಖಚಾಚಿವೆ."[೨] ಎಂಬ ಮಾತು ನಿಜವೆನ್ನಿಸುತ್ತದೆ.

---

೧. ಜಾನಪದ ಉಪಾಸನೆ : ಜ್ಯೋತಿ ಹೊಸೂರ, ಪು. ೫೧.

೨. ಜಾನಪದ ವಿಜ್ಞಾನ: ಸೋಮಶೇಖರ ಇಮ್ರಾಪುರ, ಪು. ೮೬.

ಜನಸಮುದಾಯವೊಂದರ ನಿತ್ಯಜೀವನದಲ್ಲಿ ಕಂಡುಬರುವ ನಂಬಿಕೆ-ಆಚರಣೆಗಳ ಕುರಿತು ಹೇಳುವಾಗ ಕುಮಾರವ್ಯಾಸನು ಭಾರತದಲ್ಲಿ ಹೇಳಿರುವುದಕ್ಕಿಂತ ತನ್ನ ಕಾಲದ ನಂಬಿಕೆ, ಆಚರಣೆಗಳನ್ನೇ ಹೇಳುತ್ತಿದ್ದಾನೆ ಎಂಬುದು ಹೆಚ್ಚು ಸಮಂಜಸವೆನ್ನಿಸೀತು. ಬಾಗ್ಸ್ ಅವರ ಪ್ರಕಾರ "ವೈಜ್ಞಾನಿಕ ಬಗೆ" ಯ ವರ್ಗಕ್ಕೆ ಸೇರುವ ಈ ವೀಳೆಯ ಪದ್ಧತಿ ನೋಡಿದರೆ ಉತ್ತರ ಕರ್ನಾಟಕದ ಜನರಲ್ಲಿರುವ ಪದ್ಧತಿಯ ವಿವರಗಳು ಕಾವ್ಯದಲ್ಲಿ ಸಾಕ್ಷಾತ್ಕಾರವಾಗಿದೆ ಎನ್ನಬಹುದು. ಕವಿ ಪ್ರಾದೇಶಿಕ ಆಚರಣೆಗಳನ್ನೇ ಕುರಿತು ಹೇಳಿದ್ದರೂ ಎಷ್ಟೋ ಸಂಗತಿಗಳು ಭಾರತೀಯ ಜೀವನದಲ್ಲಿ ಕಾಣುತ್ತಿದೆ ಎಂಬುದನ್ನು ಗಮನಿಸಬೇಕು.

ಕುಮಾರವ್ಯಾಸನ ಕಾವ್ಯದಲ್ಲಿ ವಿಶೇಷವಾಗಿ ಕಾಣಿಸಿಕೊಂಡಿರುವ ಶಕುನಗಳು, ಜ್ಯೋತಿಷ ಆಣೆ-ಪ್ರಮಾಣ, ವೀಳ್ಯಪದ್ಧತಿ ಇವೇ ಮೊದಲಾದ ಆ ಕಾಲದ ಸಮಾಜದ ರೂಪುರೇಷೆ,. ಸ್ಥಿತಿ-ಗತಿಗಳನ್ನು ತಿಳಿಯಲು ನೆರವಾಗುವ ಅಂಶಗಳನ್ನು ಮಾತ್ರ ಇಲ್ಲಿ ಪ್ರತಿಪಾದಿಸಿದೆ.

## ಶುಭಾಶುಭ ಶಕುನಗಳು

ಸಾಮಾನ್ಯವಾಗಿ ಶಕುನಗಳು ಶಿಷ್ಟ ಹಾಗೂ ಜಾನಪದ ಕಾವ್ಯಗಳೆರಡರಲ್ಲೂ ಕಂಡುಬರುತ್ತವೆ. ಇವುಗಳಲ್ಲಿ ಕೆಲವು ಶಕುನಗಳು ವಿಶೇಷವಾಗಿ ಜಾನಪದ ಕೃತಿಗಳಲ್ಲಿ ಕಂಡುಬಂದರೆ, ಮತ್ತೆ ಕೆಲವು ಶಕುನಗಳು ಶಿಷ್ಟಕಾವ್ಯಗಳಲ್ಲಿ ಕಂಡುಬರುತ್ತವೆ. ಆದರೆ ಜನಸಾಮಾನ್ಯರ ಬದುಕಿಗೆ ಸಂಬಂಧಿಸಿದ ಹಲವಾರು ಶಕುನಗಳು ಎರಡೂ ಬಗೆಯ ಕಾವ್ಯಗಳಲ್ಲಿ ಕಂಡುಬರುತ್ತವೆ. ಇದಕ್ಕೆ ಕಾರಣವೆಂದರೆ ಶಿಷ್ಟ ಕಾವ್ಯಗಳಾಗಲಿ ಜಾನಪದ ಕಾವ್ಯಗಳಾಗಲಿ ಜನಜೀವನವನ್ನೇ ಕಾವ್ಯದ ತಮ್ಮ ಪ್ರಧಾನ ವಸ್ತುವನ್ನಾಗಿ ಇಟ್ಟುಕೊಂಡಿರುವುದು.

ಶಕುನ ವೆಂದರೆ "ಶುಭಶಕುನಗಳನ್ನು ಸೂಚಿಸುವ ನಿಮಿತ್ತಗಳ ಮೂಲಕ ಮುಂದಿನ ಆಗುಹೋಗುಗಳನ್ನು ತಿಳಿಸುವ ಶಾಸ್ತ್ರ"[೧] ಎಂದು ಅರ್ಥವಿದೆ. "ಭವಿಷ್ಯ ಸೂಚಕ ಎಂದು ಪರಿಗಣಿತವಾಗುವ ಒಂದು ಅಸಾಧಾರಣ ಸಂಗತಿ ಅಥವಾ ಘಟನೆ- ಕ್ರಮಬದ್ಧವಾದ ಕಾಲಜ್ಞಾನವು ಶಕುನಗಳನ್ನು ಭವಿಷ್ಯ ಸೂಚಿಯಾಗಿ ಪರಿಗಣಿಸುತ್ತದೆ."[೨] ಸಂಕ್ಷಿಪ್ತವಾಗಿ ಹೇಳುವುದಾದರೆ "ಮುಂಬರುವ

---

೧. ಕನ್ನಡ ನಿಘಂಟು: ಕ.ಸಾ.ಪ. ಸಂ-೮, ಪು. ೮೦೬೭

೨. ಕನ್ನಡ ಜಾನಪದ ವಿಶ್ವಕೋಶ, ಸಂ-೨, ಪು. ೧೮೩೧

ಜಯಾಪಜಯಗಳ ಅಥವಾ ವೃದ್ಧಿಹ್ರಾಸಗಳ, ಮಂಗಳಾಮಂಗಳಗಳ ಸೂಚನೆಯೇ ಶಕುನ."[1]

ಶಕುನಶಾಸ್ತ್ರವನ್ನು ಹೇಳುವವರನ್ನು ಶಕುನಿಗ, ನೈಮಿತ್ತಿಕ, ಕಣಿಗಾರ, ಜೋಯಿಸ, ಕೊರವಂಜಿ ಮೊದಲಾದ ಹೆಸರುಗಳಿಂದ ಕರೆಯುತ್ತಾರೆ. ಶಕುನಶಾಸ್ತ್ರಕ್ಕೆ ಸಂಬಂಧಿಸಿದಂತೆ ಹಲ್ಲಿಶಕುನ, ಹಕ್ಕಿಶಕುನ, ಪ್ರಾಣಿಶಕುನ, ನರಿಶಕುನ, ವೈದ್ಯಶಕುನ ಮೊದಲಾದ ಶಕುನಗಳ ಬಗ್ಗೆ ಪ್ರತ್ಯೇಕ ಶಾಸ್ತ್ರಗ್ರಂಥಗಳನ್ನು ಕಾಣುತ್ತೇವೆ. ಸ್ವಪ್ನಗಳನ್ನು ಶಕುನಗಳಂತೆಯೇ ಭಾವಿಸುವುದುಂಟು. ಸ್ವಪ್ನವಾಗಲಿ, ಶಕುನಗಳಾಗಲಿ "ಚೈತನ್ಯಸ್ವರೂಪಿಯಾದ ಪ್ರಕೃತಿನೀಡುವ ಮುನ್ನೆಚ್ಚರಿಕೆಯನ್ನು ಗಮನಿಸದಿದ್ದರೆ ಮಾನವನಿಗೆ ಹಾನಿ ತಪ್ಪದು ಎಂಬ ನಂಬಿಕೆ ಸಮಾಜದಲ್ಲಿ ರೂಢಮೂಲವಾಗಿ ನೆಲಸಿರುವುದಕ್ಕೆ"[2] ಸಾಕ್ಷಿಯಾಗಿದೆ.

ಸಾಮಾನ್ಯವಾಗಿ ಶಕುನಗಳನ್ನು ಶುಭಶಕುನ (ಒಳ್ಳೆಯ ಶಕುನ, ಮಂಗಳಶಕುನ)ಗಳೆಂದೂ, ಅಶುಭಶಕುನ (ಅಪಶಕುನ, ಕೆಟ್ಟಶಕುನ, ದುಶ್ಶಕುನ)ಗಳೆಂದೂ ವರ್ಗೀಕರಿಸುತ್ತಾರೆ. ಶುಭಶಕುನಗಳು ಕಂಡುಬಂದಾಗ ಸಂತೋಷಿಸುವುದೂ ಸಂಭ್ರಮಗೊಳ್ಳುವುದೂ ಸಾಮಾನ್ಯ ಸಂಗತಿಯಾದರೆ, ಅಪಶಕುನಗಳು - ದುಃಸ್ವಪ್ನಗಳು ಕಂಡುಬಂದಾಗ ಆ ಬಗ್ಗೆ ಚಿಂತಾಕ್ರಾಂತರಾಗುವುದೂ, ಅನಿಷ್ಟನಿವಾರಣೆಗಾಗಿ ಪರಿಹಾರಕ್ರಮಗಳನ್ನು ಕೈಗೊಳ್ಳುವುದು ಸಾಮಾನ್ಯ ಸಂಗತಿ. ಶಕುನಗಳಾಗಲಿ ಸ್ವಪ್ನಗಳಾಗಲಿ ಮುಂಬರುವ ಘಟನೆಗಳನ್ನು ಸೂಚಿಸುತ್ತವೆಯೇ ಹೊರತು ಅವುಗಳನ್ನು ವಿವರಿಸುವುದಿಲ್ಲ. "ಅಸ್ಪಷ್ಟತೆ ಮತ್ತು ಸಂದಿಗ್ಧತೆಗಳು ಅವುಗಳ ಪ್ರಮುಖಲಕ್ಷಣಗಳು"[3] ಕೆಲವೊಮ್ಮೆ ಶಕುನಗಳು ಯಾರಿಗೆ ಉಂಟಾಗುತ್ತವೆಯೋ ಅವುಗಳ ಫಲಾನುಫಲಗಳು ಅವರಿಗೆ ಮಾತ್ರ ಸಂಬಂಧಿಸಿರುತ್ತವೆ. ಮತ್ತೆ ಕೆಲವೊಮ್ಮೆ ಆ ಶಕುನಗಳ ಫಲಾಫಲಗಳು ಇತರರಿಗೆ ಸಂಬಂಧಿಸಿರುತ್ತವೆ. ಸ್ವಪ್ನಗಳೂ ಇದಕ್ಕೆ ಹೊರತಲ್ಲ. ಅನೇಕ ಸಂದರ್ಭಗಳಲ್ಲಿ ಸ್ವಪ್ನಗಳಾಗಲಿ ಶಕುನಗಳಾಗಲಿ ಸಾಂಕೇತಿಕವಾಗಿದ್ದು ಅವುಗಳನ್ನು ಅರ್ಥೈಸುವುದು ಕಷ್ಟವಾಗುತ್ತದೆ. ಒಂದು ರೀತಿಯಲ್ಲಿ ಒಗಟಿನಂತಿರುತ್ತವೆ ಎನ್ನಬಹುದು. ಕೆಲವು ಸ್ವಪ್ನಗಳು - ಶಕುನಗಳು ಸಾಂಪ್ರದಾಯಿಕವಾಗಿದ್ದು ಇಂಥ ಶಕುನಕ್ಕೆ ಇಂಥ ಫಲವೆಂದು ನಿರ್ಧಾರಿತವಾಗಿ ಜನ ಅದನ್ನು ಪ್ರಶ್ನಿಸದೆ ನಂಬಿಕೊಂಡು ಬಂದಿದ್ದಾರೆ. ಇಂಥ ಜಾನಪದ ನಂಬಿಕೆಗಳಲ್ಲಿ

---

೧. ಜಾನಪದ ಸೌಂದರ್ಯ: ದೇಜಗೌ, ಪು.೩೩.

೨. ಕ.ಜಾ.ವಿ. ಸಂ-೨, ಪು-೧೮೩೪

೩. ಜಾನಪದ ಸೌಂದರ್ಯ: ದೇಜಗೌ, ಪು-೩೧

ಕೆಲವು ಮೂಢನಂಬಿಕೆಗಳು ಎನ್ನಬಹುದಾದರೂ ಮತ್ತೆ ಕೆಲವುಗಳಲ್ಲಿ ವೈಚಾರಿಕ ಹಿನ್ನೆಲೆಯನ್ನು ಕಾಣಬಹುದು.

ಶಕುನಗಳಲ್ಲಿ ನಂಬಿಕೆಯಿಟ್ಟಿರುವುದನ್ನು ಭಾರತೀಯ ಸಾಹಿತ್ಯದಲ್ಲಷ್ಟೇ ಅಲ್ಲ ಪಾಶ್ಚಾತ್ಯಸಾಹಿತ್ಯದಲ್ಲೂ ಕಾಣಬಹುದು. ಪಾಶ್ಚಾತ್ಯರ ಜನ-ಜೀವನದಲ್ಲೂ ಇಂಥ ಸಾಂಪ್ರದಾಯಿಕ ನಂಬಿಕೆಗಳು ಇವೆಯೆಂದು ತಿಳಿದುಬರುತ್ತವೆ. ಕೆಲವು ನಂಬಿಕೆಗಳಂತೂ ಅಶುಭ ಶಕುನಗಳಿಗೆ ಸಂಬಂಧಿಸಿದವುಗಳಾಗಿದ್ದು, ಪ್ರಾಚೀನ ಕಾಲದಿಂದಲೂ ಜಗತ್ತಿನ ನಾನಾ ಭಾಗಗಳಲ್ಲಿ ಕಾಣಬಹುದಾಗಿದೆ. ಸ್ಕಾಟ್‌ಲೆಂಡ್, ಮತ್ತು ಇಂಗ್ಲೆಂಡ್ ದೇಶಗಳಲ್ಲಿ ಇರುವ ನಂಬಿಕೆಯ ಪ್ರಕಾರ "ಶವ ಸಂಸ್ಕಾರದ ಸಂದರ್ಭದಲ್ಲಿ ಯಾವಾತನ ಮೇಲೆ ಸೂರ್ಯನ ಬೆಳಕು ಪ್ರಖರವಾಗಿ ಬೀಳುತ್ತದೋ ಆತನೇ ಸಾಯುವವರ ಸರದಿಯಲ್ಲಿ ಎರಡನೆಯವನಾಗಿರುತ್ತಾನೆ."[೧] ಷೇಕ್ಸ್‌ಪಿಯರನ ನಾಟಕಗಳಲ್ಲಿ ಶಕುನಗಳ ಪ್ರಸ್ತಾಪ ಬರುವುದನ್ನು ಕಾಣಬಹುದು. ರಾಜ ಮಹಾರಾಜರಿಗೆ ಸಂಬಂಧಿಸಿದ ಅನೇಕ ಶಕುನಗಳು ತುಂಬ ಪ್ರಾಚೀನವೂ ಲೋಕ ಪ್ರಸಿದ್ಧವೂ ಆಗಿವೆ ಎನ್ನಬಹುದು.

ಕುಮಾರವ್ಯಾಸನ ಕಾವ್ಯದಲ್ಲಿ ಸಂದರ್ಭಗಳಿಗೆ ತಕ್ಕಂತೆ ಬಗೆಬಗೆಯ ಶಕುನ-ಸ್ವಪ್ನಗಳು ನಿರೂಪಿತವಾಗಿವೆ. ಇವುಗಳಲ್ಲಿ ಕೆಲವು ಬೇರೆ ಬೇರೆ ಕಥಾ ಸಂದರ್ಭಗಳಲ್ಲಿ ಪುನರುಕ್ತಿಗೊಂಡಿರುವುದನ್ನು ಕಾಣಬಹುದು. ಇಲ್ಲಿ ಕೆಲವು ಬಗೆಯ ಶಕುನಗಳನ್ನು ಕುರಿತು ಪ್ರಸ್ತಾಪಿಸಲಾಗಿದೆ.

## ಅಶುಭ ಶಕುನಗಳು

### ನಿಸರ್ಗ ಶಕುನಗಳು

ಭೂಕಂಪ, ಧೂಮಕೇತುದರ್ಶನ, ಗ್ರಹಣ, ಉಲ್ಕಾಪಾತ, ಪ್ರವಾಹ ಮೊದಲಾದ ನಿಸರ್ಗ ವ್ಯಾಪಾರಗಳನ್ನು ಜನರು ಅಪಶಕುನಗಳಾಗಿ ಭಾವಿಸುತ್ತಾ ಬಂದಿದ್ದಾರೆ. ಅಂತೆಯೇ ನಮ್ಮ ಕಾವ್ಯಗಳಲ್ಲೂ ಅವುಗಳನ್ನು ಅಪಶಕುನಗಳ ಪ್ರತೀಕವಾಗಿ ಉಲ್ಲೇಖಿಸಿದ್ದಾರೆ. ಕುಮಾರವ್ಯಾಸನು ತನ್ನ ಕಾವ್ಯದಲ್ಲಿ ಈ ಶಕುನಗಳನ್ನು ಹಲವಾರು ಬಾರಿ, ಹಲವಾರು ಪ್ರಸಂಗಗಳಲ್ಲಿ ಉಲ್ಲೇಖಿಸಿದ್ದಾನೆ.

---

೧. ಕ.ಜಾ.ವಿ : ಸಂ-೨, ಪು- ೧೮೩೫

ದುರ್ಯೋಧನನು ಜನಿಸಿದ ಸಂದರ್ಭದಲ್ಲಿ ಹಸ್ತಿನಾವತಿಯಲ್ಲಿ "ಭೂಮಿ ನಡುಗಿತು ದೆಸೆದೆಸೆಗೆ ಹರಿದವು। ಧೂಮಕೇತುಗಳೊದರಿದವು ಬಳಿ । ಕಾ ಮಹಾನಗರದಲಿ ಭರದಲಿ ಭೂರಿ ಗೋಮಾಯು." (ಆ.ಪ. ೪-೫೦)

ಅಕ್ಷಯವಸ್ತ್ರ ಪ್ರಸಂಗದ ನಂತರ ಭೀಮಾರ್ಜುನರು ಪ್ರತಿಜ್ಞೆ ಕೈಗೊಂಡಾಗ "ಗಜಪುರದೊಳಗೆ ನೆಲಬಾಯಬಿಟ್ಟುದು, ಸುರಿದುದರುಣಾಂಬುವಿನ ಮಳೆ ತತ್ಪುರದ ಮಧ್ಯದಲಿ" (ಸ.ಪ. ೧೫-೪೦) ಅಂತೆಯೇ "ಅಭ್ರದಿ ಧೂಮಕೇತುಗಳು ನೆಗಳಿದವು, ಬಿರುಗಾಳಿ ಗಿರಿಗಳ ಮಗುಚಿ ಮುರಿದವು ದೇವತಾಭವನದ ಶಿಖರವನು....." (ಸ.ಪ. ೧೫-೪೧)

ಗ್ರಹಣದ ಪರಿಣಾಮಗಳನ್ನು ಕವಿ ಸಹಜವಾಗಿ ಚಿತ್ರಿಸಿದ್ದಾನೆ. ಮೇಲ್ಕಂಡ ಸಂದರ್ಭದಲ್ಲೇ ಉಂಟಾದ ಪ್ರಕೋಪಗಳನ್ನು ವರ್ಣಿಸುವಾಗ ಕವಿ "ತಾರಕೆಗಳಿನ ಬಿಂಬವನು ಝೇಂಕರಿಸಿದನಾ ರಾಹು । ತೋರಣದಲುರಿ ತಳಿತು ರಾಜ। ದ್ವಾರ ಹೊಗೆದುದು ದೆಸೆದೆಸೆಗಳಂಬರ। ಧಾರುಣಿಯೊಳುತ್ಪಾತ ಬಿಗಿದುದು ಮೊಗೆದುದದ್ಭುತವ॥" (ಸ.ಪ. ೧೫-೪೨) ಎಂದು ಹೇಳುತ್ತಾನೆ.

ಆಕಾಶದ ಮತ್ತು ಭೂಗ್ರಹದ ಉತ್ಪಾತಗಳನ್ನು ಹೇಳುವಂತೆಯೇ ಕವಿ ನಾವು ವಾಸಮಾಡುವ ನೆಲದ ಮೇಲಿನ ಉತ್ಪಾತಗಳನ್ನು ಪ್ರಸ್ತಾಪಿಸುತ್ತಾನೆ. "ನಡುಗಿತಿಳೆ ನಡುಹಗಲಗತ್ತಲೆ। ಯಡಸಿತಾಕಾಶದಲಿ ಹೆಮ್ಮರ। ನುಡಿದು ಬಿದ್ದವು ಸಲಿಲವುಕ್ಕಿತು ಕೂಡೆ ಕೆರೆತೊರೆಯ....... ಲೊಡನೊಡನೆ ಸಿಡಿಲೆರಗಿತು.....॥" (ಸ.ಪ. ೧೫-೪೨)

ಹೀಗೆ 'ತಾಯ ಮಳಲುಬ್ಬರಿಸುವುದೂ ಜಲನಿಧಿ ಬಾಯ್ಬಿಡುವುದೂ ಹೆಮ್ಮರಗಳು ಉರುಳುವುದೂ, ತೋರಣದಲಿ ಉರಿ ಕಾಣಿಸಿಕೊಳ್ಳುವುದೂ, ದೇವತಾಭವನದ ಶಿಖರಗಳುರುಳುವುದೂ, ಮೊದಲಾದ ಅಶುಭಶಕುನಗಳು ಪರಂಪರಾಗತವಾಗಿ ನಮ್ಮ ಕಾವ್ಯಗಳಲ್ಲಿ ಕಾಣಿಸಿಕೊಂಡಿವೆ ಎನ್ನಬಹುದು.

**ಪಶು-ಪಕ್ಷಿ ಶಕುನಗಳು**

ಮನುಷ್ಯ ನಿಸರ್ಗದಲ್ಲಿ ವಾಸಿಸುವಂತೆಯೇ ಇತರ ಪ್ರಾಣಿಗಳೊಡನೆಯೂ ವಾಸ ಮಾಡುತ್ತಾನೆ. ಸಾಕು ಪ್ರಾಣಿಗಳೇ ಅದಕ್ಕೆ ನಿದರ್ಶನ. ಮನುಷ್ಯ ಪ್ರಕ್ರಿಯೆಗಳಲ್ಲಿ ಶಕುನಗಳನ್ನು ಕಂಡಂತೆಯೇ ಪ್ರಾಣಿ ಪ್ರಕ್ರಿಯೆಗಳಲ್ಲಿಯೂ ಶಕುನಗಳನ್ನು ಕಾಣುವುದು

ಇಂದಿಗೂ ಗ್ರಾಮೀಣ ಜೀವನದಲ್ಲಿ ಹೆಚ್ಚಾಗಿ ಕಾಣಬಹುದು. ಏಕೆಂದರೆ ಪಶು-ಪಕ್ಷಿಗಳು ಗ್ರಾಮೀಣ ಜೀವನದಲ್ಲಿ ಹಾಸುಹೊಕ್ಕಾದಷ್ಟು ನಗರ ಜೀವನದಲ್ಲಿ ಕಂಡು ಬರುವುದಿಲ್ಲ. ಹೆಚ್ಚಾಗಿ ಪಶು ಪ್ರಾಣಿ ಶಕುನಗಳನ್ನು ಪ್ರಯಾಣ ಕಾಲದಲ್ಲಿ ಕಾಣುತ್ತೇವೆ ಎನ್ನುವುದು ಗಮನಾರ್ಹ ಸಂಗತಿ.

ಅಕ್ಷಯವಸ್ತ್ರದ ಪ್ರಸಂಗಾ ನಂತರ '... ವಾರುವ ಪಟ್ಟದಾನೆಗಳೊಗುಮಿಗೆಯ ಕಂಬನಿಗಳ' ಉಗುಳಿದವು. (ಸ.ಪ.೧೫-೪೧) ಅಂತೆಯೇ ಪಾಂಡವರನ್ನು ಕೊಲ್ಲಲು ಅಶ್ವತ್ಥಾಮ ರಾತ್ರಿಯಲ್ಲಿ ಪಾಂಡವ ಪಾಳೆಯಕ್ಕೆ ಬರುತ್ತಿರುವಾಗ ".... ಗೂಗೆ ಬಂದುದದೊಂದು ವಟಕುಜದಗ್ರಭಾಗದಲಿ। ಕಾಗೆಗಳ ಗೂಡುಗಳ ಹೊಯ್ದು ವಿ।ಭಾಗಿಸಿತು ತುಂಡದಲಿ ಬಿದ್ದವು। ಕಾಗೆ ಸುಭಟನ ಸಮ್ಮುಖದಲಿ ಸಹಸ್ರ ಸಂಖ್ಯೆಯಲಿ" (ಗ.ಪ. ೯-೫) ಎಂದು ಕವಿ ಹೇಳುತ್ತಾನೆ.

ಪಾಂಡವರು ಹಸ್ತಿನಾವತಿಗೆ ದ್ಯೂತವಾಡಲು ಹೊರಟಾಗ ಅಪಶಕುನಗಳ ಸಾಲೇ ಕಂಡುಬರುತ್ತದೆ:

ಹರಡೆ ಕೆವರಿತು ಬಲದಲುದಯದ
ಉರಿಯಲೊದರಿತು ಹಸುಬನೆಡದಲಿ
ಕರಿಯ ಹಕ್ಕಿಯ ತಾರುಹಂಗನ ವಾಮದುಡಿಕೆಗಳ (ಸ.ಪ. ೧೩-೧).

ಆದರೆ ಪಾಂಡವರು ಪ್ರಯಾಣ ನಿಲ್ಲಿಸಲಿಲ್ಲ. ಶಕುನದ ಪರಿಣಾಮ ತಪ್ಪಲಿಲ್ಲ.

ಅರಣ್ಯವಾಸದಲ್ಲಿದ್ದ ಪಾಂಡವರನ್ನು ಭಂಗಿಸಲು ಸಿದ್ಧನಾಗಿ ಹೊರಟ ಜಯದ್ರಥನಿಗೆ "ಉರಿಹೊಗೆಯ ದಿಕ್ಕಿನಲಿ ಹಕ್ಕಿಗಳೊರಳಿದವು ಗೋಮಾಯು ರವವಬ್ಬರಿಸಿ" (ಅ.ಪ. ೨೨-೫) ರಣಭಯವನ್ನು ಸೃಷ್ಟಿಸಿದುವು.

ಇದೇ ರೀತಿ ಇನ್ನೂ ಹಲವಾರು ಪ್ರಸಂಗಗಳಲ್ಲಿ ಪಶುಪಕ್ಷಿಶಕುನಗಳನ್ನು ಕುಮಾರವ್ಯಾಸನ ಕಾವ್ಯದಲ್ಲಿ ಕಾಣಬಹುದು.

## ಅಂಗಶಕುನಗಳು ಮತ್ತು ವಸ್ತುಶಕುನಗಳು

ಕುಮಾರವ್ಯಾಸನು ತನ್ನ ಕಾವ್ಯದಲ್ಲಿ ದೇಹದ ಅಂಗಾಂಗಗಳ ಸ್ಫುರಣೆಗಳಲ್ಲಿ, ಆಯುಧ ಧ್ವಜಪತಾಕೆ ಮೊದಲಾದ ವಸ್ತುಗಳ ಬಳಕೆಗಳಲ್ಲಿ ಮುಂಬರುವ ವಿಪತ್ತುಗಳ

ಸೂಚನೆಗಳನ್ನು ವ್ಯಕ್ತಪಡಿಸುವ ಕ್ರಿಯೆಗಳನ್ನು ಉಲ್ಲೇಖಿಸುತ್ತಾನೆ. ಅಪಶಕುನ ಸೂಚಕವಾಗಿ ದ್ರೌಪದಿಯ ಅಕ್ಷಯವಸ್ತ್ರ ಪ್ರಸಂಗಾನಂತರ 'ಕೈದುಗಳು ಕುಳುಗಿಡಿಗಳನು ಉಗುಳು'ವುದರಿಂದಲೂ (ಸ.ಪ. ೧೫-೪೧) ಕೈಯಲ್ಲಿ ಹಿಡಿದಿರುವ ಕೈದುಗಳು ಉಡಿದು 'ಬೀಳುವುದರಿಂದಲೂ (ಸ.ಪ. ೧೫-೪೩) ಕೌರವ ಕುಲಕ್ಷಯ ಸೂಚಿತವಾಗುತ್ತದೆ. ಗೋಗ್ರಹಣ ಪ್ರಸಂಗದಲ್ಲಿ "ಪೊರೆಯುಗಿದಡಾಯುಧ ಮುರಿದು ಬೀಳು"ವುದರಿಂದಲೂ (ವಿ.ಪ.೭-೨) ತೊಡೆಮುರಿದು ಭೂಮಿಯ ಮೇಲೆ ಒರಗಿದ ದುರ್ಯೋಧನನ ಅವನತಿಯನ್ನು 'ಒರೆಸಹಿತ ಕರದಿಂದ ಬಿದ್ದ ಕಯ್ದುಗಳೂ, ಕಡಿದು ಬಿದ್ದ ಧ್ವಜ ಪತಾಕೆಗಳು' ಸೂಚಿಸುತ್ತವೆ. (ಗ.ಪ. ೮-೫)

### ಸ್ವಪ್ನ ಶಕುನಗಳು

ಸ್ವಪ್ನಗಳು ಒಬ್ಬ ವ್ಯಕ್ತಿಗೆ ಮಾನಸಿಕವಾಗಿ ಕಾಣಿಸಿಕೊಳ್ಳುವ ನಿಮಿತ್ತಗಳಾಗಿವೆ. ಭವಿಷ್ಯಸೂಚಕವಾದ ಸಂಗತಿಗಳ ಮುಂದೆ ಶುಭಾಶುಭಫಲಗಳನ್ನು ಕೊಡುವ ಹಿನ್ನೆಲೆಯಲ್ಲಿ ಸಾಂಕೇತಿಕವಾಗಿ ಕನಸಿನ ರೂಪದಲ್ಲಿ ಕಾಣಿಸಿಕೊಳ್ಳುತ್ತವೆ. ಸ್ವಪ್ನಗಳನ್ನು ಕಂಡ ವ್ಯಕ್ತಿಯೇ ಅವನ್ನು ಅರ್ಥೈಸಲು ಸಾಧ್ಯವಾಗದೆ ತೊಳಲಾಡುವ ಪ್ರಸಂಗಗಳನ್ನು ನಮ್ಮ ಕಾವ್ಯಗಳಲ್ಲಿ ಕಾಣಬಹುದು. ಸಾಮಾನ್ಯವಾಗಿ ಸ್ವಪ್ನ ಶಕುನಗಳನ್ನು ಇತರರಲ್ಲಿ ಪ್ರಸ್ತಾಪಿಸಿದಾಗ ಅವರು ಅರ್ಥಹೇಳುವುದನ್ನು, ಪರಿಹಾರ ಸೂಚಿಸುವುದನ್ನು ಕಾಣುತ್ತೇವೆ. ಜಾನಪದ ಹಾಗೂ ಶಿಷ್ಟ ಕಾವ್ಯಗಳಲ್ಲದೆ ಆಧುನಿಕ ಮಹಾಕಾವ್ಯಗಳಲ್ಲೂ ಸ್ವಪ್ನ ಶಕುನಗಳನ್ನು ಕಾಣುತ್ತೇವೆ. ಇದಕ್ಕೆ 'ರಾಮಾಯಣದರ್ಶನಂ' ಮಹಾಕಾವ್ಯವನ್ನು ಉದಾಹರಿಸಬಹುದು. ಕುಮಾರವ್ಯಾಸ ಭಾರತದಲ್ಲಿ ಶಕುನಗಳಷ್ಟು ಪ್ರಮಾಣದಲ್ಲಿ ಸ್ವಪ್ನಗಳ ಪ್ರಸಂಗ ಕಾಣಬರದಿದ್ದರೂ ಬರುವ ಕೆಲವೊಂದು ಸ್ವಪ್ನ ಪ್ರಸಂಗಗಳು ಅರ್ಥಪೂರ್ಣವಾಗಿವೆ. ಉದಾಹರಣೆಗೆ: ಧರ್ಮರಾಯ ಹಸ್ತಿನಾಪುರಿಗೆ ದ್ಯೂತವಾಡಲು ಬಂದ ರಾತ್ರಿ 'ಪ್ರಾಸಾದ ಶಿಖರವು ಮುರಿದು ಅಡವಿಯ ಮಧ್ಯೆ ಬಿದ್ದಂತೆ' (ಸ.ಪ. ೧೩-೧೬) ಕನಸಾಗುತ್ತದೆ. ಬೌದ್ಧ ಮತ್ತು ಜೈನ ಕಾವ್ಯಗಳಲ್ಲಿ ಸ್ವಪ್ನಗಳು ಮಹತ್ತರ ಪ್ರಾಶಸ್ತ್ಯ ಪಡೆದಿರುವುದನ್ನು ಗಮನಿಸಬಹುದು. ಆ ಕಾವ್ಯಗಳಲ್ಲಿ ಮಹಾಪುರುಷರು ಜನಿಸುವ ಮೊದಲು ತಾಯಂದಿರಿಗೆ ಬೀಳುವ ಶುಭ ಸಂಕೇತಗಳಾದ ಕನಸುಗಳು ವಿಶಿಷ್ಟವಾಗಿವೆ. ಇಂಥ ಪ್ರಸಿದ್ಧ ಸ್ವಪ್ನಗಳನ್ನು ಕುಮಾರವ್ಯಾಸ ಭಾರತದಲ್ಲಿ ಕಾಣಲಾರೆವು.

## ಶುಭ ಶಕುನಗಳು

ಶಕುನಗಳು ಶುಭವಿರಲಿ ಅಶುಭವಿರಲಿ ಅವು 'ಬರುವುದರ ಕಣ್ಣನ್ನೆ'ಗಳಾಗಿರುತ್ತವೆ. ಅವುಗಳನ್ನು ಅರ್ಥೈಸಲು ಜನಸಾಮಾನ್ಯರಿಗೆ ಸಾಧ್ಯವಾಗದುದರಿಂದ ಆ ಬಗ್ಗೆ ಕ್ರಮಬದ್ಧವಾಗಿ ವಿವರಿಸುವ ಹಲವಾರು ಬಗೆಯ 'ಶಕುನಶಾಸ್ತ್ರ'ಗಳೇ ನಮ್ಮಲ್ಲಿ ಹುಟ್ಟಿಕೊಂಡಿವೆ. ಅಲ್ಲದೆ ಅವುಗಳನ್ನು ಜನಗಳಿಗೆ ಹೇಳುವ ಒಂದು ವರ್ಗದ ಜನರೇ ನಿರ್ಮಾಣವಾದರು. ಅವರಲ್ಲಿ ಕೆಲವರಿಗೆ ಇದೇ ಒಂದು ವೃತ್ತಿಯಾಯಿತು. ಉದಾಹರಣೆಗೆ, ಕೊರವಂಜಿ, ಬುಡುಬುಡಿಕೆಯವರು, ಹಕ್ಕಿ ಶಾಸ್ತ್ರದವರು, ಜೋಯಿಸರು ಮೊದಲಾದ ಕೆಲವು ವರ್ಗದವರನ್ನು ವೃತ್ತಿಕಾರರೆಂದು ಹೇಳಬಹುದು.

ಕನಸುಗಳಲ್ಲಿ ಹೆಚ್ಚಾಗಿ ಅಪಶಕುನಗಳು ಕಂಡುಬಂದರೂ ಸಾಕಷ್ಟು ಶುಭಶಕುನಗಳೂ ಕಂಡುಬರುತ್ತವೆ. ಇಂದಿಗೂ ಗ್ರಾಮೀಣ ಹಾಗೂ ನಾಗರಿಕ ಜನಜೀವನದಲ್ಲಿ ಶುಭಶಕುನಗಳನ್ನು ಕಂಡರೆ ಪ್ರಯಾಣ ನಿಲ್ಲಿಸುವ ಜನರನ್ನು ಕಾಣಬಹುದು. ಶುಭ ಅಥವಾ ಅಶುಭ ಶಕುನಗಳು ತಾವಾಗಿಯೇ ಗೋಚರವಾಗುವ ಶಕುನಗಳೇ ಹೊರತು, ಜನ ತಾವಾಗಿಯೇ ನಿರೀಕ್ಷಿಸಿದಂತೆ ಕಾಣಿಸಿಕೊಳ್ಳುವುದಿಲ್ಲ. ಅಶುಭಶಕುನಗಳಂತೆಯೇ ಶುಭಶಕುನಗಳು ಇಂಥಿಂಥವೇ ಎಂದು ನಮ್ಮ ಜೀವನದಲ್ಲಿ ಮೊದಲಿನಿಂದಲೂ ರೂಢಿಯಾಗಿ ಬಂದಿವೆ. ಇವು ಕಾಲಕ್ಕೆ ತಕ್ಕಂತೆ ಬದಲಾವಣೆಯಾಗದೆ ರೂಢಿಗತವಾಗಿ ಬಳಕೆಯಲ್ಲಿವೆ. ಆದ್ದರಿಂದಲೇ ಒಂದೇ ತೆರನಾದ ಶಕುನಗಳು ಬೇರೆ ಬೇರೆ ಕಾಲದಲ್ಲಿ ರಚಿತವಾಗಿರುವ ನಮ್ಮ ಕಾವ್ಯಗಳನ್ನು ಕಂಡುಬರುತ್ತವೆ. ಪಂಪನ ಕೃತಿಯಲ್ಲಿ ಕಾಣುವ ಎಷ್ಟೋ ಶಕುನಗಳು ಕುಮಾರವ್ಯಾಸನ ಕಾವ್ಯದಲ್ಲೂ ಕಂಡುಬರುತ್ತವೆ. ಇಬ್ಬರು ಕವಿಗಳೂ ವ್ಯಾಸ ಭಾರತವನ್ನೂ ಅನುಸರಿಸಿರುವುದರಿಂದ ಎರಡೂ ಕೃತಿಗಳಲ್ಲಿ ಸಮಾನ ಶಕುನಗಳು ಕಾಣಿಸಿಕೊಳ್ಳುತ್ತವೆ ಎನ್ನುವುದಕ್ಕಿಂತಲೂ ಭಾರತೀಯ ಜನಜೀವನದಲ್ಲಿ ಮೊದಲಿನಿಂದಲೂ ರೂಢಿಯಲ್ಲಿರುವ ಕೆಲವು ಶಕುನಗಳು ಕಾವ್ಯಗಳಲ್ಲೂ ಬದಲಾವಣೆಯಿಲ್ಲದೆ ಕಾಣಿಸಿಕೊಂಡಿದೆ ಎನ್ನಬಹುದು.

ಜೈನ ಕಾವ್ಯಗಳಲ್ಲಿ ಕೆಲವು ಪ್ರಸಿದ್ಧ ಶುಭ ಶಕುನಗಳು ಚಾಚೂತಪ್ಪದೆ ಪುನರುಕ್ತಿಗೊಳ್ಳುವುದನ್ನು ಕಾಣಬಹುದು. ಉದಾಹರಣೆಗೆ, ತೀರ್ಥಂಕರರ ಜೀವನ

ವೃತ್ತದ ಪುರಾಣ ಕಾವ್ಯಗಳಲ್ಲಿ ತೀರ್ಥಂಕರನ ಜನನಕ್ಕೆ ಮುನ್ನ ಅವನ ತಾಯಿಗೆ ಕಾಣಿಸಿಕೊಳ್ಳುವ ಸ್ವಪ್ನಗಳಲ್ಲಿ ಕಂಡುಬರುವ ಶುಭಸಂಕೇತಗಳು ಒಂದೇ ತೆರನಾಗಿರುತ್ತವೆ. ಕುಮಾರವ್ಯಾಸನ ಕಾವ್ಯದಲ್ಲಿ ಹತ್ತಾರು ಕಡೆ ಹಲವಾರು ಬಗೆಯ ಶುಭಶಕುನಗಳ ಪ್ರಸ್ತಾವ ಕಂಡುಬರುತ್ತವೆ. ಈ ಬಗೆಯ ಶಕುನಗಳಲ್ಲಿ ಹೆಚ್ಚಾಗಿ ಪಶುಪಕ್ಷಿಗಳ ಶಕುನಗಳನ್ನು, ಪ್ರಕೃತಿವ್ಯಾಪಾರದ ಶಕುನಗಳನ್ನು, ಅಂಗ ಶಕುನಗಳನ್ನು, ಶುಭ ಸಂಕೇತಗಳ ಆಗಮನ ಮತ್ತು ಶುಭ ಸ್ವಪ್ನಗಳನ್ನು ಕಾಣಬಹುದು. ಕಳಶ ಕನ್ನಡಿ ಮತ್ತು ವರಯುವತಿಯರ ಆಗಮನ, ಮೊಳಗುತ್ತಿರುವ ಶಂಖ ದುಂದುಭಿ, ಕಹಳೆ, ಮೃದಂಗಾದಿಗಳ ಭೋರ್ಗರೆತ ಇವು ಕೆಲವು ಶುಭ ಸಂಕೇತಗಳಾಗಿವೆ.

ಬ್ರಾಹ್ಮಣವೇಷದಲ್ಲಿದ್ದ ಪಾಂಡವರು ಆ ಊರಿನ ಬ್ರಾಹ್ಮಣರೊಂದಿಗೆ ದ್ರೌಪದಿಯ ಸ್ವಯಂವರಕ್ಕೆ ಹೊರಟ ಸಂದರ್ಭದಲ್ಲಿ "ಬರುತ ಕಂಡರು ಕಳಶ ಕನ್ನಡಿ/ ವರಯುವತಿ ಖಗಮೃಗದ ಬಲಬುಸುಸ್ವರ ಸುಗಂಧಾನಿಲ ಸುಸಂಗತ ಶಕುನ ಸೂಚಕವ" ಕಂಡರು. (ಆ.ಪ.೧೧-೨೨)

ವನವಾಸ ಕಾಲದಲ್ಲಿ ಅರ್ಜುನನು ಪಾಶುಪತಾಸ್ತ್ರಕ್ಕಾಗಿ ತಪಸ್ಸಿಗೆ ಹೊರಟು:

> ಹರಡೆ ವಾಮದಲುಲಿಯೆ ಮಧುರ
> ಸ್ವರದಲಪಸವ್ಯದಲಿ ಹಸುಬನ
> ಸರ ಸಮಾಹಿತಮಾಗೆ ಸೂರ್ಯೋದಯ ಸಮಯದಲಿ
> ಹರಿಣ ಭಾರದ್ವಾಜನುಡಿಕೆಯ
> ಸರಟ ನಕುಲನ ತಿದ್ದುಗಳ ಕು
> ಕ್ಕುರನ ತಾಳಿನ ಶಕುನವನು ಕೈಗೊಳುತ ನಡೆತಂದ (ಅ.ವ.೪-೩೩)

ಈ ಶಕುನಪಕ್ಷಿಗಳು ವಿರುದ್ಧಗತಿಯಲ್ಲಿ ಕಾಣಿಸಿಕೊಂಡಾಗ ಅಪಶಕುನಗಳಾಗಿ ಪರಿಣಮಿಸುವುದನ್ನು ಸಭಾಪರ್ವದಲ್ಲಿ ಪಾಂಡವರು ದ್ಯೂತವಾಡಲು ಹಸ್ತಿನಾವತಿಗೆ ಹೊರಟ ಸಂದರ್ಭದಲ್ಲಿ ಕವಿ ವರ್ಣಿಸಿರುವುದನ್ನು ಕಾಣುತ್ತೇವೆ.(ಸ.ಪ. ೧೩-೨) ಇಲ್ಲಿ ಅವೇ ಮೃಗಪಕ್ಷಿಗಳು ಕಾಣಿಸಿಕೊಂಡರೂ ಸಹ, ಕಾಣಿಸಿಕೊಂಡ ರೀತಿಯಲ್ಲಿ ವ್ಯತ್ಯಾಸವಿರುವುದು ಗಮನಾರ್ಹ. ಅಲ್ಲಿ ಅಪಶಕುನವಾದಾಗ 'ಹರಡೆ ಬಲದಲಿ ಕೆದರಿತು' ಎನ್ನುತ್ತಾನೆ.

ಇದೇ ರೀತಿ ಉದ್ಯೋಗಪರ್ವದಲ್ಲಿ ಅರ್ಜುನನು ಕೃಷ್ಣನ ಸಹಾಯವನ್ನು ಬೇಡಲು ದ್ವಾರಕೆಗೆ ಹೊರಟ ಸಂದರ್ಭದಲ್ಲಿ "ಬರುತ ಕಂಡನು, ಲೀಲೆಯಲಿ

ನರ್ತಿಸುವ ನವಿಲನು ಬನದೊಳಡಹಾಯ್ದು, ಮೇಲೆ ಹಂಗನ ಬಲನ ಹರಿಣೇ, ಜಾಲದೆಡನನು ತಿದ್ದುವಳಿಯ ವಿಶಾಲ ಶಕುನವನಾಲಿಸುತ....." ಮುಂದೆ ಸಾಗುತ್ತಾನೆ. (ಉ. ಪ ೧-೧೮)

ಪಾಶುಪತಾಸ್ತ್ರವನ್ನು ಪಡೆದು ಅರ್ಜುನ ಹಿಂದಿರುಗಿ ಬರುವಾಗ ಉಂಟಾದ ಶುಭ ಅಂಗಶಕುನಗಳನ್ನೂ ಕವಿ ನಿರೂಪಿಸುತ್ತಾನೆ. ವಾಮನಯನಸ್ಫುರಣ ವಾಮಬಾಹುಸ್ಪಂದನ 'ಭಾಮಿನಿ ದ್ರೌಪದಿಗಾದರೆ, ಭೂಪತಿಗೆ 'ದಕ್ಷಿಣಾಂಗವು ಚಲಿಸಿ' ಶುಭಸೂಚನೆಗಳಾಗುತ್ತವೆ. (ಅ.ಪ. ೧೧-೧೮) ಅಂತೆಯೇ ದ್ವಾರಕೆಯಿಂದ ಅರ್ಜುನನು ಹಿಂದಿರುಗುವುದನ್ನು ಕಾಯುತ್ತಿದ್ದ ಧರ್ಮಜನಿಗೆ ಹೋದ ಕಾರ್ಯ ಹಣ್ಣಾಗಿದ್ದರ ಸಂಕೇತವಾಗಿ "ಬಲಗಣ್ಣಲುಗಿತಿದಿರೊಳು ಕೈಯಗುಡಿಯಲಿ ಸುಳಿದನೊಬ್ಬನು ಬಹಳ ಮಾರ್ಗಶ್ರಮದ ಭಾರದಲಿ......" (ಉ.ಪ. ೨-೧)

ಪ್ರಕೃತಿ ಸಂಕೇತಗಳು ಅಶುಭವನ್ನು ತೋರುವಂತೆಯೇ, ಶುಭವನ್ನು ಕೋರಬಲ್ಲವು. ಮಂದಾನಿಲ ಬೀಸುವುದೂ, ಮೃಗಪಕ್ಷಿಗಳು ಉಲಿಯುವುದೂ, ಸುಗಂಧಾನಿಲ ಸೂಸುವುದೂ ಶುಭ ಸಂಕೇತಗಳೆನಿಸಿಕೊಂಡಿವೆ.

"ಧರಣಿಸುರರಾಶೀರ್ವಚನ/ ವಿಸ್ತರಣ ದಧಿ ದೂರ್ವಾಕ್ಷತೆಗಳು/ ಬ್ಬರದ ವಾದ್ಯಗಡಾವಣೆಯಲಿ" ಕೃಷ್ಣ ದ್ವಾರಕೆಗೆ ಹಿಂದಿರುಗುತ್ತಾನೆ. (ಸ. ಪ. ೧-೨) ಇಲ್ಲಿ ಕಂಡುಬರುವ ದಧಿ ದೂರ್ವಾಕ್ಷತೆಗಳನ್ನು ಹಾಕಿ ಹಾರೈಸುವುದೂ, ಮಂಗಳ ವಾದ್ಯಗಳನ್ನು ಮೊಳಗಿಸುವುದೂ, ಧರಣೀಸುತರು ಆಶೀರ್ವಚನ ಹೇಳುವುದೂ ಪ್ರಯಾಣಕಾಲದ ಶುಭಾಚರಣೆಗಳ ಸಂಕೇತವಾಗಿವೆ.

**ದೃಷ್ಟಿನಿವಾಳಿಕೆ**

ಅಶುಭಶಕುನಗಳು ಉಂಟಾದಾಗ, ಅದರ ನಿವಾರಣೆಗಾಗಿ ಜಾನಪದರು ಕೆಲವು ಆಚರಣೆಗಳನ್ನೂ ನಡೆಸುತ್ತಾರೆ. ಈ ಆಚರಣೆಗಳನ್ನೇ ಶಿಷ್ಟರೂ ಅನುಸರಿಸುವುದನ್ನು ನಮ್ಮ ಕಾವ್ಯಗಳಲ್ಲಿ ಕಾಣಬಹುದು. ಪಾಪಿ ಕಣ್ಣುಗಳಿಂದ ಅಥವಾ ಕೆಟ್ಟ ನೋಟದಿಂದ ಉಂಟಾಗುವ ದೋಷಗಳನ್ನು ನಂಬುವಂಥ ಪ್ರಸಂಗಗಳನ್ನು ಕಾಣಬಹುದು. ಜಾನಪದ ಕಾವ್ಯಗಳಲ್ಲಿ ಕಂಡುಬರುವ ದೃಷ್ಟಿತೆಗೆಯುವ ವಿಧಾನಗಳಲ್ಲಿ ಕೆಲವನ್ನು ಕುಮಾರವ್ಯಾಸನ ಕಾವ್ಯದಲ್ಲೂ ಕಾಣಬಹುದು. ಉದಾಹರಣೆಗೆ,

ಮಗುವಿಗೆ ದೃಷ್ಟಿತಾಗದಿರಲು ತಾಯಿಯು ತೂಪಿರಿಯುವುದು ಒಂದು ವಿಧಾನ. ಇದು ಕುಮಾರವ್ಯಾಸನ ಕಾಲದಲ್ಲಿ ಸಾಕಷ್ಟು ಪ್ರಚಲಿತವಾಗಿತ್ತೆಂದು ತೋರುತ್ತದೆ. ಏಕೆಂದರೆ ಹಲವಾರು ಕಡೆ ಇಂಥ ಸಂಗತಿಗಳನ್ನು ಇವನ ಕಾವ್ಯದಲ್ಲಿ ಕಾಣಬಹುದು.

ಭೀಮ ಮಗುವಾಗಿರುವಾಗ ಒಮ್ಮೆ ತಪೋವನದ ಬಳಿ ಹೆಬ್ಬುಲಿಯೊಂದು ಗರ್ಜಿಸುತ್ತ ಮೇಲೇರಿ ಬರುತ್ತದೆ. ಆ ಹೆಬ್ಬುಲಿಯನ್ನು ಪಾಂಡು ಕೊಂದು ಕೆಡವಿದರೂ, ಅದರ ಮಹಾರಭಸಕ್ಕೆ ಗಾಬರಿಗೊಂಡ ಕುಂತಿಯ ತೊಡೆಯ ಮೇಲಿದ್ದ ಮಗು ಭೀಮ ಕೆಳಗೆ ಬೀಳುತ್ತಾನೆ. ಆ ಮಗು ಬಿದ್ದ ರಭಸಕ್ಕೆ "ತಚ್ಚೈಲ ಶಿಲೆ ನಿರ್ನಾಮ"ವಾದರೂ ಮಗು ಸುರಕ್ಷಿತವಾಗಿರುತ್ತದೆ. ಮಗುವಿನ ದೇಹದಾರ್ಢ್ಯತೆಯನ್ನು ಕಂಡ ಕುಂತಿ, ಮಗುವಿಗೆ ದೃಷ್ಟಿಯಾಗದಿರಲೆಂದು "ಶಿಶುವ ತೂಪಿರಿದಳು ನಿವಾಳಿಸಿ/ ಬಿಸುಟು ರಜವನು ಮಂತ್ರರಕ್ಷಾ/ ಪ್ರಸರವನು ಮುನಿಗಳಲಿ....." ಮಾಡಿಸುತ್ತಾಳೆ (ಆ.ಪ.೪-೫೮)

ಸೇನಾಪತಿ ಶಲ್ಯನನ್ನು ಯುದ್ಧರಂಗದಲ್ಲಿ ತಾನೇ ಎದುರಿಸುವುದು ಯೋಗ್ಯವೆಂದು ನಿರ್ಧರಿಸಿದ ಧರ್ಮರಾಯ, ಆ ಸಮರ ಜಯ ತನಗೇ ಬರಲಿ ಎಂದು ಹೇಳಲು ಕೃಷ್ಣನು "ರಾಯ ನೀ ಕ್ಷತ್ರಿಯನು ಸೇನೆಯ/ ತಾಯೆನುತ ತೂಪಿರಿದು ಕಮಲದ/ ಳಾಯತಾಂಬಕನಪ್ಪಿಕೊಂಡನು ಧರ್ಮನಂದನನ." (ಶ.ಪ. ೧-೩೩)

ಹೀಗೆ ದೃಷ್ಟಿನಿವಾಳಿಸುವುದು, ಕೆಂಪು ನೀರು ತೆಗೆಯುವುದು, ಮೆಣಸಿನಕಾಯಿ ಉಪ್ಪುಗಳನ್ನು ನಿವಾಳಿಸುವುದು ಇತ್ಯಾದಿ ಸಂಪ್ರದಾಯಗಳನ್ನು ಇಂದಿಗೂ ಗ್ರಾಮೀಣಜನರಲ್ಲಿ ಕಾಣಬಹುದು. ಈ ಕೆಲವು ಪದ್ಧತಿಗಳಿಂದ ನಾಗರಿಕ ಜನರೂ ಮುಕ್ತರಾಗಿಲ್ಲ.

ಸೈನಿಕರು ಯುದ್ಧಕ್ಕೆ ಹೊರಟಾಗ ಊರಿನ ಜನರು ಬೀಳ್ಕೊಡುತ್ತಿದ್ದ ರೀತಿಯಲ್ಲಿ ಹಲವು ಬಗೆಯ ನಿವಾಳಿಸುವ ಪದ್ಧತಿಗಳನ್ನು ಕಾಣಬಹುದು. ಕುಮಾರವ್ಯಾಸನ ಕಾವ್ಯದಲ್ಲಿ ನಿರೂಪಿತವಾಗಿರುವ ಒಂದು ಪದ್ಧತಿಯನ್ನು ಇಲ್ಲಿ ಅವಲೋಕಿಸಬಹುದು. ಯುದ್ಧಕ್ಕೆ ಹೊರಟಾಗ ರಾಜರಿಗೆ ಊರಿನ ನಾರಿಯರು ಅನ್ನವನ್ನು ನಿವಾಳಿಸಿ ಅದನ್ನು ದೆಸೆದೆಸೆಗೆ ಎಸೆದು ಶುಭಕೋರುತ್ತಿದ್ದರು. "ಕೆಂಪಡರಿದೋಗರ ಸಹಿತ ಭೂತಕೆ ಬಡಿಸಿದರು ಮಾಂತ್ರಿಕರು ಬಲಿಗೆದರಿದರು ದೆಸೆದೆಸೆಗೆ" (ದ್ರೋ. ಪ ೯-೧೮ರಿಂದ ೩) ಎಂದು ಕವಿ ಹೇಳುವಲ್ಲಿ, ನಿವಾಳಿಕೆ ರಾಜನಿಗೆ ಮಾತ್ರವಲ್ಲದೆ

ಸಮರಸಮಯದಲ್ಲಿ ಆಯುಧಗಳಿಗೂ ಕೆಂಗೂಳನ್ನು ನಿವಾಳಿತೆಗೆದು ದಿಕ್ಕುದಿಕ್ಕುಗಳಿಗೆ ಎರಚುತ್ತಿದ್ದರು ಎಂದು ತಿಳಿದುಬರುತ್ತದೆ. ಈ ನಿವಾಳಿಕೆಯ ಪದ್ಧತಿ ಶುದ್ಧ ಜಾನಪದವಾದರೂ, ಶಿಷ್ಟವರ್ಗದಲ್ಲೂ ಬಳಕೆಯಲ್ಲಿದ್ದುದನ್ನು ತಿಳಿಸುತ್ತದೆ.

**ಆರತಿಗಳು**

ಭಾರತೀಯ ವೈಶಿಷ್ಟ್ಯಗಳಲ್ಲಿ ಅಶುಭನಿವಾರಣಾರ್ಥವಾಗಿ ಇಲ್ಲವೇ ಶುಭ ಹಾರೈಕೆಗಾಗಿ ವಿವಿಧ ಬಗೆಯ ಆರತಿಗಳನ್ನೆತ್ತುವುದು. ಗ್ರಾಮೀಣ ಹಾಗೂ ಶಿಷ್ಟ ಜನಾಂಗಗಳಲ್ಲಿ ಇಂದಿಗೂ ಕಾಣುವ ಪದ್ಧತಿಯಾಗಿವೆ. ಇದು ಕನ್ನಡದ ಎಲ್ಲ ವೈದಿಕಕಾವ್ಯಗಳಲ್ಲಿ ಕಂಡುಬರುವ ಸಾಮಾನ್ಯ ಸಂಗತಿ ಎನ್ನಬಹುದು.

ಆರತಿ, ಉಪ್ಪಾರತಿ, ರತುನಾರತಿ, ಮಂಗಳಾರತಿ ಇವೇ ಮೊದಲಾದ ಹಲವು ಬಗೆಯ ಆರತಿಗಳನ್ನು ಕುಮಾರವ್ಯಾಸನು ತನ್ನ ಕಾವ್ಯದಲ್ಲಿ ಉಲ್ಲೇಖಿಸುತ್ತಾನೆ. ಸಾಮಾನ್ಯವಾಗಿ 'ಆರತಿ' ಎಂದರೆ ಅರಿಸಿನ ಕುಂಕುಮ ಬೆರೆಸಿದ ನೀರಿನಿಂದ ಕೂಡಿದ ತಟ್ಟೆಯಿಂದ ಎತ್ತುವ ನೀರಾಜನ. ಕೆಲವು ವೇಳೆ ತಟ್ಟೆಯ ನಡುವೆ ನೀಲಾಂಜನ ದೀಪಗಳನ್ನು ಇಟ್ಟು ಆರತಿ ಮಾಡುವುದೂ ಉಂಟು.

ಆರತಿಗಳಲ್ಲಿ ವಿವಿಧ ರೀತಿಗಳನ್ನು ಕಾಣಬಹುದು. ಉದಾಹರಣೆಗೆ ರಾಜಸೂಯಯಾಗಕ್ಕಾಗಿ ಪಾಂಡವರು ನಾಲ್ವರೂ ನಾಲ್ಕು ದಿಕ್ಕುಗಳಿಗೆ ದಿಗ್ವಿಜಯಕ್ಕಾಗಿ ಹೊರಟಾಗ ಧರ್ಮಜನು ನಾಲ್ವರು ತಮ್ಮಂದಿರಿಗೆ ವೀಳೆಯವನ್ನು ಕೊಟ್ಟರೆ, ಹಿರಿಯರಸಿ ದ್ರೌಪದಿ "ತಂದಳು ತಳಿಗೆ ತಂಬುಲ ಮಂಗಳಾರತಿಯ" (ಸ.ಪ.೩-೧೩)

ಪಾಂಡವರು ದ್ರೌಪದಿಯೊಂದಿಗೆ ಹಸ್ತಿನಾವತಿಗೆ ಹಿಂದಿರುಗುವಾಗ 'ತಳಿಗೆ ತಂಬುಲ ಮಂಗಳಾರ್ತಿಗಳ ಫಲ ಸಮೂಹದ ಕಾಣಿಕೆಯ ಕೈಗೊಳುತ' ಗಾಂಧಾರಿ ಧೃತರಾಷ್ಟ್ರನನ್ನು ಕಾಣುತ್ತಾಳೆ. (ಆ.ಪ.೧೮-೭)

ಕರ್ಣನೊಂದಿಗೆ ಯುದ್ಧಮಾಡಲು ಹೊರಟ ಪಾರ್ಥನಿಗೆ 'ಅಖಿಳ ವಿಪ್ರರ ಚಾರು ಚಾತುರ್ವೇದ ಮಂಗಳ ಸೂಕ್ತಿ ಘೋಷದೊಂದಿಗೆ ರಾಯನ ನಾರಿ ವೀರಸೇಸೆಯನಿಕ್ಕಿ, ವರಕಾಂತಾ ಕದಂಬವು ತಳಿಗೆಗಳಲ್ಲಿ ರತುನಾರತಿಯ'ನ್ನೆತ್ತುತ್ತಾರೆ (ಕ.ಪ. ೧೮-೧೨) ಸಂಧಿಗಾಗಿ ಕೃಷ್ಣಹೊರಟಾಗ (ಉ. ಪ. ೭-೨೦) , ಭೀಷ್ಮರಿಂಗೆ

ಸೇನಾಪತಿಪಟ್ಟ ಕಟ್ಟಿದಾಗ (ಭೀ. ವ. ೧-೩೨) ಹೀಗೆ ಹಲವಾರು ಸಂದರ್ಭಗಳಲ್ಲಿ ಆರತಿ/ ಉಪ್ಪಾರತಿಗಳನ್ನು ಎತ್ತುವುದು ನಿರೂಪಿತವಾಗಿವೆ.

'ಉಪ್ಪಾರತಿ' ದೃಷ್ಟಿದೋಷ ಪರಿಹಾರಕ್ಕಾಗಿ ಎತ್ತುವ ಉಪ್ಪಿನ ಆರತಿ, ಎಂದರೆ ಉಪ್ಪನ್ನು ನಿವಾಳಿಸಿ ತೆಗೆಯುವುದು.

ವಿರಾಟನಗರಿಯ ಮೇಲೆ ಮುತ್ತಿಗೆಗೆ ಹೊರಟ ಕೌರವನಿಗೆ "ಉಪ್ಪಾರತಿ" ಸೂಸುತ್ತಾರೆ. (ವಿ.ಪ.೪-೨೮) ಉಪ್ಪಾರತಿಯನ್ನು ಪ್ರಯಾಣಕಾಲದಲ್ಲೂ, ಪಟ್ಟಾಭಿಷೇಕದ ಸಮಯದಲ್ಲೂ, ಮತ್ತಿತರ ಶುಭಸಂದರ್ಭಗಳಲ್ಲಿಯೂ ದೃಷ್ಟಿ ಪರಿಹಾರಾರ್ಥವಾಗಿಯೂ ಎತ್ತಿ ಹೊರಗೆ ಚೆಲ್ಲುವ ಬಣ್ಣದ ನೀರಾಗಿದೆ ಸಾಮಾನ್ಯವಾಗಿ ಶುಭಾರತಿಗಳನಂತರ ಉಪ್ಪಾರತಿಯನ್ನು ಎತ್ತುವುದು ವಾಡಿಕೆ. ಭೀಷ್ಮರಿಗೆ ಪಟ್ಟಾಭಿಷೇಕ ಮಾಡಿದ ಸಂದರ್ಭದಲ್ಲಿ ನೃಪ ಪರಿಹಾರವೆಲ್ಲ ಬಂದು ಅವನನ್ನು ಕಂಡು ಕಾಣಿಕೆ ನೀಡುವ ಮೊದಲು "ಆರತಿಯನೆತ್ತಿದರು ಬಳಿಕ ಉಪ್ಪಾರತಿಯ ಸೂಸಿದರು....... (ಭೀ.ಪ. ೧-೩೨)

ವಿಜಯಯಾತ್ರೆಗೆ ಹೊರಡುವ ಕಾಲದಲ್ಲೂ, ಶುಭ ಸಂದರ್ಭಗಳಲ್ಲೂ ಹಿರಿಯರಾದ ಸ್ತ್ರೀಯರು ತಾಂಬೂಲವನ್ನು ಕೊಟ್ಟು ಆರತಿಯನ್ನೆತ್ತುವ ಪದ್ಧತಿಯುಂಟು.

ಮಂಗಳಾರತಿ ...... ಶುಭೋತ್ಸವಗಳಲ್ಲಿ ಮುತ್ತೈದೆಯರು ಹಿಡಿದುಕೊಳ್ಳುವ ದೀಪಾರತಿ ಅರ್ಜುನ ಸುಭದ್ರೆಯರನ್ನು "ಶಶಿಮುಖಿಯರು ಉಪ್ಪಾರತಿಯ ಮಿಗಿಲೆಸೆವ ರತುನಾವಳಿಯ ಕಾಂತಾವಿಸರ ನೂಕಿತು....." (ಆ.ಪ. ೧೬-೪೯)

ಶುಭವನ್ನು ಹಾರೈಸುವಾಗ ದಧಿ ದೂರ್ವಾಕ್ಷತೆಗಳನ್ನು ಹಾಕಿ ಬೀಳ್ಕೊಡುವುದೂ ಒಂದು ಪದ್ಧತಿಯಾಗಿದೆ. 'ಧರಣೀ ಸುರರಾಶೀರ್ವಚನ ವಿ/ ಸ್ತರಣ ದಧಿದೂರ್ವಾಕ್ಷತೆಗಳು/ ಬಲು ವಾದ್ಯ ಗಡಾವಣೆಯಲಿ' ಕೃಷ್ಣ ದ್ವಾರಕೆಗೆ ಹಿಂದಿರುಗುತ್ತಾನೆ. ಇಲ್ಲಿ ಕಂಡು ಬರುವ ದಧಿದೂರ್ವಾಕ್ಷತೆಗಳನ್ನು ಹಾಕಿ ಹಾರೈಸುವುದೂ, ಮಂಗಳ ವಾದ್ಯಗಳನ್ನು ಮೊಳಗಿಸುವುದೂ, ಧರಣೀಸುರರು ಆಶೀರ್ವಚನ ಹೇಳುವುದೂ ಪ್ರಯಾಣಕಾಲದ ಶುಭಾಚರಣೆಗಳ ಸಂಕೇತವಾಗಿವೆ. ಇದೇ ರೀತಿ ದಧಿ ದೂರ್ವಾಕ್ಷತೆಗಳನ್ನು ಹಾಕಿ ಬೀಳ್ಕೊಳ್ಳುವ ಹಲವಾರು ಸಂದರ್ಭಗಳನ್ನು ಕುಮಾರವ್ಯಾಸನ ಕಾವ್ಯದಲ್ಲಿ ಕಾಣಬಹುದು.

ಹೀಗೆ ಶಿಷ್ಟವರ್ಗದವರಲ್ಲಿ ವಿವಿಧ ಸಂದರ್ಭಗಳಲ್ಲಿ ವಿವಿಧ ಬಗೆಯ ಆರತಿಗಳನ್ನೆತ್ತುವುದನ್ನು ನೋಡುತ್ತೇವೆ. ಹಾಗೆಯೇ ಜಾನಪದರಲ್ಲೂ ಹಬ್ಬ ಜಾತ್ರೆಗಳಲ್ಲಿ, ಮನೆಯಲ್ಲಿ ಶುಭಕಾರ್ಯಗಳು ನಡೆಯುವ ಸಂದರ್ಭಗಳಲ್ಲಿ, ಮಾರಿಗೆ ಬಲಿಕೊಡುವಾಗ ಆರತಿಗಳನ್ನು ಬೆಳಗುವುದನ್ನು ಕಾಣುತ್ತೇವೆ.

ಧಾರ್ಮಿಕ ಸಂಪ್ರದಾಯಗಳಲ್ಲಿ ದೇವರಿಗೆ ಅಥವಾ ದೇವತೆಗಳಿಗೆ ಆರತಿಗಳನ್ನೆತ್ತಿದರೆ, ಲೌಕಿಕ ಜೀವನದ ಶುಭಸಮಾರಂಭಗಳಲ್ಲಿ ವ್ಯಕ್ತಿಗಳಿಗೆ ಆರತಿ ಬೆಳಗುವುದನ್ನು ಕಾಣುತ್ತೇವೆ. ಕುಮಾರವ್ಯಾಸ ಭಾರತದಲ್ಲಿ ಜನಗಳಿಗೆ ಎತ್ತುವ ಆರತಿಗಳನ್ನೇ ಕಾಣುತ್ತೇವೆ. ಗ್ರಾಮೀಣ ಜೀವನದಲ್ಲಿ ಆರತಿಗಳನ್ನೆತ್ತುವ ಸಂದರ್ಭಗಳನ್ನು ಜಾನಪದ ಕಾವ್ಯಗಳಲ್ಲಿ ಕಾಣುತ್ತೇವೆ. ತಂಬಿಟ್ಟಿನ ಆರತಿ, ಮಡಕೆ ಆರತಿ, ಕುಂಬಳಕಾಯಿ ಆರತಿ, ಕರ್ಪೂರದಾರತಿ, ಧೂಪಾರತಿ ಮೊದಲಾದ ವೈವಿಧ್ಯಪೂರ್ಣ ಆರತಿಗಳನ್ನು ಅಧ್ಯಯನ ಮಾಡಬೇಕಾಗಿದೆ. ನಮ್ಮ ಶಿಷ್ಟ ಕಾವ್ಯಗಳಲ್ಲಿ ಬಂದಿರುವ ಆರತಿ ಪ್ರಸಂಗಗಳನ್ನು ವಿಶೇಷವಾಗಿ ಅರ್ಥೈಸುವ ಅಗತ್ಯವಿದೆ.

### ಆಣೆ-ಪ್ರಮಾಣ

'ಆಣೆ' ಎಂಬ ಪದಕ್ಕೆ ನಾನಾರ್ಥಗಳಿವೆ. ಅಪ್ಪಣೆ, ನೇಮ, ವಿಧಿ, ಹಾಡುವಿಕೆ, ಬೆಳೆಯ ಅಂದಾಜು ಇತ್ಯಾದಿ. 'ಆಣೆ-ಭಾಷೆ' ಎಂದರೆ ಪ್ರತಿಜ್ಞಾವಚನ, ಮಾತಿಗೆ ತಪ್ಪುವುದಿಲ್ಲವೆಂಬ ವಚನ ಎಂಬರ್ಥವಿದೆ. ಆಣೆ (ಪ್ರಮಾಣ ಮಾಡುವುದು) ಇಡುವುದು, ಇಡಿಸುವುದು, ಆಣೆ ಬಿಡಿಸುವುದು, ಆಣೆ ಘೋಷಣೆ ಇವೇ ಮೊದಲಾದ ಪದ್ಧತಿಗಳನ್ನು ಗ್ರಾಮೀಣ ಮತ್ತು ನಾಗರಿಕ ಜನಾಂಗಗಳಲ್ಲಿ ಇಂದೂ ಕಾಣುತ್ತೇವೆ. ಒಂದು ಕಾಲದಲ್ಲಿ ಮಾತಿಗೆ ಬೆಲೆಯಿದ್ದು ಬರಹದ ಪ್ರಾಚುರ್ಯ ಅಷ್ಟಾಗಿಲ್ಲದೆ ಇದ್ದಾಗ ಆಣೆ -ಭಾಷೆಗಳಿಗೆ ತಪ್ಪುವವರು ವಿರಳವಾಗಿದ್ದರು. ಇಂದು ಬರಹದಲ್ಲಿ ಇರುವ ನಂಬಿಕೆ ಬಾಯಿಮಾತಿಗಿಲ್ಲದೆ, ಆಣೆ-ಪ್ರಮಾಣಗಳಿಗೆ ಬೆಲೆಯಿಲ್ಲವಾಗಿದೆ. ನಮ್ಮ ಕಾವ್ಯಗಳಲ್ಲಂತೂ ಆಣೆ-ಭಾಷೆ-ಪ್ರಮಾಣಗಳ ಪ್ರಸ್ತಾಪಗಳು ಧಾರಾಳವಾಗಿ ಕಂಡುಬರುತ್ತವೆ. ನಿದರ್ಶನಕ್ಕೆ 'ವಡ್ಡಾರಾಧನೆ'ಯಲ್ಲಿ "ಉಳ್ಳುದನುಳ್ಳಂತೆ ಪೇಳೆಯಪ್ಪೊಡೆ ನಿನಗೆನ್ನಾಣೆಯೆಂದಾ ತನ್ನ ಮೇಗೆ ಸೂರುಳಿಸಿ ಬೆಸಗೊಂಡಡೆ" (ವಡ್ಡಾರಾಧನೆ ೪೬-೨೪) ಎಂಬ ಮಾತು ಬರುತ್ತದೆ. ಕುಮಾರವ್ಯಾಸನು ಹಲವಾರು ಅರ್ಥಗಳಲ್ಲಿ ಆಣೆ-ಭಾಷೆಗಳನ್ನು ಬಳಸುತ್ತಾನೆ. ತನ್ನ ಕೋರಿಕೆಯನ್ನು ಬಿಡದೆ ನಡೆಸಿಕೊಡಬೇಕೆಂದು ಬೇರೊಬ್ಬರನ್ನು ನಿರ್ಬಂಧಿಸಲು

ಬಳಸುವ ಪ್ರತಿಜ್ಞಾಸೂಚಕವಾದ ಮಾತಾಗಿ ಬಳಸಿದ್ದನ್ನು "ಇತ್ತಲಿತ್ತಲು ಪಾರ್ಥ ಹೋಗದಿರಿತ್ತಲಶ್ವತ್ಥಾಮನಾಣೆ" (ಕ.ಪ. ೧೪-೧೫) ಎಂಬ ಮಾತಲ್ಲಿ ಕಾಣಬಹುದು.

ಪ್ರಾಮಾಣಿಕತೆಯನ್ನು ಸ್ಪಷ್ಟಪಡಿಸಲು ಪ್ರಿಯವಾದ ಅಥವಾ ಗೌರವಕ್ಕೆ ಪಾತ್ರರಾದ ವ್ಯಕ್ತಿ ಅಥವಾ ವಸ್ತುವನ್ನು ಹೇಳಿ ಮಾಡುವ ಪ್ರಮಾಣ ಸಹ ಆಣೆಯಾಗುತ್ತದೆ. ಶರಶಯ್ಯೆಯಲ್ಲಿದ್ದ ಭೀಷ್ಮರು ದುರ್ಯೋಧನನ ಹಿತಚಿಂತನೆ ಮಾಡುತ್ತಾ ಕರ್ಣನಿಗೆ ಹೇಳುವ ಮಾತಿನಲ್ಲಿ ತಮ್ಮ ಗೌರವಕ್ಕೆ ಪಾತ್ರನಾದ ಕೃಷ್ಣನಾಣೆಯಿಡುವುದನ್ನು ಕಾಣಬಹುದು. "ನೋವು ಮನದೊಳಗುಳ್ಳೊಡಾ ರಾಜೀವ ಸಖನಾಣೆ ಮಗನೆ ಜೀವ ಕೌರವನಲ್ಲಿ ಕರಗುವುದು...." (ದ್ರೋ. ಪ.೧೪-೨೭) ಎನ್ನುತ್ತಾನೆ.

ತಮ್ಮ ಪ್ರೀತಿಗೆ ಪಾತ್ರರಾದ ಒಬ್ಬರ ಮೇಲೆ ಆಣೆಯಿಟ್ಟು ಹೇಳುವುದು ಸಾಮಾನ್ಯ ಸಂಗತಿ. ಸೇನಾಪತಿ ಶಲ್ಯನು ಪಾಂಡವವೀರರು ಯಾರಾದರೊಬ್ಬರು ತನ್ನೊಡನೆ ಕಾದಾಡಲು ಸಿದ್ಧರಾಗಲಿ ಎಂದು ಸವಾಲನ್ನೊಡ್ಡುತ್ತಾ "ನಾಯಕರು ಮಿಕ್ಕವರೊಡನೆ ಬಲು ಸಾಯಕವನೊಡ್ಡಿದಡೆ ಕೌರವನಾಣೆ" (ಶ. ಪ. ೩-೨೪) ಎನ್ನುತ್ತಾನೆ.

ಕುಮಾರವ್ಯಾಸನು ಆಣೆ ಇಟ್ಟುಕೊಂಡವನನ್ನು ಅರ್ಥಾತ್ ಪ್ರತಿಜ್ಞೆ ಮಾಡಿದವನನ್ನು "ಭಾಷೆಕಾಱ"[೧] ಎಂದು ಕರೆಯುತ್ತಾನೆ. ಕೃಷ್ಣನು ತನ್ನ ಸುದರ್ಶನ ಚಕ್ರದಿಂದ ಕತ್ತಲು ಆವರಿಸುವಂತೆ ಮಾಡಿದ ಸಂದರ್ಭದಲ್ಲಿ ಅರಿಸೇನೆ (ಕೌರವನ ಸೇನೆ)ಯು "ತೆರಹ ಕೊಡುಕೊಡು ಭಾಷೆಕಾಱನು ಮೆರೆದು ಹೋಗಲಿ ವಹ್ನಿಕುಂಡದೊಳೊರಗುವುದು ನೋಡುವೆನೆನುತ ತನಿಗೆದರಿತರಿಸೇನೆ." (ದ್ರೋ. ಪ. ೧೪-೩೬)

ಮತ್ತೊಂದೆಡೆ ಕುಮಾರವ್ಯಾಸನು ಆಣೆ-ಭಾಷೆಯನ್ನು ಕುರಿತು 'ನಾಲಗೆಯ ಸಾಲ' ಎಂದು ಕರೆಯುವುದನ್ನು ಕಾಣಬಹುದು. ಕರ್ಣನ ಸೇನಾಪತ್ಯದಲ್ಲಿ ವೀರಾವೇಶದಿಂದ ಮೇಲೆ ಬಿದ್ದು ಸೈನಿಕರ ಮೇಲೆ ಪ್ರತಿಧಾಳಿ ಹೂಡಿ 'ಆಗಲೀ ನಾಲಗೆಯ ಸಾಲವನೀಗ ತಿದ್ದಿಕೊಡುವರೆ' ಎಂದು ಪ್ರಶ್ನಿಸುತ್ತಾನೆ.

ಕುಮಾರವ್ಯಾಸನ ಕಾವ್ಯದಲ್ಲಿ ಪಾಂಡವರ ಕಡೆಯವರು ಕೃಷ್ಣನ ಮೇಲೆ ಆಣೆಯಿಡುವುದನ್ನು ಕೃಷ್ಣನು ತನ್ನ ತಂದೆ-ತಾಯಿಗಳಾದ ವಸುದೇವ-ದೇವಕಿಯರ

---

೧. ಕನ್ನಡ ನಿಘಂಟು, ಪು-೬೭೪೭

ಮೇಲೆ ಆಣೆಯಿಡುವುದನ್ನೂ ಕಾಣುತ್ತೇವೆ, "ಸಂಧಿಯ ಮುರಿದು ಬಹೆವು" ಎಂದು ದ್ರೌಪದಿಗೆ ಹೇಳುವ ಸಂದರ್ಭದಲ್ಲಿ "ದೇವಕಿಯ ಮೇಲಾಣೆ, ವರ ವಸುದೇವನಂಘ್ರಿಗಳಾಣೆ, ಮನುಮಥದೇವನಾಣೆ, ಹೇಳಬಲೆ ನಿನ್ನಾಣೆ" ಎಂದು ತಾಯಿ- ತಂದೆ-ಮಗ ಮತ್ತು ದ್ರೌಪದಿಯ ಮೇಲೆ ಆಣೆಯಿಡುತ್ತಾನೆ. (ಉ. ಪ. ೭-೧೩) ದ್ರೌಪದಿಗೆ ತಾನು ಆ ಕೆಲಸವನ್ನು ಖಂಡಿತವಾಗಿಯೂ ನೆರವೇರಿಸಿಕೊಂಡು ಬರುತ್ತೇನೆ ಎಂಬ ಭರವಸೆಯನ್ನು ಕೊಡಲು ತನ್ನ ಪ್ರೀತಿಪಾತ್ರರೂ, ಗೌರವಪಾತ್ರರೂ ಆದ ತನ್ನ ಕುಟುಂಬದವರ ಮೇಲೆ ಆಣೆಯಿಡುವುದರ ಜತೆಗೆ, ಅದೇ ರೀತಿ ನೀನೂ ಸಹ ಪ್ರೀತಿಪಾತ್ರಳು ಎಂದು ಹೇಳುವಂತೆ ದ್ರೌಪದಿಯ ಮೇಲೂ ಆಣೆಯಿಟ್ಟು 'ನಿನ್ನಾಣೆ' ಎಂದು ಹೇಳುತ್ತಾನೆ. ಹೀಗೆ ಒಟ್ಟಿಗೆ ಸಾಲಾಗಿ ಆಣೆಯಿಡುವುದು ಗಮನಾರ್ಹವಾಗಿದೆ.

ದ್ರೌಪದಿಯ ಸ್ವಯಂವರ ಸಂದರ್ಭದಲ್ಲಿ, ಪಣವನ್ನು ಗೆಲ್ಲಲು ಮೇಲೆದ್ದ ಬಲರಾಮನನ್ನು ತಡೆದು ಕೃಷ್ಣ ಅವಳಿಗೆ ಪಾಂಡವರೇ ಪತಿಗಳು ಕುಂತೀಸುತರನ್ನು ಈಗಲೇ ತೋರಿಸುತ್ತೇನೆ ಎಂದು 'ವಸುದೇವನಾಣೆ' ಮಾಡಿ ಹೇಳುತ್ತಾನೆ.

ಕರ್ಣನ ಬಗ್ಗೆ ಮಮತೆ ಆವರಿಸಿ ಅವನ ಮೇಲೆ ಬಾಣ ಪ್ರಯೋಗಿಸಲು ಹಿಂದೆಗೆಯುತ್ತಿದ್ದ ಅರ್ಜುನನ್ನು ಕುರಿತು ಕೃಷ್ಣನು "ಬಲುಗೈಯಾಳಲಾ ನೀ ರಣಕೆ ಧೀರ ವಸುದೇವನಾಣೆ" ಎಂದು ಆಣೆಯಿಟ್ಟು ಅರ್ಜುನನ ಪೌರುಷವನ್ನು ಕೆಣಕುತ್ತಾನೆ.

ಧೃತರಾಷ್ಟ್ರನಿಗೆ ಯುದ್ಧವಿವರಗಳನ್ನು ನೀಡುತ್ತಿದ್ದ ಸಂಜಯ ವ್ಯಾಸರ ಶಿಷ್ಯನೆಂದು ತಿಳಿದಾಗ ಸಾತ್ಯಕಿ ಅವನನ್ನು ಕೊಲ್ಲುವುದಿಲ್ಲವೆಂದು 'ದೇವಕೀಸುತನಾಣೆ' ಮಾಡಿ ಹೇಳುತ್ತಾನೆ.

'ಆವಳೋ ನೆನಹಿನಲಿ ಸುಳಿದಳು' ಎಂದು ಸತ್ಯಭಾಮೆ ಕೃಷ್ಣನನ್ನು ಛೇಡಿಸಿದಾಗ, ಅವಳನ್ನು ನಂಬಿಸಲು 'ದೇವಿ ಬೇರೊಂದಿಲ್ಲ ಮನ ನಿನ್ನಾಣೆ' (ಆ.ವ. ೧೬-೨೪) ಎಂದು ಕೃಷ್ಣ ಆಣೆಮಾಡಿ ಹೇಳುತ್ತಾನೆ.

ಹೀಗೆ ಹಲವಾರು ಸಂದರ್ಭಗಳಲ್ಲಿ ಆಣೆ- ಭಾಷೆಗಳ ಬಳಕೆಯನ್ನು ಈ ಕಾವ್ಯದಲ್ಲಿ ಕಾಣುತ್ತೇವೆ.

# ಜ್ಯೋತಿಷ

"ನಕ್ಷತ್ರ, ಗ್ರಹ ಸೂರ್ಯ, ಚಂದ್ರ ಮೊದಲಾದ ಆಕಾಶಕಾಯಗಳು ಮಾನವನ ಜೀವನದ ಮೇಲೆ ಬೀರುವ ಪ್ರಭಾವವನ್ನು ಗುರುತಿಸುವಂಥ ಒಂದು ಶಾಸ್ತ್ರ. ಹುಟ್ಟು, ಸಾವು ಮುಂತಾದ ಸಂದರ್ಭಗಳಲ್ಲಿ ಆಕಾಶಕಾಯದ ಚಲನವಲನಗಳನ್ನು ಗಮನಿಸಿ, ಮನುಷ್ಯನ ಭವಿಷ್ಯ ಮತ್ತು ಆದರ ಸಾಮಾನ್ಯ ಸ್ವಭಾವಗಳನ್ನು ಇದು ಹೇಳುತ್ತದೆ."[೧] ಆಧುನಿಕ ಖಗೋಳಶಾಸ್ತ್ರ ಬೆಳೆದಂತೆ, ಇದು ಪ್ರಾಶಸ್ತ್ಯವನ್ನು ಕಳೆದುಕೊಂಡಿತು. ಆದರೂ ಜಗತ್ತಿನ ಆನೇಕ ಭಾಗಗಳಲ್ಲಿ ಇದರ ಬಗ್ಗೆ ನಂಬಿಕೆಯಿಟ್ಟಿರುವವರು ಅನೇಕ ಮಂದಿ ಇದ್ದಾರೆ.

ಜ್ಯೋತಿಷ ಶಿಷ್ಟ ಪರಂಪರೆಗೆ ಸೇರಿದುವೆಂದು ಪರಿಗಣಿತವಾಗಿದ್ದರೂ ಅವುಗಳ ಮೂಲ ಶಕುನಗಳಾಗಿದ್ದು ಅವು ಜಾನಪದ ನಂಬಿಕೆಯನ್ನು ಅವಲಂಬಿಸಿದೆ. ಈ ದೃಷ್ಟಿಯಿಂದ ಜಾನಪದಾಂಶಗಳನ್ನು ಒಳಗೊಂಡ ಶಿಷ್ಟವರ್ಗದ ಜ್ಯೋತಿಷವನ್ನು ಪರಿಶೀಲಿಸುವುದರ ಅಗತ್ಯವಿದೆ.

ಭಾರತೀಯ ಜನಜೀವನದಲ್ಲಿ ಜಾನಪದದಿಂದ ಮೊದಲುಗೊಂಡು ರಾಜಾಸ್ಥಾನದವರೆಗೆ ಎಲ್ಲ ವರ್ಗದ ಜನರೂ ಜ್ಯೋತಿಷಕ್ಕೆ ಮಾನ್ಯತೆ ಕೊಡುವುದನ್ನು ಹಾಗೂ ಅದರಲ್ಲಿ ನಂಬಿಕೆ ಇಟ್ಟಿರುವುದನ್ನು ಕಾಣಬಹುದು. ಗ್ರಹಗತಿಗಳು ನಮ್ಮ ಭವಿಷ್ಯವನ್ನು ನಿರ್ಧರಿಸುತ್ತವೆ. ಆದ್ದರಿಂದ ಗ್ರಹಗತಿಗಳಿಂದ ಉಂಟಾಗುವ ಫಲಾಫಲಗಳನ್ನು ತಿಳಿಸುವ ಶಾಸ್ತ್ರವಾದ ಜ್ಯೋತಿಷದಲ್ಲಿ ನಂಬಿಕೆ ಹುಟ್ಟಿ, ಅದೊಂದು ಪ್ರತ್ಯೇಕ ಶಾಸ್ತ್ರವಿದ್ಯೆಯಾಗಿಯೇ ಅಸ್ತಿತ್ವಕ್ಕೆಬಂದು, ಕಣಿ ಹೇಳುವ, ಭವಿಷ್ಯ ಹೇಳುವ, ಗ್ರಹಗತಿಗಳ ದೆಸೆಗಳನ್ನು ಹೇಳುವ, ಅವುಗಳು ವಿರುದ್ಧವಾಗಿದ್ದಲ್ಲಿ ಶಾಂತಿ-ಕರ್ಮಗಳನ್ನು ನಡೆಸುವ ಇತರ ಮಾರ್ಗೋಪಾಯಗಳನ್ನು ತಿಳಿಸುವ ಒಂದು

---

೧. ಕ.ಜಾ.ವಿ, ಸಂ-೧, ಪು-೯೧೭

ಪರಂಪರೆಯೇ ಬೆಳೆದು ಬಂದಿದೆ. ಮೂಲಭಾರತದಲ್ಲೂ ಅಂತೆಯೇ ಕುಮಾರವ್ಯಾಸ ಭಾರತದಲ್ಲೂ ಇದಕ್ಕೆ ಸಂಬಂಧಿಸಿದ ಅನೇಕ ಸಂಗತಿಗಳನ್ನು ಕಾಣಬಹುದು. ಕೆಲವು ವೇಳೆ ಶಕುನಗಳ ಪರಿಣಾಮ ನೇರವಾಗಿದ್ದು ಜನ ತಾವೇ ಇದು ಶುಭ, ಇದು ಅಶುಭಗಳೆಂದು ತಿಳಿಯಲು ಸಾಧ್ಯ. ಆದರೆ ಜ್ಯೋತಿಷ ಹಾಗಲ್ಲ. ಅದು ಒಂದು ವಿಶೇಷ ವಿದ್ಯೆ. ಅದು ವ್ಯಕ್ತಿಯೊಬ್ಬನ ಗ್ರಹಗತಿಗಳನ್ನು ಗುಣಿಸಿ, ಲೆಕ್ಕಾಚಾರ ಮಾಡಿ ಹೇಳಲು ಪ್ರತ್ಯೇಕ ಜನವೇ ಬೇಕಾಗುತ್ತದೆ. ಇದು ಜಟಿಲಗಣಿತದಿಂದ ಕೂಡಿರುವುದರಿಂದ ಸ್ವಲ್ಪ ಲೆಕ್ಕಾಚಾರ ತಪ್ಪಾದರೂ ಹೇಳಿದ ಫಲಗಳು ನಿಜವಾಗುವುದು ಕಷ್ಟ. ಆದರೂ ಸಹ ಜನ ಲೆಕ್ಕಾಚಾರದಲ್ಲಿ ತಪ್ಪಾದಾಗ ಅಥವಾ ನಿರೀಕ್ಷಿತ ಪರಿಣಾಮ ಉಂಟಾಗದಿದ್ದಾಗ ತಮ್ಮ ಗ್ರಹಚಾರವೆಂದು ಕೊಳ್ಳುವುದು ಸಾಮಾನ್ಯ ಸಂಗತಿ. ಜ್ಯೋತಿಷವನ್ನು ಮಾತ್ರ ಅನುಮಾನಿಸುವುದಿಲ್ಲ. ಆಧುನಿಕ ಜನಗಳಂತೆ ಜ್ಯೋತಿಷವನ್ನು ಪ್ರಶ್ನಿಸುವುದಾಗಲಿ ಅನುಮಾನಿಸುವುದಾಗಲಿ ಮಾಡುವುದಿಲ್ಲ. ಇಂದಿಗೂ ಜೋಯಿಸರು ಏನು ಹೇಳಿದರೂ ನಂಬುವುದನ್ನು ಕಾಣುತ್ತೇವೆ.

ಯಾವುದೇ ಕೆಲಸಗಳನ್ನು ಪ್ರಾರಂಭಿಸಬೇಕಾದರೂ ಅಥವಾ ಪ್ರಯಾಣಿಸುವಾಗಲೂ ಜೋಯಿಸರು ಇಡುವ ಮುಹೂರ್ತದಲ್ಲಿ ಜನ ನಂಬಿಕೆಯಿಟ್ಟು, ಅದನ್ನು ಅನುಸರಿಸುತ್ತಿದ್ದರು ಎಂಬುದು ಕುಮಾರವ್ಯಾಸನ ಕಾಲದಲ್ಲೂ ಇದ್ದ ಪದ್ಧತಿಯಾಗಿತ್ತು. ಇಂಥ 'ಮುಹೂರ್ತ'ಗಳು ಕುಮಾರವ್ಯಾಸನ ಕಾವ್ಯದಲ್ಲಿ ಹಲವಾರು ಕಡೆಗಳಲ್ಲಿ ನಿರೂಪಿತವಾಗಿರುವುದನ್ನು ಕಾಣುತ್ತೇವೆ. ಪಾಂಡವರನ್ನು ದ್ಯೂತಕ್ಕಾಗಿ ಹಸ್ತಿನಾವತಿಗೆ ಆಹ್ವಾನಿಸಲು ವಿದುರ "ಶುಭ-ಮುಹೂರ್ತ ವಿಳಾಸಲಗ್ನದಲಿ" (ಸ.ಪ. ೧೨-೮೨) ಹೊರಡುತ್ತಾನೆ. ಪಾಂಡವರು ರಾಜಸೂಯಯಾಗಕ್ಕಾಗಿ.

"ಪರಮ ಲಗ್ನದೊಳಿಂದು ಕೇಂದ್ರದೊ
ಳಿರಲು ಗುರುಭಾರ್ಗವರು ಲಗ್ನ
ದೊಳಿರೆ ಶುಭಗ್ರಹದೃಷ್ಟಿ ಸಕಳೇಕಾದಶಸ್ಥಿತಿಯ
ಕರಣ ತಿಥಿ ನಕ್ಷತ್ರವಾರೋ
ತ್ಕರಲಭಿಮತಸಿದ್ಧಿಯೋಗದೊ
ಳರಸನನುಜರು ದಿಗ್ವಿಜಯಕ್ಕೆ ...." (ಸ.ಪ. ೩-೧೪)

ಹೊರಡುತ್ತಾರೆ. ಈ ಶುಭಲಗ್ನದಲ್ಲಿ ಹೊರಟ ಪ್ರಯುಕ್ತ ಅವರಿಗೆ ಗೆಲುವು ಖಚಿತವಾಗುತ್ತದೆ.

ಕೃಷ್ಣನೂ ಸಹ ದ್ವಾರಕೆಗೆ ಶುಭಗ್ರಹತಿಥಿರಾಶಿ ನಕ್ಷತ್ರ ಮುಹೂರ್ತದಲ್ಲಿ ಭೂಸುರರ ಆಶೀರ್ವಾದದೊಂದಿಗೆ ಹೊರಡುತ್ತಾನೆ. ಹೀಗೆ ಜ್ಞಾನಿ ವಿದುರನಿಂದ ಹಿಡಿದು ಕಪಟನಾಟಕಸೂತ್ರಧಾರಿ ಶ್ರೀಕೃಷ್ಣನವರೆಗೆ ಜೋಯಿಸರು ನಿಶ್ಚಯಿಸಿದ ಶುಭ ಮುಹೂರ್ತದಲ್ಲಿ ಪಯಣಿಸುವುದನ್ನು ಕುಮಾರವ್ಯಾಸನು ನಿರೂಪಿಸುತ್ತಾನೆ. ಜ್ಯೋತಿಷಿಗಳು ನೀಡಿದ ಅಶುಭ ಮುಹೂರ್ತಗಳಲ್ಲಿ ಪಯಣಿಸಬಾರದೆಂಬ ಎಚ್ಚರಿಕೆಯನ್ನು ನಿರಾಕರಿಸಿದವರು ಕೌರವ- ಪಕ್ಷದಲ್ಲಾಗಲಿ ಪಾಂಡವಪಕ್ಷಧಲ್ಲಾಗಲಿ ಯಾವ ವ್ಯಕ್ತಿಯೇ ಆಗಲಿ ಸೋಲನ್ನು ಅನುಭವಿಸುತ್ತಾರೆ ಎಂಬ ಸಂಗತಿಯು ಕುಮಾರವ್ಯಾಸ ಭಾರತದಲ್ಲಿ ಸೂಚಿತವಾಗಿದೆ.

ಪಾಂಡವರು ಹಸ್ತಿನಾವತಿಗೆ ದ್ಯೂತವಾಡಲು ಹೊರಡುವ ಸಂದರ್ಭದಲ್ಲಿ ಜ್ಯೋತಿಷಿಗಳು ಧರ್ಮಜನಿಗೆ "ಶಕುನಗತಿ ಸಾಮಾನ್ಯವಿದು ಕಂ/ಟಕದ ನೆಲೆ ಜನ್ಮದಲಿ ಸಪ್ತಾಧಿಕದೊಳಿದ್ದರು ಗೌರಿ ಗುರು ಭೌಮಾಬ್ಜ ಬಾಂಧವರು/ ವಿಕಳದೆಸೆ ನಿಮ್ಮಡಿಗೆ ವೈರಿ/ ಪ್ರಕರದುನ್ನತದೆಸೆ ಮಹೀಪಾ/ ಲಕ ಶಿರೋಮಣಿ ಪುರಕೆ ಮರಳು" (ಸ.ಪ. ೧೨....) ಎಂಬ ಮಾತನ್ನು ಪುರಸ್ಕರಿಸದ ಫಲವಾಗಿ ಸಮಸ್ತವನ್ನು ಕಳೆದುಕೊಂಡು ತಮ್ಮಂದಿರೊಡನೆ ವನವಾಸಿಯಾಗುತ್ತಾನೆ.

ಕೌರವರ ಕಡೆಯ ಜಯದ್ರಥನು ಅರಣ್ಯವಾಸಿ ಪಾಂಡವರ ಮೇಲೆ ದುರಾಕ್ರಮಣಕ್ಕೆ ಹೊರಟಾಗ ಜ್ಯೋತಿಷಿಗಳು ಅವನಿಗೆ

"ಜೀಯ ಭಾಸ್ಕರ ಭೌಮರ ಶುಭ
ಸ್ಥಾಯಿಗಳು ಗುರು ಮಂದರಭಿಭವ
ದಾಯಿಗಳು ವಿಪರೀತ ದೆಸೆ ಬುಧಶುಕ್ರ ರಾಹುಗಳ
ಯಾಯಿಗಳಿಗಪಜಯ ನಿವಾಸ
ಸ್ಥಾಯಿಗೊಳ್ಳಿತು ಚಿತ್ತವಿಸಿ
......................" (ಅ.ಪ.೨೨-೪)

ಎಂದು ತಿಳಿಸಿದರೂ "ಜೋಯಿಸರ ಜವಿಲೆಗೆ ಸಿಲುಕೆವು" ಎಂದು ಅವರ ಸಲಹೆಯನ್ನು ನಿರಾಕರಿಸಿ, ಹೊರಟು ಪರಾಭವ ಹೊಂದುತ್ತಾನೆ.

ಆಧುನಿಕ ಬದುಕಿನಲ್ಲಿ ಭವಿಷ್ಯ ವಿಜ್ಞಾನ, ಗ್ರಹ ವಿಜ್ಞಾನ ಎರಡನ್ನೂ ಪ್ರತ್ಯೇಕ ಶಾಸ್ತ್ರಗಳನ್ನಾಗಿ ಪರಿಗಣಿಸುವರಿದ್ದಾರೆ. ಆದರೆ ಹಿಂದಿನ ಕಾಲದಲ್ಲಿ ಗ್ರಹ ವಿಜ್ಞಾನಿಗಳಾಗಿದ್ದವರು ಭವಿಷ್ಯವಿಜ್ಞಾನಿಗಳಾಗಿದ್ದು ಭವಿಷ್ಯವನ್ನು ನುಡಿಯುವವರಾಗಿದ್ದರು ಎನ್ನುವುದನ್ನು ನೆನಪಿಡುವ ಸಂಗತಿಯಾಗಿದೆ. ಕೆಲವೊಮ್ಮೆ ಜೋಯಿಸರು ಹೇಳುವ ಭವಿಷ್ಯವನ್ನಾಗಲಿ, ಎದುರಿಗೆ ಕಾಣುವ ಶುಭಾಶುಭ ಫಲಗಳನ್ನರಿತುಕೊಂಡಾಗಲಿ ಪ್ರಯಾಣಮಾಡುತ್ತಿದ್ದಂಥ ಸಂಗತಿಗಳೂ ಕಾವ್ಯದಲ್ಲಿ ಕಂಡುಬರುತ್ತವೆ. ಉದಾಹರಣೆಗೆ, ಕೌರವರೊಡನೆ ಸಂಧಿಗಾಗಿ ಶ್ರೀಕೃಷ್ಣನು ಹಸ್ತಿನಾವತಿಗೆ ಹೊರಟಾಗ ಶಂಖ, ದುಂದುಭಿ, ಕಹಳೆ ಮೊದಲಾದ ಮಂಗಳವಾದ್ಯಗಳು ಮೊಳಗಿ ಶುಭಶಕುನಗಳಾದರೂ, ಭೂಸುರರು ದೂರ್ವಾಕ್ಷತೆಗಳಿಂದ ಆಶೀರ್ವದಿಸಿದರೂ ಕೃಷ್ಣನು "ಕರತಳದಿಂದ ನಾಸಿಕದೆರಲ ಚಂದ್ರೋದಯವನೀಕ್ಷಿಸಿ ಶುಭಶಕುನವನ್ನರಿತು" ಪಯಣಿಸುತ್ತಾನೆ.ಕರತಳದಲ್ಲಿ ನಾಸಿಕದ ಎರಲನ್ನು ಗಮನಿಸಿ ಶುಭಶಕುನ ನಿರ್ಧರಿಸುವ ರೀತಿ ಹೀಗಿದೆ: ಮನುಷ್ಯನಿಗೆ ಮೂಗಿನ ಶ್ವಾಸವು ಎರಡು ಹೊಳ್ಳೆಗಳಲ್ಲಿ ಗಂಟೆಗೊಂದು ಹೊಳ್ಳೆಯಂತೆ ಬದಲಾಯಿಸುತ್ತಿರುತ್ತದೆ. ಈ ವಾಯುಸಂಚಾರವು ಬಲರಂಧ್ರದಲ್ಲಿ ನಡೆಯುತ್ತಿದ್ದರೆ ಸೂರ್ಯಸ್ವರವೆಂದೂ ಎಡರಂಧ್ರದಲ್ಲಿ ನಡೆಯುತ್ತಿದ್ದರೆ ಚಂದ್ರಸ್ವರವೆಂದೂ ಯೋಗಶಾಸ್ತ್ರವು ಹೇಳುತ್ತದೆ. ಈ ಎರಡು ಹೊಳ್ಳೆಗಳ ವಾಯಸಂಚಾರದಲ್ಲಿ 'ಶುಭಕಾರ್ಯೇಷು ಚಂದ್ರಿಕಾ' ಎಂಬ ನುಡಿಯಂತೆ ಚಂದ್ರಸ್ವರವು ಶುಭಕಾರ್ಯಕ್ಕೆ ಪ್ರಶಸ್ತವೆಂದು ಹೇಳಲ್ಪಟ್ಟಿದೆ. ಈ ಹಿನ್ನೆಲೆಯಲ್ಲಿ ಎಡರಂಧ್ರದಲ್ಲಿ ಬರುವ ವಾಯುಸಂಚಾರವನ್ನು ಗಮನಿಸಿ ಪ್ರಯಾಣಿಸುತ್ತಾನೆ:- (ಭೀಷ್ಮಪರ್ವದ ಟಿಪ್ಪಣಿಯೊಂದರಿಂದ) ಹೀಗೆ ಜ್ಯೋತಿಷವು ಮುಹೂರ್ತ ನಿರ್ಧಾರದಲ್ಲಿ ಪ್ರಮುಖಪಾತ್ರ ವಹಿಸುತ್ತಿದ್ದುದನ್ನು ಕುಮಾರವ್ಯಾಸ ಭಾರತದಲ್ಲಿ ಕಾಣಬಹುದು.

**ಮಾಟ - ಮಂತ್ರ**

ಮಾಟ -ಮಂತ್ರಗಳನ್ನು ವೈದಿಕ ಮತ್ತು ವೈದಿಕೇತರ ಪರಂಪರೆಗಳಲ್ಲಿ ನಾನಾ ಉದ್ದೇಶಗಳಿಗಾಗಿ ಪ್ರಯೋಗಿಸುತ್ತಾರೆ. ಸಾಮಾನ್ಯವಾಗಿ ಜಾನಪದ ಭೂತಪ್ರೇತಗಳನ್ನು ವಶಪಡಿಸಿಕೊಳ್ಳುವ ಮಂತ್ರ- ಮಾಟಗಳನ್ನು ಹೆಚ್ಚು ನಂಬುತ್ತಾರೆ. ಶಿಷ್ಟ ಜನಾಂಗದ ವೈದಿಕರಾದರೆ ಯಜ್ಞ-ಯಾಗ ಹೋಮಾದಿಗಳಲ್ಲಿ ನಂಬಿಕೆಯಿಡುತ್ತಾರೆ. ಕುಮಾರವ್ಯಾಸನ ಕಾವ್ಯದಲ್ಲಿ ಯಾಗ ಯಜ್ಞಗಳ ಪ್ರಸ್ತಾಪವೂ

ಇದೆ. ನಿದರ್ಶನವಾಗಿ ರಾಜಸೂಯಯಾಗವನ್ನು ನೋಡಬಹುದು. ಆದರೆ ಇವನ ಕಾವ್ಯದಲ್ಲಿ ಭೂತಪ್ರೇತಗಳನ್ನು ಮಾಟ-ಮಂತ್ರಗಳಿಂದ ವಶಪಡಿಸಿಕೊಂಡು ಕಾರ್ಯ ಸಾಧನೆ ಮಾಡಿಕೊಳ್ಳುವ ಪ್ರಯತ್ನಕ್ಕೇ ಹೆಚ್ಚು ಪ್ರಾಶಸ್ತ್ಯ ಕಂಡುಬರುತ್ತದೆ. ಇದಕ್ಕೆ ನಿದರ್ಶನವಾಗಿ ಕೆಲವು ಪ್ರಸಂಗಗಳನ್ನು ಗಮನಿಸಬಹುದು. ಸ್ವಯಂವರಕ್ಕಾಗಿ ಬಂದ ರಾಜಕುಮಾರರು ದ್ರೌಪದಿಯನ್ನು ಒಲಿಸಿಕೊಳ್ಳಲು 'ಮಾಯಾಪುರದ ಕಾಂಚೀಪುರದ ಜಾಳಾಂಧರದ ವಿವಿಧ ಸ್ಥಾನಿಕ ದೇವರಿಗೆ ಹರಕೆ' ಕಟ್ಟಿಕೊಳ್ಳುತ್ತಾರೆ. ಕಪಟ ದ್ಯೂತದಲ್ಲಿ ಪಾಂಡವವನ್ನು ಸೋಲಿಸಲು ಕೌರವನ ಆಪ್ತರು ವಿವಿಧ ದೇವತೆಗಳಿಗೆ ಹರಕೆ ಕಟ್ಟಿಕೊಳ್ಳುತ್ತಾರೆ- ಅನಂತರ "ದ್ಯೂತ ಸಿದ್ಧಿಯ ಮಂತ್ರ ವರವಿದ್ಯಾತಿಶಯ ವಿಚ್ಛೇದ ರಕ್ಷ ವಿಧೂತ ರಿಪುಮತಿ ಯಂತ್ರಪರ ಸಮ್ಮೋಹನೌಷಧಿಯ" (ಆ.ಪ. ೧೩-೩) ಮೂಲಕ ಕೃತ್ರಿಮದ ಹಾಸಂಗಿಗಳನ್ನು ರಚಿಸುತ್ತಾರೆ. ಇದರ ಫಲವಾಗಿ ಕವಿ ಹೇಳುವಂತೆ ಧರ್ಮಜನು ನೆತ್ತದಲ್ಲಿ ಒಡ್ಡಿದ ಫಲವೆಲ್ಲವನ್ನು ಸೋಲಲು "ಆವಕೌಳಿಕ ಮಂತ್ರತಂತ್ರದ ಡಾವರದ ಡೊಳ್ಳಾಸವಿಕ್ಕಿದ ಧೀವಸದ ಬೇಳುವೆ" (ಸ. ಭಾ. ೧೩-೬೧) ಕಾರಣವೆನ್ನುತ್ತಾರೆ.

ಭೂತ ಪ್ರೇತಗಳನ್ನು ವಶೀಕರಣ ಮಾಡಿಕೊಂಡು ಮಾಯಾ ವಿದ್ಯೆಯನ್ನು ಪ್ರದರ್ಶಿಸುವ, ವಿವಿಧ ರೂಪಗಳಲ್ಲಿ ಕಾಣಿಸಿಕೊಳ್ಳುವ ಐಂದ್ರಜಾಲಿಕ ವಿದ್ಯೆಯ ಸ್ವರೂಪವನ್ನು ಕುಮಾರವ್ಯಾಸನು ಹೃದಯಂಗಮವಾಗಿ ಚಿತ್ರಿಸಬಲ್ಲ. ಇವುಗಳನ್ನು ನೋಡಿದಾಗ ಪಾಶ್ಚಾತ್ಯ ದೇಶಗಳ ಜಾನಪದ ಕಥೆಗಳಲ್ಲಿ ಕಂಡುಬರುವ ವಿಕರಾಳ ರೂಪಗಳ -ಪಿಶಾಚಿಗಳ ರೂಪ ವರ್ತನೆಗಳು ನೆನಪಾಗುತ್ತವೆ. ಉದಾಹರಣೆಗೆ ಅಶ್ವತ್ಥಾಮನು ಪಾಂಡವರ ತಲೆಗಳನ್ನು ತರಲು ಪ್ರತಿಜ್ಞೆ ಮಾಡಿ ಹೊರಟ ಸಂದರ್ಭದಲ್ಲಿ ನಡುರಾತ್ರಿಯಲ್ಲಿ ಅವನಿಗೆ ಎದುರಾದ ಭೂತ ಸಮುದಾಯದ ವರ್ಣನೆ ಹೀಗಿದೆ!

ಕಾಕಮುಖದ ಮಯೂರ ಟಿಟ್ಟಿಭ
ಕೋಕವದನದ ಹಂಸ ಕಂಕ ಬ
ಳಾಕವಕ್ತ್ರದ ಗೌಜು ಗೀಜಗ ಚಾತಕಾನನದ
ಘೂಕಮುಖದ ಸೃಗಾಲ ಶಾರ್ದೂ
ಲಾಕೃತಿಯ ಬಹುವಿಧದ ರೂಪದ
ನೇಕ ಭೂತ ವ್ರಾತ ನೆರೆದುದು (ಗ.ಪ. ೬-೨೦)

ಇವುಗಳನ್ನೆಲ್ಲ ಅಶ್ವತ್ಥಾಮನು ಮಂತ್ರಬಲದಿಂದ ನಾಶಮಾಡುತ್ತಾನೆ. ಇದೇ ರೀತಿ ಭೂತಗಳ ಅಕರಾಳ ವಿಕರಾಳ ಸ್ವರೂಪಗಳನ್ನು ಸುಂದರ ಮಾಯಾರೂಪಗಳನ್ನು ಕಾಣುತ್ತೇವೆ. ಭೀಮನನ್ನು ಒಲಿಸಿಕೊಳ್ಳಲು ಹಿಡಿಂಬೆ ದಿವ್ಯರೂಪಧರಿಸಿದ ಪ್ರಸಂಗವನ್ನೂ, ನಿಶಾಯುದ್ಧದಲ್ಲಿ ಘಟೋತ್ಕಚ ಮತ್ತು ಅವನ ಪರಿವಾರ ನಡೆಸಿದ ಮಹಾಯುದ್ಧದಲ್ಲಿ ಧರಿಸಿದ ವಿವಿಧ ವಿಕಾರ ರೂಪಗಳು ಇವಕ್ಕೆ ನಿದರ್ಶನಗಳಾಗಿವೆ. ಮಾಯಾತಂತ್ರ, ಮಂತ್ರಶಕ್ತಿಗಳಿಂದ ಭಿನ್ನವಾಗಿ ಕಾಣುವ ಮಾಟ ವಿದ್ಯೆಯು ಕುಮಾರವ್ಯಾಸನ ಕಾವ್ಯದಲ್ಲಿ ಕಂಡುಬರುತ್ತದೆ. ಮಾಯಾವಿದ್ಯೆ ಮತ್ತು ಮಂತ್ರ ವಿದ್ಯೆಗಳು ರಾಕ್ಷಸರು ಮತ್ತು ವಿದ್ವಾವಂತ ಜನರಲ್ಲಿ ಕಂಡುಬಂದರೆ, ಮಾಟಗಾರಿಕೆ ಗ್ರಾಮೀಣ ಜನತೆಯಲ್ಲಿ ಉಗ್ರಾರಾಧನಾ ಸ್ವರೂಪದಲ್ಲಿ ಕಂಡುಬರುತ್ತದೆ. ಮಾಯಾವಿದ್ಯೆ ಮತ್ತು ಮಾಟಗಾರಿಕೆಗಳಿಂದ ಪ್ರತ್ಯೇಕವಾಗಿ ಕಾಣುವುದು ಮಂತ್ರವಿದ್ಯೆಯೆನ್ನಬಹುದು. ಇದಕ್ಕೊಂದು ನಿದರ್ಶನವೆಂದರೆ ಉತ್ತರೆಯ ಗರ್ಭದಲ್ಲಿರುವ ಶಿಶುವನ್ನು ನಾಶಮಾಡಲು ಅಶ್ವತ್ಥಾಮನು ಮಂತ್ರವಿದ್ಯೆಯ ಬಲದಿಂದ ತೃಣವೊಂದನ್ನು ಅಭಿಮಂತ್ರಿಸಿ ಉತ್ತರೆಯ ಗರ್ಭದ ಮೇಲೆ ಬಿಡುತ್ತಾನೆ. ಹಾಗೆ ಅಶ್ವತ್ಥಾಮನಿಂದ ಬಿಡಲ್ಪಟ್ಟ 'ಮಹಾಮಂತ್ರಾಭಿಮಂತ್ರಿತ ಭೀಮವಿಕ್ರಮ ತೃಣವು ಲೋಕತ್ರಯ ಕ್ಷೋಭ ಪ್ರಭಂಜನವಾಗಿ' ಬಂದು ಉತ್ತರೆಯ ಗರ್ಭನಾಶ ಮಾಡುವ ಮೊದಲೆ ಕೃಷ್ಣನು ಅದನ್ನು ನಿರರ್ಥಕಗೊಳಿಸುತ್ತಾನೆ. ಈ ರೀತಿ ಮಂತ್ರಶಕ್ತಿ ಪ್ರಯೋಗ- ಪ್ರತಿಮಂತ್ರ ಶಕ್ತಿ ಪ್ರಯೋಗಗಳನ್ನು ಇಂದೂ ಭಿನ್ನರೂಪದಲ್ಲಿ ಕಾಣಬಹುದು. ಇದೇ ಬಗೆಯ ಮಂತ್ರ ಪ್ರಯೋಗಗಳನ್ನು ಕ್ಷುದ್ರ ದೇವತೆಗಳ ಆರಾಧನೆಯ ಮೂಲಕ ದಕ್ಕಿಸಿಕೊಂಡು ಪ್ರಯೋಗ ಮಾಡುವ ಪರಿಪಾಟವನ್ನು ಜಾನಪದ ಜೀವನದಲ್ಲಿ ಕಾಣಬಹುದು.

ವಶೀಕರಣ ವಿದ್ಯೆಯಲ್ಲಿ ಮಂತ್ರಸಿದ್ಧಿ ಮುಖ್ಯವಾದ ಸಂಗತಿಯಾಗಿರುತ್ತದೆ. ಇದರ ಬಲದಿಂದ ಯಂತ್ರ, ತಿಲಕ ಮೊದಲಾದವುಗಳ ಮೂಲಕ ವಶೀಕರಣ ಮಾಡಿಕೊಳ್ಳುವ ಪ್ರಸ್ತಾಪಗಳನ್ನು ಕುಮಾರವ್ಯಾಸನಲ್ಲಿ ಕಾಣಬಹುದು. ದ್ರೌಪದಿಯನ್ನು ಸತ್ಯಭಾಮೆ ಪಂಚಪತಿಗಳನ್ನು ಒಲಿಸಿಕೊಂಡುದರ ಬಗ್ಗೆ "ಮಂತ್ರಸಿದ್ಧಿಯೊ ಮೇಣು ಶಾಬರ, ಯಂತ್ರರಕ್ಷೆಯೊ ಮೇಣ್ ವರೌಷಧ, ತಂತ್ರ ತಿಲಕವೊ ರಮಣರಿವರ್ಯೆವರ ವಶೀಕರಣ" (ಅ.ಪ. ೧೫-೨೨) ಎಂದು ಕೇಳುತ್ತಾಳೆ. ಇಂದಿಗೂ ಜನಗಳು ತಮಗೆ ಬೇಕಾದವರನ್ನು ಒಲಿಸಿಕೊಳ್ಳಲು ವಶೀಕರಣ ವಿದ್ಯೆ ಗೊತ್ತಿದೆಯೆಂದು

ಹೇಳುವವರ ಬಲೆಗೆ ಬೀಳುವವರನ್ನು ಕಾಣುತ್ತೇವೆ. ಆಧುನಿಕ ಯುಗದಲ್ಲೂ ಪತ್ರಿಕೆಗಳಲ್ಲಿ ಮಾಯಾ ಉಂಗುರ ಇತ್ಯಾದಿ ವಶೀಕರಣ ಯಂತ್ರದ ಜಾಹೀರಾತುಗಳನ್ನು ನಾವು ಕಾಣಬಹುದು. ಜಾನಪದ ಜೀವನದಲ್ಲಿ ಇದ್ದಂತೆಯೇ ಶಿಷ್ಟಜನರ ಜೀವನದಲ್ಲೂ ವಶೀಕರಣ ವಿದ್ಯೆಯಲ್ಲಿ ಜನತೆಗೆ ನಂಬಿಕೆಯಿರುವುದು ತಿಳಿದುಬರುತ್ತದೆ. ಕುಮಾರವ್ಯಾಸನ ಕಾವ್ಯದಲ್ಲೂ ಶಿಷ್ಟ - ಜಾನಪದಗಳೆರಡಕ್ಕೂ ಸಂಬಂಧಿಸಿದಂತೆ ವಶೀಕರಣ ವಿದ್ಯೆಯ ಪ್ರಸ್ತಾಪ ಬರುತ್ತದೆ.

ಕುಮಾರವ್ಯಾಸನ ಕಾವ್ಯದಲ್ಲಿ ಮಾಟ-ಮಂತ್ರದ ಪ್ರಸಂಗಗಳನ್ನೆಲ್ಲ ಗಮನಿಸಿದಾಗ ಕೌರವನ ಪಕ್ಷದವರೇ ಮೊದಲಿನಿಂದ ಕೊನೆಯವರೆಗೆ ಪಾಂಡವರ ವಿರುದ್ಧ ಅಭಿಚಾರ ಕ್ರಮಗಳನ್ನು ಅನುಸರಿಸಿರುವುದನ್ನು ಕಾಣುತ್ತೇವೆ. ಒಂದು ರೀತಿಯಲ್ಲಿ ದೇಸೀಯ ಮಾಟಪ್ರಯೋಗಗಳನ್ನು ಬಳಸಿದ್ದಾರೆನ್ನಬಹುದು. ಆದರೆ ಆತ್ಮರಕ್ಷಣೆಯ ಸಂದರ್ಭದಲ್ಲಿ ಮಂತ್ರ ಸಿದ್ಧಿಯ ವಿದ್ಯೆಯನ್ನು ಬಳಸಿರುವುದನ್ನೂ ಇಲ್ಲಿನೋಡುತ್ತೇವೆ. ಮಂತ್ರ-ಸಿದ್ಧಿಯ ವಿದ್ಯೆ ಒಂದು ರೀತಿಯಲ್ಲಿ ಶಿಷ್ಟ ಪದ್ಧತಿಯದು ಎನ್ನಬಹುದು. ಇನ್ನೊಬ್ಬರಿಗೆ (ಪಾಂಡವರಿಗೆ) ಕೆಡಕುಂಟುಮಾಡುವ ಸಂದರ್ಭಗಳಲ್ಲಿ ಮಾಟ ವಿದ್ಯೆ ಪ್ರಯೋಗವಾಗಿರುವುದನ್ನು ನೋಡಬಹುದು. ದುರ್ಯೋಧನನು ವೈಶಂಪಾಯನ ಸರೋವರದಲ್ಲಿ ಅಡಗಿಕೊಳ್ಳುವ ಸಂದರ್ಭದಲ್ಲಿ ಜಲಸ್ತಂಭನ ವಿದ್ಯೆಯನ್ನು ಬಳಸುತ್ತಾನೆ. ಇಲ್ಲಿ ಆತ್ಮರಕ್ಷಣೆಗಾಗಿ ಬಳಸಿದ ವಿದ್ಯೆ ಇದಾಗಿದೆ. ಇದರ ಬಗ್ಗೆ ಕವಿ ನೀಡಿರುವ ವರ್ಣನೆಗಳಲ್ಲೆಲ್ಲಾ ಶಿಷ್ಟವರ್ಗದವರ ಆಚರಣೆಗಳನ್ನು ಕಾಣುತ್ತೇವೆ. ಕವಿ ಹೇಳುವಂತೆ - 'ಕೈಕಾಲು ಮುಖತೊಳೆದುಕೊಂಡು ಅಂತಃಕರಣ ಶುದ್ಧಿಯಲ್ಲಿ ಆಚಮನ ಮಾಡಿ, ಓಂಕಾರದ ಉಚ್ಚಾರಣೆಗೊಂಡ ಅಂಗನ್ಯಾಸ, ಕರನ್ಯಾಸ ವಿಧಿಗಳನ್ನು ನೆರವೇರಿಸಿ, ವರ್ಣ ಮಂತ್ರಾಕ್ಷರದ ಜಪಗಳನ್ನು ಮಾಡಿ, ಪರಿಶುದ್ಧ ಚೇತನದ ಸ್ಫುರಣೆಯನ್ನು ಪಡೆದು, ಸಲಿಲಸ್ತಂಭನ ವಿದ್ಯೆಯನ್ನು ಪಠಿಸಿ, ಸೂರ್ಯಾದಿಗಳಿಗೆ ವಂದಿಸಿ, ವರುಣ ಧ್ಯಾನದೊಡನೆ ನೀರಿಗಿಳಿಯುತ್ತಾನೆ." (ಗ.ಪ.೩-೪೨, ೪೩) ಇಲ್ಲಿ ಅನುಸರಿಸಿರುವ ಧಾರ್ಮಿಕ ವಿಧಿಗಳಲ್ಲಿ ಶಿಷ್ಟ ಸಂಪ್ರದಾಯ ಕಂಡುಬರುತ್ತದೆ.

ಶಿಷ್ಟ ಸಂಪ್ರದಾಯದಲ್ಲಿ ಕೆಲವು ಸೂಕ್ತಿಗಳನ್ನು ಭಯಭೀತಿಗೆ ಒಳಗಾದಾಗ ಅದರ ನಿವಾರಣೆಗಾಗಿ ಪಠಿಸುವ ಸಂಪ್ರದಾಯವನ್ನು ಕುಮಾರವ್ಯಾಸ

ಉಲ್ಲೇಖಿಸುತ್ತಾನೆ. ಉದಾ : ರಕ್ಷೋಘ್ನಸೂಕ್ತವನ್ನು ಶತ್ರುಗಳ ಕೈಗೆ ಸಿಕ್ಕಿಕೊಂಡವರ ರಕ್ಷಣೆಗಾಗಿ ಅಥವಾ ಭೀತಿ ನಿವಾರಣೆಗಾಗಿ ಪಠಿಸುತ್ತಿದ್ದರು. ಮುನಿಗಳು ಈ ಸೂಕ್ತವನ್ನು ತಿಳಿದಿದ್ದು, ಸೂಕ್ತ ಸಮಯದಲ್ಲಿ ಬಳಸುತ್ತಿದ್ದರು. ಗಂಧಮಾದನ ಪರ್ವತದ ತಪ್ಪಲಿನ ಬಳಿ ಪಾಂಡವರು ಬರುತ್ತಿರುವಾಗ ಬಿರುಗಾಳಿ ಮಳೆ ಸಿಡಿಲುಗಳ ಅಬ್ಬರಕ್ಕೆ ಸಿಕ್ಕಿ ಮೂರ್ಛಾಕ್ರಾಂತಳಾಗಿ ಬಿದ್ದಿದ್ದ ದ್ರೌಪದಿಯನ್ನು ಧರ್ಮರಾಯ ತನ್ನ ತೊಡೆಯ ಮೇಲೆ ಕೂರಿಸಿಕೊಂಡು 'ಆದರಿಸಿ ಮಂತ್ರಿಸಿ ರಕ್ಷೆಗಳ ರಚಿಸಿ ನೀರನ್ನು ತಳಿದು ಉಪಚರಿಸಿದ ಮೇಲೆ, ರಕ್ಷೋಘ್ನಸೂಕ್ತದ ಜಪವನ್ನು ಮಾಡಿಸಿ (ಧೌಮ್ಯರ ಕೈಯಲ್ಲಿ) ವಚನ ಮಾತ್ರದ ರಪಣದಲ್ಲಿ ಗೋದಾನ, ಭೂದಾನವನ್ನು ಮಾಡುತ್ತಾನೆ.' (ಅ.ಪ. ೯-೨೮, ೨೯) ಅನಂತರ ದ್ರೌಪದಿ ಮೂರ್ಛೆಯಿಂದ ಏಳುತ್ತಾಳೆ.

ಇನ್ನೊಂದು ಸಂದರ್ಭದಲ್ಲಿ ದ್ರೌಪದಿಯನ್ನು ಜಯದ್ರಥನು ಅಪಹರಿಸಿಕೊಂಡು ಹೋಗುತ್ತಿರುವಾಗ ಧೌಮ್ಯ ಮಹರ್ಷಿಯು "ಅಡಿಯಿಡುತ ಘನ ರಕ್ಷೋಘ್ನ ಸೂಕ್ತವನಡಿಗಡಿಗೆ ಜಪಿಸುತ್ತಾ ಬೇಡಬೇಡೆಂದು ಜಯದ್ರಥನನ್ನು ಬೇಡಿ ಕೊಳ್ಳುತ್ತಿದ್ದರು." (ಅ.ಪ.೨೨-೨೧) ಅಪಾಯ ಬಂದಾಗ ಇಲ್ಲಿಯೂ ಧೌಮ್ಯರು ರಕ್ಷೋಘ್ನಸೂಕ್ತವನ್ನು ಪಠಿಸುತ್ತಾರೆ. ಎಂದರೆ ಆಕಾಲದಲ್ಲಿ ಭೀತಿ ನಿವಾರಣೆಗೆ ರಕ್ಷೋಘ್ನಮಂತ್ರವನ್ನು ಪಠಿಸುವ ಪದ್ಧತಿ ಇತ್ತೆಂದು ತಿಳಿಯುತ್ತದೆ. ಹೀಗೆ ಅಪಾಯವೊದಗಿದಾಗ ಮಂತ್ರಗಳನ್ನು ಪಠಿಸುವ ಪದ್ಧತಿಯನ್ನು ಇತರ ಕನ್ನಡ ಕಾವ್ಯಗಳಲ್ಲೂ ಕಾಣುತ್ತೇವೆ. ಲಕ್ಷ್ಮೀಶನ ಜೈಮಿನಿ ಭಾರತದಲ್ಲೂ ನೃಸಿಂಹ ಸ್ತುತಿಯನ್ನು ಪಠಿಸುವ ಪ್ರಸಂಗಗಳು ಬರುತ್ತವೆ. ಶಿಷ್ಟ ಸಮಾಜದಲ್ಲಿ ಇಂದೂ ಭೀತಿ-ಅಪಾಯಗಳು ಒದಗಿದಾಗ ಅದರ ನಿವಾರಣೆಗಾಗಿ ಅದಕ್ಕೆ ಸಂಬಂಧಿಸಿದ ಸ್ತೋತ್ರಗಳನ್ನು ಪಠಿಸುವ ಪದ್ಧತಿಯನ್ನು ಕಾಣುತ್ತೇವೆ. ಜನಪದರಲ್ಲಿ ಸ್ತೋತ್ರ ಪಠಿಸುವ ಪದ್ಧತಿಗೆ ಬದಲಾಗಿ ಬೀಜಮಂತ್ರವನ್ನು ಚೀಟಿ ಅಥವಾ ಫಲಕವುಳ್ಳ ತಾಯಿತಗಳನ್ನು ಭೀತಿಗೊಳಗಾದ ವ್ಯಕ್ತಿಯ ಕುತ್ತಿಗೆಗೊ ಕೈಗಳಿಗೊ ಕಟ್ಟುವುದನ್ನು ಕಾಣುತ್ತೇವೆ.

ಹೀಗೆ ಕುಮಾರವ್ಯಾಸನ ಕಾವ್ಯದಲ್ಲಿ ಸ್ವಾರ್ಥಹಿತಕ್ಕಾಗಿ, ದುಷ್ಟ ಬುದ್ಧಿಯಿಂದ ಬಳಸುವ ಮಾಟ, ವಶೀಕರಣ ಮುಂತಾದ ದೇಸಿಯ ವಿದ್ಯೆಗಳೂ ಕಂಡುಬರುತ್ತವೆ. ಆತ್ಮರಕ್ಷಣೆಗೆ ಸಜ್ಜನರ ಕಷ್ಟ ಪರಿಹಾರಕ್ಕೆ ಹಾಗೂ ಲೋಕಹಿತಕ್ಕೆ ಋಷಿ ಮುನಿಗಳಿಂದ ಉಪದೇಶವಾಗುವ ಶಿಷ್ಟ ಪದ್ಧತಿಯ ಮಂತ್ರೋಪದೇಶ ಪ್ರಸಂಗಗಳೂ

ಕಂಡುಬರುತ್ತವೆ. ಹೀಗೆ ಮಾರ್ಗ ಮತ್ತು ದೇಸಿ ಪದ್ಧತಿಗಳ ಮಾಟ-ಮಂತ್ರವಿಧಾನಗಳನ್ನು ಕುಮಾರವ್ಯಾಸನು ಸಮಯೋಚಿತ ವರ್ಣನೆಗಳಿಂದ ಬಳಸಿದ್ದಾನೆ.

**ಬಲಿಪದ್ಧತಿ**

ಜನಪದದಲ್ಲಿ ಇರುವ ಭೂತ ಪ್ರೇತಗಳಿಗೆ ಮಾರಿ ಮಸಣಿಗಳಿಗೆ ಅರ್ಥಾತ್ ಕ್ಷುದ್ರದೇವತೆಗಳಿಗೆ ಕುರಿ, ಕೋಳಿ, ಆಡು, ಕೋಣ ಇತ್ಯಾದಿ ಪ್ರಾಣಿಗಳನ್ನು ಬಲಿಯಾಗಿ ಅರ್ಪಿಸುವುದರ ಮೂಲಕ ತೃಪ್ತಿಗೊಳಿಸಿದರೆ ಕಾರ್ಯಸಾಧನೆ ಯಾಗುತ್ತದೆ ಎಂಬ ನಂಬಿಕೆ ಪ್ರಾಚೀನಕಾಲದಿಂದ ಇಂದಿಗೂ ಧಾರ್ಮಿಕ ಆಚರಣೆಗಳಲ್ಲಿ ಕಾಣಬಹುದು. ಈ ಪಶುಬಲಿ ಪ್ರಸಂಗಗಳು ಜನಜೀವನದಲ್ಲಿ ಆಚರಣೆಯಲ್ಲಿದ್ದುದರ ಫಲವಾಗಿ ಜಾನಪದ ಹಾಗೂ ಶಿಷ್ಟಕಾವ್ಯಗಳಲ್ಲಿ ಕಾಣಿಸಿಕೊಂಡಿವೆ ಎಂದರೆ ತಪ್ಪಲ್ಲ. ಇವು ಕಾಲ್ಪನಿಕ ಸಂಗತಿಗಳಾಗಿರದೆ ವಾಸ್ತವಿಕಾಚರಣೆಯ ಸಂಗತಿಗಳಾಗಿರುವುದರಿಂದ ಕಾವ್ಯದಲ್ಲಿ ಬರುವ ಬಲಿ ಪದ್ಧತಿಗಳು ಕವಿಯ ಕಾಲದಲ್ಲಿ ಆಚರಣೆಯಲ್ಲಿದ್ದ ಪದ್ಧತಿಗಳೇ ಆಗಿರಬಹುದು. ಇವುಗಳನ್ನು ಅರ್ಥೈಸುವಲ್ಲಿ ಆಯಾಧರ್ಮದ ಹಿನ್ನೆಲೆಯನ್ನು ಕಂಡರೂ ಆಚರಣಾ ವಿಧಾನಗಳನ್ನು ಉಲ್ಲೇಖಿಸುವಲ್ಲಿ ವ್ಯತ್ಯಾಸಕಾಣಲಾರದು. ಉದಾಹರಣೆಗೆ ಯಶೋಧರ ಚರಿತ್ರೆಯಲ್ಲಿ ಅಹಿಂಸಾಧರ್ಮದ ಹಿನ್ನೆಲೆಯಲ್ಲಿ ಆ ಪ್ರಸಂಗವನ್ನು ತಂದಿದ್ದರೂ ಮಾರಿಜಾತ್ರೆಯ ವರ್ಣನೆಯಲ್ಲಿ ಕಂಡುಬರುವ ಪ್ರಾಣಿವಧೆಯ ವರ್ಣನೆ ಆ ಕಾಲದ ಆಚರಣೆಗೆ ಸಾಕ್ಷಿಯಾಗಿದೆ. ಅಂತೆಯೇ ಕುಮಾರವ್ಯಾಸನ ಕಾವ್ಯದಲ್ಲಿ ಕಂಡುಬರುವ ಭೂತಬಲಿಗಳ ಪ್ರಸಂಗಗಳು ಅವನ ಕಾಲದ ಸಾಮಾಜಿಕ- ಧಾರ್ಮಿಕ ಜೀವನದಲ್ಲಿ ಕಂಡುಬರುವ ಆಚರಣೆಗಳಾಗಿವೆ ಎಂದರೆ ತಪ್ಪಲ್ಲ. ಪಾಂಡವ-ಕೌರವರಿಗೆ ಶಸ್ತ್ರವಿದ್ಯಾಶಿಕ್ಷಣ ಪ್ರಾರಂಭಿಸುವ ಮೊದಲು ಗರಡಿಮನೆ ನಿರ್ಮಾಣಮಾಡುವಾಗ 'ಚದುರಚಂಡಿಕೆಯನ್ನು ಸಾವಿರ-ಕುರಿಯ ಹೊಯ್ದು' (ಆ.ಪ. ೬-೪೦) ಪೂಜಿಸುವ ಪ್ರಸಂಗ, ಧನುರ್ವಿದ್ಯಾ ಪ್ರದರ್ಶನಕ್ಕಾಗಿ ಅಂಗಣದ ನಿರ್ಮಾಣ ಕಾರ್ಯಮುಗಿದ ನಂತರ 'ಹೊಯ್ದ ಕೋಣನ ಕುರಿಯ ಹಿಂಡಿನ/ ತೊಯ್ದ ರಕ್ತೋದನದ ರಾಶಿಯ/ನೈದೆ ದೆಸೆದೆಸೆಗಳಲಿ' (ಆ.ಪ.೬-೧೯) ಭೂತತುಷ್ಟಿಗಾಗಿ ಬಲಿಕೊಡುವುದನ್ನು ಕಾಣಬಹುದು.

ಭೂತಗಳಿಗೆ ಬಲಿಕೊಡುವುದೂ ಶಾಕಿನಿ ಡಾಕಿನಿಯರಿಗೆ ರಕುತಾಭಿಷೇಕ ಮಾಡುವುದೂ, ಮಾರಿಗೆ ಕುರಿ ಬಲಿಕೊಡುವುದೂ ಇವೇ ಮೊದಲಾದ ಸಂಗತಿಗಳನ್ನು ಕುಮಾರವ್ಯಾಸನು ಕಾವ್ಯದಲ್ಲಿ ಪದೇಪದೇ ಉಲ್ಲೇಖಿಸುತ್ತಾನೆ. ಮಾರಿಯ ಉಲ್ಲೇಖನಗಳಲ್ಲಿ ಕೆಲವನ್ನು ಉದಾಹರಿಸಬಹುದು. "ಮಾರಿಯ ಸೆರಗ ಹಿಡಿದನು ಕೌರವೇಶ್ವರನರ್ಜುನನ ಕೆಣಕಿ" (ಗ.ಪ. ೧-೪೨) "ಮಾರಿ ಗೌತಣ ಮರಳಿ ಹೇಳಿತು" (ವಿ.ಪ. ೮,೧), "ಮಾರಿಗೌತಣವಾಯ್ತು ನಾಳಿನ ಭಾರತವು" (ಉ.ಪ. ೧೦-೨೦), "ಪ್ರೀತಿಮಾರಿಯ ಮುಸುಕನುಗಿವುದನಾರು ಕಲಿಸಿದರು" (ಸ.ಪ.೧೨-೭೬) "ಹೋದಮಾರಿಯ ಕರೆದು ಮನೆಯೊಳಗಾದರಿ ಸಿದವರುಂಟೆ" (ಆ.ಪ. ೨೧-೩೨) "ಕಾಮಾರಿಯೊ ಪಾಂಡವಬಲದ ಹೆಮ್ಮಾರಿಯೊ" (ಕ.ಪ. ೧೧-೧೩)

ಪ್ರತಿಜ್ಞೆ ಕೈಗೊಳ್ಳುವ ಮತ್ತು ಆಯುಧ ಪೂಜಾಪ್ರಸಂಗಗಳಲ್ಲಿ ಕವಿ ಭೂತ ಬಲಿಗಳನ್ನು, ಅರ್ಚನಾ ವಿಧಾನಗಳನ್ನು ಭೀಭತ್ಸ, ರೌದ್ರರಸಗಳು ಉಕ್ಕಿಬರುವಂತೆ ವರ್ಣಿಸುತ್ತಾನೆ. ಉದಾಹರಣೆಗೆ, ಜಯದ್ರಥನನ್ನು ಬಲಿತೆಗೆದುಕೊಂಡು, ಅಭಿಮನ್ಯುವಿನ ಮರಣದ ಮುಯ್ಯಿ ತೀರಿಸುವ ಪ್ರತಿಜ್ಞೆ ಮಾಡಿದ ಅರ್ಜುನನು ರಣರಂಗಕ್ಕೆ ಹೊರಟ ಸಂದರ್ಭದಲ್ಲಿ ಶಸ್ತ್ರಾಸ್ತ್ರಗಳನ್ನು ಗಂಧ ಪುಷ್ಪ-ಅಕ್ಷತೆ ಧೂಪ ಇತ್ಯಾದಿಗಳಿಂದ ಅರ್ಚಿಸಿ ದುರ್ಗಾಸ್ತವವನ್ನು ಜಪಿಸುತ್ತಾನೆ. "ವರಘೃತೋದನ ನವರುಧಿರ ಮಾಂಸೋಪಹಾರಗಳಲಿ" ಭೂತಗಣವನ್ನು ಪೂಜಿಸುತ್ತಾನೆ. (ದ್ರೋ.ಪ. ೯-೨) ಆ ಸಂದರ್ಭದಲ್ಲಿ "ಒಡನೆ ಗಜರುವ ವಾದ್ಯದಲಿ ಕೆಂಪಡರಿದೋಗರ ಸಹಿತ ಭೂತಕೆ ಬಡಿಸಿದರು ಮಾಂತ್ರಿಕರು ಬಲಿಗೆದರಿದರು ದೆಸೆದೆಸೆಗೆ" (ದ್ರೋ.ಪ. ೯-೩) ಶತ್ರು ಪಕ್ಷವೇ ಇರಲಿ ಮಿತ್ರಪಕ್ಷವೇ ಇರಲಿ ಕುರಿ, ಕೋಳಿ, ಕೋಣ ಇತ್ಯಾದಿಗಳನ್ನು ಭೂತ ಬಲಿ ನೀಡಿ ಶಸ್ತ್ರ ಪೂಜೆ ಮಾಡುವ ಸಂಪ್ರದಾಯವು ಆ ಕಾಲದಲ್ಲಿ ಪ್ರಬಲವಾಗಿತ್ತು ಎನ್ನಬಹುದು. ಪಾಂಡವರ ಪಕ್ಷದ ಅರ್ಜುನನ ಆಯುಧ ಪೂಜೆಯನ್ನು ವರ್ಣಿಸುವ ಕುಮಾರವ್ಯಾಸನ ಕಾವ್ಯ ಅಷ್ಟೇ ಅತಿಶಯದಲ್ಲಿ ಶತ್ರುಪಕ್ಷವಾದ ಕೌರವನ ಕಡೆಯ ಕರ್ಣನು ಶಸ್ತ್ರ ಪೂಜೆ ಮಾಡುವುದನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಾನೆ. "ಕುರಿಯ ಹಣಿದದ ಕೋಳಿ ಕೋಣನ/ ಮುರಿದಲೆಯ ಮೊಸಲಿನ ರಕುತದ/ ದುರುದುರಿಪ ದಂಡೆಯಲಿ ಕಲಿಸಿದ ಕೂಳ ಮುದ್ದೆಗಳ/ ಹೊರಗೆ ಬಡಿಸಿದ ಬೂತಬಲಿ ಬೊ/ ಬ್ಬಿರಿತದೊಡನುಬ್ಬೇಳ್ವಲಗ್ಗೆಯ ಹರೆಗಳಬ್ಬರವಾಯ್ತು" (ಕ.ಪ. ೮-೮) ಎಂದು ಕವಿ ವರ್ಣಿಸುತ್ತಾನೆ. ಅಷ್ಟೇ ಅಲ್ಲದೆ

ಕರ್ಣನ ವೀರ ಪ್ರತಿಜ್ಞೆಯನ್ನು ಭೂತಬಲಿಯ ರೂಪಕದ ಮೂಲಕ ಕವಿ ಸೊಗಸಾಗಿ ವರ್ಣಿಸುತ್ತಾ ಹೇಳುವ ಮಾತಿದು.

ನರನ ರಕುತದ ಮದ್ಯಪಾನವ
ನೆರೆದು ಶಾಕಿನಿಯರಿಗೆ ಪಾರ್ಥನ
ಕರುಳದೊಂಡೆಯ ಕೂಳಮುದ್ದೆಯ ಬಡಿಸಿದೈತ್ಯರಿಗೆ
ಅರಿಯ ಖಂಡದಿ ಹಸಿಯ ಸುಂಟಿಗೆ
ವೆರಸಿ ಭೂತಾವಳಿಯ ದಣಿಸಿದ
ಡರಸು ಕೌರವನೆನ್ನ ಸಾಕಿತಕಿಂದು ಫಲವು (ಕ.ಪ. ೮-೪೨)

ಎನ್ನುತ್ತಾನೆ.

ಅನೇಕ ಸಂದರ್ಭಗಳಲ್ಲಿ ಸಾಹಿತ್ಯದಲ್ಲಿ ಸಮಾಜದರ್ಶನ ಮತಿಬಿಂಬ ವಾಗದೆ ಪ್ರತಿಬಿಂಬವಾಗಿ ಮೂಡುತ್ತದೆ. ಜಾನಪದ ಜೀವನ ಶಿಷ್ಟಕಾವ್ಯದಲ್ಲಿ ಎಷ್ಟೋ ವೇಳೆ ಸಚಿತ್ರವಾಗಿ ಮೂಡುತ್ತದೆ ಎಂಬುದಕ್ಕೆ ಬಲಿಪದ್ಧತಿ ಒಂದು ನಿದರ್ಶನವಾಗಿದೆ.

○

# ವೀಳೆಯ ಪದ್ಧತಿ

ನಮ್ಮ ಭಾರತೀಯ ಸಮಾಜದಲ್ಲಿ ವೀಳೆಯ ಅಥವಾ ವೀಳ್ಯಕ್ಕೆ ಒಂದು ಪ್ರಮುಖ ಸ್ಥಾನವಿದೆ. ಧಾರ್ಮಿಕ, ಸಾಂಸ್ಕೃತಿಕ ಸಾಮಾಜಿಕ, ರಾಜಕೀಯ ಹೀಗೆ ನಾನಾ ದೃಷ್ಟಿಗಳಿಂದ 'ವೀಳ್ಯ' ವಿಶಿಷ್ಟಸ್ಥಾನವನ್ನು ಅಲಂಕರಿಸಿದೆ.

ನಮ್ಮಲ್ಲಿ 'ವೀಳೆಯ'ವನ್ನು ನಾನಾ ಸಂದರ್ಭಗಳಲ್ಲಿ, ನಾನಾ ಪ್ರಕಾರವಾಗಿ ಬಳಸುತ್ತಾರೆ. ಕೇವಲ ತಾಂಬೂಲ ಚರ್ವಣವೆಂದು ಮಾತ್ರ ಬಳಸದೆ, ಅದನ್ನು ಗೌರವದ ಪ್ರತೀಕವಾಗಿ ಅಭಿಮಾನದ ಸಂಕೇತವಾಗಿ , ದಾಸ್ಯಸೂಚಕವಾಗಿ, ಪಂಥಾಹ್ವಾನವಾಗಿ, ರಾಗರಂಜಿತವಾಗಿ, ಪೂಜಾಕ್ರಮವಾಗಿ, ಅಲಂಕಾರದ್ಯೋತಕವಾಗಿ, ಆರೋಗ್ಯವರ್ಧಕವಾಗಿ- ಹೀಗೆ ನಾನಾದೃಷ್ಟಿಗಳಿಂದ ಬಳಸುವುದನ್ನು ಕಾಣಬಹುದು. ವೀಳೆಯವನ್ನು ಪಾಪ ಪರಿಹಾರಾರ್ಥವಾಗಿಯೂ ದಾನಮಾಡುವ ಪದ್ಧತಿಯೂ ಇದೆ.[೧] ಇವಲ್ಲದೆ "ಹುಡುಗಿಯರು ಮೈನೆರೆದಾಗ ಮಾಡುವ ಸಮಾರಂಭದಲ್ಲಿ, ಮದುವೆ ಸಮಾರಂಭದಲ್ಲಿ, ಅಂತ್ಯಕ್ರಿಯೆಗೆ ಸಂಬಂಧಿಸಿದ ಸಮಾರಂಭಗಳಲ್ಲಿ, ಪ್ರಣಯಾಚರಣೆಗಳಲ್ಲಿ, ಕನ್ಯಾನಿಶ್ಚಯಗಳಲ್ಲಿ, ಜನ್ಮಕಾಲಜ್ಞಾನ ಮುಂತಾದವುಗಳಲ್ಲಿ ಬಳಸಲಾಗುತ್ತದೆ."[೨]

ತಾಂಬೂಲವನ್ನು ಕುರಿತ ಮೊದಲ ಉಲ್ಲೇಖ ವಾತ್ಸಾಯನನ ಕಾಮಸೂತ್ರ, ಹಾಗೂ ಚರಕ, ಸುಶ್ರುತರ ಗ್ರಂಥಗಳಲ್ಲಿ ಕಂಡುಬರುತ್ತದೆ. ಅಲ್ಲಿಂದೀಚೆಗೆ ಕಾಳಿದಾಸ, ಸೋಮದೇವ, ಶೂದ್ರಕ, ಬಾಣ, ಅಮರುಕ ಮೊದಲಾದ ಪ್ರಸಿದ್ಧ ಸಂಸ್ಕೃತ ಕವಿಗಳ ಕಾವ್ಯಗಳಲ್ಲಿ ರಸಿಕತೆಯ ದೃಷ್ಟಿಯಿಂದ ತಾಂಬೂಲವನ್ನು ವರ್ಣಿಸಿರುವುದನ್ನು ಕಾಣಬಹುದು. ಕನ್ನಡದಲ್ಲಿ ಜಾನಪದ ಜೀವನವನ್ನೇ ಆಧರಿಸಿ ತ್ರಿಪದಿಗಳನ್ನು ಬರೆದ ಸರ್ವಜ್ಞ ವೀಳೆಯ (ವೀಳ್ಯ, ತಾಂಬೂಲ)ವನ್ನು ವಿಶೇಷವಾಗಿ

---

೧. ತಾಂಬೂಲ ಮಂಜರಿ, ಪು-೧೧೧

೨. ಕ.ಜಾ.ವಿ: ಸಂ-೨, ಪು-೧೮೨೧

ವರ್ಣಿಸಿರುವುದನ್ನು ಬಿಟ್ಟರೆ, ಕುಮಾರವ್ಯಾಸನಷ್ಟು ವೈವಿಧ್ಯಮಯವಾಗಿ ಇತರ ಕವಿಗಳು ಬಳಸಿಕೊಂಡಿಲ್ಲ ಎನ್ನಬಹುದು. ಬಹುಶಃ ಉತ್ತರ ಕರ್ನಾಟಕದ ಜನಜೀವನದ ನಿತ್ಯಬದುಕಿನಲ್ಲಿ ವೀಳ್ಯವನ್ನು ಮೆಲ್ಲುವ ಹಾಗೂ ಅದರ ವಿಶೇಷವಾಗಿ ಬಳಸುವುದರ ಪ್ರಭಾವ ಉತ್ತರ ಕರ್ನಾಟಕದಲ್ಲಿದ್ದ ಕುಮಾರವ್ಯಾಸನ ಮೇಲೆ ಆಗಿರಬಹುದು.

'ತಾಂಬೂಲ' ಪದದ ವ್ಯುತ್ಪತ್ತಿ ಮತ್ತು ಬಳಕೆಯ ಇತಿಹಾಸ ಕುತೂಹಲಕಾರಿಯಾದುದು. ಸಂಪೂರ್ಣ ವೈದಿಕಗ್ರಂಥಗಳಾದ ವೈದಿಕ ಸಂಹಿತೆಗಳಲ್ಲಿಯೂ ಬ್ರಾಹ್ಮಣಗಳಲ್ಲಿಯೂ, ಸ್ಮಾರ್ತ ಮತ್ತು ಧರ್ಮಸೂತ್ರಗಳಲ್ಲಿಯೂ, ಮನು ಮತ್ತು ಯಾಜ್ಞವಲ್ಕ್ಯ ಸ್ಮೃತಿಗಳಲ್ಲಿಯೂ 'ತಾಂಬೂಲ' ಶಬ್ದದ ಉಪಯೋಗವು ಕಂಡುಬಂದಿಲ್ಲ. ಆಚಾರವಂತ ವೈದಿಕ ಬ್ರಾಹ್ಮಣರು ಈಗಲೂ ಈ ಪದ್ಧತಿಯನ್ನು ಇಷ್ಟಪಡುವುದಿಲ್ಲ. ಆದರೆ ತಾಂತ್ರಿಕ ಧರ್ಮ ಪಂಥದಲ್ಲಿ, ಗ್ರಾಮೀಣರಲ್ಲಿ ತಾಂಬೂಲವು ಬಹಳ ಜನಪ್ರಿಯವಾಗಿತ್ತು. ತಾಂತ್ರಿಕ ಆಚರಣೆಗಳ ಪ್ರಭಾವದಿಂದ ತಾಂಬೂಲದ ಉಪಯೋಗವು ಕ್ರಮೇಣ ಚಾತುರ್ವರ್ಣ್ಯದಲ್ಲಿ ಮೊದಲಿನ ಮೂರು ವರ್ಣಗಳಲ್ಲಿಯೂ ಬಳಕೆಗೆ ಬಂದಿರಬಹುದು. ಸಂಪ್ರದಾಯಬದ್ಧ ಸಮಾಜದಲ್ಲಿ ಇಂದೂ ಸಹ ಬ್ರಹ್ಮಚಾರಿಗಳು, ಯತಿಗಳು, ವಿಧವೆಯರಿಗೆ ತಾಂಬೂಲ ಸೇವನೆ ನಿಷಿದ್ಧವಾಗಿರುವುದನ್ನು ಗಮನಿಸಿದರೆ ಇದು ಮೊದಲಿಗೆ ವೈದಿಕೇತರ ಪದ್ಧತಿ ಎಂದು ಹೇಳಬಹುದು.

ಬಗೆಬಗೆಯ ತಾಂಬೂಲ ಅಥವಾ ವೀಳೆಯಗಳ ಬಳಕೆಯನ್ನು ಹೇಳುವುದು ಕುಮಾರವ್ಯಾಸನ ಕಾವ್ಯದ ಮತ್ತೊಂದು ವೈಶಿಷ್ಟ್ಯ, ತಾಂಬೂಲ, ಬಟ್ಟಲವೀಳ್ಯ, ತಳಿಗೆ ತಂಬುಲ, ಕರ್ಪುರ ವೀಳ್ಯ, ಬಾಯ್ದಂಬುಲ, ಎಡಗೈ ವೀಳ್ಯ, ರಣವೀಳ್ಯ ಮೊದಲಾದ ಹಲವು ಬಗೆಯ ವೀಳ್ಯಗಳ ಬಳಕೆಯನ್ನೂ ಆಯಾ ಸಂದರ್ಭಗಳ ಆಚರಣೆಗಳಿಗೆ ತಕ್ಕಂತೆ ಉಲ್ಲೇಖಿಸುತ್ತಾನೆ. ಇವುಗಳ ಪೈಕಿ ರಣವೀಳ್ಯದ ಉಲ್ಲೇಖ ವಿಶೇಷವಾಗಿ ಗಮನಿಸುವಂಥದು.

ರಣವೀಳ್ಯ :

ಸಾಮಾನ್ಯವಾಗಿ ಯುದ್ಧದಲ್ಲಿ ಹೊಣೆಗಾರಿಕೆಯೊಂದನ್ನು ಒಪ್ಪಿಸುವಾಗ ಮತ್ತು ಅದಕ್ಕೆ ಸಮ್ಮತಿ ಸೂಚಿಸುವಾಗ ರಣವೀಳ್ಯ ನೀಡುವುದನ್ನು ಮತ್ತು ಪಡೆಯುವುದನ್ನು

ಕಾಣುತ್ತೇವೆ. ತಾವಾಗಿಯೇ ಸವಾಲುಗಳನ್ನು ಎದುರಿಸಲು ಸಿದ್ಧರಾದಾಗ ವೀರರು "ತಾ ವೀಳೆಯವ" ಎಂದು ಕೇಳಿ ತೆಗೆದುಕೊಳ್ಳುವುದು ಈ ಕಾವ್ಯದಲ್ಲಿ ಕಂಡುಬರುತ್ತದೆ.

ಕೃಷ್ಣನು ಜರಾಸಂಧವಧೆಗೆ ಭೀಮಾರ್ಜುನರನ್ನು ಕಳುಹಿಸಲು "ಭೀಮ ಪಾರ್ಥರಿಗಿದು ಮುಹೂರ್ತವು ವೀಳೆಯವ ತಾ, ಕದನ ಸೇಸೆಯನಿಕ್ಕಿಕಳುಹು" ಎಂದು ಧರ್ಮರಾಯನಿಗೆ ಹೇಳುತ್ತಾನೆ. (ಸ.ಪ. ೨-೫೦)

ಊರ ಹೊರವಲಯದಲ್ಲಿ ಸಿದ್ಧರಾಗಿ ನಿಂತಿರುವ ರಣ-ಕಲಿಗಳನ್ನು ಸದೆ ಬಡಿಯಲು "ತಾ ವೀಳೆಯವ" ಎಂದು ಕರ್ಣ ಕೌರವನಲ್ಲಿ ರಣವೀಳ್ಯವನ್ನು ಬೇಡುತ್ತಾನೆ. (ಭೀ. ಪ. ೧-೨)

ನಿಶಾಯುದ್ಧದಲ್ಲಿ ಪಾಂಡವ ಸೇನೆಯನ್ನು ಎದುರಿಸಲು ಸಿದ್ಧನಾದ ದ್ರೋಣ "ಅತಿರಥ ಮಹಾರಥರಾಜಿಗಿತ್ತನು ರಣಕೆ ವೀಳೆಯವ" (ದ್ರೋ.ಪ. ೧೭-೨೩)

ಘೋಷಾಯಾತ್ರಾ ಪ್ರಸಂಗದಲ್ಲಿ ಗಂಧರ್ವರಾಜ ಚಿತ್ರಸೇನನು "ಕವಿ ಕವಿಯೆನುತ ಬೇಹವರಿಗಿತ್ತನು ರಣಕೆ ವೀಳೆಯವ." (ಅ.ಪ. ೧೭-೩೭)

ಸಾಮೂಹಿಕವಾಗಿ ರಣವೀಳ್ಯವನ್ನು ಕೊಡುವ ಸಂದರ್ಭಗಳನ್ನು ಇಲ್ಲಿ ಕಾಣಬಹುದು. ಪದ್ಮವ್ಯೂಹವನ್ನು ರಚಿಸಿದ ದ್ರೋಣ "ಅರಿಬಿರುದ ಮಂಡಳಿಕರಿಗೆ ಕಾಳಗದ ವೀಳೆಯವನು" ಪಂಥಾಹ್ವಾನವಾಗಿ ನೀಡುತ್ತಾನೆ. (ದ್ರೋ.ಪ. ೪-೧೫)

ಚೌಪಟಮಲ್ಲನಾದ ದ್ರೋಣನು "ತನ್ನ ಸಾರಥಿಗಿತ್ತು ವೀಳೆಯವ" ಧರ್ಮರಾಯನಿರುವೆಡೆಗೆ ರಥವನ್ನು ಹರಿಸುವ ಸವಾಲನ್ನು ಸ್ವೀಕರಿಸಲು ಹೇಳುತ್ತಾನೆ. (ದ್ರೋ. ಪ. ೨-೩೦)

ವ್ಯಕ್ತಿಗತವಾಗಿ ವೀಳೆಯ ನೀಡುವುದನ್ನು ಕಾಣುವಂತೆ, ಸ್ವೀಕರಿಸುವುದನ್ನೂ ಕಾಣುತ್ತೇವೆ.

ಶಲ್ಯನು ಕರ್ಣಸಾರಥ್ಯವನ್ನು ಒಪ್ಪಿಕೊಂಡ ಸಂದರ್ಭದಲ್ಲಿ ಕೌರವನಿಗೆ "ಕಮಲದಳಾಯತೇಕ್ಷಣನೊಡನೆ ಬಂಡಿಯ ಬೋಯಿಕೆಗೆ ವೀಳೆಯವ ಹಿಡಿದೆವು" ಎನ್ನುತ್ತಾನೆ (ಕ.ಪ. ೫-೩೭)

ವೀಳೆಯವನ್ನು ಸಾಮಾನ್ಯವಾಗಿ ಬಲಗೈಯಲ್ಲಿ ಕೊಡುವುದು ಮತ್ತು ಸ್ವೀಕರಿಸುವುದು ಪದ್ಧತಿ. ಆದರೆ ಕೆಲವು ಸಂದರ್ಭಗಳಲ್ಲಿ ತಾಂಬೂಲವನ್ನು ಎಡಗೈಯಲ್ಲಿ ನೀಡುವ ಹಾಗೂ ಸ್ವೀಕರಿಸುವ ಪದ್ಧತಿಯನ್ನು ಕಾಣುತ್ತೇವೆ. ಈ ಪದ್ಧತಿ ಸಾಮಾನ್ಯವಾಗಿ ರಾಕ್ಷಸವರ್ಗ ಮತ್ತು ವಾಮಾಚಾರಗಳಲ್ಲಿ ಕಂಡುಬರುತ್ತದೆ. ಕುಮಾರವ್ಯಾಸನ ಕಾವ್ಯದಲ್ಲಿ ಇದರ ಪ್ರಸ್ತಾಪವನ್ನು ಕಾಣಬಹುದು. ನಿಶಾಯುದ್ಧದಲ್ಲಿ ಕೌರವನನ್ನುಎದುರಿಸಲು ಧರ್ಮರಾಯನು ಘಟೋತ್ಕಚನಿಗೆ ಹೇಳಿ ಕಳುಹಿಸಿದಾಗ ಅವನು "ಕುರುಸೇನೆ ಮಲೆತುದೆ ಬಿಡು ಬಿಡಾ ತಡವೇನು? ತಾ ವೀಳೆಯವನು" ಎಂದು ಹೇಳುತ್ತಾ" "ಎಡಗೈಯನರಳಿಚುತ" ಸ್ವೀಕರಿಸುತ್ತಾನೆ. (ದ್ರೋ. ಪ. ೧೫-೪೫, ೪೬)

ನಿವಾತಕವಚರ ಪಟ್ಟಣದ ಮೇಲೆ ಧಾಳಿ ನಡೆದಾಗ, ಕೋಟಿ ಸಂಖ್ಯೆಯಲ್ಲಿ ಒಂದಾಗಿ ಬಂದ ರಾಕ್ಷಸರು ತಮ್ಮ ಒಡೆಯರಿಗೆ ಹೇಳಿದ ಮಾತು "ದೇವ ಖಾತಿಯಿದೇಕೆ ದಿವಿಜರ ರಾಯನರಸಿಯ ನಿನ್ನ ತೊತ್ತಿರ ಲಾಯದಲಿ ತೋರುವೆವು ತಾ ತಾ ವೀಳೆಯವನು" ಎಂದು ಅಬ್ಬರಿಸುತ್ತಾರೆ (ಅ.ಪ. ೧೨-೩೧)

ಭೀಮಾರ್ಜುನರು ಕೃಷ್ಣನೊಂದಿಗೆ ಜರಾಸಂಧ ವಧೆಗಾಗಿ ಅವನ ಅರಮನೆಯನ್ನು ಸೇರಿ, ತಮ್ಮ ಉದ್ದೇಶವನ್ನು ತಿಳಿಸಿದಾಗ, ಜರಾಸಂಧ "ಹರಿ ವೃಕೋದರ ಪಾರ್ಥರಿದಿರಲಿ ಭರಣಿಗಳ ನೂಕಿದನು....." (ಸ.ಹ. ೨-೯೧)

**ಬಾಯ್ದಂಬುಲ**

'ಬಾಯ್ದಂಬುಲ' ಎಂದರೆ ಬಾಯಲ್ಲಿ ಹಾಕಿಕೊಂಡು ಮೆದ್ದ ತಾಂಬೂಲವೆಂದು ಸ್ಥೂಲವಾದ ಅರ್ಥ. ಈ ಮಾತನ್ನು ಕುಮಾರವ್ಯಾಸನು ಕೇವಲ ವಾಚ್ಯಾರ್ಥದಲ್ಲಿ ಬಳಸದೆ ವಿವಿಧಾರ್ಥಗಳಲ್ಲಿ ಪಡೆನುಡಿಯಾಗಿ ಬಳಸಿದ್ದಾನೆ. ಅಂತರಂಗದ ಆತ್ಮೀಯ ಸ್ನೇಹವುಳ್ಳವರು ತಾವು ಮೆಲ್ಲಿದ ತಾಂಬೂಲವನ್ನು ಸ್ವೀಕರಿಸುವ ಪದ್ಧತಿ ಹಿಂದೆ ಕ್ಷತ್ರಿಯರಲ್ಲಿ ಇದ್ದಂತೆ ಕಾಣುತ್ತದೆ. ಕುಮಾರವ್ಯಾಸನ ಕಾವ್ಯದಲ್ಲಿ ಇದರ ಪ್ರಸ್ತಾಪ ಸ್ನೇಹಸೂಚಕ ಸಂದರ್ಭಗಳಲ್ಲಿ, ಆಳು- ಅರಸರ ಸ್ನೇಹನಿಷ್ಠೆಯ ಪ್ರಸಂಗಗಳಲ್ಲಿ ಕಂಡುಬರುತ್ತದೆ. ಕೃಷ್ಣ ಕರ್ಣನಿಗೆ ಅವನ ಜನ್ಮರಹಸ್ಯವನ್ನು ತಿಳಿಸಿ 'ಕೌರವ-ಪಾಂಡವವಲ್ಲಿ ಹಿರಿಯನಾದ ನೀನು "ದುರ್ಯೋಧನನ ಬಾಯ್ದಂಬುಲಕೆ ಕೈಯಾನುವರೆ" ಎನ್ನುತ್ತಾನೆ (ಉ.ಪ. ೧೦-೮) ಇಲ್ಲಿ 'ಬಾಯ್ದಂಬುಲಕೆ

ಕೈಯಾನುವುದು' ಎಂಬ ಮಾತು ದೊರೆಗೆ ಸೇವಾನಿಷ್ಠೆಯನ್ನು ತೋರಿಸುವುದು ಎಂಬರ್ಥದಲ್ಲಿ ಬಳಕೆಯಾಗಿದೆ.

ದ್ರೋಣನು ಪಾಂಚಾಲನನ್ನು ಕೊಲ್ಲುವ ಮುನ್ನ ತನ್ನ ಮತ್ತು ಪಾಂಚಾಲನ ಹಿಂದಿನ ಸ್ನೇಹವನ್ನು ನೆನೆಪಿಸಲು "ಇಂದು ನಿನ್ನಯ ಬಾಯತಂಬುಲ ತಿಂದವನ ನೋಡು" ಎಂದು ಚುಚ್ಚಿ ನುಡಿಯುತ್ತಾನೆ. (ದ್ರೋ.ಪ. ೧೭-೩೮) ಇಲ್ಲಿ 'ಬಾಯ್ದಂಬುಲ' ಸ್ನೇಹಕ್ಕೆ ಪ್ರತೀಕವಾಗಿ ಬಂದಿದೆ.

ಕೌರವರ ಅವಸಾನದನಂತರ ಪಾಂಡವರು ಗಾಂಧಾರಿಯ ಬಳಿ ಬಂದಾಗ ತಾವು ಧೃತರಾಷ್ಟ್ರನ ಕೃಪಾಕಟಾಕ್ಷದಲ್ಲಿ ಬಾಳುತ್ತೇವೆ. ಈ ರಾಜ್ಯಕ್ಕೆ ಆತನೇ ಒಡೆಯ ಎಂದು ಹೇಳುವಾಗ "ಧರಣಿಗೆ ರಾಯನೇ ಧೃತರಾಷ್ಟ್ರನು. ಆತನ ಬಾಯತಂಬುಲ ಬೀಳುವಡೆಯ ಬಲದಿಂದ ಬದುಕುವೆವು" ಎನ್ನುತ್ತಾನೆ (ಗ.ಪ. ೧೧-೫೫)

ಕರ್ಣನಿಂದ ಪೆಟ್ಟುತಿಂದ ಧರ್ಮರಾಯ ಮತ್ತು ಅರ್ಜುನರ ನಡುವೆ ನಡೆದ ವಿರಸ ಸಂಭಾಷಣೆಯನಂತರ ಧರ್ಮರಾಯನು "ಮುದದಲಿ ಬಾಯ ತಂಬುಲವಿತ್ತು" ಅರ್ಜುನನ್ನು ಸಂತೈಸುತ್ತಾನೆ. (ಕ.ಪ. ೧೮-೯)

ಹೀಗೆ ಕುಮಾರವ್ಯಾಸನು 'ಬಾಯ್ದಂಬುಲ' ಎಂಬ ಮಾತನ್ನು ದಾಸ್ಯ, ಸ್ನೇಹ, ಆಶ್ರಯ, ಪ್ರೀತಿ ಎಂಬ ಅರ್ಥಗಳಲ್ಲಿ ನುಡಿಗಟ್ಟನ್ನಾಗಿ ಬಳಸಿರುವುದನ್ನು ಕಾಣಬಹುದು.

### ಕರ್ಪುರ ವೀಳ್ಯ

ತಾಂಬೂಲಗಳಲ್ಲಿ[೧] ಹಲವಾರು ವಿಧಗಳನ್ನು ಕಾಣಬಹುದು. ವಿವಿಧೋದ್ದೇಶಗಳಿಗೆ ವಿವಿಧ ಬಗೆಯ ತಾಂಬೂಲಗಳನ್ನು ಸಿದ್ಧಪಡಿಸುತ್ತಾರೆ. ಈ ಪೈಕಿ ಕರ್ಪೂರ ವೀಟಿಕಾ ಅಥವಾ ಕರ್ಪುರ ವೀಳ್ಯವೂ ಒಂದು. ಕುಮಾರವ್ಯಾಸನು 'ಕರ್ಪುರ ವೀಳ್ಯ' ವನ್ನು ಸೇನೆಯ ಜನರು ಬಳಸುತ್ತಿದುದನ್ನು ಕುರಿತು ಹಲವಾರು

---

೧.ತಾಂಭೂಲ > ತಾಂಬೂಲ > ತಂಬುಲ (ತಾಂಬೂಲ ಮಂಜರಿ, ಪೀಠಿಕೆ, ಪು. ೬, ೭)

ತಾಂಬೂಲ = ತಾಂಬೂಲವಲ್ಲಿ, ತಾಂಬೂಲಿ ನಾಗವಲ್ಲೀ = ವೀಳೆಯದೆಲೆ (ಅಮರಕೋಶ, ವನೌಷಧಿ ವರ್ಗ , ಪು. ೪೭೫)

ತಾಮ್ +ಭೂಲ (ಆಸ್ಟ್ರೋ - ಏಷ್ಯಾ ದೇಶೀಯ ಪದ)

ಕಡೆಗಳಲ್ಲಿ ಪ್ರಸ್ತಾಪಿಸಿದ್ದಾನೆ. 'ಕರ್ಪೂರ ವೀಳ್ಯ'[೧]ವನ್ನು ದವಡೆಯಲ್ಲಿ ಒತ್ತರಿಸಿಕೊಳ್ಳುವ ಪದ್ಧತಿಯನ್ನು ಇಂದೂ ವಿಶೇಷವಾಗಿ ಗ್ರಾಮೀಣಜನರಲ್ಲಿ ಕಾಣುತ್ತೇವೆ. ಇಂದಿನ ಆಧುನಿಕ ಯುವಕರು ವಿವಿಧ 'ಪಾನ್ ಪರಾಗ್' ಗಳನ್ನು ಬಳಸುವುದು ಇದರ ಇನ್ನೊಂದು ರೂಪ ಎನ್ನಬಹುದು.

ಭೀಮ ದುರ್ಯೋಧನರು ಕರ್ಪೂರ ವೀಳ್ಯವನ್ನು ದವಡೆಯಲ್ಲಿ ಒತ್ತರಿಸಿಕೊಂಡಿದುದನ್ನು "ಕೊಡಹಿದನು ತನು ಧೂಳಿಯನು ಧಾರಿಡುವ ರುಧಿರವ ಸೆರಗಿನಲಿ ಸಲೆ ತೊಡೆತೊಡೆದು ಕರ್ಪುರವನಣಲೊಳಳವಡಿಸಿ" (ಗ.ಪ. ೭-೪೯)

ಕಾಳಗದ ಮಧ್ಯೆ ಬಳಲಿಕೆ ಪರಿಹಾರಕ್ಕಾಗಿ ಕರ್ಪೂರ ವೀಳೆಯವನ್ನು ಹಾಕಿಕೊಳ್ಳುವ ಪದ್ಧತಿ ಬಳಕೆಯಲ್ಲಿತ್ತು ಎಂದು ತೋರುತ್ತದೆ. ಗ್ರಾಮೀಣ ಜನರಲ್ಲಿ ಮಧ್ಯೆ ಬಿಡುವಾದಾಗಲೆಲ್ಲಾ ವೀಳೆಯವನ್ನು ಹಾಕಿಕೊಳ್ಳುವ ಪದ್ಧತಿಯನ್ನು ಇಂದೂ ನೋಡಬಹುದು "ಅಡಿಗಡಿಗೆ ವೀಳೆಯವನು ಅಡಸಿದರು ತಾಳಿಗೆಗೆ" (ಗ. ಪ. ೭-೭)

ಯುದ್ಧಕ್ಕೆ ಸಿದ್ಧರಾಗುತ್ತಿದ್ದಾಗ ಯುದ್ಧದ ಕವಚ, ಸೀಸಕ ಮೊದಲಾದ ಉಡುಪುಗಳನ್ನು ಧರಿಸಿಕೊಳ್ಳುವುದರ ಜೊತೆಗೆ, ಕರ್ಪುರ ವೀಳೆಯವನ್ನು ಹಾಕಿಕೊಳ್ಳುತ್ತಿದ್ದರು. ಯುದ್ಧದ ನಡುವೆ ಹೋರಾಟದಲ್ಲಿ ಮರೆದೊರಗಿದಾಗ, ಬಳಲಿದಾಗ, ಚೇತರಿಕೆಗಾಗಿ 'ಕರ್ಪುರದ ಕವಳದ ಹಳಕು' ಹಾಕಿಕೊಳ್ಳುವ ಪದ್ಧತಿಯನ್ನು ಕಾಣಬಹುದು (ಕ. ಪ. ೨೪-೨೪)

ಜರಾಸಂಧ ಭೀಮರಿಬ್ಬರೂ ಹೋರಾಡಲು ಸಿದ್ಧರಾಗಿ "ಸುಕರ್ಪುರ ವೀಳೆಯಂಗೊಂಡು......" (ಸ.ಪ. ೨-೯೧)

---

೧. ಕರ್ಪುರ ವೀಟಿಕಾ / ವೀಳ್ಯ : ಏಲಕ್ಕಿ, ಲವಂಗ, ಕರ್ಪೂರ (ಪಚ್ಚೆ), ಕೇಸರಿ, ಜಾಯಿಪತ್ರೆ, ಜಾಯಿಕಾಯಿ, ಅಡಿಕೆ, ಕೊಬ್ಬರಿ, ಸುಣ್ಣ, ಬಾಲ ಮೆಣಸು, ವೀಳೆಯದೆಲೆ, ಕಾಚು - ಇವುಗಳಿಂದ ಕೂಡಿದ ತಾಂಬೂಲಕ್ಕೆ 'ಕರ್ಪೂರ ವೀಟಿಕಾ' (ಕರ್ಪುರ ವೀಳ್ಯ) ಎಂದು ಹೆಸರು - ತಾಂಬೂಲ ಮಂಜರಿ, ಪು. ೨೯.

ಏಲಾಲವಂಗ ಕರ್ಪೂರ ಕಸ್ತೂರಿ ಕೇಸರಾಧಿಬಿಃ/ ಜಾತಿಫಲದಲ್ಯೆ ಪೂಗೈರ್ಲಾವಂಗಲ್ಯೂಷಣ ನಾಗರೈಃ/ ಚೂರ್ಣೈಃ ಖದಿರ ಸಾರೈಶ್ಚಯುಕ್ತಾ ಕರ್ಪೂರ ವೀಟಿಕಾ - ತಾಂಬೂಲಮಂಜರಿ ಪು. ೨೪

## ಗೌರವ ವೀಳ್ಯ

ಗಣ್ಯರನ್ನು, ಅತಿಥಿಗಳನ್ನು ಸತ್ಕರಿಸುವಾಗ ಗೌರವದ ಸಂಕೇತವಾಗಿ ವೀಳೆಯವನ್ನೀಯುವ ಪದ್ಧತಿಯನ್ನು ಜನಜೀವನದಲ್ಲಿ ಎಲ್ಲೆಡೆ ಕಾಣಬಹುದು. ವೀಳೆಯವನ್ನು ಉಡುಗೊರೆಗಳ ಜೊತೆ ನೀಡುವಾಗ ಉಡುಗೊರೆಗಿಂತ ವೀಳೆಯವೇ ಮುಖ್ಯ ಎನ್ನುವುದು ಗಮನಾರ್ಹಸಂಗತಿ. ವೀಳೆಯವನ್ನು ತಟ್ಟೆಯಲ್ಲಿ ಅಥವಾ ಬಟ್ಟಲಲ್ಲಿ ಕೊಡುವ ಸಂಪ್ರದಾಯವನ್ನು ಕಾಣಬಹುದು. ಇದನ್ನು ಕುಮಾರವ್ಯಾಸನು "ತಳಿಗೆ ತಂಬುಲ", "ಬಟ್ಟಲುವೀಳ್ಯ" ಎಂದು ಕರೆದಿದ್ದಾನೆ. (ಸ.ಪ. ೩-೧೩, ದ್ರೋ. ಪ. ೧-೧೫) ವೀಳೆಯವನ್ನು ನೀಡುವಾಗ ಕರ್ಪೂರದ ಹಳಕುಗಳನ್ನು ಒಳಗೊಂಡ ತವಲಾಯಿ (ಕರಂಡಕ, ಭರಣಿ) ಗಳನ್ನು ನೀಡುತ್ತಿದ್ದರು. ಸೈನ್ಯಕ್ಕೆ ಸಾಮಗ್ರಿಗಳನ್ನು ಸಿದ್ಧತೆ ಮಾಡುವ ಸಂದರ್ಭಗಳಲ್ಲಿ ಕರ್ಪೂರದ ತವಲಾಯಿಗಳನ್ನು ಬಂಡಿಗಳಲ್ಲಿ ಸಂಗ್ರಹಿಸುತ್ತಿದ್ದರು. "ವರ ಜವಾಜಿಯ ಶೃಂಗಗಳ, ಕರ್ಪೂರದ ತವಲಾಯಿಗಳ ಸಾದಿನ ಭರಣಿಗಳ, ಮೃಗನಾಭಿಗಳ ನಡಕಿದರು ಬಂಡಿಯಲಿ" (ಆ.ಪ. ೧೨-೧೬) ಹೀಗೆ ಸಂಗ್ರಹಿಸಿದ ತವಲಾಯಿ (ಕರ್ಪೂರದ ಭರಣಿ) ಗಳಿಂದ ದಿವ್ಯ ಪರಿಮಳದ ಹಳಕುಗಳನ್ನು ಸೈನಿಕರಿಗೆ ಹಂಚುತ್ತಿದ್ದರು. "ಕರ್ಪೂರದ ತವಲಾಯಿಗಳನೊಡದೊಡೆದು ಭಟರಿಗೆ ಹಾಯ್ದಿದನಂಜುಳಿಗಳಲಿ ಮೊಗೆಮೊಗೆದು ಬೇಸರದೆ." (ಕ.ಪ. ೮-೩೩)

ಯುದ್ಧಕ್ಕೆ ಪ್ರಯಾಣಕ್ಕೆ ಅಲ್ಲದೆ ಯಾವುದೇ ಗುರುತರ ಕಾರ್ಯಭಾರಪ್ರಯುಕ್ತ ಹೊರಡುವಾಗ 'ವೀಳೆಯ'ವನ್ನು ಕೊಟ್ಟು ಕಳುಹಿಸುವ ಪದ್ಧತಿ ಕುಮಾರವ್ಯಾಸನ ಕಾವ್ಯದಲ್ಲಿ ಕಂಡುಬರುತ್ತದೆ. "ವರುಷವೊಂದಜ್ಞಾತವದರೊಳಗರಿದೆವಾದೊಡೆ ಮರಳಿ ವಿಪಿನಕೆ ವರುಷ ಹನ್ನೆರಡಕ್ಕೆ ಕೊಡುವೆವು ಮತ್ತೆ ವೀಳೆಯವ" ಎಂದು ದುರ್ಯೋಧನನು ಹೇಳುತ್ತಾನೆ.

ಭೀಷ್ಮರ ಭೀಷಣ ಯುದ್ಧದಿಂದ ಬಳಲಿ ಬೆಂಡಾದ ಪಾಂಡವರು, ಕೃಷ್ಣನ ಸಲಹೆಯಂತೆ ಭೀಷ್ಮರನ್ನು ಬಂದು ಕಂಡಾಗ, ಅವರನ್ನು ಪ್ರೀತಿ - ಗೌರವಗಳಿಂದ ಆದರಿಸಿ "ಯಮಜಾದಿಗಳ ಮನ್ನಿಸಿ ವೀಳೆಯವನ್ನಿತ್ತು " (ಭೀ.ಪ. ೭-೧೭) ಕಳುಹುತ್ತಾನೆ.

ಸಾರಥಿಯಿಲ್ಲದೆ, ಹೂತುಹೋದ ರಥದ ಚಕ್ರವನ್ನು ಸರಿಪಡಿಸುತ್ತಿದ್ದ ಕರ್ಣನ ಮೇಲೆ ಅರ್ಜುನ ಬಾಣ ಪ್ರಯೋಗಮಾಡಿದಾಗ, ಕರ್ಣನು "ಸಾಕು ಬದುಕಲಿ ಪೃಥೆಯ ಮಕ್ಕಳೆನುತೆ" ನಗುತ್ತ "ವೀಳೆಯವನು" ತೆಗೆದುಕೊಳ್ಳುತ್ತಾನೆ. ಇಲ್ಲಿ ವೀಳೆಯವನ್ನು ಬೇರೆಯವರು ಕೊಡುವ ಅಥವಾ ಬೇರೆಯವರಿಂದ ಪಡೆಯುವ ಕ್ರಿಯೆ ಇಲ್ಲ. ಆದರೂ ಸಂತಸದಿಂದ ತಾನಾಗಿಯೇ ಯುದ್ಧ ಮಾಡುವ ನಿರ್ಧಾರವನ್ನು ಕೈಗೊಂಡ ಎಂಬರ್ಥದಲ್ಲಿ 'ನಗುತ ಕೊಂಡನು ವೀಳೆಯವ' ಎಂದು ಬಳಸಲಾಗಿದೆ. (ಕ.ಪ. ೨೬-೪೬)

ಯುದ್ಧದಲ್ಲಿ ಕೃಷ್ಣನ ಸಹಾಯ ಬೇಡಿ ಬಂದಿದ್ದ ಕೌರವ- ಅರ್ಜುನರಿಗೆ ಕೃಷ್ಣ "ವೀಳೆಯವ ತಾ ಕೊಂಡು ಕುರುಭೂಪಾಲ ಪಾರ್ಥರಿಗಿತ್ತು" (ಉ.ಪ. ೧-೨೬) ನುಡಿಸುತ್ತಾನೆ

ಕರ್ಣನನ್ನು ಪಾಂಡವ ಪಕ್ಷಕ್ಕೆ ಕರೆತರಲು ಕರ್ಣನನ್ನು ಒಲಿಸಿಕೊಳ್ಳಲು ಅವನೊಂದಿಗೆ ರಥದಲ್ಲಿ ಹೋದ ಕೃಷ್ಣ "ವೀಳೆಯವನಂಜುಳಿಯ- ಳೊಲಾತಂಗಿತ್ತು....." (ಉ.ಪ. ೧೦-೫) ವಿಷಯವನ್ನು ಮುಂದಿಡುತ್ತಾನೆ.

## ಹವ್ಯಾಸದ ವೀಳ್ಯ

ಅರಮನೆ ಮತ್ತು ರಾಜಾಸ್ಥಾನಗಳಲ್ಲಿ ರಾಜರು ವೀಳೆಯವನ್ನು ಸದಾ ಹಾಕಿಕೊಳ್ಳುವ ಪರಿಪಾಟವಿದ್ದಿತೆಂದು ಕಾಣುತ್ತದೆ. ನಮ್ಮ ಕಾವ್ಯಗಳಲ್ಲಿ ಕಂಡುಬರುವ ತಾಂಬೂಲ ಕರಂಡಕವಾಹಿನಿ ಅಥವಾ ಸಂಚಿಯವಳು ಇದಕ್ಕೆ ನಿದರ್ಶನ. ಕುಮಾರವ್ಯಾಸನ ಕಾವ್ಯದಲ್ಲೂ ರಾಜಸಭೆಯಲ್ಲಿ ವೀಳೆಯವನ್ನು ಮಡಿಚಿ ಹಾಕಿಕೊಳ್ಳುತ್ತಿದ್ದ ದೃಶ್ಯಗಳನ್ನು ಕಾಣಬಹುದು. ಸ್ವಯಂವರ ಸಂದರ್ಭದಲ್ಲಿ ಸರ್ವಜನ ಮೋಹಿನಿ - ಸಂಸಾರ ಸುಖಿಸಾಕಾರಿ ಎನಿಸಿದ ದ್ರೌಪದಿ ಕಾಣಿಸಿಕೊಂಡಾಗ ಮಡಿಚುತ್ತಿದ್ದ ವೀಳೆಯವನ್ನು ಮಡಿಸಿದಂತೆಯೇ, ಬಾಯಲ್ಲಿದ್ದ ವೀಳ್ಯವನ್ನು ಮೆಲ್ಲದೆಯೇ ರಾಜರು ಬೆಕ್ಕಸಬೆರಗಾಗಿ ಕುಳಿತಿದ್ದ ಬಗೆಯನ್ನು "ಮಡಿಸಿದೆಲೆ ಬೆರಳೊಳಗೆ ಬಾಯೊಳಗಡಸಿದೆಲೆ" (ಆ.ಪ. ೧೩-೭೩) ಎಂಬ ಮಾತುಗಳು ಮಡಿಸಲು ಕೈಗೆ ತೆಗೆದುಕೊಂಡ ಎಲೆ ಹಾಗೆಯೇ ಕೈಯಲ್ಲಿದ್ದು ಸ್ತಬ್ಧರಾಗಿ ಕುಳಿತ ರಾಜರುಗಳ ಚಿತ್ರಣವನ್ನು ಸೊಗಸಾಗಿ ಚಿತ್ರಿಸಿದರೆ, ದ್ರೋಣನ ಸಾವಿನ

ಸಂದರ್ಭದಲ್ಲಿ "ಎಲೆ ಮಿಡುಕದಾಸ್ಥಾನ ವೀಳೆಯದೆಲೆಯ ಮಡಿಸುವ ರಭಸವಿಲ್ಲ" (ಕ.ಪ. ೧-೨೦) ಎಂದು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ.

ಹೀಗೆ ಕುಮಾರವ್ಯಾಸನು ಅರಮನೆ ಮತ್ತು ರಣರಂಗಗಳ ವಿದ್ಯಮಾನಗಳಲ್ಲಿ ವೀಳ್ಯದ ಮಹತ್ವ ಹಾಗೂ ವೈವಿಧ್ಯಗಳನ್ನು ವರ್ಣಿಸುವುದರ ಮೂಲಕ ಬಹುಶಃ ತನ್ನ ಕಾಲದ ಜನಜೀವನದಲ್ಲಿ ಕಂಡುಬರುವ ಎಲೆ - ಅಡಿಕೆಗಳ ಪದ್ಧತಿಯನ್ನೇ ಬಣ್ಣಿಸಿದ್ದಾನೆ ಎನ್ನಬಹುದು. ಏಕೆಂದರೆ ಈಗಲೂ ನಮ್ಮ ನಾಗರಿಕ ಹಾಗೂ ಗ್ರಾಮೀಣ ಜನಜೀವನದಲ್ಲಿ ಕಂಡುಬರುವ ವೀಳ್ಯದ ಪದ್ಧತಿಗಳನ್ನು[1] ಕಂಡಾಗ ಈ ಮಾತು ಉತ್ಪ್ರೇಕ್ಷೆಯಲ್ಲ ಎನಿಸುತ್ತದೆ.

ಕೆಲವೊಮ್ಮೆ ವೀಳೆಯವನ್ನು ಉಪಹಾಸದ ಸಂಕೇತವಾಗಿಯೂ ಬಳಸಿರುವುದುಂಟು. ಅರಣ್ಯದಲ್ಲಿ ಪಾಂಡವರು ನವೆಯುತ್ತಿರುವ ಸಂಗತಿಯನ್ನು ಕಾಮ್ಯಕವನದಿಂದ ಬಂದ ಒಬ್ಬನಿಂದ ಕೇಳಿ, ನೊಂದು ದುಗುಡಗೊಂಡಿದ್ದ ಧೃತರಾಷ್ಟ್ರನನ್ನು ಕಂಡು "ಕರ್ಣ ಶಕುನಿಗಳುಲಿದು ತಂಬುಲಸೂಸೆ" ನಗುತ್ತಾರೆ (ಅ.ಪ. ೧೬-೮)

೧. ವೀಳೆಯವನ್ನು ಕೊಡುವಾಗ ಇಷ್ಟೇ ಕೊಡಬೇಕೆಂಬ ಸಂಪ್ರದಾಯವಿದೆ. ವೀರರಿಗೆ ೧೬ ಎಲೆಗಳನ್ನೂ, ಶತ್ರುಗಳಿಗೆ ೩ ಎಲೆಗಳನ್ನೂಸ, ಸೇವಕರಿಗೆ ೭ ಎಲೆಗಳನ್ನೂ, ದಾಸಿಯರಿಗೆ ೧೪ ಎಲೆಗಳನ್ನು ಕೊಡುವ ಪದ್ಧತಿ ಇತ್ತು. ಹಿರಿಯರಿಗೆ ಎಲೆಗಳನ್ನು ಅಡ್ಡವಾಗಿಯೂ, ಸೇವಕರುಗಳಿಗೆ ತೊಟ್ಟುಮುಂದೆ ಮಾಡಿಯೂ, ಕೊಡತಕ್ಕದ್ದು ಎಂದು ಶಾಸ್ತ್ರಗಳು ಹೇಳುತ್ತವೆ- ತಾಂಬೂಲಮಂಜರಿ.

# ಕಲೆ ಮತ್ತು ವೃತ್ತಿಗಳಲ್ಲಿ ಜಾನಪದಾಂಶಗಳು

ಜಾನಪದ ಸಾಹಿತ್ಯ ಜನಪದ ಸಂಸ್ಕೃತಿಯ ಒಂದು ಅಂಗ. ಸಾಹಿತ್ಯ ಮಾನಸ ಪ್ರಪಂಚವಾದರೆ, ಸಂಸ್ಕೃತಿ ಜೀವನ ಪ್ರಪಂಚ. ನಂಬಿಕೆ, ಸಂಪ್ರದಾಯಗಳ ಆಚರಣೆಯ, ಕ್ರಿಯಾಶೀಲ ಜಾನಪದ ಜಗತ್ತು ಅದು. ಒಟ್ಟು ಜಾನಪದರ ಬದುಕನ್ನು ಗಮನಿಸಿದಾಗ ಸಾಹಿತ್ಯ ಜಾನಪದ, ಸಾಹಿತ್ಯೇತರ ಜಾನಪದ ಎಂದು ಸ್ಥೂಲವಾಗಿ ವರ್ಗೀಕರಿಸಬಹುದು. ಶಬ್ದರೂಪದ ಸಾಹಿತ್ಯ ಜಾನಪದರಲ್ಲಿ ಲಾವಣಿ, ಕಥೆ, ಒಗಟು, ಗಾದೆ, ಪಡೆನುಡಿ ಇತ್ಯಾದಿಗಳು ಸೇರುತ್ತವೆ. ಸಾಹಿತ್ಯೇತರ ಜಾನಪದರಲ್ಲಿ ಕಲೆ, ವೃತ್ತಿ ಮೊದಲಾದವುಗಳನ್ನು ಕಾಣುತ್ತೇವೆ. ಸಂಗೀತ, ನೃತ್ಯ ನಾಟಕ, ಚಿತ್ರಕಲೆ, ಶಿಲ್ಪ ಮೊದಲಾದವೆಲ್ಲಾ ಜಾನಪದ ಕಲೆಯಲ್ಲಿ ಸಮಾವೇಶಗೊಂಡರೆ, ವೃತ್ತಿಜಾನಪದರಲ್ಲಿ ಜನಪದ ವೈದ್ಯ, ಪಶುಪಾಲನೆ, ಬೇಸಾಯ ಮೊದಲಾದವು ಸೇರಿಕೊಳ್ಳುತ್ತವೆ. ಕುಮಾರವ್ಯಾಸನ ಕಾವ್ಯದಲ್ಲಿ ಜಾನಪದದ ಎಲ್ಲ ಪ್ರಕಾರಗಳಿಗೆ ಸಂಬಂಧಿಸಿದ ಸಂಗತಿಗಳನ್ನು ಕಾಣಬಹುದಾಗಿದೆ. ಕಲೆಗೆ ಸಂಬಂಧಿಸಿದಂತೆ ಸೂತ್ರದ ಗೊಂಬೆಯಾಟ, ಆಟಗಳು, ವೃತ್ತಿಗಳಿಗೆ ಸಂಬಂಧಿಸಿದಂತೆ ಪಶುಪಾಲನೆ, ಬೇಸಾಯ, ವೈದ್ಯ.- ಈ ಕ್ಷೇತ್ರ ವಿಷಯಗಳಲ್ಲಿ ಕುಮಾರವ್ಯಾಸ ಭಾರತದಲ್ಲಿ ಕಂಡುಬರುವ ಕೆಲವು ಸಂಗತಿಗಳನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಲಾಗಿದೆ. ಕುಮಾರವ್ಯಾಸನು ವಿವಿಧ ವೃತ್ತಿ, ಕಲೆಗಳ ಬಗ್ಗೆ ನಗರ ಸಂಸ್ಕೃತಿ ಮತ್ತು ಗ್ರಾಮೀಣ ಸಂಸ್ಕೃತಿಗಳೆರಡರಲ್ಲೂ ಕಂಡುಬರುವ ಸಂಗತಿಗಳನ್ನು ಗಮನಿಸಿದ್ದಾನೆ ಎನ್ನುವುದು ಇಲ್ಲಿ ಗಮನಾರ್ಹ ಸಂಗತಿ ಆಗಿದೆ.

**ಆಟಗಳು**

ಮಾನವನಿಗೆ ನಗುವುದು ಹೇಗೆ ಸಹಜ ಪ್ರವೃತ್ತಿಯೋ ಹಾಗೆಯೇ ಆಟವಾಡುವುದೂ ಒಂದು ಪ್ರವೃತ್ತಿ. ತಾನು ಆಟವಾಡುವುದಲ್ಲದೆ ಪ್ರಾಣಿಗಳನ್ನು

ಆಟವಾಡಿಸುವುದನ್ನು ಮನುಷ್ಯ ಬಹಳ ಹಿಂದೆಯೇ ಕಲಿತಿದ್ದಾನೆ. ಒಂದು ರೀತಿ ವಿನೋದ ಅಥವಾ ಮನೋರಂಜನೆಯನ್ನು ಒದಗಿಸುವ ಆಟಗಳನ್ನು ನಗರಗಳಲ್ಲಿ ಸರ್ಕಸ್ಸುಗಳಲ್ಲಿ ನೋಡುತ್ತೇವೆ. ಸರ್ಕಸ್ಸುಗಳು ಶಿಷ್ಟ ಜನರ ಶಿಕ್ಷಣದ ಫಲವಾದ ಆಟಗಳೆನ್ನಬಹುದು. ಕರಡಿ ಕುಣಿಸುವುದು, ಕೋತಿ ಆಡಿಸುವುದು, ಹಾವಾಡಿಸುವುದು ಇವೇ ಮೊದಲಾದ ಆಟಗಳನ್ನೇ ವೃತ್ತಿಮಾಡಿಕೊಂಡ ಜನಗಳನ್ನು ಹಳ್ಳಿಗಳಲ್ಲಿ ನೋಡಬಹುದು.

ಕೆಲವು ಆಟಗಳು ಶಿಷ್ಟರಿಗೂ ಜಾನಪದರಿಗೂ ಸಮಾನವೆನಿಸಿದರೂ (ಉದಾ: ಪಗಡೆ) ಮತ್ತೆ ಕೆಲವು ಆಟಗಳು ಗ್ರಾಮೀಣ ಜನರಲ್ಲಿ ಮಾತ್ರ ವಿಶೇಷವಾಗಿ ಕಾಣುತ್ತೇವೆ. ಕುಮಾರವ್ಯಾಸನ ಕಾವ್ಯದಲ್ಲಿ ಕಂಡುಬರುವ ಕೌರವ- ಪಾಂಡವರು ಆಡುತ್ತಿದ್ದ ಆಟಗಳ ಹೆಸರುಗಳನ್ನು ಗಮನಿಸಿದರೆ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದ ಆಟಗಳನ್ನು ಕವಿ ನಿರೂಪಿಸಿದ್ದಾನೆ. ಬಯಲಲ್ಲಿ ಆಡುವ ಗುಂಪಿನಾಟಗಳೆಂದು ಹೇಳಬಹುದು. ಆದರೆ ಕೆಲವು ಆಟಗಳು ಒಂದೊಂದು ಸಲಕ್ಕೆ ಇಬ್ಬರೇ ಆಡುವ ಆಟಗಳಾಗಿವೆ ಎನಿಸುತ್ತದೆ. ಉದಾಹರಣೆಗೆ ಆಳಿನೇರಿಕೆ, ಹಿಡಿಗವಡೆ ಆಟಗಳು. ಕಥೆಯಲ್ಲಿ ಆಟದ ಸನ್ನಿವೇಶಗಳು ಹೆಚ್ಚಾಗಿ ಬಾರದಿರುವುದರಿಂದ ಆಟಗಳ ಬಗೆಗೆ ಕವಿಗೆ ಹೆಚ್ಚಿಗೆ ಹೇಳಲಾಗಿಲ್ಲ ಎನಿಸುತ್ತದೆ.

ಮನರಂಜನೆಯ ಆಟಗಳಂತೆಯೇ ಸ್ಪರ್ಧಾತ್ಮಕ ಆಟಗಳೂ ಇರುತ್ತವೆ. ಆದರೆ ಇವನ್ನು ಆಟವೆಂದು ಕರೆಯುವುದಿಲ್ಲ. ಇವನ್ನು ಪಂದ್ಯ ಅಥವಾ ಸ್ಪರ್ಧೆಯೆಂದು ಕರೆಯುತ್ತಾರೆ. ದ್ವೇಷ,ಜಿದ್ದು, ಹಠಗಳಿಂದ ಕೆಲವೊಮ್ಮೆ ಇಂಥ ಪಂದ್ಯಾಟಗಳಲ್ಲಿ ಮೋಸವಂಚನೆಯ ಪ್ರಯತ್ನಗಳೂ ನಡೆಯುತ್ತವೆ. ಸಭಾಪರ್ವದಲ್ಲಿ ದುರ್ಯೋಧನ-ಧರ್ಮರಾಜರು ಪಣವೊಡ್ಡಿ ಆಡಿದ ಪಗಡೆ ಆಟ ಇದಕ್ಕೊಂದು ನಿದರ್ಶನ. ಇಲ್ಲಿ ಆಟ ಹುಡುಗಾಟವಾಗದೆ, ಸೇಡಿನಾಟವಾಗಿದ್ದನ್ನು ಕಾಣುತ್ತೇವೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಪಗಡೆಯಾಟವನ್ನು ಕಾಲಹರಣಕ್ಕೆ ಅಥವಾ ವಿನೋದಕ್ಕೆ ಆಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಪಂಥವೊಡ್ಡಿ ಸೆಣಸಾಟ ನಡೆಸುತ್ತಾರೆ.

ಆಟಗಳಲ್ಲಿ ಒಳಾಂಗಣ ಆಟ ಮತ್ತು ಹೊರಾಂಗಣ ಆಟಗಳೆಂದು ಸಾಮಾನ್ಯವಾಗಿ ಎರಡು ವಿಧ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಮೈದಾನ ಅಥವಾ ಬಯಲಿನಲ್ಲಿ ಆಡುವ ಆಟ, ಕಟ್ಟಡದೊಳಗೆ ಅಥವಾ ಕಟ್ಟೆ ಇಲ್ಲವೆ

ಮರದ ನೆರಳಿನಲ್ಲಿ ಆಡುವ ಆಟಗಳೆಂದು ವರ್ಗೀಕರಿಸುತ್ತಾರೆ. ಪಾಂಡವ- ಕೌರವರು ಬಾಲ್ಯದಲ್ಲಿ ಆಡಿದ ಆಟಗಳು ಹೆಚ್ಚಾಗಿ ಹೊರಾಂಗಣ ಆಟವಾಗಿದ್ದರೆ, ಸಭಾಪರ್ವದಲ್ಲಿ ಆಡಿದ ಪಗಡೆಯ ಆಟ ಒಳಾಂಗಣ ಆಟವಾಗಿದೆ.

ವಯೋಧರ್ಮಕ್ಕನುಗುಣವಾಗಿ ಬಾಲಕರಾದವರು ರಾಜಕುಮಾರರಾಗಲಿ ಇಲ್ಲವೇ ಸಾಮಾನ್ಯರೇ ಆಗಿರಲಿ ಹೊರಾಂಗಣ ಆಟಗಳನ್ನಾಡುವುದು ಸಹಜ ಪ್ರವೃತ್ತಿ. ಇದು ಎಲ್ಲ ಕಾಲ-ದೇಶಗಳಲ್ಲಿ ಕಂಡುಬರುವ ಪ್ರವೃತ್ತಿಯೂ ಆಗಿದೆ. ಎಷ್ಟೋ ಆಟಗಳು ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಒಂದೇ ಬಗೆಯಾಗಿರುವುದನ್ನು ಕಾಣುತ್ತೇವೆ. ಕನ್ನಡನಾಡಿನಲ್ಲಿ ಅನೇಕ ಸ್ಥಳೀಯ ಆಟಗಳು ಬಹುಕಾಲದಿಂದಲೂ ಬೇರೆ ಬೇರೆ ಹೆಸರುಗಳಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ಅಲ್ಪ ಸ್ವಲ್ಪ ಬದಲಾವಣೆಗಳೊಂದಿಗೆ ಇಂದಿಗೂ ಇವೆ. 'ಹಿಡಿಗವಡೆ, ಆಳಿನೇರಿಕೆ, ಗುತ್ತಿನ ಚೆಂಡು' ಮೊದಲಾದವು ಕುಮಾರವ್ಯಾಸನ ಕಾಲದ ಹಿಂದಿನಿಂದಲೂ ಇಂದಿನವರೆಗೂ ಬಳಕೆಯಲ್ಲಿರುವುದನ್ನು ಕಾಣಬಹುದು.

ಕುಮಾರವ್ಯಾಸನ ಕಾವ್ಯದಲ್ಲಿ ನಿರೂಪಿತಗೊಂಡಿರುವ ಆಟಗಳೆಲ್ಲವೂ ಗ್ರಾಮೀಣ ಜನರಲ್ಲಿ ಕಂಡುಬರುವ ಆಟಗಳೇ ಆಗಿವೆ. ಬಾಲಕರಾಗಿದ್ದ ಕೌರವ-ಪಾಂಡವರು ಆಡುತ್ತಿದ್ದ ಆಟಗಳೆಂದರೆ "ಆಳಿನೇರಿಕೆ ಹಿಡಿಗವಡೆ ಗುರಿ/ ಯಾಳು, ಚೆಂಡಿನ ಹೊಣಕೆ ಚಿಣಿಕೋ/ ಲಾಳು ಗೊತ್ತಿನ ದಂಡೆ....." (ಆ.ಪ. ೬-೧) "ಗುಡುಗು ಗುತ್ತಿನ ಚೆಂಡು ಗುಮ್ಮನ / ಬಡಿವ ಕತ್ತಲೆಗುದ್ದು ಗಂಬದ/ ಗಡಣೆ ಕಮ್ಮಟ್ಚಿಸಗವರಿ ಹರಿಹಲಗೆ ನಿಡುಗವಣೆ/ ಕೆಡಹು ಕುಟ್ಟಿಗ....." (ಆ.ಪ. ೬-೨) ಇವೇ ಮೊದಲಾದವುಗಳು.

"ಇಲ್ಲಿ ಔಷಧಿಗಾದರೂ ಒಂದು ಸಂಸ್ಕೃತ ಪದವಿಲ್ಲ. ಇವೆಲ್ಲ ಕನ್ನಡನಾಡಿನ ಆಟಗಳೆಂಬುದು ಸ್ಪಷ್ಟ. ಅಷ್ಟೇ ಅಲ್ಲ, ಇವು ಹಳ್ಳಿಯ ಸಾಮಾನ್ಯರ ಆಟಗಳು"[೧] ಎಂಬ ಮಾತು ಈ ಆಟಗಳೆಲ್ಲವೂ ಗ್ರಾಮೀಣ ಆಟಗಳು ಎನ್ನುವುದನ್ನು ತಿಳಿಸುತ್ತದೆ.

ಈ ಆಟಗಳ ವಿವರಗಳನ್ನು ಎನ್ಕೆಯವರು ಈ ರೀತಿ ವಿವರಿಸುತ್ತಾರೆ."[೨]

---

೧. ಜಾನಪದ ಸೌಂದರ್ಯ, ದೇಜಗೌ, ಪು. ೪೧

೨. ಕುಮಾರವ್ಯಾಸ ನಿಘಂಟು: ಎನ್ಕೆ, ಸಮಾಜ ಪುಸ್ತಕಾಲಯ ಧಾರವಾಡ, ೧೯೭೧, ಪು. ೧೪೫-೧೪೬

'ಆಟ್‌ನೇರಿಕೆ' ಎಂದರೆ ಒಬ್ಬ ಆಳಿನ ಮೇಲೆ ಇನ್ನೊಬ್ಬ ಏರಿ ಕೂಡುವುದು. ಹುಡುಗರು ಆಡುವ 'ಅಂಡೋಲ್ ಪಂಡೋಲ್' ಆಟದಂತಹ ಒಂದು ಪ್ರಕಾರ.

**'ಹಿಡಿಗವಡೆ'** ಎಂದರೆ ಕೈಯಲ್ಲಿ ಕವಡೆ ಹಿಡಿದು ಆಡುವ ಸರಿ ಬೆಸದ ಆಟ.

ಒಬ್ಬರನ್ನೊಬ್ಬರು ಗುರಿಯಿಟ್ಟು ಚಂಡಿನಿಂದ ಹೊಡೆಯುವುದು **'ಗುರಿಯಾಟು ಚಂಡಿನ ಹೊಣಕೆ'**

**'ಗಿಲ್ಲಿ-ದಾಂಡು'**, **'ಕುಟ್ಟಿ-ದೊಣ್ಣೆ'** ಆಟವೇ **ಚಿಣಿಕೋಲಾಟ**

**ಚಿಣಿವೆಂಡು** ಎಂಬ ಚಿಕ್ಕ ಚೆಂಡಾಟ

**ದಂಡೆಯ** ಎಂದರೆ ದಂಡ ಅಥವಾ ಸಾಮು ತೆಗೆಯುವುದು

**ಹಾಱುಗುಪ್ಪಿ** ಎಂಬ ಸಾಲಾಗಿ ಮಳಲಿನ ರಾಶಿ ಹಾಕಿ ಜಿಗಿಯುತ್ತ ಓಡುವುದು

**ಗುಡುಗು** ಈಗಿನ ಕಬ್ಬಡಿ ಆಟ

**ಗುತ್ತಿನ ಚೆಂಡು** - ಈ ಆಟದಲ್ಲಿ ಒಂದು ತಂಡದವರು ಬಚ್ಚಿಟ್ಟ ಚಂಡನ್ನು ಮತ್ತೊಂದು ಪಕ್ಷದವರು ಹುಡುಕಿ ತೆಗೆಯಬೇಕು.

**'ಗುಮ್ಮನೆ ಬಡಿವ ಕತ್ತಲೆಗುದ್ದು'** ಎಂದರೆ ಒಬ್ಬರಿಗೊಬ್ಬರು ಕಾಣದಂತೆ ಗುದ್ದಿ ಮರೆಯಾಗುವುದು.

**ಕಂಭದ ಗಡಣಿ:** ಈ ಆಟದಲ್ಲಿ ತಂಡದ ಎಲ್ಲರೂ ಒಮ್ಮೆಲೇ ಓಡಿ ಹೋಗಿ, ಒಂದೊಂದು ಕಂಭ ಹಿಡಿದುಕೊಂಡು ನಿಲ್ಲುತ್ತಾರೆ. ಹಾಗೆ ಕಂಭ ಸಿಗದೆ ಉಳಿದವರು ಆಟದಿಂದ ಹೊರಗೆ (ಔಟ್) ಉಳಿಯುತ್ತಾರೆ.

ಕಣ್ಣು ಮುಚ್ಚಾಲೆ ಆಟವೇ **ಕಣ್ಣುಮುಚ್ಚಾಟ**

**ಸವಗಲಿ:** ಇದು ಬಗೆಯ ತಿಳ್ಳಿಯಾಟ

**ಹಲ್ಲೆಯಾಟ** ಹಂಚಿನ ಬಿಲ್ಲೆಯನ್ನು ಕುಂಟುತ್ತ ಗೆರೆ ಹಾಕಿ ಮಾಡಿದ ಮನೆಯಿಂದ ಮನೆಗೆ ಸಾಗಿಸುವುದು. ಈಗಿನ 'ಕುಂಟೆಬಿಲ್ಲೆ'ಯಾಟ

**ಕೆಡಹು ಕುಟ್ಟುವ ಆಟ** ಎಂದರೆ ಕುಸ್ತಿ ಇಲ್ಲವೇ ಗುದ್ದಾಟ

ಕೋಲ ಮರನಾಟ ಮರಕೋತಿ ಆಟ

ಕುಮಾರವ್ಯಾಸನು ಪ್ರಸ್ತಾಪಿಸಿರುವ ಈ ಆಟಗಳೆಲ್ಲ ಇತ್ತಂಡಗಳಾಗಿ ಸಾಕಷ್ಟು ಸಂಖ್ಯೆಯಲ್ಲಿ ಬಾಲಕರು ಸೇರಿ ಆಡುವ ಆಟಗಳಾಗಿವೆ. ಒಂದು ರೀತಿಯಲ್ಲಿ ಸೋಲು- ಗೆಲುವುಗಳಿಗೆ ಮಹತ್ವವಿರುವ ಆಟಗಳಾಗಿವೆ.

'ಕೋಲಮರನಾಟ' ಇಲ್ಲವೇ 'ಮರಕೋತಿ' ಆಟವಾಡುವಾಗ ಕೋಲು ಬಿಸುಟು ಕೌರವವೃಂದ ಮರಹತ್ತಿದಾಗ ಬಳಲಿದ ಭೀಮ ಮರವನ್ನಲ್ಲಾಡಿಸಿ ಹಣ್ಣುದುರಿಸಿದಂತೆ ಎಲ್ಲರನ್ನು ಕೆಳಗೆ ಬೀಳಿಸಿದಾಗ, ಅವರು 'ಶಿರವಡೆದು ಬೆನ್ನೊಡೆದು ಮೊಳಕಾಲ್ಮುರಿದು ಕೈಗಳು ಮುರಿದು ನೆತ್ತರು ಸುರಿದು ಧೃತರಾಷ್ಟ್ರನಿಗೆ ದೂರಿದರು'. ಈ ಸೋಲಿನಿಂದುಂಟಾದ ಅವಮಾನವನ್ನು ಕೌರವರು ಬೇರೆ ರೀತಿಯಲ್ಲಿ ಸೇಡು ತೀರಿಸಲು ಹವಣಿಸುತ್ತಾರೆ. ಅಂದರೆ ಸ್ಪರ್ಧಾತ್ಮಕ ಆಟಗಳು ಸೇಡಿಗೆಡೆ ಮಾಡುತ್ತದೆ ಎನ್ನುವುದನ್ನು ಇಂದು ಕಾಣಬಹುದಾಗಿದೆ. ಇಲ್ಲಿರುವ ಆಟಗಳು ವಿಶೇಷವಾಗಿ ಕನ್ನಡನಾಡಿನಲ್ಲಿ ಜನಪ್ರಿಯ ಆಟಗಳಾಗಿವೆ. ಗ್ರಾಮೀಣಪ್ರದೇಶಗಳಲ್ಲಿ ಈ ಆಟಗಳು ಇಂದಿಗೂ ಪ್ರಾಮುಖ್ಯತೆಯನ್ನು ಪಡೆದಿವೆ.

ಒಟ್ಟಿನಲ್ಲಿ ಕುಮಾರವ್ಯಾಸ ತನಗೆ ಸಿಕ್ಕಷ್ಟೇ ಅತ್ಯಲ್ಪ ಅವಕಾಶದಲ್ಲಿ ಬಹುಶಃ ತಾನು ಕಂಡ ದೇಸಿ ಆಟಗಳನ್ನು ತನ್ನ ಕಾವ್ಯದಲ್ಲಿ ಬಣ್ಣಿಸಿದ್ದಾನೆ ಎನ್ನಬಹುದು.

ಸೂತ್ರದ ಗೊಂಬೆಯಾಟ

ಗೊಂಬೆಯಾಟ ಅಥವಾ ಸೂತ್ರದ ಬೊಂಬೆಯಾಟವು ಬಯಲಾಟದ ಒಂದು ವಿಧ. ಇದೊಂದು ಜಾನಪದ ಕಲೆ. ಯಕ್ಷಗಾನ ಮತ್ತು ದೊಡ್ಡಾಟಗಳ ಪ್ರಭಾವವನ್ನು ಬೊಂಬೆಯಾಟದಲ್ಲಿ ಕಾಣಬಹುದು. ಜಾನಪದ ಕಲೆಯಾದ ಈ ಆಟವನ್ನು ಅನೇಕ ಬ್ರಾಹ್ಮಣ ಕುಟುಂಬಗಳೂ ನಡೆಸುವುದು ಗಮನಾರ್ಹ ಸಂಗತಿ. "ಕನ್ನಡದಲ್ಲಿ ಪುರಂದರದಾಸ, ಕನಕದಾಸ ಹಾಗೂ ರತ್ನಾಕರವರ್ಣಿ ಇವರು ತಮ್ಮ ಕೃತಿಗಳಲ್ಲಿ ಈ ಕಲೆಯನ್ನು ಉಲ್ಲೇಖಿಸಿದ್ದಾರೆ."[೧]

ಮರ ಅಥವಾ ಇತರ ಪದಾರ್ಥದಿಂದ ಬೊಂಬೆಗಳನ್ನು ಮಾಡಿ, ಅವುಗಳ ಅಂಗಾಂಗಗಳಿಗೆ ದಾರಗಳನ್ನು ಕಟ್ಟಿ, ಅವೆಲ್ಲವನ್ನು ಗಂಟಿಕ್ಕಿ, ಹಸ್ತ ಕೌಶಲ್ಯದಿಂದ

೧. ಕ.ಜಾ.ವಿ, ಸಂ-೧, ಪು. ೬೮೩.

ಆಯಾದಾರಗಳನ್ನು ಎಳೆದು ಬೊಂಬೆಗಳನ್ನು ಸೂತ್ರಧಾರನು ಕುಣಿಸುತ್ತಾನೆ. ಆ ಮೂಲಕ ರಾಮಾಯಣ, ಭಾರತದ ಕಥೆಗಳನ್ನು ಜನಗಳಿಗೆ ಪ್ರದರ್ಶನ ನೀಡುತ್ತಾರೆ. ಈ ಬಗೆಯ ಬೊಂಬೆಗಳನ್ನು ಚಲಿಸುವಂತೆ ಮಾಡುವ ಸಾಧನಕ್ಕೆ 'ಯಂತ್ರ'ವೆಂದು ಹೆಸರು. ಆ ಬೊಂಬೆಗಳಿಗೆ ಯಂತ್ರದ ಹಾಹೆಗಳೆಂದೂ, ಅವನ್ನು ಆಡಿಸುವವನಿಗೆ ಯಂತ್ರಿಯೆಂದೂ ಹೇಳುತ್ತಾರೆ.

ಹಳ್ಳಿಗಳಲ್ಲಿ ನಡೆಯುವ ಸೂತ್ರದ ಗೊಂಬೆಯಾಟವನ್ನು ಕುಮಾರವ್ಯಾಸನು ತನ್ನ ಕಾವ್ಯದಲ್ಲಿ ಹಲವಾರು ಕಡೆ ಉದಾಹರಿಸಿದ್ದಾನೆ. ತನ್ನನ್ನು ಸೋಲಿಸುವ ಶಿಖಂಡಿಯನ್ನು ಮುಂದಿಟ್ಟುಕೊಂಡು ಫಲುಗುಣನು ತನ್ನ ಮೇಲೆ ಬಾಣ ಪ್ರಯೋಗಮಾಡಲಿ ಎಂದು ಭೀಷ್ಮನು ಹೇಳುತ್ತಾನೆ. ಆದರೆ ಈ ಮಾತಿಗೆ ಒಪ್ಪದೆ, ತೀವ್ರವಾಗಿ ನೊಂದುಕೊಂಡ ಅರ್ಜುನನಿಗೆ ಭೀಷ್ಮನು ಹೇಳುವ ಮಾತಿದು:

"ಯಂತ್ರಿ ಮಿಡಿದರೆ ಕಾದಿ ಬೀಳ್ವವು
ಯಂತ್ರಮಯ ಹಾಹೆಗಳು ವಥೆಯಾ
ಯಂತ್ರಿಗೋ ಹಾಹೆಗಳಿಗೋ ಹೇಳಾರ ನೆಮ್ಮವುದು (ಭೀ.ಪ. ೭-೩೧)

ಇಲ್ಲಿ ಕವಿ ಸೂತ್ರದ ಗೊಂಬೆಯಾಟದ ಮೂಲಕ ಕೃಷ್ಣನು ಯಂತ್ರಿಯಾಗಿರುವುದನ್ನು, ಉಳಿದವರು ಯಂತ್ರಗಳಾಗಿರುವುದನ್ನು ತಿಳಿಸುತ್ತಾನೆ. ಇಲ್ಲಿ ಕವಿ ತನ್ನ ಕಾಲದಲ್ಲಿ ವಿಶೇಷವಾಗಿ ಪ್ರಚಾರದಲ್ಲಿದ್ದ ಸೂತ್ರದ ಗೊಂಬೆಯಾಟವನ್ನು ಉದಾಹರಿಸಿದ್ದಾನೆ ಎನ್ನಬಹುದು.

ರಾಜಸೂಯ ಪ್ರಸಂಗದಲ್ಲಿ ಕೃಷ್ಣನಿಗೆ ಅಗ್ರಪೂಜೆಯು ಸಲ್ಲುವುದನ್ನು ವಿರೋಧಿಸಿದ ಶಿಶುಪಾಲನಿಗೆ ಕೃಷ್ಣನ ಮಹಿಮೆಯನ್ನು ಕುರಿತು ಭೀಷ್ಮನು ಹೇಳುವ ಮಾತನ್ನು ಇದಕ್ಕೆ ಮತ್ತೊಂದು ಉದಾಹರಣೆಯಾಗಿ ತೆಗೆದುಕೊಳ್ಳಬಹುದು:

"ಹಾಹೆಗಳು ಹೊಯ್ದಾಡವೇ ನಿ
ರ್ವಾಹ ಸೂತ್ರದ ಕುಣಿಕೆಗಾರನ
ಗಾಹಿನಲಿ ತಜ್ಜಗದಜೀವದ ಸುಕೃತ ದುಷ್ಕೃತವ
ಓಹರಿಕೆಯಲಿ ತಂದು ಭವದಲಿ
ಸೋಹಿಸುಳಿಸುವನೀ ಚರಾಚರ
ಜೋಹವಿದು ನಿಜಲೀಲೆಯೊ ಹರಿಗೆಂದನಾ ಭೀಷ್ಮ (ಸ.ಪ. ೯-೯)

ಸೂತ್ರದ ಗೊಂಬೆಯಾಟದಲ್ಲಿ ಗೊಂಬೆಗಳನ್ನು ನಿಯಂತ್ರಿಸುವ ಸೂತ್ರಧಾರನು ಎರಡೂ ಕೈಗಳಲ್ಲಿ, ಕೆಲವೊಮ್ಮೆ ಬಾಯಲ್ಲೂ ದಾರಗಳನ್ನು ಕಚ್ಚಿಕೊಂಡು ಭಾವಕ್ಕೆ ಮತ್ತು ಗೀತಕ್ಕೆ ತಕ್ಕಂತೆ ಬೊಂಬೆಗಳನ್ನು ಕುಣಿಸುವುದರ ಜೊತೆಗೆ ಆತನೇ ಎಲ್ಲ ಪಾತ್ರಗಳ ಮಾತನ್ನೂ ಆಡುತ್ತಾನೆ. ಗೊಂಬೆಗಳು ಅಭಿನಯದ ಪಾತ್ರಧಾರಿಗಳಾದರೆ, ಸೂತ್ರಧಾರ ಅಭಿವ್ಯಕ್ತಿಯ ಪಾತ್ರಧಾರನಾಗಿರುತ್ತಾನೆ. ಪಾಂಡವರು ಮತ್ತಿತರರನ್ನು ಬೊಂಬೆಗಳಂತೆ ಪರಿಗಣಿಸಿ ಕೃಷ್ಣ ತಾನು ಸೂತ್ರಧಾರನಾಗಿ ತನ್ನಿಚ್ಛೆಯಂತೆ ಆ ಬೊಂಬೆಗಳನ್ನು ನಾಟಕೀಯವಾಗಿ ಆಡಿಸುತ್ತಾನೆಂದೂ, ಅದ್ದರಿಂದಲೇ ಕೃಷ್ಣ ಕಪಟನಾಟಕ ಸೂತ್ರಧಾರಿಯಾಗಿ, ಅವರವರ ಪಾಪ- ಪುಣ್ಯಗಳಿಗೆ ತಕ್ಕಂತೆ ಜನಗಳನ್ನು ಕುಣಿಸುವ 'ಕುಣಿಕೆಗಾರ' ನೆಂದು ಕುಮಾರವ್ಯಾಸ ಶಿಷ್ಟ ಅಧ್ಯಾತ್ಮವನ್ನು ಜನಸಾಮಾನ್ಯರ ಜನಪ್ರಿಯ ಕಲೆಯಾದ ಗೊಂಬೆಯಾಟದ ಕಲೆಯ ಮೂಲಕ ಹೇಳಿದ್ದಾನೆ. ಇಲ್ಲಿ ಭಾವ ಶಿಷ್ಟವಾದರೂ ಅದರ ಅಭಿವ್ಯಕ್ತಿ ಸಾಧನ ಜಾನಪದವಾಗಿದೆ ಎಂಬುದನ್ನು ಗಮನಿಸಬಹುದು. 'ಸೂತ್ರಧಾರ' ಎಂಬ ಸಂಸ್ಕೃತಮಾತಿಗೆ ಜಾನಪದ ಕಲೆಯ ಗೊಂಬೆಯಾಟದ 'ಕುಣಿಕೆಗಾರ' ವ್ಯಕ್ತಿಯೇ ಮೂಲವಾಗಿದ್ದಾನೆ.

ಕುಮಾರವ್ಯಾಸ ತನ್ನ ಕೃತಿಯಲ್ಲಿ ಅನೇಕ ಸಂದರ್ಭಗಳಲ್ಲಿ ವ್ಯಂಗ್ಯಾರ್ಥ ಹಾಗೂ ನಿರಾಕರಣಾರ್ಥಗಳಲ್ಲಿ 'ನಾಟಕ' ಎಂಬ ಮಾತನ್ನು ಬಳಸುತ್ತಾನೆ. ಮೇಲೆ ತಿಳಿಸಿದಂತೆ ಸೂತ್ರದ ಗೊಂಬೆಯಾಟವನ್ನೇ ನಾಟಕವೆಂಬ ಅರ್ಥದಲ್ಲೇ ಬಳಸಿದ್ದಾನೆ ಎಂದು ಹೇಳಲಾಗುವುದಿಲ್ಲ. ಬೇರೆ ಬಗೆಯ ನಾಟಕಗಳಿಗೆ ಅನ್ವಯಿಸುವ ರೀತಿಯಲ್ಲಿ 'ನಾಟಕ' ಎಂಬ ಮಾತು ಬಳಕೆಯಾದಂತೆ ತೋರುತ್ತದೆ ಉದಾಹರಣೆಗೆ "ನೋಡಲೀವ್ಯಥೆಯುಂಟೆ ಭುವನದ/ ಗೂಡು ಕೃಷ್ಣನ ದೇಹವಿದು ನಾ/ ಡಾಡಿಗಳ **ನಾಟಕವಲ್ಲೆ** ನರನಾಥ ಕೇಳೆಂದ" (ಕ.ಪ. ೨೪-೩)

"ಆದಿಯಲಿ ನೀನಾವ ರಾಯರ/ ಕಾದಿ ಗೆಲಿದ್ದೆ ಹುಲು ಬೃಹನ್ನಳೆ/ ಯಾದ ನಿನಗೀ**ಕದನ ನಾಟಕ** ವಿದ್ಯೆಯಲ್ಲೆಂದ" (ವಿ.ಪ. ೬-೨೮), "ಮಾಣು ಮಾಧವ ನಿಲ್ಲು ಮಾನವ/ ನಾಣೆಯದ **ನಾಟಕದ ನುಡಿಯಿದು**/ ಚಾಣ ನೀನಹೆ ಎನುತ ಮುನಿ ಹಾಯ್ದಪ್ಪಿದನು ಹರಿಯ" (ಆ.ಪ. ೧೬-೪೩), "ಅಸುರಾರಿ ಮಂಚದೊಳಿರದೆ ಧಿಮ್ಮನೆ ನಿಂದು ನರರಾಚರಣೆಗಳ **ನಾಟಕವ ತಾನೇ ನಟಿಸಿತೋರಿದನು**" (ಉ.ಪ. ೮-೧೭) ಈ ಮಾತುಗಳಲ್ಲಿ ಬಂದಿರುವ 'ನಾಟಕ'

ಪದವನ್ನು ಸಾಂದರ್ಭಿಕವಾಗಿ ನೋಡಿದರೆ 'ನಾಡಾಡಿಗಳ ನಾಟಕ' ವೆಂಬ ಮಾತು ಜನಪದ ನಾಟಕವನ್ನೂ 'ನಾಟಕವಿದ್ಯೆಯಲ್ಲ' ಎಂಬ ಮಾತು ಶಿಷ್ಟಪದ ನಾಟಕವನ್ನೂ, ನಾಟಕದ ನುಡಿ' ಎನ್ನುವುದು ತಾಳಮದ್ದಲೆಯಂತೆ ಮಾತಿನಲ್ಲಿ ನಾಟಕವನ್ನೂ, 'ನಾಟಕವ ತಾನೇ ನಟಿಸಿ ತೋರಿದನು' ಎಂಬಲ್ಲಿ ಏಕ ಪಾತ್ರಾಭಿನಯವನ್ನು ಸಾಂಕೇತಿಕವಾಗಿ ಪ್ರತಿನಿಧಿಸುತ್ತವೆ ಎನ್ನಬಹುದು. ಅಲ್ಲದೆ ಆ ಕಾಲದಲ್ಲಿ ವಿವಿಧ ಬಗೆಯ ನಾಟಕಗಳನ್ನು ಆಡುತ್ತಿದ್ದರು ಎಂಬ ಸೂಚನೆಯೂ ಈ ಮಾತುಗಳಲ್ಲಿ ಸಿಗುತ್ತದೆ. " ಈ ನಾಟಕಗಳಲ್ಲಿ ತೆರೆಯನ್ನೂ ಬಳಸುತ್ತಿದ್ದರೆನ್ನುವ ವಿಚಾರ 'ವಿಜಯೋಪಚಿತ ರಣನಾಟಕಕೆ ಜವನಿಕೆಯಾಯ್ತಲೇ ರಜನಿ' ಎಂಬ ವಾಕ್ಯದಿಂದ ಸುವೇದ್ಯವಾಗುತ್ತದೆ."೧

ಶಿಷ್ಟಕಾವ್ಯದಲ್ಲಿ ಕವಿ ಜಾನಪದ ಕಲೆಯೊಂದನ್ನು ತನ್ನ ಅಭಿವ್ಯಕ್ತಿಗೆ ಬಳಸಿಕೊಳ್ಳುವಲ್ಲಿ ಸಮಕಾಲೀನ ಪದ್ಧತಿಯನ್ನು ದಾಖಲಿಸಿದ್ದಾನೆ. ಆ ಮೂಲಕ ಕವಿಯಾದವನು ಲೋಕಸಾಮಗ್ರಿಯನ್ನು ಬಳಸುವಲ್ಲಿ ಯಾವ ಮಡಿವಂತಿಕೆಯನ್ನು ಹೊಂದಿರುವುದಿಲ್ಲ ಎಂಬುದನ್ನು ಕುಮಾರವ್ಯಾಸ ಸೂತ್ರದ ಗೊಂಬೆಯಾಟವನ್ನು ಉಲ್ಲೇಖಿಸುವುದರ ಮೂಲಕ ತೋರ್ಪಡಿಸಿದ್ದಾನೆ.

**ಪಶುಪಾಲನೆ- ಗೋವುಗಳ ವಿಚಾರ**

ಗ್ರಾಮೀಣ ಜೀವನದಲ್ಲಿ ಪಶುಪಕ್ಷಿ ಪ್ರಾಣಿಗಳಲ್ಲಿ ಕೆಲವು ವಿಶೇಷ ಪಾತ್ರವನ್ನು ವಹಿಸಿವೆ. ಉದಾಹರಣೆಗೆ, ಗೋವುಗಳು ಜಾನಪದರ ಜೀವನದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸುವುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಜಾನಪದ ಸಾಹಿತ್ಯದಲ್ಲಿ ಪ್ರಸಿದ್ಧವಾದ ಗೋವಿನ ಹಾಡು ಅಥವಾ ಆಕಳ ಪದ ಕೇಳದವರೇ ಇಲ್ಲ ಎನ್ನಬಹುದು. ಗೋಪೂಜೆ, ಗೋಪದ್ಮವ್ರತ, ಗೋಧೂಳಿ ಲಗ್ನದಲ್ಲಿ ಶುಭಕಾರ್ಯಗಳನ್ನು ನಡೆಸುವಿಕೆ, ಗೋದಾನ ಮೊದಲಾದವು ಶಿಷ್ಟರ ಆಚರಣೆಗಳಲ್ಲಿ ಪ್ರಮುಖ ಪಾತ್ರವಹಿಸಿರುವಂತೆಯೇ ಗ್ರಾಮೀಣ ಬದುಕಿನಲ್ಲಿಯೂ ವಿಶೇಷಸ್ಥಾನ ಪಡೆದಿವೆ. ಸೋಮವಾರ ಎತ್ತನ್ನು ಉಳುಮೆಗೆ ಕಟ್ಟದಿರುವುದು, ಸಂಕ್ರಾಂತಿ ಹಬ್ಬದಲ್ಲಿ ಕೊಂಡ ಹಾಯಿಸುವುದು, ಗೋವುಗಳನ್ನು ಅಲಂಕರಿಸಿ ಮೆರವಣಿಗೆ ಮಾಡುವುದು ಇವೇ ಮೊದಲಾದ ಧಾರ್ಮಿಕ ಆಚರಣೆಗಳನ್ನು ಕಾಣುತ್ತೇವೆ. ತುರುಗಳ್ಳರಿಂದ

೧. ಗದುಗಿನ ಭಾರತ : ಒಂದು ಸಾಂಸ್ಕೃತಿಕ ಅಧ್ಯಯನ, ಪು. ೧೩೮, ಲೇ: ದೇಜಗೌ, ೧೯೭೮, ಪ್ರ: ಕ.ವಿ.ವಿ. ಧಾರವಾಡ

ಗೋವುಗಳನ್ನು ರಕ್ಷಿಸಲು ಹೋರಾಡಿ ಬಲಿಯಾದ ವೀರರ ಸ್ಮಾರಕವಾಗಿ ನೆಟ್ಟ ವೀರಗಲ್ಲುಗಳು ಬಹುಮಟ್ಟಿಗೆ ಹಳ್ಳಿಗಳ ಹೊಲಗದ್ದೆಗಳ ಬಳಿ ಸಿಗುವುದನ್ನು ಕಂಡಾಗ ಜನಪದರ ಜೀವನದಲ್ಲಿ ಗೋವುಗಳು ಎಷ್ಟು ಮಹತ್ವದ ಸಂಪತ್ತು ಎನ್ನುವುದು ತಿಳಿಯುತ್ತದೆ: ಕುಮಾರವ್ಯಾಸ ಭಾರತದಲ್ಲಿ ಗೋಗ್ರಹಣ ಪ್ರಸಂಗ ಕೇವಲ ಶಿಷ್ಟ ಸಾಹಿತ್ಯದ ಪ್ರಸಂಗವಷ್ಟೇ ಅಲ್ಲದೆ ಜಾನಪದರ ಜೀವನ ಪ್ರಸಂಗವೂ ಆಗಿದೆ ಎನ್ನಬಹುದು.

ಕುಮಾರವ್ಯಾಸನ ಕಾಲದಲ್ಲಿ ಅರಮನೆಯ ಜೀವನ ವೈವಿಧ್ಯಮಯವಾಗಿ ಚಿತ್ರಿತವಾಗಿರುವಂತೆ ಎಲೆಮನೆಯ ಜೀವನವೂ ಚಿತ್ರಿತವಾಗಿದೆ. ನಾಗರಿಕ ವರ್ಗದವರ ಪೈಕಿ ಕಾವ್ಯದಲ್ಲಿ ಯುದ್ಧ ಪ್ರಸಂಗಗಳೇ ಹೆಚ್ಚಾಗಿ ಬರುವುದರಿಂದಾಗಿ ಸೇನಾವರ್ಗದವರ ಚಿತ್ರಣವೂ, ಗೋಗ್ರಹಣ ಪ್ರಸಂಗದಿಂದಾಗಿ ಗೋವಳರ ಚಿತ್ರಣವೂ ವಿಶೇಷವಾಗಿ ಕಂಡುಬರುತ್ತದೆ.

ಕೌರವರು ಗೋವುಗಳನ್ನು ಸೆರೆಹಿಡಿದ ಸಂದರ್ಭದಲ್ಲಿ ಗೋವಳರ ಚಿತ್ರಣ ಕಣ್ಣಿಗೆ ಕಟ್ಟುವಂತೆ ವರ್ಣಿತವಾಗಿದೆ. ಕುದುರೆ ದಂಡಿನೊಡನೆ ನುಗ್ಗಿ ಬಂದ ಕೌರವನ ದಂಡು ಗೋಪಾಲರ ಮೇಲೆ ಬಿದ್ದು ತುರುಗಳನ್ನು ಕೋಳ ಹಿಡಿದು ಬೊಬ್ಬಿರಿಯುತ್ತ ನುಗ್ಗಿ ಬಂದಾಗ, ಮಿಸುಪ ಕಂಬಳಿ ಕಲ್ಲಿಯ ಬಿಸುಟು ಕೊರಳಲ್ಲಿ ಅಸುವನ್ನು ಹೊತ್ತು, ನಾಲಗೆ ಒಣಗಿ, ಢಗೆ, ಹೊಯ್ದು, ಕಂದಿದ ಮುಸುಡಿನಲ್ಲಿ ತೊದಲಿನ ನುಡಿಯಲ್ಲಿ, ಮರಣದ ದೆಸೆಯ ಕೈಸನ್ನೆಗಳನ್ನು ಮಾಡುತ್ತ 'ಬಸಿವನೆತ್ತರ' ಗೋವಳರು ಮತ್ಸ್ಯ ಭೂಪತಿಗೆ ಸುದ್ದಿಯನ್ನು ಮುಟ್ಟಿಸುತ್ತಾರೆ. ಇಲ್ಲಿ ವರ್ಣಿತವಾದ ಗೋವಳರ ಉಡುಪು ಕಂಬಳಿ, ಕೊಂಬು, ಕಲ್ಲಿ ಇಂದಿಗೂ ಗ್ರಾಮಗಳ ಗೋವಳರಲ್ಲಿ ಕಾಣುವ ವೇಷಗಳಾಗಿವೆ.

ಕುಮಾರವ್ಯಾಸನು ಹೆದರಿದ ಗೋವಳರ ಚಿತ್ರವನ್ನು ಕೊಡುವಂತೆಯೇ ಬೆದರಿದ ಗೋವುಗಳು ಚಿತ್ರವನ್ನು ಮನಮುಟ್ಟುವಂತೆ ನೀಡುತ್ತಾನೆ. ಹುಲಿ ಮೇಲೆ ಬಿದ್ದಾಗಲೋ, ದಂಡು ದಾಳಿಮಾಡಿದಾಗಲೋ, ದನಗಳ ತುಡುಗರು ಬೆನ್ನಟ್ಟಿದಾಗಲೋ ಬೆದರಿದ ಗೋವುಗಳು ದೌಡಾಯಿಸುವ ಚಿತ್ರಣವನ್ನು ಕವಿ ಚಿತ್ರವತ್ತಾಗಿ ಬಣ್ಣಿಸುತ್ತಾನೆ. ಬಾಯಿ ಚಪ್ಪರಿಸುವಂತೆ ರಾಜಧಾನಿಯ ಸುರಸುಂದರಿಯನ್ನು ವರ್ಣಿಸಬಲ್ಲ ಕುಮಾರವ್ಯಾಸ ನಿಸರ್ಗ ಶಿಶುವಾದ ಪಶುಗಳನ್ನು ಹೃದ್ಯವಾಗಿ ಚಿತ್ರಿಸುವುದರ ಮೂಲಕ ಜಾನಪದ ಸೌಂದರ್ಯದರ್ಶನ ಮಾಡಿಸುತ್ತಾನೆ.

ಕೌರವನ ದಾಳಿಗೆ ತುತ್ತಾದ ಗೋಹಿಂಡು ಬೆದರಿ ಓಡಿದ ದೃಶ್ಯ ಈ ರೀತಿಯಿದೆ:

ಬಿಗಿದ ಕೆಚ್ಚಲ ತೊರೆದೊಗುವ ಹಾ
ಲುಗಳ ಮಿಗೆ ಸೂಳೆದ್ದ ಬಾಲವ
ಮೊಗ ನೆಗಹಿ ದೆಸೆದೆಸೆಯ ನೋಡುತ ಬೆಚ್ಚಿ ಬಿರುವರಿವ
ಅಗಿದು ಸರಳಿಸಿ ನಿಲುವ ಹೊಸಬರ
ಸೊಗಡಿಗವ್ವಳಿಸುತ ಗೋವರು
ತೆಗೆದ ಪಥದಲಿ ತೆಕ್ಕವರಿದವು ಹಿಂಡು ಹಿಂಡಿನಲಿ

(ವಿ.ಪ. ೭-೫೦)

ಕೆಲವು ಕಡೆಗಂದಿಗಳು ಬಾಲದ
ಬಳಿಗೆ ಮೂಗಿಟ್ಟಡಿಗಡಿಗೆ ಮನ
ನಲಿದು ಮೋರೆಯನೆತ್ತಿ ಸುಕ್ಕಿಸಿ ಮತ್ತೆ ಹರಿಹರಿದು
ಮಲೆತು ಕಾಲಲಿ ನೆಲವ ಕೆರೆದ
ವ್ವಳಿಸಿ ಮತ್ತೊಂದಿರುವರೆ ಬಲು
ಸಲಗನೀಡಿರಿದಾಡುತಿರ್ದುದು ಹಿಂಡು ಹಿಂಡಿನಲಿ (ವಿ. ಪ. ೭-೫೧)

ಅರ್ಜುನನು ಕೌರವರ ಮೇಲೆ ಗೆಲುವು ಸಾಧಿಸಿದಾಗ ಕೌರವನ ಭಟರು ತುರುಗಳನ್ನು ಬಿಟ್ಟು ತಲ್ಲಣಿಸಿ ಓಡುತ್ತಾರೆ. ಆಗ ಗೋವಳರು ಸನ್ನೆಯಿಂದ ಅವುಗಳನ್ನು ಪಟ್ಟಣಕ್ಕೆ ಅಟ್ಟಿಕೊಂಡು ಬರುತ್ತಾರೆ. ಆ ಸಂದರ್ಭದಲ್ಲಿ ತುರುವಿಂಡು ಪುರದತ್ತ ಓಡಿ ಬರುವ ವೈಖರಿಯನ್ನು ಕುಮಾರವ್ಯಾಸ ಸಹಜವಾಗಿ, ಕಣ್ಣಿಗೆ ಕಟ್ಟುವಂತೆ ಚಿತ್ರವತ್ತಾಗಿ, ಒಂದೊಂದು ಮಾತೂ ಒಳ್ಳೆಯ ಚಿತ್ರಕಾರನಿಗೆ ದೃಶ್ಯ ಚಿತ್ರೀಕರಣಕ್ಕೆ ಸೊಗಸಾದ ಸಾಮಗ್ರಿಯಾಗುವಂತೆ ಚಿತ್ರಿಸಿದ್ದಾನೆ. ಗ್ರಾಮ ಜೀವನದಲ್ಲಿ ಸಾಮಾನ್ಯವಾಗಿ ಕಂಡುಬರುವ, ಸಂಜೆ ಹೊತ್ತಿನಲ್ಲಿ ದನಗಳು ಮನೆಗೆ ಹಿಂದಿರುಗುವ ಈ ದೃಶ್ಯವನ್ನು ಚಿತ್ರಿಸಿರುವುದು ಕುಮಾರವ್ಯಾಸನಿಗಿರುವ ಗ್ರಾಮೀಣ ಬದುಕಿನ ಅರಿವಿನ ಸೂಕ್ಷ್ಮತೆಗೆ ಸಾಕ್ಷಿಯಾಗಿದೆ. ಇದರಂತೆಯೇ ಆ ಹಸುಗಳ ಬಳಿಯ ಕಡೆಗಂದಿಗಳು ನಲಿದಾಡುವ ರೀತಿಯೂ ಹೃದ್ಯವಾಗಿದೆ.

ಹೀಗೆ ಗ್ರಾಮೀಣ ಬದುಕಿಗೆ ಆಧಾರವಾದ ಗೋವುಗಳ ರೀತಿ ನೀತಿಗಳ ನಿಕಟ ಪರಿಚಯ ಕುಮಾರವ್ಯಾಸನಿಗಿರುವುದು ಈ ಪದ್ಯಗಳಿಂದ ಸುವ್ಯಕ್ತವಾಗುತ್ತದೆ.

## ಬೇಸಾಯ

ಜಾನಪದರ ಬದುಕಿನಲ್ಲಿ ಬೇಸಾಯ ಮಹತ್ತರ ಸ್ಥಾನವನ್ನು ಪಡೆದಿದೆ. ಅಲೆಮಾರಿಯಾಗಿದ್ದ ಮಾನವನು ಒಂದೆಡೆ ನೆಲೆ ನಿಂತು, ತನ್ನದೇ ಆದ ಒಂದು ಬದುಕು ಹಾಗೂ ಸಂಸ್ಕೃತಿಯನ್ನು ರೂಪಿಸಿಕೊಳ್ಳಲು ಸಾಧ್ಯವಾದುದು ವ್ಯವಸಾಯದಿಂದ. "ಸಂಸ್ಕೃತಿ ವ್ಯವಸಾಯವನ್ನು ಧ್ವನಿಸುತ್ತದೆ, ನಾಗರಿಕತೆ ನಗರವನ್ನು ಧ್ವನಿಸುತ್ತದೆ."[೧] ಜಾನಪದರ ಬದುಕಿನ ಆಧಾರವೇ ಬೇಸಾಯ. "ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೆ ಮೇಲು", ಅದಿಲ್ಲದಿದ್ದರೆ ದೇಶವೇ ಕೆಡುಗು ಎನ್ನುತ್ತಾನೆ ಸರ್ವಜ್ಞ. ಕುಮಾರವ್ಯಾಸನೂ ಬೇಸಾಯ ಇಲ್ಲವೇ ಕೃಷಿಯ ಮಹತ್ವವನ್ನು ಅರಿತವನೆ. ರಾಜಸೂಯಯಾಗಕ್ಕಾಗಿ ಧರ್ಮರಾಯನು ಸನ್ನದ್ಧನಾಗುತ್ತಿರುವಾಗ ಅಲ್ಲಿಗೆ ಬಂದ ನಾರದರು ಧರ್ಮಜನಿಗೆ ಧರ್ಮಾರ್ಥ ಸಾಧನಗಳನ್ನು ಕುರಿತು ಉಪದೇಶಿಸುವ ಸಂದರ್ಭದಲ್ಲಿ ಈ ರೀತಿ ತಿಳಿಸುತ್ತಾರೆ:

> ಕೃಷಿ ಮೊದಲು ಸರ್ವಕ್ಕೆ ಕೃಷಿಯಿಂ
> ಪಸರಿಸುವುದಾ ಕೃಷಿಯನುದ್ಯೋ
> ಗಿಸುವ ಜನವನು ಪಾಲಿಸುವುದಾ ಜನಪದದ ಜನದಿ
> ವಸುತೆರಳುವುದು ವಸುವಿನಿಂಸಾ
> ಧಿಸುವಡಾವುದಸಾಧ್ಯವದರಿಂ
> ಕೃಷಿ ವಿಹೀನರ ದೇಶವದು ದುರ್ದೇಶಕೇಳೆಂದ (ಸ.ಪ. ೧-೬೪)

ಕುಮಾರವ್ಯಾಸನ ಕಾವ್ಯವಸ್ತು ರಾಜ-ಮಹಾರಾಜರನ್ನು ಕುರಿತದ್ದಾಗಿದ್ದರೂ ಗ್ರಾಮೀಣ ಜೀವನದ ಬದುಕಿನ ಮುಖ್ಯವಾಹಿನಿಯಿಂದ ಕವಿ ದೂರವಿರಲು ಸಾಧ್ಯವಾಗಿಲ್ಲ. ಹಾಗಾಗಿ ಜನಜೀವನಕ್ಕೆ ಹೊಂದಿಕೊಂಡಂಥ ಬೇಸಾಯದ ಸಂಗತಿಗಳನ್ನು, ಇತರ ನಿದರ್ಶನಗಳ ಹಿನ್ನೆಲೆಯಲ್ಲಿ ಮನೋಜ್ಞವಾಗಿ ಹೇಳುತ್ತಾನೆ.

> ಯತಿಕೆಡುಗು ದುಸ್ಸಂಗದಲಿ ಭೂ
> ಪತಿ ಕೆಡಗು ದುರ್ಮಂತ್ರಿಯಲಿ ವರ
> ಸುತ ಕೆಡುಗು ಲಾಲನೆಗಳಲಿ **ಕೃಷಿಕೆಡಗುಪೇಕ್ಷೆಯಲಿ**(ಉ. ಪ. ೩-೧೧೯)

---

೧. ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ : ಡಾ. ಎಂ.ಜಿ. ಈಶ್ವರಪ್ಪ ಕ.ಸಾ.ಪ. ಬೆಂಗಳೂರು: ಪು. ೮೦.

ಎಂದು ಕೃಷಿಯ ಮಹತ್ವವನ್ನು ಎತ್ತಿಸಾರುತ್ತಾನೆ. 'ಕೃಷಿ ಕೆಡುಗು ಉಪೇಕ್ಷೆಯಲಿ' ಎಂಬ ಮಾತಿನಲ್ಲಿ ಕೃಷಿಯ ಬಗ್ಗೆ ನೀಡಬೇಕಾದ ಎಚ್ಚರಿಕೆ, ಇಡಬೇಕಾದ ನಿಗಾ ಎಷ್ಟು ಮಹತ್ತರವಾದುದು, ಭೂಮಾಲಿಕನ ಮತ್ತು ರೈತನ ಜಂಟಿ ಹೊಣೆಗಾರಿಕೆ ಎಷ್ಟರಮಟ್ಟಿಗಿದೆ ಎನ್ನುವುದನ್ನು ತಿಳಿಸುತ್ತದೆ. ಜಾನಪದರು ಕೃಷಿಯ ಬಗ್ಗೆ ಅನಾದರ ತೋರಿದರೆ, ಅದನ್ನು ಎಚ್ಚರದಿಂದ ಪಾಲನೆ ಮಾಡದಿದ್ದರೆ ಆರಂಭ ಕೆಡುತ್ತದೆ ಎಂಬ ಕಟುಸತ್ಯವನ್ನು "ಕಿರಿದರೊಳ್ ಪಿರಿದರ್ಥ"ವನ್ನು ತುಂಬಿ ಹೇಳುತ್ತಾನೆ.

ಬಕಾಸುರ ವಧಾಪ್ರಸಂಗದಲ್ಲಿ ಬಂಡಿಯಲ್ಲಿ ಹೊರಿಸಿ ಕಳುಹಿಸಿದ ಭಕ್ಷ್ಯ ಭೋಜ್ಯಗಳ ವರ್ಣನೆಯಲ್ಲಿ ಕುಮಾರವ್ಯಾಸನ ಕಾಲವು ದವಸ ಧಾನ್ಯಗಳಿಂದ ಸಂಪದ್ಭರಿತವಾಗಿತ್ತೆನ್ನುವುದು ವಿಶದವಾಗುತ್ತದೆ. 'ಓರಣಿಸಿದ ಹೆಡಗೆಗಳಲ್ಲಿ ನಳನಳಿದ ಬಹುವಿಧದ ಭಕ್ಷ್ಯಾವಳಿಯನ್ನೂ, ಹರವಿಗಳಲ್ಲಿ ಹಾಲು ತುಪ್ಪಗಳನ್ನೂ, ಕುನಿಕಿಲ (ಚೀಲ, ಸಂಚಿ)ಗಳಲ್ಲಿ ಕಳವೆಯಕ್ಕಿಯ ಕೂಳ ರಾಶಿಯ ಬೋನವನ್ನು ತುಂಬಿದ ಹೇರಾಳದೌತಣವನ್ನು ತುಂಬಿದ 'ಬಂಡಿಯ ಶಿರದ ಹಲಗೆ'ಯನ್ನು ಅಡರಿ ಭೀಮನು ಬಲು ಹುರಿಯ ಹಗ್ಗವ ಹಿಡಿದು ಹೂಡಿದೆತ್ತುಗಳನ್ನು ಜಡಿದನಂತೆ!'

ಇಲ್ಲಿ 'ಹೆಡಗೆ' ಎಂದರೆ ಭಕ್ಷ್ಯಗಳನ್ನು ತುಂಬುವ ಬಿದಿರಬುಟ್ಟಿಗಳು, 'ಹರವಿ' ಎಂದರೆ ಮಣ್ಣಿನ ದೊಡ್ಡ ಗಡಿಗೆ, ಈಗಲೂ ಹಳ್ಳಿಗಳಲ್ಲಿ ಇವು ಬಳಕೆಯಲ್ಲಿರುವುದನ್ನು ಕಾಣಬಹುದು. ಈಗಲೂ ಬಂಡಿಯನ್ನು ಆತುರದಲ್ಲಿ ವೇಗವಾಗಿ ಹೊಡೆದುಕೊಂಡು ಹೋಗಲು, ಬಂಡಿಯ ಮೂಕಿಯ ಮೇಲೆ ಕೂಡುವುದು ವಾಸ್ತವಿಕ ಚಿತ್ರಣವಾಗಿದೆ. ಬಂಡಿಯನ್ನು ವೇಗವಾಗಿ ಹೊಡೆಯುವವನು ಬಂಡಿಯ ಒಳಗೆ ಕೂಡುವುದಿಲ್ಲ ಬದಲಾಗಿ 'ಮೂಕಿ'ಯ ಮೇಲೆ ಕೂಡುತ್ತಾರೆ ಹಾಗೆ ಕೂತರೆ ವೇಗದ ಜೊತೆಗೆ ಹತೋಟಿಯೂ ಇರುತ್ತದೆ. ಇದನ್ನೇ ಕುಮಾರವ್ಯಾಸ 'ಬಂಡಿಯ ಶಿರದ ಹಲಗೆ' ಎಂದು ಹೇಳುತ್ತಾನೆ.[೧]

---

೧. ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ : ಡಾ.ಎಂ. ಜಿ. ಈಶ್ವರಪ್ಪ, ಪು. ೮೦

ಕುಮಾರವ್ಯಾಸನ ಕಾಲದಲ್ಲಿ ಬಂಡಿಗಳಿಗೆ ಸುಂದರವಾದ, ಚುರುಕಾದ ಹೋರಿಗಳನ್ನು ಹೂಡುತ್ತಿದ್ದರು. ಈ ಜಾತಿಯ ಹೋರಿಗಳನ್ನು ಕಿಲಾರಿ ಜಾತಿಯ ಹೋರಿಗಳೆನ್ನುತ್ತಿದ್ದರು. ಇವುಗಳ ಆಕಾರ, ಮೈಕಟ್ಟು, ಹುರುಪುತನಗಳನ್ನು ಕುಮಾರವ್ಯಾಸ ಒಂದು ಕಡೆ "ಬೆಳೆವಿಣಿಲ ಮಿಡಿಗಲವ ಬಾಲದ/ ನೆಲಕೆ ನಿಗುರುವ ಗಂಗೆ ದೊಗಲಿನ/ ಹಲಗೆ ಬೆನ್ನಿನ ಸಿಡಿಲಮರಿ" ಎಂದು ವರ್ಣಿಸಿದ್ದಾನೆ. (ಅ.ಪ. ೧೭-೩೫, ೩೬) ಉತ್ತರ ಕರ್ನಾಟಕದ ಚಿರಪರಿಚಿತವಾದ ದನಗಳೆಂದರೆ ಕಿಲಾರಿ ದನಗಳೆಂದು, ಇವು ಆಕಾರದಲ್ಲಿ ಮೊಹೆಂಜದಾರೋ ಹರಪ್ಪಗಳಲ್ಲಿರುವ ಗೋಮುದ್ರೆಗಳನ್ನು ಹೋಲುತ್ತವೆಂದು ಆರ್. ಎಸ್. ಜ್ಯೋತಿ ಅವರು ತಮ್ಮ ಕುಮಾರವ್ಯಾಸನ ಅಧ್ಯಯನದಲ್ಲಿ ತಿಳಿಸಿದ್ದಾರೆ.[೧] ಕುಮಾರವ್ಯಾಸನ ಕಾಲದಲ್ಲಿ ಭಟರು, ಮಲ್ಲರು ಮೊದಲಾದವರಿಗೆ ಗೋವುಗಳನ್ನು ಬಹುಮಾನವಾಗಿ ನೀಡುವುದೂ, ಒಳ್ಳೆಯ ಹೋರಿಗಳಿಗೆ 'ಅಂಗಚಿತ್ತವನಿತ್ತು' ಸನ್ಮಾನಿಸುವುದು, ಗೋಪಾಲಕರಿಗೆ ಉಡುಗೊರೆ ಕೊಟ್ಟು ಪ್ರೋತ್ಸಾಹಿಸುವುದು- ಇವೇ ಮೊದಲಾದ ಸಂಗತಿಗಳು ಪ್ರಸ್ತಾಪಿತವಾಗಿವೆ.

ಉದ್ಯೋಗಪರ್ವದಲ್ಲಿ (ಉ.ಪ. ೪-೧೦೪) ಬರುವ "ಬಲುಕರಿಸಿ ಭೂಮಿಯೊಳಗೊಂದಂಗುಲವನೊತ್ತಿದವಂಗೆ" ಎಂಬ ಮಾತಿನಲ್ಲಿ ಹಳ್ಳಿಗಳಲ್ಲಿ ರೈತರು ಭೂಮಿಯನ್ನೊತ್ತರಿಸುವ ಪ್ರವೃತ್ತಿಯೂ, 'ಪಶುಸಂಕುಲದೊಳೊಂದೇ ಗೋವನಪಹರಿಸಿದ ದುರಾತ್ಮಂಗೆ...." ನರಕ ಕಾದಿಟ್ಟ ಬುತ್ತಿ ಎಂಬಲ್ಲಿ ಗೋಸಂಪತ್ತು ಅಮೂಲ್ಯಧನವಾಗಿದ್ದು, ಅದನ್ನು ಅಪಹರಿಸುವ ಪ್ರಸಂಗಗಳು ನಡೆಯುತ್ತಿದ್ದವು ಎಂಬುದು ಸ್ಪಷ್ಟವಾಗುತ್ತದೆ.

ಕೃಷಿಗೆ ಸಂಬಂಧಿಸಿದ ಇನ್ನೂ ಅನೇಕ ಪ್ರಕ್ರಿಯೆಗಳನ್ನು ಕುಮಾರವ್ಯಾಸನು ತನ್ನ ಕಾವ್ಯದಲ್ಲಿ ತರುತ್ತಾನೆ. 'ಬಿತ್ತನೆ', 'ಮೆದೆ ಒಟ್ಟುವುದು', 'ಹೊಟ್ಟ ತೂರುವುದು', 'ಬಿದಿರು ಮಳೆ', 'ಬೆಳೆ ಒಣಗುವುದು', 'ಬಂಡಿ ಹೂಡುವುದು', 'ಅರೆಬೆಳಸು', 'ಹೆಬ್ಬೆಳಸು' ಇವೇ ಮೊದಲಾದ ಸಂಗತಿಗಳನ್ನು ಉಪಮೆ, ರೂಪಕ, ದೃಷ್ಟಾಂತಗಳಲ್ಲಿ ಬಳಸುತ್ತಾನೆ.

---

೧. ಪ್ರಾಚೀನ ಅರ್ವಾಚೀನ ದನಗಳ ಇತಿಹಾಸ- ೧೯೮೫, ಕ.ಸಾ.ಪ. ಬೆಂ: ಲೇ. ಆರ್. ಎಸ್. ಜ್ಯೋತಿ ಪು. ೬೭-೬೫.

"ಆರೋ ಬಿತ್ತಿದರು ಕುರುಭೂಮಿಯಲಿ ವಿಷ ಬೀಜವನು", "ಹೆಣನ ಮೆದೆ ಹೇರಾಳ ರಂಜಿಸಿತು" (ದ್ರೋ.ಪ. ೧೦-೯), "ಹೊಟ್ಟೆ ತೂರುವಡೆ ಅರಸು ಮೋಹರವೇಕೆ?" (ಕ.ಪ. ೪-೧೬), "ಹೇರಡವಿಯನು ಸವರಲು ಕಡಿತಕಾರರು" (ಭೀ.ವ. ೧-೧೧), "ಹೆಬ್ಬಲದ ಹೆಬ್ಬೆಳೆಸಾಲ ಹೊಯ್ಲಿನ ಮೆದೆಗಳೊಟ್ಟಿಲಲಿ" (ತ.ಪ. ೧೯-೧೯), "ತೊರೆಗೆ ಮಣೆದರೆ ಗೇಕು ಬದುಕುವುದು", (ಭೀ.ಪ. ೭-೧೩), "ಹೂಡಿದವು ಬಂಡಿಗಳು, ಹರಿದೆಡೆಯಾಡಿದವು ಕೊಲ್ಲಾರಿಗಳು" (ಕ.ಪ. ೮-೧೧), "ಎಮ್ಮ ಪುಣ್ಯದ ಬೆಳೆಗಳೊಣಗಿದಡಮ್ಮಿ ಮಾಡುವುದೇನು?" (ಕ.ಪ. ೧-೧೬) "ಸುಭಟರ ಜೀವವನು ಹಳೆವಿದರ ಮೆಳೆಯಲಿ ಮೊಳಗಿದುರಿಯ ವೊಲುರುಹಿದನು" (ದ್ರೋ.ವ. ೧೭-೨೫), "ಕಾಲನ ಬನಕೆ ರಕುತದ ಕೆರೆಯ ತೂಬೆತ್ತಿದರು" (ಭೀ. ಪ. ೪-೬೭)- ಇಂಥ ಹಲವಾರು ಹೇಳಿಕೆಗಳಲ್ಲಿ ಬೇಸಾಯಕ್ಕೆ ಸಂಬಂಧಿಸಿದ ಅನೇಕ ಕಾರ್ಯಗಳನ್ನು ಗುರುತಿಸಬಹುದು. ಕುಮಾರವ್ಯಾಸನು ಶಾನುಭೋಗ ಕುಲಕ್ಕೆ ಸೇರಿದವನು ಎಂಬ ಹೇಳಿಕೆಯುಂಟು. ಅದೇನೇ ಇರಲಿ ಗ್ರಾಮಜೀವನವನ್ನು ಚೆನ್ನಾಗಿ ಅರಿತವನು ಎನ್ನುವುದರಲ್ಲಿ ಸಂದೇಹವಿಲ್ಲ. ಹಳ್ಳಿಯ ಜನ ಬಳಸುವ ಪ್ರಯಾಣ ಸಾಧನಗಳು, ಮತ್ತು ಬೆಳೆಗೆ ಉಂಟಾಗುವ ಅಡ್ಡಿ ಆತಂಕಗಳ ಪರಿಚಯವೂ ಅವನಿಗಿತ್ತು. "ಒಡೆಯನೈತರಲಿಕ್ಕುದೋಟದ ಬಡನರಿಗಳೋಡುವವೊಲ್" (ಸ.ಪ. ೧೫-೩೩) ಎಂಬಲ್ಲಿ ಗ್ರಾಮಸ್ಥರಿಗೆ ಪರಿಚಿತವಾದ ಕಬ್ಬಿನ ತೋಟಕ್ಕೆ ನರಿನುಗ್ಗುವ ಚಿತ್ರಣವಿದೆ. ಅಂತೆಯೇ ಅಡವಿಗಳನ್ನು ಸವರುವ ಕಡಿತಕಾರರನ್ನು "ಹೇರಡವಿಯನು ಸವರಲು ಕಡಿತಕಾರರು" (ಭೀ. ಪ. ೫-೮), ಎಂದು ಹೇಳುವ ಮಾತುಗಳಿಂದ ಕುಮಾರವ್ಯಾಸನಿಗೆ ಅರಣ್ಯಜನಜೀವನದ ಪರಿಚಯವೂ ಇತ್ತೆಂದು ತಿಳಿಯುತ್ತದೆ.

### ಜನಪದ ವೈದ್ಯ

ಪ್ರಕೃತಿಯ ಶಿಶುವಾದ ಮಾನವನ ಬದುಕು ಪ್ರಕೃತ್ತಿದತ್ತವಾದ ಸಸ್ಯವರ್ಗ ಹಾಗೂ ಪ್ರಾಣಿ ವರ್ಗಗಳನ್ನು ಅವಲಂಬಿಸಿದೆ. ಕ್ರಮೇಣ ಪರಿಸರ ನಾಶವಾಗುತ್ತಿರುವ ಇಂದಿನ ದಿನಗಳಲ್ಲಿ, ಪರಿಸರದ ಮಹತ್ವ ಮಾನವನಿಗೆಷ್ಟು ಅತ್ಯಗತ್ಯ ಎಂಬ ಅರಿವಾಗುತ್ತಿದೆ. ಪರಿಸರದಿಂದ ಮನುಷ್ಯನಿಗಾಗುವ ಅನೇಕ ಪ್ರಯೋಜನಗಳಲ್ಲಿ ಮುಖ್ಯವಾದ ಒಂದು ಪ್ರಯೋಜನವೆಂದರೆ ಪ್ರಕೃತಿಯಲ್ಲಿ ಸುಲಭವಾಗಿ

ದೊರೆಯುವ ನಾರು-ಬೇರುಗಳಿಂದ, ಗಿಡ-ಮೂಲಿಕೆಗಳಿಂದ, ಎಲೆ-ಹೂಗಳಿಂದ, ಮಾನವನಿಗೆ ಬರುವ ರೋಗಗಗಳನ್ನು ನಿವಾರಿಸಿಕೊಳ್ಳುವುದಾಗಿದೆ. ಗ್ರಾಮೀಣ ಜನರಲ್ಲಿ ಪರಂಪರಾಗತವಾದ ಅನುಭವದಿಂದ ಸಸ್ಯವರ್ಗ ಹಾಗೂ ಪ್ರಾಣಿವರ್ಗಗಳನ್ನು ಬಳಸಿಕೊಂಡು ಕಾಯಿಲೆಗಳನ್ನೂ ವಾಸಿ ಮಾಡುವ ರೋಗ ರುಜಿನಗಳನ್ನು ನಾಶಮಾಡುವ ಜನಪದ ವೈದ್ಯರನ್ನು ಅಥವಾ ಅಳಲೆಕಾಯಿ ಪಂಡಿತರನ್ನು ನಾವು ಎಲ್ಲ ಹಳ್ಳಿಗಳಲ್ಲೂ ಕಾಣುತ್ತೇವೆ. ಇವರಿಗೆ ಶಾಸ್ತ್ರಾನುಭವಕ್ಕಿಂತ ಹಿರಿಯರಿಂದ ಕಂಡು, ಕೇಳಿ, ಕಲಿತ ಅನುಭವವೇ ಆಧಾರ. ಜನಪದ ವೈದ್ಯವನ್ನು ನಾಟಿ ಔಷಧ, ನಾಡ ಔಷಧ, ಹಳ್ಳಿ ಔಷಧ, ಮನೆ ವೈದ್ಯ, ಹಸಿರು ಮದ್ದು, ಕಾಡು ಮದ್ದು ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಸ್ಥಳೀಯ ರೋಗಗಳನ್ನು ಸ್ಥಳೀಯ ಗಿಡ ಮೂಲಿಕೆಗಳ ಮೂಲಕ, ಸಸ್ಯ ವರ್ಗಗಳಿಂದ, ನಿವಾರಣೆ ಮಾಡುವುದು ಜಾನಪದ ವೈದ್ಯರ ವೈಶಿಷ್ಟ್ಯ.ಆಯುರ್ವೇದದಲ್ಲಿ ಸಾಕಷ್ಟು ಜನಪದ ವೈದ್ಯ ಅಂತರ್ಗತವಾಗಿದೆ ಎನ್ನಬಹುದು. ಜನಪದ ವೈದ್ಯರಲ್ಲಿ ಮನೋವೈದ್ಯ, ಮಕ್ಕಳ ವೈದ್ಯ, ಬಸುರಿ ಬಾಣಂತಿ ವೈದ್ಯ, ಸಾಮಾನ್ಯ ವೈದ್ಯ, ಪಶುವೈದ್ಯ ಎಂದು ಹಲವಾರು ಬಗೆಗಳಿವೆ. ದೃಷ್ಟಿ ತಾಕುವುದು, ಮಕ್ಕಳು ಹಟಮಾಡುವುದು, ಕೆಟ್ಟ ಕನಸುಗಳನ್ನು ಕಾಣುವುದು- ಇವೇ ಮೊದಲಾದವು ಮನೋವೈದ್ಯದ ಗುಂಪಿಗೆ ಸೇರುತ್ತವೆ. ಅನಿಷ್ಟ ನಿವಾರಣೆಯ ಉಪ್ಪಾರತಿಗಳು, ಇತರ ಬಗೆಯ ಆರತಿಗಳು ಈ ವರ್ಗಕ್ಕೆ ಸೇರುತ್ತವೆ ಎನ್ನಬಹುದು.

ಕುಮಾರವ್ಯಾಸನ ಭಾರತದಲ್ಲಿ ಕಂಡುಬರುವ ವೈದ್ಯಕೀಯ ವಿಚಾರಗಳನ್ನು ಮಾನವ ವೈದ್ಯ, ಪಶುವೈದ್ಯ, ಶಸ್ತ್ರವೈದ್ಯ, ಮಂತ್ರ ವೈದ್ಯ ಎಂದು ವರ್ಗೀಕರಿಸಬಹುದು. ಇಲ್ಲಿ ಕಂಡುಬರುವ ವೈದ್ಯ ಪದ್ಧತಿಯಲ್ಲಿ ಶಾಸ್ತ್ರೀಯ ಶಿಷ್ಟ ಪದ್ಧತಿಯೂ ಜಾನಪದೀಯ ದೇಶೀಯ ಪದ್ಧತಿಯೂ ಮಿಳಿತವಾಗಿರುವುದನ್ನು ಕಾಣಬಹುದು.

ರಣರಂಗದಲ್ಲಿ ಕಾದಾಡಲು ಹೊರಟ ಸೈನಿಕರು ಗಾಯಗೊಂಡಾಗ ಅವರಿಗೆ ಶುಶ್ರೂಷೆ ಮಾಡಲು ನರವೈದ್ಯ ಘಟಕವೊಂದಿತ್ತು.. ಅಂತೆಯೇ ಯುದ್ಧದಲ್ಲಿ ಗಾಯಗೊಂಡು, ಅಪಘಾತಗಳಿಗೆ ಒಳಗಾದ ಗಜಾಶ್ವಾದಿಗಳಿಗಾಗಿ ಪಶುವೈದ್ಯರ ಘಟಕವೊಂದಿರುತ್ತಿತ್ತು. ಸಾಮಾನ್ಯವಾಗಿ ರಾತ್ರಿ ಮತ್ತು ಯುದ್ಧವಿರಾಮ ವೇಳೆಗಳಲ್ಲಿ ಶುಶ್ರೂಷಾಕಾರ್ಯ ನಡೆಯುತ್ತಿತ್ತು.

ಸೈನಿಕರು ತೀವ್ರವಾಗಿ ಗಾಯಗೊಂಡಾಗ 'ಖಡ್ಗಗಳ ಪೆಟ್ಟಿನಿಂದ ಛಿದ್ರಗೊಂಡ ಗಾಯಗಳನ್ನು ಮಂತ್ರಜಲದಲ್ಲಿ ತೊಳೆದು ಶುದ್ಧಿಗೊಳಿಸಿ, ಸೂಕರನ ತುಪ್ಪವನ್ನು ಆ ಗಾಯಗಳಲ್ಲಿ ತೊಡೆದು ಕರ್ಪೂರದ ಕವಳವನ್ನು ನೀಡಿ, ರಕ್ಷಾಯಂತ್ರವನ್ನು ಕಟ್ಟಿ, ಮಂತ್ರೌಷಧಿಗಳಿಂದ ಶುಶ್ರೂಷೆ ಮಾಡುತ್ತಿದ್ದರು.' ಅದೇ ರೀತಿ ಬಾಣಗಳ ಇರಿತದಿಂದ ಛಿದ್ರಗೊಂಡ ದೇಹದ ಭಾಗಗಳಲ್ಲಿ ಹದವರಿತ ಪ್ರಮಾಣದಲ್ಲಿ ಬಾರಂಗೀಸಸ್ಯ ಮೂಲಿಕೆಯ ತೈಲವನ್ನು ಧಾರಾಕಾರವಾಗಿ ಸುರಿದು, ದೇಹದ ಮೈಗಂಡಿಗಳಲ್ಲಿನ ರಕ್ತವನ್ನು ಶುದ್ಧಗೊಳಿಸಿ, ಹಳೆತಾದ ತುಪ್ಪವನ್ನು ಬಳಿದು ಸುಭಟರ ಗಾಯಗಳಿಗೆ ಚಿಕಿತ್ಸೆಮಾಡುತ್ತಿದ್ದರು. (ಭೀ. ಪ. ೫-೪೧, ೪೨)

ಅಂತೆಯೇ ಕುದುರೆಗಳು ಗಾಯಗೊಂಡಾಗ, ಅವುಗಳ ಎದೆಯಲ್ಲಿ ನೆಟ್ಟ ಬಾಣಗಳನ್ನು ಹೊರತೆಗೆದು ಅವುಗಳಿಗೆ ಶುಶ್ರೂಷೆ ನೀಡುವ ರೀತಿ ಅನ್ಯಾದೃಶವಾದುದು. ಅಶ್ವದ ಹರಿದ ಕೊರಳನ್ನು ಬಿಗಿದು, ಉರದಲ್ಲಿ ಮುರಿದ ಬಾಣವನ್ನು ಕಿತ್ತು, ಹೊಟ್ಟೆಯಿಂದ ಹೊರಬಂದ ನಿರಿಗರುಳನ್ನು ಒಳಗಿಟ್ಟು ಹೊಲಿದು, ಮದ್ದು ನೀಡಿ, ಹದವಾದ ಬಿಸಿಯುಳ್ಳ ಸಸ್ಯದ ಸೇಕದಿಂದ ಕುದುರೆಗಳ ನೋವನ್ನು ನಿವಾರಿಸುತ್ತಿದ್ದರು. (ಭೀ. ಪ. ೫-೩೯)

ಆನೆಗಳ ದೇಹದಲ್ಲಿ ನಾಟಿ ಮುರಿದಿದ್ದ ಈಟಿಯ ಕಿಂಚಿತ್ತು ಭಾಗವು ಒಳಗೆ ಉಳಿಯದಂತೆ ಹಾಗೂ ನೋಯದಂತೆ ಎಚ್ಚರದಿಂದ ಕಿತ್ತು ತೆಗೆದು, ಆ ಭಾಗಕ್ಕೆ, ಸಂಜೀವಿನಿ ರಸಯುಕ್ತ ಔಷಧವನ್ನು ತುಂಬಿ ಪಟ್ಟಿಕಟ್ಟಿ ಗಜಗಳನ್ನು ಮತ್ತೆ ಚೈತನ್ಯಗೊಳಿಸುತ್ತಿದ್ದರು. (ಭೀ. ಪ. ೫-೪೦)

"ತ್ರಿಕಟುಕದ ಕಷ್ಟಾಯವಿದು ಬಾಲಕರ ಸೊಗಸೇ" (ಕ.ಪ. ೧೨-೧೮) ಎಂಬಲ್ಲಿ ವಾತ, ಪಿತ್ಥ, ಕಫ ಎಂಬ ತ್ರಿದೋಷ ಪರಿಹಾರಾರ್ಥವಾಗಿ ಬಳಸುವ ಮೆಣಸು, ಹಿಪ್ಪಲಿ, ಶುಂಠಿಗಳಿಂದ ಕೂಡಿರುವುದಕ್ಕೆ "ತ್ರಿಕಟುಕ" ಎಂದು ಕರೆಯಲ್ಪಡುತ್ತದೆ.

"ಬೆಂದ ಹುಣ್ಣಲಿ ಸಾಸಿವೆಯ ಒಳಿಯದಿರು" (ದ್ರೋ.ಪ. ೧-೮) 'ತ್ರಿಕಟುಕದ ಕಷ್ಟಾಯ' (ಕ.ಪ. ೧೨-೧೮), "ಜೇವಣಿಗೆ" (ಸಂಜೀವಿನಿ ಗಿಡ) (ಭೀ.ಪ. ೫-೪೦), 'ಬಾರಂಗಿ' (ಒಂದು ಗಿಡ ಮೂಲಿಕೆ) (ಭೀ.ಪ.೫-೪೧) "ಹಳದುಪ್ಪ", "ಸೂಕರನ ತುಪ್ಪ" (ಭೀ. ಪ. ೫-೪೦, ೪೧) - ಮೊದಲಾದ ಮಾತುಗಳು, ವೈದ್ಯರು ಯುದ್ಧಗಳಲ್ಲಿ ಗಾಯಗೊಂಡಿದ್ದ ಭಟರನ್ನೂ ಪ್ರಾಣಿಗಳನ್ನು

ಶುಶ್ರೂಷೆಗೈಯುವಲ್ಲಿ ದೇಶೀಯ ವೈದ್ಯಪದ್ಧತಿಗಳನ್ನು ಅನುಸರಿಸುತ್ತಿದ್ದರು ಎಂದು ಹೇಳಬಹುದು.

ಕುಮಾರವ್ಯಾಸನ ಈ ವರ್ಣನೆಗಳು ಅವನ ಕಾಲದ ಶಸ್ತ್ರಚಿಕಿತ್ಸಾ ವಿಧಾನವನ್ನು ಮತ್ತು ನಾಟಿ ಔಷಧಗಳ ಬಳಕೆಯನ್ನು ಸೂಚಿಸುತ್ತವೆ. ಸಸ್ಯ ಔಷಧಗಳ ತಯಾರಿಕೆ ಹಾಗೂ ವೈದ್ಯ ಕಾರ್ಯದಲ್ಲಿ ಪಾಲ್ಗೊಳ್ಳುವ ಸಹಾಯಕರು ಬಹುಮಟ್ಟಿಗೆ ಗ್ರಾಮೀಣ ಜನತಾವರ್ಗಕ್ಕೆ ಸೇರಿದ ಪರಂಪರಾಗತವಾಗಿ ಬಂದ ವೈದ್ಯರ ತಂಡವೆನ್ನಬಹುದು. ಆಗಿನ ಕಾಲದ ಯುದ್ಧಗಳಲ್ಲಿ ಸುಶಿಕ್ಷಿತ ಸೈನಿಕರು ಬಹುಶಃ ಮೇಲ್ವರ್ಗಕ್ಕೆ ಸೇರಿದವರು. ನೇರವಾಗಿ ಹೋರಾಟದಲ್ಲಿ ಪಾಲ್ಗೊಂಡಾಗ, ಸೇನೆಗೆ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡುವಲ್ಲಿ, ವಸ್ತು ವಾಹನಗಳನ್ನು ಸಾಗಿಸುವಲ್ಲಿ, ಗಾಯಗೊಂಡು ದಣಿದ ಸೇನೆಗೆ ನೆರವು ನೀಡುವಲ್ಲಿ ಜಾನಪದರು ಮುಖ್ಯಪಾತ್ರ ವಹಿಸುತ್ತಿದ್ದರು ಎನ್ನಬಹುದು.

○

# ಕುಮಾರವ್ಯಾಸನ ಭಾಷೆ - ಶೈಲಿ

'ಸಮಸ್ತ ರಸಮಂ ಕಿವಿಯಿಂದೀಂಟಿಸುವರ್' ಎಂದು ಕವಿಯೊಬ್ಬ ಹೇಳಿದಂತೆ ಸಾಹಿತ್ಯದ ಮೂಲಕ ಲೋಕಜ್ಞಾನವನ್ನೇ, ಸೆರೆ ಹಿಡಿಯಬಹುದು. ಅಂತರಂಗದ ಎಂಥ ಅಭಿಪ್ರಾಯವನ್ನಾದರೂ ಕವಿ ಅಭಿವ್ಯಕ್ತಗೊಳಿಸಬಲ್ಲ. ಅವನ ಪ್ರತಿಭಾಚಕ್ಷುವಿಗೆ ನಿಲುಕದ್ದು ಇಲ್ಲವೇ ಇಲ್ಲವೆನ್ನಬಹುದು. ಕವಿ ಸಾಹಿತ್ಯದ ಸಾಧನಗಳನ್ನೆಲ್ಲ ಬಳಸಿ ಭಾಷಾ ಸಾಮರ್ಥ್ಯವನ್ನು ಸಂಪೂರ್ಣವಾಗಿ ಸೂರೆಗೊಳ್ಳುತ್ತಾನೆ. ಕುಮಾರವ್ಯಾಸನೂ ಈ ಮಾತುಗಳಿಗೆ ಹೊರತಲ್ಲ. ಕುಮಾರವ್ಯಾಸನಲ್ಲಿ ಶಾಸ್ತ್ರ ಜ್ಞಾನ ಮತ್ತು ಭಾಷಾ ಜ್ಞಾನಗಳೆರಡೂ ಹೊಂದಿಕೊಂಡು ಬರುವುದನ್ನು ಕಾಣಬಹುದು. ಅವನ ಕಾವ್ಯದಲ್ಲಿ ಅಲಂಕಾರಗಳ ಪಾಂಡಿತ್ಯ ಹಾಗೂ ಕನ್ನಡ ದೇಸೀಯ ಪ್ರತಿಭೆ ಎರಡೂ ಹಾಸುಹೊಕ್ಕಾಗಿವೆ. ಉಪಮೆ, ರೂಪಕ, ಪ್ರತಿಮೆ, ಪಡೆನುಡಿ, ಗಾದೆ, ಒಗಟು, ಬೈಗಳು ಎಲ್ಲವನ್ನೂ ಧಾರಾಳವಾಗಿ ಬಳಸುತ್ತಾನೆ. ಅವನ ಶಬ್ದಕೋಶವಂತೂ ಜೀವಂತಿಕೆಯಿಂದ ಪುಟಿಯುತ್ತದೆ. ಶಿಷ್ಟದೇಹದಲ್ಲಿ ಜಾನಪದ ಆತ್ಮ ಸೇರಿದ ಭಾಷೆ ಅವನದು. ಆಯಾ ಸಂದರ್ಭಗಳಿಗೆ, ಆಯಾ ವ್ಯಕ್ತಿಗಳಿಗೆ ತಕ್ಕಂತೆ ಅದು ಕನ್ನಡದ್ದೇ ಇರಲಿ ಇಲ್ಲವೇ ಸಂಸ್ಕೃತದ್ದೇ ಇರಲಿ, ವಿರೂಪಗೊಳಿಸಿದ 'ನರಯಣ'ನಂಥ ಪದವೇ ಇರಲಿ ಹಿಂದು ಮುಂದು ನೋಡದೆ ಸಹಜವಾಗಿ ಬಳಸಿಬಿಡುತ್ತಾನೆ. ಹಳ್ಳಿಗ ಹೇಗೆ ತನಗೆ ತೋಚಿದ್ದೆಲ್ಲವನ್ನೂ ಸ್ವಲ್ಪವೂ ಚಿಂತಿಸದೆ, ಹಿಂದು ಮುಂದು ನೋಡದೆ ದಿಢೀರನೆ ನುಡಿದು ಬಿಡುತ್ತಾನೋ, ಅದೇ ರೀತಿ ಕುಮಾರವ್ಯಾಸನೂ ಹೇಳುತ್ತಾನೆ. 'ಗಂಡರೋ ನೀವ್ ಷಂಡರೋ' ಎಂದು ಹೇಳಲೂ ಹಿಂದೆಗೆಯುವುದಿಲ್ಲ. 'ಷಂಡರೋ' ಎಂಬ ಪದ ಬಳಸಬಹುದೇ ಬಾರದೇ ಎಂಬ ಕಲ್ಪನೆಯೇ ಅವನಿಗೆ ಬರುವುದಿಲ್ಲ. ಏಕೆಂದರೆ ಆ ಪದವೇ ಅಲ್ಲಿಗೆ ಸೂಕ್ತ ಎಂದು ತಿಳಿದ ಅವನು 'ಗಂಡರೋ ನೀವ್ ಭಂಡರೋ' ಎನ್ನುವುದಿಲ್ಲ. ಕುಮಾರವ್ಯಾಸನ ಭಾಷೆಯ

ಶಿಷ್ಟರೂಪದ್ದಾದರೂ ಅದರಲ್ಲಿ ಜಾನಪದ ಸೊಗಡು ಹೇಗೆ ಅಂತರ್ಗತವಾಗಿದೆ ಎನ್ನುವುದನ್ನು ಅವನು ಬಳಸುವ ಪಡೆನುಡಿ, ಒಗಟು, ಗಾದೆ, ಬೈಗಳು ಮೊದಲಾದವುಗಳಲ್ಲಿ ನೋಡಬಹುದು. ಉದಾಹರಣೆಗೆ, ಕೌರವನು ಅಭಿಮನ್ಯುವಿನ ಸಾಹಸವನ್ನು ಕಂಡು 'ಸಿಡಿಲು ಜಂಗಮವಾಯಿತು. ಪ್ರಳಯದ ಮೃಡನು ಬಾಲಕನಾದನು, ಕೊಲೆಗಡಿಕನಹುದೊ ಕಂದ' (ದ್ರೋ.ಪ. ೬-೮) ಎನ್ನುತ್ತಾನೆ. ಸಾಲಸೋಲಗಳಿಗೆ ಬಡ್ಡಿ ವ್ಯವಹಾರಗಳಿಗೆ ಸಂಬಂಧಿಸಿದ ದಿನನಿತ್ಯದ ವ್ಯವಹಾರದ ಮಾತುಗಳನ್ನು ಸೊಗಸಾಗಿ ಅರ್ಥಪೂರ್ಣವಾಗಿ ಬಳಸುತ್ತಾನೆ.'ದಿವಿಜರ ಹೆಂಡಿರೋಲೆಯು ಕಳೆದು ಹೋಗಲಿ' (ಭೀ. ಪ. ೬-೭), 'ವಿರೋಧಿಯ ಲಲನೆಯರ ಶ್ರುತಿಪತ್ರ ಸೀಳಲಿ' (ಶ್ರುತಿಪತ್ರ ಎನ್ನುವುದಕ್ಕೆ ಸಾಲದ ಓಲೆ, ಕಿವಿಯ ಓಲೆ ಎಂಬ ಎರಡು ಅರ್ಥಗಳಿವೆ) ಇತ್ಯಾದಿ ಮಾತುಗಳನ್ನು ಗಮನಿಸಬಹುದು. ಹಣದ ವ್ಯವಹಾರದ ಪಾರಿಭಾಷಿಕ ಪದಗಳನ್ನು ಬಳಸಿದಂತೆಯೇ ವಿವಿಧ ಕ್ಷೇತ್ರಗಳಲ್ಲಿ ಕಂಡುಬರುವ ಪಡೆನುಡಿ, ಪಾರಿಭಾಷಿಕ ಪದಗಳನ್ನು ಕವಿ ಲೀಲಾಜಾಲವಾಗಿ ಬಳಸುತ್ತಾನೆ. 'ಆಜ್ಞೆಯ ತಡಿಕೆವಲೆ ನುಗ್ಗಾಯ್ತು', 'ಅಪಕೀರ್ತಿ ನಾರಿಯ ಸೆರಗ ಹಿಡಿದರು', 'ಕಾಲನ ಬನಕೆ ರಕುತದ ಕೆರೆಯ ತೂಬೆತ್ತಿದರು', 'ಸಾಗರವನರವಟ್ಟಿಗೆಯನಿಟ್ಟರೆ ವಡಬನಲ್ಲಾ ನೀರಕುಡಿವನು' - ಇಂಥ ಪಡೆನುಡಿಗಳನ್ನು ಎಲ್ಲೆಂದರಲ್ಲಿ ಕುಮಾರವ್ಯಾಸನ ಕಾವ್ಯದಲ್ಲಿ ಕಾಣಬಹುದು. ಕಾವ್ಯದುದ್ದಕ್ಕೂ ವೈವಿಧ್ಯಮಯ ಉಪಮೆಗಳನ್ನು ಅವನು ಬಳಸಿರುವುದನ್ನು ಕಾಣಬಹುದು. ''ನಭಕೀಡಾಡಿದನು ಹಿಡಿ ಬುಗುರಿಯಂದದಲಿ', 'ಆ ಲತಾಂಗಿಯ ಗಮನವೇ ಮಳೆಗಾಲದಂತಿರೆ ಧಾರ್ತರಾಷ್ಟ್ರ ಕುಲಾಳಿ ನಿಲುವುದೆ ಪವನಜನ ಸಂಪ್ರತಿಯ ಸೇರುವೆಗೆ' ಇತ್ಯಾದಿ.

ಸಮಯೋಚಿತ ದೃಷ್ಟಾಂತಗಳನ್ನು ಕುಮಾರವ್ಯಾಸನಲ್ಲಿ ಸಾಕಷ್ಟು ಕಾಣುತ್ತೇವೆ. ಚಿಂತಿಸಿದಷ್ಟೂ ಸೊಗಸನ್ನು ಕಾಣಿಸುವಂಥ ದೃಷ್ಟಾಂತಗಳನ್ನು ಕವಿ ಹೇಳುತ್ತಾನೆ. ಉದಾಹರಣೆಗೆ 'ಕರಕಸದ ನಡು ಬಡವಾದರೆಯು ಕೊಯ್ದಿಕ್ಕದೇ ತರುವ?' ಎಂದು ಶಕುನಿ ಹೇಳುವ ಮಾತು ಅರ್ಥಗರ್ಭಿತವಾದ ದೃಷ್ಟಾಂತವಾಗಿದೆ. ಗರಗಸದಿಂದ ಮರಕೊಯ್ಯುವ ದೃಶ್ಯ ಕಾಡಿನಲ್ಲಿ, ಹಳ್ಳಿಗಳಲ್ಲಿ ಕಾಣುವ ಸಾಮಾನ್ಯ ದೃಶ್ಯ. ಕವಿ ಅದನ್ನು ಇಲ್ಲಿ ಸಮರ್ಥವಾಗಿ ಬಳಸಿದ್ದಾನೆ.

ವಿದ್ಯಾಪರಿಣತರ ಅಲಂಕಾರವೆಂದು ಕವಿ ಹೇಳಿಕೊಂಡಿದ್ದರೂ., ಅಲಂಕಾರಗಳ ರೀತಿ ವಿದ್ಯಾಪರಿಣತರ ವಸ್ತುವಾದರೂ, ಅಲ್ಲಿ ಬಳಸುವ ಮಾತುಗಳು, ಗ್ರಾಮೀಣವಾಗಿರುವುದನ್ನು ಅನೇಕ ವೇಳೆ ಕಾಣಬಹುದು. "ಕಲಿತನಕೀಸು ಮೊಲೆಗಳು ಮೂಡಿದವಲಾ" (ಕ.ಪ. ೨೬-೩೧), 'ಹೊಡೆಸೆಂಡನಾಡಿದನಹಿತಮೋಹರವ' (ಶ.ಪ. ೩-೧೧), 'ಜವನ ಸಿವಡಿಗೆ ಹತ್ತಿದರು ನಿನ್ನಯ ಮಕ್ಕಳು ನೂರು' (ಗ.ಪ. ೩-೨೪), 'ಅಳಿಕುಳಾಳಕಿಯುಟ್ಟ ಸೀರೆಯ ನೂರುಮಧ್ಯದಲಿ ಸುಲಿಸಿದರು' (ಗ.ಪ. ೧೧-೬೨, ಇಲ್ಲಿನ ಶ್ಲೇಷಾರ್ಥ ಗಮನಾರ್ಹ)

ಪದಗಳ ಬಳಕೆಯಲ್ಲಿ ದೇಸಿತನವನ್ನು, ವೈವಿಧ್ಯವನ್ನು ಕಾಣಲು ಕವಿ ಕುಮಾರವ್ಯಾಸನನ್ನೇ ಮೊರೆಹೋಗಬೇಕು. ಶಬ್ದಸಂಪತ್ತಿನಲ್ಲಿ ಕುಮಾರವ್ಯಾಸನದು ಅಕ್ಷಯಪಾತ್ರೆ. ಅಷ್ಟೇ ಅಲ್ಲ ಅಪರೂಪದ ವಸ್ತು ಸಂಗ್ರಹಕಾರನಿದ್ದಂತೆ ಅಪೂರ್ವ ಶಬ್ದಗಳ ಬ್ರಹ್ಮ. ಈ ಮಾತಿಗೆ ಕೆಲವು ನಿದರ್ಶನಗಳನ್ನು ಅವನ ವಿಶಿಷ್ಟಾರ್ಥದ ಪದ ಬಳಕೆಯಲ್ಲಿ ನೋಡಬಹುದು. 'ಮಾತಿನ ಲಗ್ಗಿಗ' (ಬರಿ ಹರಟೆಯವನು, ಮಾತಿನ ಮಲ್ಲ) 'ಬೆಳ್ಳಾಳ ಹಬ್ಬುಗೆ (ಫಲವಿಲ್ಲದ ಬೆಳೆ), ಬೆರಳ ಬೆದಗ (ಕೈಗೂಳ ಕಾಯುವವನು) ಹದ್ದಿನ ಬಿದ್ದಿನನು (ಸಾವನ್ನು ಬಯಸುವವನು), ಅಳುಕಿನಂಗಡಿ (ಹೆಚ್ಚಾದ ಭಯ), ಶಠಾಗಮಿಕ (ಅತಿಕಪಟಿ) ಬರವಿಡಂಬನ (ವಂಚನೆ), ಬೆರಳುಗಳ ಬಾಯ್ ಮೂಗುರ್ಚಿಗಳು ಇತ್ಯಾದಿ. ದಿನ ಬಳಕೆಯ ಪದಗಳು ಕಾವ್ಯದಲ್ಲಿ ವಿಶಿಷ್ಟ ಸೊಬಗಿನ ಪದಗಳಾಗಿ ಬಳಕೆಯಾಗಿವೆ. ಉಂಡಾಡಿಭಟ್ಟ, ಜಗಭಂಡ, ಬಡಿಹೋರಿ, ಗಡ್ಡದುಪಾಧ್ಯ, ಹೆಣಮುಸುಡು, ಹೀಗೆ- ಪಟ್ಟಿಯ ರೂಪದಲ್ಲಿ ಶಬ್ದಮಾಲೆಯಂತೆ ಒಂದೇ ವರ್ಗದ ಪದಗಳನ್ನು ಕುಮಾರವ್ಯಾಸ ಬಳಸುವುದುಂಟು. ಆದಿಪರ್ವದಲ್ಲಿ ೨೦-೫೨, ೫೩) ಎರಡು ಪದ್ಯಗಳಲ್ಲಿ ೩೮ ಹಕ್ಕಿಗಳ ಹೆಸರುಗಳನ್ನು ಬಳಸಿದ್ದಾನೆ. ಕೌರವರು ಪಾಂಡವರು ಆಡಿದ ೧೪ ಮಕ್ಕಳಾಟದ ಹೆಸರುಗಳನ್ನು ಹೇಳಿದ್ದಾನೆ.

ಸಂಸ್ಕೃತದ ಪದಗಳನ್ನು ಅನುವಾದಿಸಿ ಅಚ್ಚ ಕನ್ನಡಪದಗಳನ್ನು ನಿರ್ಮಿಸುವುದರಲ್ಲಿ ಕುಮಾರವ್ಯಾಸನು ಎತ್ತಿದ ಕೈ. ಉದಾಹರಣೆಗೆ ನದಿಯಮಗ, ಬಂಡಿಯ ಬೋವ, ಕೊಡವನ ಮಗ, ಪನ್ನಗನ ಸಿರಿಮಂಚದಾತ, ಮಖದಯ್ಯ, ಇತ್ಯಾದಿ. ವಿಶೇಷ ತಾಂತ್ರಿಕ ಶಬ್ದಾರ್ಥದ ಪದಗಳಿಗೂ ಅವನಲ್ಲಿ ಕೊರತೆಯಿಲ್ಲ.

ಚೀಲಾಯ, ಜೋಳವಾಳಿ, ತವಲಾಯಿ, ನವಾಲ, ಬಳ್ಳಾಳದಡ್ಡಿ, ಮೇಗಾಳಿ ಇತ್ಯಾದಿ.

ಹೀಗೆ ಕನ್ನಡ ಶಬ್ದಬ್ರಹ್ಮನಾಗಿ ಕುಮಾರವ್ಯಾಸನು ಅಲಂಕಾರ ಚತುರನಾಗಿ ದೇಸೀಪ್ರಿಯನಾಗಿ, ಆದರೂ ಸಂಸ್ಕೃತದ ಪಾಂಡಿತ್ಯವನ್ನು ಅಲ್ಲಲ್ಲೇ ಪ್ರದರ್ಶಿಸುತ್ತಾನೆ. ಶಬ್ದದರಿದ್ರರಿಗೆ ಅನಂತ ಶಬ್ದನಿಧಿ ಕರುಣಿಸುವ ಶಬ್ದನಾರಾಯಣನಾಗಿದ್ದಾನೆ. ಇನ್ನು ಪಡೆನುಡಿ, ಬೈಗಳು,ಗಾದೆ, ಒಗಟು, ಇತ್ಯಾದಿಗಳನ್ನು ಮುಂದೆ ಪ್ರತ್ಯೇಕವಾಗಿ ವಿವರಿಸಿದೆ.

## ಪಡೆನುಡಿ

ಪ್ರತಿಯೊಂದು ಭಾಷೆಗೂ ಇತರ ಭಾಷೆಗಳಲ್ಲಿ ಕಂಡುಬರುವ ತಮ್ಮದೇ ಆದ ಕೆಲವು ವೈಶಿಷ್ಟ್ಯಗಳಿರುತ್ತವೆ. ಇಂಥ ವೈಶಿಷ್ಟ್ಯಗಳನ್ನು ಅಭಿವ್ಯಕ್ತಗೊಳಿಸುವ ಸಾಧನಗಳಲ್ಲಿ ಪಡೆನುಡಿಯೂ (ನುಡಿಗಟ್ಟು) ಒಂದು. 'ಪಡೆನುಡಿ' ಎಂಬ ಮಾತನ್ನು ಇಂಗ್ಲೀಷಿನ ಈಡಿಯಂ (Idiom) ಎಂಬ ಮಾತಿಗೆ ಸಮಾನಾರ್ಥಕವಾಗಿ ಬಳಸುತ್ತಾರೆ. 'ಪಡೆನುಡಿ' ಎಂದರೆ ಶಂ.ಬಾ. ಅವರು ಹೇಳುವಂತೆ "ಯಾವುದೇ ಭಾಷೆಯ ಸಾರವೇ ಅದರ ದೇಸಿ, ಆ ದೇಸೀಯ ಸಾರ ಅದರ ಪಡೆನುಡಿ, ಆದ ಕಾರಣ 'ಪಡೆನುಡಿ' ಎಂದರೆ ನುಡಿಯ ಕೆನೆಯಿದ್ದಂತೆ."[೧] ಪಡೆನುಡಿಗಳು ಒಂದು ಭಾಷೆಯ ಶಾಶ್ವತ ಸತ್ಯವನ್ನು ಎತ್ತಿಹಿಡಿಯುವುದರಿಂದ ಎಲ್ಲ ಕಾಲದಲ್ಲೂ ಅದು ಚಲಾವಣೆಯಲ್ಲಿರುತ್ತವೆ. ಜನಜೀವನದ ಅನುಭವದಿಂದ ಮೂಡಿ ಬರುವ ನುಡಿಗಳಾದ್ದರಿಂದ ಪದದಲ್ಲಿ ಬದಲಾವಣೆಯಾದಂತೆ ಕಾಲಕಾಲಕ್ಕೆ ಪಡೆನುಡಿಗಳೂ ಅಲ್ಪಸ್ವಲ್ಪ ಬದಲಾವಣೆಯನ್ನು ಹೊಂದುವುದುಂಟು. ಆದರೆ ಮೂಲಭೂತವಾಗಿ ಪಡೆನುಡಿಗಳು ಸಾಕಷ್ಟು ಪ್ರಮಾಣದಲ್ಲಿ ಸತತವಾಗಿ ಭಾಷೆಯಲ್ಲಿ ಉಳಿದು ಬಂದಿರುವುದರಿಂದ (ಪದರೂಪಗಳು ಅಲ್ಪ ಸ್ವಲ್ಪ ವ್ಯತ್ಯಾಸಗೊಂಡರೂ) ನಮಗೆ ಪಂಪನ ಕಾವ್ಯ ಸತ್ವ, ವೈಶಿಷ್ಟ್ಯಗಳು ಇಂದೂ ಅರ್ಥಮಾಡಿಕೊಳ್ಳಲು ಸಾಧ್ಯವಾಗಿದೆ. ಆದ್ದರಿಂದ ಪಡೆನುಡಿಯ ಅಭ್ಯಾಸ ಕಾವ್ಯಾಧ್ಯಯನಕ್ಕೆ ಅತ್ಯಗತ್ಯ.

ಕೇವಲ ಭಾಷೆಯ ರೂಪಬದಲಾವಣೆಯಿಂದ ಮಾತ್ರವಲ್ಲ, ಜನಜೀವನದಲ್ಲಿ ಆದ ಬದಲಾವಣೆಯಿಂದಾಗಿಯೂ ಕೆಲವು ಪಡೆನುಡಿಗಳು

೧. ಕಂನುಡಿಯ ಹುಟ್ಟು: ಡಾ. ಶಂ.ಭಾ. ಜೋಶಿ ಪು. ೧೨೯

ಮೂಲಾರ್ಥವನ್ನು ಕಳೆದುಕೊಂಡಿವೆ. ಉದಾಹರಣೆಗೆ, ಕೈಬೀಸು, ಕೈಕೊಡು, ಕೈಯಿಡು ಇತ್ಯಾದಿ. ಒಟ್ಟಿನಲ್ಲಿ ಪಡೆನುಡಿಗಳ ಬಳಕೆಯಿಂದ ಭಾಷೆ ರಂಗೇರುವುದರ ಜೊತೆಗೆ ಭಾವ ಅನ್ವರ್ಥಕವಾಗಿ ಮೂಡುವುದಲ್ಲದೆ, ಬದುಕಿನಲ್ಲಿ ಕಾಣುವ ಅನುಭವ ನಮಗೆ ನೇರವಾಗಿ ನಾಟುತ್ತದೆ. ಕುಮಾರವ್ಯಾಸನಲ್ಲಿ ಸಂಸ್ಕೃತ ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಬಗೆಬಗೆಯ ನುಡಿಗಳನ್ನು, ಪದಪುಂಜಗಳನ್ನು ಕಾಣುತ್ತೇವೆ. ಇವುಗಳ ಪೈಕಿ ಸಂಸ್ಕೃತದ ಸಮಾಸ ಪದಗಳು, ಕನ್ನಡದ ಪಡೆನುಡಿಗಳೂ ನಮ್ಮ ವಿಶೇಷ ಗಮನವನ್ನು ಸೆಳೆಯುತ್ತವೆ. ಕನ್ನಡ ಮತ್ತು ಸಂಸ್ಕೃತಗಳ ಸಮನ್ವಯ 'ಮುತ್ತು ಮೆಣಸುಂ ಕೋದಂತಿರೆ' ಆಗಿರದೆ "ಅಕ್ಲಿಷ್ಟ, ಪ್ರಸನ್ನ, ಆಕರ್ಷಕ, ಬಹುತೇಕ ದ್ರಾಕ್ಷಾಪಾಕ ಆಗಿದೆ"[೧] ಇದಕ್ಕೆ ಮುಖ್ಯ ಕಾರಣವೆಂದರೆ ಗ್ರಾಮ್ಯ- ಅಗ್ರಾಮ್ಯಗಳ ಭೇದವಿಲ್ಲದೆ, ಆಡುನುಡಿಯನ್ನು ಅಚ್ಚುಕಟ್ಟಾಗಿ ಕಾವ್ಯಭಾಷೆಯಲ್ಲಿ ಅಳವಡಿಸಿಕೊಂಡಿರುವುದು. ಸಾರ್ವಕಾಲಿಕ ಸತ್ವವುಳ್ಳ ಭಾಷೆಯನ್ನು ಬಳಸಿರುವ ರೀತಿ ಕಾಲ ದೇಶಗಳ ಎಲ್ಲೆಕಟ್ಟನ್ನು ಮೀರಿ ಜನಪದದ ಅಂತಸ್ಸತ್ವವನ್ನು ಎತ್ತಿಹಿಡಿದಿರುವ ಬಗೆ ಕುಮಾರವ್ಯಾಸನ ಜನಪ್ರಿಯತೆಗೆ ಕಾರಣವಾಗಿದೆ.

ಕುಮಾರವ್ಯಾಸನ ಕಾವ್ಯದಲ್ಲಿ ಕಂಡುಬರುವ ಪಡೆನುಡಿಗಳಲ್ಲಿ ವ್ಯಕ್ತಿ ಸಂಬಂಧಿತ ಪಡೆನುಡಿಗಳು, ಕ್ರಿಯಾಪದಗಳನ್ನುಳ್ಳ ಪಡೆನುಡಿಗಳೂ, ಶರೀರದ ಅಂಗಗಳಿಗೆ ಸಂಬಂಧಿಸಿದ ಪಡೆನುಡಿಗಳು, ವಾಕ್ಯಾಂಶಗಳ ಪಡೆನುಡಿಗಳು ಇವೇ ಮೊದಲಾದ ಹಲವು ಬಗೆಗಳನ್ನು ಕಾಣಬಹುದಾಗಿದೆ. ಇವುಗಳಲ್ಲಿ ಕೆಲವು ಅರ್ಥವ್ಯತ್ಯಾಸಗಳನ್ನು ಹೊಂದಿದ್ದರೂ, ಕುಮಾರವ್ಯಾಸನ ಕಾವ್ಯದಲ್ಲಿ ಬಹುತೇಕ ಪಡೆನುಡಿಗಳು ಮೂಲಾರ್ಥದಲ್ಲೇ ಬಳಕೆಯಾಗಿವೆ. ಇಡೀ ಕಾವ್ಯದ ಉದ್ದಕ್ಕೂ ಎಲ್ಲೆಂದರಲ್ಲಿ ಪಳಂಚಿನೆ ಮಿಂಚುವ ಪಡೆನುಡಿಗಳನ್ನು ಆಮೂಲಾಗ್ರವಾಗಿ ವಿಶ್ಲೇಷಿಸುವುದು ಸುಲಭವಲ್ಲ. ಇಲ್ಲಿ ಸಾಂದರ್ಭಿಕವಾಗಿ ಕೆಲವು ನುಡಿಗಟ್ಟುಗಳನ್ನು ಗಮನಿಸಿ, ಮಾದರಿಗಾಗಿ ಉಲ್ಲೇಖಿಸಲಾಗಿದೆ:

ಗಡ್ಡದುಪಾಧ್ಯ (ಆ.ಪ. ೧೫-೨೦), ಮಟ್ಟೆಯಮದನ (ಆ.ಪ. ೧೫-೨೧) ಉಂಡಾಡಿಭಟ್ಟ (ಉ.ಪ. ೧-೩೬) ಜಗಭಂಡ (ದ್ರೋ. ಪ. ೧೦-೪೩)

---

೧. ಕುಮಾರವ್ಯಾಸ ಭಾರತ: ಒಂದು ನೋಟ - ಸಿ.ಪಿ.ಕೆ. ಪು. ೮೩.

ಬಡಿಹೋರಿ (ವಿ..ಪ. ೩-೬೧), ನಾಡನರಿ (ವಿ.ಪ. ೬-೧೬) ತುರುಗಳ್ಳ (ವಿ.ಪ. ೭-೪೦) ಜಯಕಾಮುಕ (ಕ.ಪ. ೨೬-೩೫), ಮಿಡುಕುಳ್ಳಗಂಡ (ವಿ.ಪ. ೩-೩೪) ಮೈವಳಿಯ ನುಡಿಗಾರ (ಸ.ಪ. ೧೫-೯) ಅಡವಿಯ ಮೇಹುಗಾರರು (ಭೀ.ಪ. ೧-೧೧) ಕಂಗುರುಡ (ಅ.ಪ. ೨-೨೧), ನಾಡಗಾವಳಿಗಾರ (ಭೀ.ಪ. ೧-೪)ಚಾಪದನಾರಿ (ದ್ರೋ.ಪ. ೨-೩೩)

ಈರೆಲೆಯಾಗು (ಅ.ಪ. ೮-೩೬), ಎಡೆಮುರಿದವರು (ವಿ.ಪ. ೩-೫೩) ತಾಳಿಗೆ ನೀರು ತೆಗೆದುದು (ವಿ.ಪ. ೬-೯), ಭಾಷೆ ಸಂದುದು (ವಿ.ಪ. ೧-೨೮) ಒಕ್ಕಲಿಕ್ಕು (ವಿ.ಪ. ೭-೭), ಕದ್ದಾಡುವಿರಿ(ಉ.ಪ. ೮-೩೭) (ಇತ್ತೀಚಿಗೆ ಪತ್ರಿಕೆಗಳಲ್ಲಿ ಬಳಕೆಯಾದ 'ಕದ್ದಾಲಿಕೆ' ಪದದ ಮೂಲ ರೂಪವೇ ಇದು?), ತೋಳುಮುರಿದುದೆ' (ವಿ.ಪ. ೩-೫೩), ಮಾತುಗಳು ಹಳಸುವವೆ (ಕ.ಪ. ೨೬-೩೪), ಧರ್ಮದ ಮೊಸಲಳಿಯದೆ (ಸ.ಪ. ೧೫-೯), ಸವಡಿವೇಟ (ಸ.ಪ. ೧೫-೯) ತರಚುಗೆಡೆ (ಸ.ಪ. ೧೫-೧೧), ನೆಗ್ಗೊತ್ತು (ವಿ.ಪ. ೬-೪೯) ನಗುಹೋಗು (ಉ.ಪ. ೯-೩೪), ತೂರಂಬು (ಕ.ಪ. ೧೭-೩೨) ನಾಲಿಗೆಯ ಸಾಲ (ಕ.ಪ. ೨-೧೬) ಬೆರಳುಗಳ ಬಾಯ್ (ಸ.ಪ. ೯-೩೦) ಕಣ್ಣೆವೆಸೀಯೆ (ವಿ.ಪ. ೬-೯), ಅಧರ್ಮದ ಕುತ್ತುತಲೆ (ಅ.ಪ.೨೧-೬೯) ಕಾಲುಮೆಟ್ಟು (ಆ.ಪ.೮-೧), ಸಾಣೆಗಂಡಲಗು (ಕ.ಪ. ೧೬-೨೦)

ಮೊಸೆಯೇಕಿವ ಸುಡಲಿ (ಕ.ಪ. ೧೩-೩), ನಿಮ್ಮಯ ಬಾಯ ತಂಬುಲ ತಿಂದವನು (ದ್ರೋ.ಪ. ೧೭-೩೮), ಈ ನಪುಂಸಕರೊಡನೆ ಹುಟ್ಟಿದ ನಾನು ಮೂಗುಳ್ಳವನೆ (ವಿ.ಪ. ೩-೪೮) ಅರಿವು ತಳಕೆಳಕಾಯ್ತು (ವಿ.ಪ. ೨-೧೨), ನಿಮ್ಮೊಳಗೆ ನೀವ್ ಕೈಗೂಡಿ ಬದುಕುವುದೊಳ್ಳಿತು (ಉ.ಪ. ೧-೨೯) ಸೋಲವಿದು ಕಾಲಾಂತಕನ ಮೈಸಾಲ (ಸ.ಪ. ೧೩-೩೦), ಕಲಿತನವ ನೀರೊಳು ಕಲಕಿದೈ (ಉ.ಪ. ೬-೧೯), ಬಾಯ್ದಂಬುಲಕೆ ಕೈಯಾನುವರೆ (ಉ.ಪ. ೧೦-೮) ಬಾಯದಂಬುಲ ಬೀಳುವಡೆಯ ಬಲದಿಂದ ಬದುಕುವೆವು (ಗ.ಪ. ೧೧-೫೫) ಕೆಂಡದಲಿ ಕರ್ಪೂರವ ಹಾಯ್ಕಿದಿರಿ (ಕ.ಪ. ೨೨-೪೧) ನಿಮ್ಮಗರುಡಿಯೊಳೆಮಗೆ ಶ್ರಮವುಂಟು ಸೈರಣೆಗಾಯ್ತು ಮಹಾನವಮಿ

ಇದೇ ರೀತಿಯಾಗಿ ಪ್ರಾಣಿ, ವನಸ್ಪತಿ, ಧರ್ಮ, ಇತಿಹಾಸ, ಪುರಾಣಗಳಿಂದಲೂ ಪಡೆದುಕೊಂಡ ನೂರಾರು ಪಡೆನುಡಿಗಳುಂಟು. ಈ ಪಡೆನುಡಿಗಳು ಕನ್ನಡದಲ್ಲಿ "ಬಂದ ನುಡಿಗಳು: ಮಾಡು ನುಡಿಗಳಲ್ಲ."[೧] ನಿರ್ದಿಷ್ಟ ಪ್ರಯೋಗಗಳನ್ನೊಳಗೊಂಡ ಪದಗಳ ಪಡೆನುಡಿಗಳನ್ನೂ ಕನ್ನಡದಲ್ಲಿ ಕಾಣುತ್ತೇವೆ.

ಒಟ್ಟಿನಲ್ಲಿ ಕುಮಾರವ್ಯಾಸನ ನುಡಿಗಟ್ಟು- ಪಡೆನುಡಿಗಳ ಪ್ರಯೋಗಗಳನ್ನು ಕಂಡಾಗ ಅವನು "ದಿನಬಳಕೆಯ ಜೀವಂತಭಾಷೆಯ ಭಾಂಡಾರದಿಂದ ದೇಶೀಯ ಪದ ಪುಂಜಗಳನ್ನೆತ್ತಿಕೊಂಡು, ಬೇಕಾದಾಗ ತನ್ನ ಸ್ವಂತ ಪದ ರಚನೆಗಳನ್ನು ತನ್ನ ಕಲ್ಪನೆಯ ಟಂಕಸಾಲೆಯಲ್ಲಿ ಮುದ್ರಿಸಿ ಚಲಾವಣೆಗೆ ತಂದಿದ್ದಾನೆ ಎನ್ನಲಡ್ಡಿಯಿಲ್ಲ."[೨]

## ಬೈಗಳು

ಕಥೆ, ಒಡಪು, ಒಗಟು, ಗಾದೆ ಮುಂತಾದ ಜನಪದ ಪ್ರಕಾರಗಳಂತೆ ಬೈಗಳೂ ಒಂದು ಜನಪದ ಪ್ರಕಾರ. ಬೈಗಳನ್ನು ನಿತ್ಯ ಜೀವನದಲ್ಲಿ ಕಾಣುವಂತೆ ಸಾಹಿತ್ಯದಲ್ಲೂ ಕಾಣುತ್ತೇವೆ. ಇದನ್ನು ಜನಪದ ಆಚರಣೆಗಳಲ್ಲೂ ಕಾಣುತ್ತೇವೆ. ಕೆಲವು ಗ್ರಾಮದೇವತೆಯ ಜಾತ್ರೆಗಳಲ್ಲಿ ಕೊನೆಯದಿನ "ಆಸಾದಿ" ಎಂಬ ಮೇಲ್ವರ್ಗಕ್ಕೆ ಸೇರಿದವರನ್ನು ಬೈಯುವ ಮತ್ತು ಉಗುಳುವ ಪದ್ಧತಿಯನ್ನು ಕಾಣುತ್ತೇವೆ. ಇದನ್ನು ಜಾತೀಯವಾಗಿ ಗಮನಿಸದೆ, ವೈಯಕ್ತಿಕವಾಗಿ ಪರಿಗಣಿಸದೆ, ಒಂದು ಧಾರ್ಮಿಕ ಆಚರಣೆಯ ಅಂಗವೆಂದು ಭಾವಿಸಲಾಗುತ್ತದೆ.[೩]

ಬೈಗಳು ಶಬ್ದದ ಮೂಲ "ಬಯ್". ಇದಕ್ಕೆ ಕಠಿನವಾಗಿ ನುಡಿ, ಕೆಟ್ಟ ಮಾತನಾಡು ಎಂಬರ್ಥವಿದೆ. ಇದೊಂದು ದೇಸಿ ಪದ. ಈ ಶಬ್ದ ತಮಿಳು, ಕೊಡವ ಭಾಷೆಗಳಲ್ಲಿ ಪ್ರಚಲಿತದಲ್ಲಿದೆ. ಈ ಪದಕ್ಕೆ ಜರಿಯುವಿಕೆ, ತೆಗಳುವಿಕೆ, ಕಠಿಣವಾಗಿ ನುಡಿಯುವಿಕೆ, ಮೂದಲಿಕೆ ಹೀಗಳೆಯುವಿಕೆ, ಶಾಪ, ಆಕ್ರೋಶ- ಮೊದಲಾದ ಹಲವಾರು ಅರ್ಥಗಳಿವೆ. ಕುಮಾರವ್ಯಾಸನ ಕಾವ್ಯದಲ್ಲಿ ಹಲವಾರು ಕಡೆ ಈ ಪದದ ವಿವಿಧ ರೂಪಗಳು ಬಳಕೆಯಾಗಿವೆ. ಉದಾಹರಣೆಗೆ "ಹರಿಯ ಬಯ್ಗಳು ಬೆದರಿಸಲು...." (ದ್ರೋ. ಪ. ೧೯-೪೦)

---

೧. ಕಂನುಡಿಯ ಹುಟ್ಟು : ಡಾ. ಶಂಭಾ. ಜೋಶಿ, ಪು. ೧೬೧

೨. ಕುಮಾರವ್ಯಾಸ ನಿಘಂಟು, ಎನ್ಕೆ. ಪು. ೭೩.

೩. ವಿವರಗಳಿಗೆ ನೋಡಿ: ಕನ್ನಡ ಜಾನಪದ ವಿಶ್ವಕೋಶ, ಸಂ. ೨, ಪು. ೧೩೭೭

"......ಕಡುರವದ ರಿಪುಭಟರ **ಬೈಗುಳ** ಗೌರುಗಹಳೆಗಳ....." (ದ್ರೋ.ಪ. ೯-೧೨), "ಬಯ್ಕಲರಿವೆ ದುರುಕ್ತಿ ಶರದಲಿ......" (ದ್ರೋ.ಪ. ೧೫-೫೬)

"......ರಿಪು ಭೂಪಾಲಕರ **ಬೈಬೈದು** ಗಜರಿದ......" (ದ್ರೋ. ಪ. ೪-೫೨)

"......ಕೆಣಕಿ **ಬೈದಾಡಿದರು**......" (ಕ.ಪ. ೯-ಸೂಚನಾಪದ್ಯ)

"......ನಾಯಕರ ಕಡೆನುಡಿವ **ಬೈಗುಳ**....." (ಕ.ಪ. ೨-೧೩)

"ಬಯ್" ಶಬ್ದಕ್ಕೆಬಯ್ಯು, ಬೈಯು, ಬೈ ರೂಪಗಳೂ, "ಬೈಗಳು" ಶಬ್ದಕ್ಕೆ ಬೈಗುಳ, ಬಯ್ಗಳ, ಬಯ್ಗುಳ, ಬಯ್ಗುಳು ರೂಪಗಳೂ ಕಾವ್ಯಗಳಲ್ಲಿ ಮತ್ತು ಆಡು ಮಾತಿನಲ್ಲಿ ಬಳಕೆಯಾಗುವುದನ್ನು ಕಾಣಬಹುದು. ಅಂತೆಯೇ ಬೈಯ್ದಾಡು, ಬೈಯ್ದಾಟ ಮೊದಲಾದ ರೂಪಗಳೂ ಬಳಕೆಯಾಗಿವೆ. ಬೈಗಳನ್ನು ಅಶ್ಲೀಲ, ಗ್ರಾಮ್ಯ ಎಂದು ಹೇಳುವುದುಂಟು. ಆದರೆ ವಾಚ್ಯಾರ್ಥಕ್ಕಿಂತ ಹೆಚ್ಚಾಗಿ ಸಾಂದರ್ಭಿಕ ಮತ್ತು ನಿಯೋಗಾತ್ಮಕ ಅರ್ಥಗಳನ್ನು ಒಳಗೊಂಡು, ಸಾಂಸ್ಕೃತಿಕ, ಮನೋವೈಜ್ಞಾನಿಕ, ಸಾಮಾಜಿಕ ಪರಿಣಾಮಗಳನ್ನುಂಟುಮಾಡುವ ಬೈಗಳನ್ನು ಆಯಾ ಸನ್ನಿವೇಶ ಹಾಗೂ ವ್ಯಕ್ತಿಗಳನ್ನು ಗಮನಿಸಿದಾಗ ಅದು ಗ್ರಾಮ್ಯವೇ ಶಿಷ್ಟವೇ ಎಂಬುದು ನಿರ್ಧಾರವಾಗುತ್ತದೆ.

"ಯಾವುದೇ ಪೋಲಿ ಪದ ಅಥವಾ ಬೈಗಳು ಎದುರಾಳಿಯನ್ನು ಮಾನಸಿಕವಾಗಿ ನೋಯಿಸುವ ಹೋರಾಟದ ಅಸ್ತ್ರವಾಗಿ ಒಂದು ತುದಿಯಲ್ಲಿ ಬಳಕೆಯಾದರೆ ಮತ್ತೊಂದು ತುದಿಯಲ್ಲಿ ಸ್ನೇಹ-ಪ್ರೀತಿ-ಮೆಚ್ಚುಗೆಯ ರೂಪದಲ್ಲಿ ಸ್ನೇಹಿತನಿಗೆ, ಮಗನಿಗೆ ಬಳಕೆಯಾಗುವುದನ್ನು ನೋಡಬಹುದು."[೧] ಕುಮಾರವ್ಯಾಸ ಅಂಬಿಗರ ಚೌಡಯ್ಯ ಮುಂತಾದವರು ತಮ್ಮ ಕೃತಿಗಳಲ್ಲಿ ಸಾಕಷ್ಟು ಬೈಗಳನ್ನು ಸಮಯೋಚಿತವಾಗಿ ಬಳಸಿದ್ದಾರೆ. ಈ ಪೈಕಿ ಕುಮಾರವ್ಯಾಸ ತನ್ನ ಕಾವ್ಯದಲ್ಲಿ ಬಳಸಿರುವ ಬೈಗಳು ವಿಶಿಷ್ಟವಾಗಿವೆ. ಬೈಗಳ ರೂಪ ಗ್ರಾಮ್ಯವೆನಿಸಿದರೂ ಅರ್ಥ ರಸೋತ್ಕರ್ಷವಾಗಿ, ಔಚಿತ್ಯಪೂರ್ಣವಾಗಿ ಹೊರಹೊಮ್ಮಿದೆ.

---

೧. ಕನ್ನಡ ಜಾನಪದ; ಕೆಲವು ಮುಖಗಳು - ಟಿ.ಎಸ್. ಸತ್ಯನಾಥ್, ಪು. ೧೦೨.

ಕುಮಾರವ್ಯಾಸನು ಯುದ್ಧ ಸಂದರ್ಭದಲ್ಲಿ ಬೈಗಳನ್ನು ಆಡುಮಾತಿನ ಶೈಲಿಯಲ್ಲಿ ಗ್ರಾಮೀಣಜನರ ಪದಪ್ರಯೋಗಗಳಲ್ಲಿ ಬಳಸುತ್ತಾನೆ. ಬೈಗಳಲ್ಲಿ ಅವನಿಗೆ ಮಡಿವಂತಿಕೆಯಿಲ್ಲ. ಸಂಸ್ಕೃತ, ಕನ್ನಡ, ಮರಾಠಿ ಭಾಷಾ ಪದಗಳನ್ನು ಬಳಸುವುದರ ಜೊತೆಗೆ ಕಾವ್ಯಮಯ ಶೈಲಿಯಲ್ಲೂ ಬೈಗಳನ್ನು ಪ್ರಯೋಗಿಸುತ್ತಾನೆ. "ಕೌರವನ ಬುದ್ಧಿ ವಿಟಾಳಿಸಿತೆ" (ವಿಟಾಳಿಸು' ಎಂದರೆ ಬಹಿಷ್ಕೃತವಾಗುವುದು ಎಂದರ್ಥ) ಎಂಬ ಮಾತಿನಲ್ಲಿ 'ವಿಟಾಳಿಸು' ಎಂಬ ಪದ ಮರಾಠೀ ಪ್ರಯೋಗವಾಗಿದೆ. "ಎಲವೋ ಭಂಡರ ಭಾವ, ಖೂಳರ ನಿಲಯ, ಗಾವಿಲರೊಡೆಯ ನೀನಾವನೆಂಬುದನಿಳೆಯರಿಯದೇ ಭಂಡ, ಫಡ, ಹೋಗು" ಎಂಬ ಈ ಬೈಗಳಲ್ಲಿ ಸಂಸ್ಕೃತ- ಕನ್ನಡ ಪದ ಪ್ರಯೋಗಗಳನ್ನು ಕಾಣಬಹುದು. ರಣರಂಗದಲ್ಲಿ ಸೈನಿಕರಿಂದ ಹಿಡಿದು ಸೇನಾಪತಿಗಳವರೆಗೆ ಒಬ್ಬರನ್ನೊಬ್ಬರು ಹೀಯಾಳಿಸುವ, ಛೇಡಿಸುವ, ದೂಷಿಸುವ, ಹೀನೈಸುವ ಬೈಗಳನ್ನು ಕಾಣುತ್ತೇವೆ. ಈ ಬೈಗಳಲ್ಲಿ ಗ್ರಾಮ್ಯ ಪದಗಳೂ, ಗ್ರಾಮ್ಯಾರ್ಥಗಳೂ ಧಾರಾಳವಾಗಿ ಕಂಡುಬರುತ್ತವೆ. ಭೀಷ್ಮನು ಶಿಶುಪಾಲವಧಾ ಪ್ರಸಂಗದಲ್ಲಿ ರಾಜರನ್ನು ಹೀಗೆ ಜರಿಯುತ್ತಾನೆ. "ಇರಿದು ನೀವ್ ಕೊಲಲಾರದಿದ್ದರೆ ನೆರೆ ಭಟಾಗ್ನಿಯೊಳುರುಹದಿದ್ದರೆ, ಕೆರಹು, ನಿಮ್ಮಯ ಬಾಯಲಿ" (ಸ.ಪ. ೧೦-೫೨) ಎನ್ನುತ್ತಾನೆ. ವಚನಕಾರರಲ್ಲಿ ಅಂಬಿಗರ ಚೌಡಯ್ಯನು ತನ್ನ ವಚನಗಳಲ್ಲಿ ಕೆರಹಿನ ಪ್ರಯೋಗವನ್ನು ವಿಶೇಷವಾಗಿ ಬಳಸುವುದನ್ನು ಗಮನಿಸಬಹುದು. ಜಾನಪದರ ನಿತ್ಯಜೀವನದ ಜಗಳವಾಡುವ ಸಂದರ್ಭಗಳಲ್ಲಿ ಕೆರಹು, ಪಾಪಾಸು, ಚಪ್ಪಲಿ ಮುಂತಾದವುಗಳ ಪ್ರಯೋಗಗಳನ್ನು ಇಂದೂ ಕಾಣಬಹುದು. ಎನ್ಕೆ ಅವರು ಹೇಳಿದಂತೆ "ಒಮ್ಮೊಮ್ಮೆ ಪಾತ್ರದ ಗಣನೆಯಿಲ್ಲದೆ ಗ್ರಾಮ್ಯ ನುಡಿಗಳನ್ನಾಡುವುದರಲ್ಲಿ ನಾರಣಪ್ಪ ಪ್ರಾಕೃತನಂತೆಯೂ ನಡೆದುಕೊಳ್ಳುತ್ತಾನೆ" ಎಂಬ ಮಾತು ನಿಜವಾದರೂ ದೇಸೀಯ ಮನೋಜ್ಞ ಪ್ರಯೋಗವನ್ನು ಇಲ್ಲಿ ಕಾಣುತ್ತೇವೆ.

"ಓಟವೇ ಅಪಜಯದ ಬೊಡ್ಡಿಯ ಬೇಟವೇ" (ವಿ.ಪ. ೮-೨೯) "ಬೊಡ್ಡಿಯ ಕೊಬ್ಬ ನಿಲಿಸುವೆನು" (ಕ.ಪ. ೨೩-೨೬) "ಎಲೆ ನಪುಂಸಕ ಧರ್ಮಸುತ" (ಸ.ಪ. ೨-೩೬) "ಹುಟ್ಟಿದೆಯೊ ಹಾದರಕೆ ಕ್ಷತ್ರಿಯ ಬೀಜವೋ ನೀನು" (ವಿ.ಪ. ೬-೧೭), "ಏತಕೀ ಸೂಳೆಯರು ಕ್ಷತ್ರಿಯ ಜಾತಿಯಲಿ ಜನಿಸಿದರು" (ಕ.ಪ. ೧೫-೩೩), "ಸುರಪುರದ ಸೂಳೆಯರ ಪಡಿಗವನಿರಿಸುವರು

ಗಂಧರ್ವರವದಿರ ಕರುಳ ತಿಂಬೆವು'' (ಅ.ಪ.೨೧-೬೭), "ಉಂಡು ಮೇಣುಟ್ಟೊಲಿದು ಬದುಕುವ ಭಂಡತನವೆನಗಿಲ್ಲ" (ವಿ.ಪ. ೭-೨೫), "ಗಂಡುಗಲಿಗಳೊ ವೀರ ಸಿರಿಯುಳಿಮಿಂಡರೋ ತನಿನಗೆಯ ಭಂಡರೋ" (ಶ.ಪ. ೨-೫೦), "ಹಗೆ ನೆತ್ತರಲಿ ನೀರೊಡು" (ಕ.ಪ. ೨೪-೧೧), "ನಿಮ್ಮ ಹೆಂಡಿರ ಕರುಳ ಕೈದೊಳಸಿಂಗೆ ಕಾತರಿಸುತಿದೆ" (ಅ.ಪ. ೧೨-೩೦), "ಆಟವಿಕದಳ ಹೊಯ್ದು ಮಿಂಡರವಿಂಟನೊತ್ತಿದರು" (ಅ.ಪ. ೧೮-೩೮) "ಮುಸುಡನಮರಾದ್ರಿಯಲಿ ತೇವೆನು" (ವಿ.ಪ. ೩-೬೮), "ಅಪಜಯ ಸ್ತ್ರೀ ವಿಟನೆ" (ವಿ.ಪ. ೮-೧೪), "ನಿನ್ನ ಬೇರನು ಕಿತ್ತು ಕಡಲೊಳು ತೊಳೆವ ರಿಪುಭಟ ಮೃತ್ಯು" (ವಿ.ಪ. ೮-೧೭), "ಮುತ್ತಯನು ಮಾಡಿದ ನಿಯೋಗದ ತತ್ತವಣೆ ಲೇಸಾಯ್ತು" (ವಿ.ಪ. ೭-೨೮), ಮೋಹರವ ಮುರಿದು ಹರಿಬವ ಮರಳಿಚುವ ಮಿಡುಕ್ಕುಳ್ಳವೀರರ ಬರಹೇಳು (ವಿ.ಪ. ೭-೫೨), "ತರಿದು ತಿರಕಲ್ಲಾಡುವೆನು ನಿಮ್ಮರುವರ್ರೈವರ ಶಿರವನು" (ವಿ.ಪ. ೮-೭೩), "ಏಕೆ ನುಡಿಸಿದೆ ಕರ್ಣ ಬೂತಿನಬೀಕಲಿನ ಬದಗಿಯನು" (ಸ.ಪ. ೧೫-೧೪), ಈ ಬೊಡ್ಡಿಗೋಸುಗ ಸುಟ್ಟು ಸುಕೃತವನು" (ಭೀ.ಪ. ೭-೨೯), "ತೋಳ ತೀಟೆಯನವನ ನೆತ್ತಿಯ ಮೇಲೆ ಕಳೆವೆನು" (ಭೀ.ಪ. ೧-೬೧), ಇತ್ಯಾದಿ.

ರಣರಂಗದಲ್ಲಿ ಶತ್ರುಗಳು ಪರಸ್ಪರ ಒಬ್ಬರನ್ನೊಬ್ಬರು ದೂಷಿಸುವ ಸಂದರ್ಭಗಳಲ್ಲಿ ಬಳಸುವ ಬೈಗಳನ್ನು ಗಮನಿಸಿದರೆ, ಅವು ಪುರುಷರನ್ನೇ ಉದ್ದೇಶಿಸಿದ್ದರೂ ಸ್ತ್ರೀ ಮೂಲವಾದ ನಡತೆಗೆಟ್ಟ ಇಲ್ಲವೇ ದುಷ್ಟಸ್ತ್ರೀಯರನ್ನೇ ಹೆಸರಿಸುವುದನ್ನು ಕಾಣಬಹುದು. 'ಬೊಡ್ಡಿ', 'ಸೂಳೆ', 'ಹಾದರ', 'ಕುಂಟಣಿ' ಇತ್ಯಾದಿ ಪದಗಳನ್ನು ಗಮನಿಸಬಹುದು.

ಇದೇ ರೀತಿ ಪುರುಷರನ್ನು ಕುರಿತ ಅಶ್ಲೀಲ ಗ್ರಾಮ್ಯ ಪದಗಳನ್ನು ಕವಿ ಬಳಸುತ್ತಾನೆ. "ಎಲೆ ನಪುಂಸಕ ಭೀಷ್ಮ", "ಹಳ್ಳಿಕಾರರ ನಾರಿಯರ ನೆರೆಮಿಂಡನಲ್ಲದೆ ಯೋಗ್ಯವಲ್ಲ" (ಸ.ಪ. ೮-೨೬) "ಗಂಡರೋ ನೀವ್ ಷಂಡರೋ" (ವಿ.ಪ. ೩-೪೬), "ಅಪಜಯಸ್ತ್ರೀ ವಿಟನೆ" (ವಿ.ಪ. ೮-೧೪) "ಪಾಪಿಗಳ ಅಪಕೀರ್ತಿಗಳುಕಿರಲ" (ವಿ.ಪ. ೩-೬೨), "ಕೂಳುಗೇಡಿಂಗೊಡಲ ಹೊರುಪಿರಿ" (ವಿ.ಪ. ೩-೬೨) "ಎಲೆ ನಪುಂಸಕ ಗಂಡುವೇಷದ ಸುಳಿವು ನಿನಗೇಕೆ" (ಅ.ಪ. ೮-೪೦), "ಈ ನಪುಂಸಕರೊಡನೆ ಹುಟ್ಟಿದ ನಾನು ಮೂಗುಳ್ಳವನೆ" (ವಿ.ಪ. ೩-೪೮) ಇತ್ಯಾದಿ

ಜಾನಪದರಲ್ಲಿ ಬೈದಾಡುವಾಗ ವ್ಯಕ್ತಿಗಳ ಗುಣಾವಗುಣಗಳನ್ನು ನಿರ್ದೇಶಿಸಲು ಪ್ರಾಣಿಗಳನ್ನು ಉಲ್ಲೇಖಿಸುವುದು ರೂಢಿ. ಅದರಲ್ಲಿಯೂ ನಾಯಿ, ಕತ್ತೆ, ಮೊದಲಾದ ಸಾಕು ಪ್ರಾಣಿಗಳನ್ನು ಉದಾಹರಿಸುವುದು ಸರ್ವೇ ಸಾಮಾನ್ಯ, ಕುಮಾರವ್ಯಾಸನು ನಾಯಿಯನ್ನು ಹೀನಾರ್ಥದಲ್ಲಿ ವಿಶೇಷವಾಗಿ ಬಳಸುತ್ತಾನೆ. ಇದಕ್ಕೆ ನಿದರ್ಶನವಾಗಿ ಕುಮಾರವ್ಯಾಸನ ಕೆಲವು ಪ್ರಯೋಗಗಳನ್ನು ಇಲ್ಲಿ ಕಾಣಬಹುದು.

"ನೂಕು ಕುನ್ನಿಯನಾಹವದ ಭೀತಾಕುಲನ" (ವಿ.ಪ. ೫-೧೩)

"ಸೀಳು ಕುನ್ನಿಯ ಬಾಯನೆಲವೋ" (ಭೀ. ಪ. ೧-೬೦)

"ಹೇಳು ಹೋಗೀನಾಯನಾಡಿಸಿ ಕೇಳುತಿರಲಿ" (ಭೀ. ಪ. ೧-೬೦)

"ಆಳ ಹೆದರಿಸಿ ನುಡಿವ ನಾಯ್ಗಳ ಬೀಳಬಡಿ" (ದ್ರೋ. ಪ. ೨-೩೯)

"ನಾಯಿತನ ಬೇಡಲವೊ" (ವಿ.ಪ. ೩-೧೩)

"ನಾಯ್ಗಳ ವೀಸಬಡ್ಡಿಯಲಸುವ ಕೊಂಬೆನು" (ವಿ.ಪ. ೩-೭೦)

"ಕೆಡಿಸಿ ಕೊಂಡರು ನಾಯ್ಗಳು " (ಅ.ಪ. ೭-೧೮)

"ಇವರು ಅರಮನೆಯ ನಾಯ್ಗಳು" (ವಿ.ಪ. ೪-೪೧)

"ಬಾಯಿ ಹುಳುವುದು ಬಯಲಜರಿದೊಡೆ" (ವಿ.ಪ. ೩-೧೩)

"ನಾಡನರಿಯವೊಲೆನಗೆ ನೀ ಹಲುಗಿರಿಯ ಬಿಡುವೆನೆ" (ವಿ.ಪ. ೬-೧೯)

"ಬಾಯ ಹೊಯ್ ಫಲುಗುಣನ ಹೊಗಳುವ ನಾಯಿಗಳನೇನಾಯ್ತು" (ಅ.ಪ. ೭-೪೬)

"ಕೌರವನಾಯಿ", ಕೀಚಕ ಕುನ್ನಿ" ಇತ್ಯಾದಿ.

ಜನನ, ಹಾದರಗಳಿಗೆ ಸಂಬಂಧಿಸಿದಂತೆ ಬೈಗಳ ಮಾತುಗಳನ್ನು ಬಳಸುವುದು ಕುಮಾರವ್ಯಾಸನ ಒಂದು ವಿಶೇಷ. ಈ ಬಗೆಯ ಮಾತುಗಳನ್ನು ಈಗಲೂ ಹಳ್ಳಿಯ ಜಗಳಗಳಲ್ಲಿ ಬಳಕೆಯಾಗುವುದನ್ನು ಕಾಣಬಹುದು. ಬಹುಶಃ ಈ ರೀತಿಯ ಬೈಗಳನ್ನು ಬಳಸಲು ಹಿಂದಿನಿಂದ ಬಂದ ಜಾನಪದ ಪರಂಪರೆ ಕಾರಣವಿರಬಹುದೇನೋ?

ಮಾರಿದೇವತೆಯ ಜಾತ್ರೆಯಲ್ಲಿ ಜರುಗುವ ಕೀಳು ವಿಧಿಗಳಲ್ಲೊಂದಾದ "ಮೂದಲೆಯ ಉಲಿ" ಇದಕ್ಕೊಂದು ನಿದರ್ಶನ.[೧]

"ನಿಮ್ಮ ಹೆಂಡಿರ ಬಳುವಳಿಯ ಕೊಡಿ ಹಾರುವನ ಹೆಂಡತಿಗೆ' (ಆ.ಪ. ೧೫-೪೧)

"ಹುಟ್ಟಿದೆಯೊ ಹಾದರಕೆ ಕ್ಷತ್ರಿಯ ಬೀಜವೋ ನೀನು" (ವಿ.ಪ. ೬-೧೭)

"ನೂರು ಮಕ್ಕಳ ಹಡೆದು ಕೆಡಿಸದೆ ತಾಯ ಯವ್ವನವ" (ಆ.ಪ. ೮-೫೭)

"ಪುಷ್ಪವತಿಯಾಗಲ್ಲಿ ಫಲವತಿಯಾಗು ನಡೆ ಕುರರಾಜ ಭವನದಲಿ" (ಸ.ಪ. ೧೪-೬೫)

"ಹೆರಿಸಿರೇ ನಾರಿಯನು ನಿಮ್ಮಯ ಬಾಣಗರ್ಭಿಣಿಯ" (ಭೀ.ಪ. ೬-೩೪)

"ತೊತ್ತಿನ ಮಗನ ಮನೆಯಲಿ ಹಸಿವ ನೂಕಿದಿರಿ" (ಉ.ಪ. ೮-೬೫)

"ತೊತ್ತಿನ ಮಗಳೆ ಹಾಯ್ದರೆ ಬಿಡುವೆನೆ ಫಡ" (ವಿ.ವ. ೩-೧೫)

"ನಿಮ್ಮಯ ವರ ಜನನಿಗಾದಿಯಲಿ ಗಂಡರದಾರು ಹೇಳು" (ಉ. ಪ. ೮-೬೬)

"ನಾವಂದದಲಿ ಹೊಯ್ದಾಡಿ ಹಿಡಿವೆವು ಸುರರ ಸೂಳೆಯರ" (ಸ.ಪ. ೧೪-೭೮)

"ತೊತ್ತಿರ ಸವಡಿವೇಟದ ಸವಿಯ ಸುರಿಯಲಿ ಭಂಡ ಮಿಂಡರಲಿ" (ಸ.ಪ. ೧೫-೯)

"ಸತ್ಯದ ನುಡಿಗೆ ಹಾದರವಿಲ್ಲದಂತಿರೆ ಕರುಣಿಸುವುದು" (ಆ.ಪ. ೪-೧೨)

ಶಿಷ್ಟ ಕಾವ್ಯಗಳಲ್ಲಿ ಬೈಗಳ ನುಡಿಗಳನ್ನು ಪಂಪನಿಂದ ಹಿಡಿದು ಇಂದಿನ ಕಾವ್ಯಗಳವರೆಗೂ ಕಾಣುತ್ತೇವೆ. ಆದರೆ ಅಪೂರ್ವ ರೀತಿಯಲ್ಲಿ ವೈವಿಧ್ಯಮಯವಾಗಿ ಸನ್ನಿವೇಶ-ಪಾತ್ರಗಳ ಸೂಕ್ತ ಹಿನ್ನೆಲೆಗಳಲ್ಲಿ ಅತ್ಯಂತ ಯಶಸ್ವಿಯಾಗಿ ಬಳಸಿರುವ ಕವಿಗಳಲ್ಲಿ ಕುಮಾರವ್ಯಾಸ ಅಗ್ರಗಣ್ಯನಾಗಿದ್ದಾನೆ. ತನ್ನ ಕಾಲದ ಸುತ್ತಮುತ್ತಲ

೧. ಐತಿಹಾಸಿಕ : ಎಂ.ಎಂ. ಕಲ್ಬುರ್ಗಿ, ಪು. ೧೯೭.

ಪ್ರದೇಶಗಳಲ್ಲಿನ ದೇಸಿ ಭಾಷೆಯಲ್ಲಿ ಕಂಡುಬರುವ ಗ್ರಾಮ್ಯ- ಅಶ್ಲೀಲವೆನ್ನಬಹುದಾದ ಮಾತುಗಳನ್ನು ಧಾರ್ಮಿಕ ಕಾವ್ಯದಲ್ಲಿ ಅನೌಚಿತ್ಯವೆನಿಸದಂತೆ ಬಳಸಿರುವುದು ಕವಿಯ ವೈಶಿಷ್ಟ್ಯವಾಗಿದೆ.

**ಒಗಟು**

'ಒಗಟು' ಸಹ ಜಾನಪದ ಸಾಹಿತ್ಯದ ಪ್ರಕಾರಗಳಲ್ಲಿ ಒಂದು. ಈ ಶಬ್ದದ ರೂಪ ನಿಷ್ಪತ್ತಿಯ ವಿಷಯದಲ್ಲಿ ಸಾಕಷ್ಟು ಚರ್ಚೆಗಳಿವೆ. ಸಂಸ್ಕೃತ ಅಥವಾ ಪ್ರಾಕೃತ ಮೂಲದಿಂದ, ಇಲ್ಲವೇ ದ್ರಾವಿಡ ಭಾಷೆಯ ಬಳುವಳಿಯಾಗಿ ಕನ್ನಡಕ್ಕೆ ಬಂದಿದೆ ಎನ್ನುವ ಬಗ್ಗೆ ಸಾಕಷ್ಟು ಚರ್ಚೆಗಳಿವೆ. ಕನ್ನಡದ ಮೂಲ ಪ್ರಾಚೀನರೂಪವಾದ 'ಒಗಟು' ಪದದ ನಿಷ್ಪತ್ತಿ ಗಹನವಾಗಿಯೇ ಉಳಿದಿದೆ.

ಒಗಟುಗಳಲ್ಲಿ ಭಾಷಾಭಿವ್ಯಕ್ತಿ, ಕಲ್ಪನಾಸಾಮರ್ಥ್ಯ, ನಿರ್ದಿಷ್ಟಗುರಿ ಸಾಧನೆ, ಚಮತ್ಕಾರ, ವಿನೋದಗಳು ಎದ್ದು ಕಾಣುವ ಗುಣಗಳು. ಒಗಟಿನ ಅತಿಮುಖ್ಯವಾದ ಲಕ್ಷಣಗಳೆಂದರೆ ಬುದ್ಧಿಯ ಕಸರತ್ತು ಹಾಗೂ ಅರ್ಥಶ್ಲೇಷೆ.

ಗಾದೆಗೂ ಒಗಟಿಗೂ ನಿಕಟವಾದ ಸಂಬಂಧವಿದೆ. ಒಗಟಿನಲ್ಲಿ ಗಾದೆ ಅಥವಾ ಗಾದೆಯಲ್ಲಿ ಒಗಟು ಅಡಗಿರಬಹುದು. ಆದ್ದರಿಂದಲೇ "ಒಗಟು ಉತ್ತರಾಪೇಕ್ಷೆ, ಗಾದೆ ವ್ಯಾಖ್ಯಾನಾಪೇಕ್ಷೆ"[೧] ಎನ್ನುತ್ತಾರೆ.

ಶ್ಲೇಷಾತ್ಮಕ ಒಗಟು, ಮತಾಚರಣೆಯ ಒಗಟು, ಸ್ವಪ್ನದ ಒಗಟು, ಪದ ಸಮಸ್ಯೆಯ ಒಗಟು, ಸಂಕೇತದ ಒಗಟು, ನಾಟುನುಡಿ, ಗಣಿತದ ಒಗಟು, ಪ್ರಶ್ನೋತ್ತರ ಒಗಟು, ಒಗಟು ಕಥೆಗಳು, ವಿನೋದಪರ ಒಗಟುಗಳು, ಅನ್ವಯಾರ್ಥಕ ಒಗಟುಗಳು, ಶಕುನದ ಒಗಟುಗಳು ಎಂದು ಹಲವಾರು ಬಗೆಗಳಾಗಿ ಒಗಟನ್ನು ಎಸ್. ಜಿ. ಇಮ್ರಾಪುರ ಅವರು ವರ್ಗೀಕರಿಸಿದ್ದಾರೆ. ಅಲ್ಲದೆ ಕಂಠಸ್ಥ, ಗ್ರಂಥಸ್ಥ ಒಗಟುಗಳೆಂದು ಮತ್ತೆ ಕೆಲವರು ವರ್ಗೀಕರಿಸಿದ್ದಾರೆ. ಒಗಟುಗಳು ಹಾಸ್ಯ, ವಿಡಂಬನೆ, ವಿನೋದ, ಲೋಕವಿಮರ್ಶೆ, ನೀತಿಬೋಧೆ ಮೊದಲಾದ ಅಂಶಗಳನ್ನೊಳಗೊಂಡಿರುವುದರಿಂದ "ಒಗಟು ಜಾನಪದೀಯವಾದರೂ ಶಿಷ್ಟ ಕಾವ್ಯಗಳಂತೆಯೇ ಜನತೆಯ ಆಶೋತ್ತರಗಳನ್ನು ಚಿತ್ರಿಸಬಲ್ಲದು."[೨] ಛಂದಸ್ಸಿನ

---

೧. ಜನಪದ ಒಗಟುಗಳು : ಡಾ.ಎಸ್. ಜಿ.ಇಮ್ರಾಪುರ, ಪು. ೧೦೫

೨. ಜನಪದ ಒಗಟುಗಳು: ಡಾ.ಎಸ್. ಜಿ. ಇಮ್ರಾಪುರ, ಪು. ೧೦೫

ದೃಷ್ಟಿಯಿಂದ ಹೇಳುವುದಾದರೆ ಸಾಂಕೇತಿಕವಾಗಿ ಅಭಿವ್ಯಕ್ತಗೊಳ್ಳುವ ಒಗಟು ತ್ರಿಪದಿ, ಚೌಪದಿ, ಷಟ್ಪದಿ ಮೊದಲಾದ ರೂಪಗಳಲ್ಲಿ ಕಾಣಿಸಿಕೊಂಡಿವೆ.

ಸಂಸ್ಕೃತ ಸಾಹಿತ್ಯದಲ್ಲಿ ವೇದಗಳ ಕಾಲದಿಂದಲೂ ಪ್ರಹೇಳಿಕೆ, ಶ್ಲೋಕ, ಕೂಟ, ಬ್ರಹ್ಮೋದ್ಯ ಮುಂತಾದ ಪರ್ಯಾಯಾರ್ಥಗಳಲ್ಲಿ ಒಗಟುಗಳು ಬಳಕೆಯಾಗಿವೆ. ಮಹಾಭಾರತ, ಜಾತಕಕಥೆ, ಭೇತಾಳ ಪಂಚವಿಂಶತಿ, ಭಟ್ಟಿ ವಿಕ್ರಮಾದಿತ್ಯನ ಕಥೆ ಮುಂತಾದ ಪುರಾಣೇತಿಹಾಸಗಳಲ್ಲೂ ಸಾಕಷ್ಟು ಒಗಟುಗಳು ಕಂಡುಬರುತ್ತವೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಮುಖ್ಯ ಅಂಶವೆಂದರೆ ಕೇವಲ ವೈದಿಕಧರ್ಮದಲ್ಲಿ ಮಾತ್ರವಲ್ಲದೆ, ಜಗತ್ತಿನ ಇತರ ಪ್ರಮುಖಧರ್ಮಗಳಾದ ಬೌದ್ಧ, ಜೈನ, ಕ್ರೈಸ್ತ ಧರ್ಮ ಗ್ರಂಥಗಳಲ್ಲೂ ಒಗಟುಗಳು ಬಳಕೆಯಾಗಿವೆ. ಕುಮಾರವ್ಯಾಸ ಭಾರತದಲ್ಲಿ ಪ್ರಶ್ನೋತ್ತರ ರೂಪವಾದ ಒಗಟಿನ ಸ್ವರೂಪವನ್ನು ಅರಣ್ಯಪರ್ವದ 'ಯಕ್ಷಪ್ರಶ್ನೆ'ಯಲ್ಲಿ ಕಾಣಬಹುದು. ನಿದರ್ಶನಕ್ಕೆ ಈ ಎರಡು ಪ್ರಶ್ನೋತ್ತರ ಪದ್ಯಗಳನ್ನು ಗಮನಿಸಬಹುದು.

ನಿಂದ್ಯನಾವನು? ಲೋಕದೊಳಭಿ
ವಂದ್ಯನಾವನು? ಜೀವವಿರೆಮೃತ
ನೆಂದಡಾವನು? ದೇಶ ಕಳಿವುಹುದಾರದೆಸೆಯಿಂದ?
ಸಂದಯಜ್ಞವದೆಂತು ಕೆಡುವುದು?
ತಂದೆ ಹೇಳೈತನಗೆನಲ್ಕು ಸಾ
ನಂದದಿಂದವೆ ಕಾಣಿಸಿದನಾ ಖಚರಗುತ್ತರವ (ಅ.ಪ. ೨೩-೪೨)

ಕೇಳು ಪರನಿಂದಕನೆ ನಿಂದ್ಯನು
ಹೇಳಲೇಂ ಪರಹಿತನೆ ವಂದ್ಯನು
ಹೇಳದಿಚ್ಛೆಗೆ ನಡೆವ ನೃಪನಿಂದಳಿವುದಾದೇಶ
ಕೇಳು ನಡೆವೆಣನೆ ದರಿದ್ರನು
ಸಾಲದೆನಿಸಿದ ದಕ್ಷಿಣೆಯಯ
ಜ್ಞಾಳಿ ನಿಷ್ಫಲವೆಂದು ನುಡಿದನು ರಾಯ ಕೌಂತೇಯ (ಅ.ಪ.೨೩-೪೩)

ಇದೇ ರೀತಿ ಸುಮಾರು ಇಪ್ಪತ್ತೊಂದು ಪ್ರಶ್ನೆಗಳನ್ನು ಯಕ್ಷನು ಕೇಳಿದಾಗ, ಧರ್ಮಜನು ಎಲ್ಲ ಪ್ರಶ್ನೆಗಳಿಗೂ ಸಮರ್ಪಕವಾಗಿ ಉತ್ತರಿಸುತ್ತಾನೆ. ಈ ಪ್ರಶ್ನೋತ್ತರಗಳಲ್ಲಿ ಲೋಕವ್ಯಾಪಾರ, ದುಷ್ಟ-ಶಿಷ್ಟ ಜನರ ಸ್ವಭಾವಗಳು ಮತ್ತು

ಧರ್ಮರಾಯನ ಧರ್ಮ ಪ್ರಾವೀಣ್ಯತೆಗಳು ಇಲ್ಲಿ ಅಭಿವ್ಯಕ್ತವಾಗಿರುವ ರೀತಿ ಗಮನಾರ್ಹವಾಗಿವೆ.

ಅರಣ್ಯವಾಸದ ಕಾಲದಲ್ಲಿ ಒಮ್ಮೆ ಭೀಮನು ಬೇಟೆಗೆ ಹೋದ ಸಂದರ್ಭದಲ್ಲಿ ಅಜಗರನಾಗಿದ್ದ ನಹುಷನ ಹಿಡಿತಕ್ಕೆ ಸಿಕ್ಕಿದಾಗ, ಅಜಗರನು ಕೇಳುವ ಪ್ರಶ್ನೆಗಳಿಗೆ ಧರ್ಮರಾಯನು ಸರಿಉತ್ತರನೀಡಿ ಭೀಮನನ್ನು ಬಿಡುಗಡೆ ಮಾಡಿಸುತ್ತಾನೆ. ಈ ಸಂದರ್ಭದಲ್ಲಿ ಧರ್ಮರಾಯ ಹಾಗೂ ಅಜಗರನಿಗೆ ನಡೆದ ಸಂವಾದ ಪ್ರಶ್ನೋತ್ತರ ಒಗಟುಗಳಿಗೆ ಉತ್ತಮ ನಿದರ್ಶನವಾಗಿದೆ. (ಅ.ಪ. ೧೩-೪೯ ರಿಂದ ೫೮)

ಇದೇ ರೀತಿಯಾಗಿ ಸನತ್ಸುಜಾತ ಮುನಿಯು ಧೃತರಾಷ್ಟ್ರನಿಗೆ 'ಪರತತ್ವ ವಿದ್ಯಾ ವಿಷಯ ಭೇದವನು' ತಿಳಿಸುವ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ಪ್ರಶ್ನೋತ್ತರ ಒಗಟಿನ ರೂಪದಲ್ಲಿ ವಿವರಿಸುತ್ತಾನೆ. (ಉ.ಪ. ೪-೫೪,೫೫,೫೬)

ಕುಮಾರವ್ಯಾಸನು ವಿದುರನೀತಿಯಲ್ಲಿ ಗಣಿತದ ಒಗಟುಗಳನ್ನು (ಸಂಖ್ಯಾಒಗಟು) ಹೇಳಿರುವುದನ್ನು ಕಾಣಬಹುದು. ವ್ಯಾಸಭಾರತದಲ್ಲಿ ಏಳು ವಿಷಯಗಳವರೆಗೆ ಹೇಳಿದ್ದನ್ನು ಕುಮಾರವ್ಯಾಸನು ಹತ್ತರವರೆಗೆ ವಿಸ್ತರಿಸಿ, ಷಟ್ಪದಿ ರೂಪದಲ್ಲಿ ಹೇಳಿದ್ದಾನೆ.

ಒಂದರಿಂದೆರಡನರಿ ಮೂ
ರಂದವನು ತಿಳಿ ನಾಲ್ಕರಲಿ ಮನ
ಗುಂದದಿರೈವರಲಿ ವರ್ಜಿಪುದಾರನೇಳರಲಿ
ಒಂದಿಸದಿರೆಂಟನು ವಿಚಾರಿಸಿ
ಮುಂದುವರಿ ಒಂಭತ್ತರಲಿ ಮನ
ಗುಂದಿಸದಿರೀರೈದರಲಿ ಭೂಪಕೇಳೆಂದ

ಇದೇ ರೀತಿ ಹಲವಾರು ಗಣಿತದ ಒಗಟುಗಳನ್ನು ವಿದುರನೀತಿ ಮತ್ತು ಸನತ್ಸುಜಾತ ಬೋಧೆಗಳಲ್ಲಿ ಕಾಣಬಹುದು.

ರೂಪಕಸಾಮ್ರಾಜ್ಯ ಚಕ್ರವರ್ತಿಯಾದ ಕುಮಾರವ್ಯಾಸನು ರೂಪಕಗಳನ್ನು ಹೇಳುತ್ತಲೇ ಸಂಕೇತದ ಒಗಟುಗಳನ್ನು ರಚಿಸಿರುವುದನ್ನು ಕೃಷ್ಣನ ವರ್ಣನೆಯಲ್ಲಿ ಕಾಣಬಹುದು. ಕೃಷ್ಣನು ಸಂಧಿಗಾಗಿ ಹಸ್ತಿನಾಪುರದಲ್ಲಿ ಕೌರವನೋಲಗಕೆ ಬಂದಾಗ, ಕೃಷ್ಣನನ್ನು ಕವಿ ಹೀಗೆ ವರ್ಣಿಸುತ್ತಾನೆ:

ಕಂಜ ಸಂಭವ ಪಿತನು ಬಂದನು
ನಂಜಿನಲಿ ಪವಡಿಸುವ ಬಂದನು
ಕುಂಜರನವೊರೆ ಕೇಳಿ ಸಲಹಿದ ದೇವ ತಾ ಬಂದ
ಅಂಜಿದಸುರನ ಕಾಯ್ದ ಬಂದನು
ಭಂಜನೆಗೆ ಬಲುದೈವ ಬಂದ ಧ
ನಂಜಯಾದ್ಯರ ಭಾವಬಂದನು ನೃಪತಿಯೋಲಗಕೆ (ಉ.ಪ. ೮-೫೧)

"ರೂಪಕಗಳು ನಿರಂತರವಾಗಿ ಬಂದರೆ ಒಗಟುಗಳಾಗುತ್ತವೆ ಎಂದು ಹೇಳಿದ ಅರಿಸ್ಟಾಟಲನ ಮಾತನ್ನು ಗಮನಿಸಿದರೆ ಈ ಪದ್ಯ ಒಗಟೇ ಆಗುತ್ತದೆ ಎನ್ನುವುದು ಸ್ಪಷ್ಟ."[೧] ಇಲ್ಲಿ ಎಲ್ಲ ವಿಶೇಷಣಗಳಿಗೂ ಮತ್ತು ಬಂದವನು ಯಾರು? ಎಂಬ ಪ್ರಶ್ನೆಗೂ ಉತ್ತರ ಕೃಷ್ಣನೆ ಎನ್ನುವುದೇ ಆಗಿದೆ.

"ದೇವ ಬಂದನು ತನ್ನನೆನೆವವರ ........" (ಉ. ಪ. ೮-೫೨) ಎಂಬ ಪದ್ಯವೂ ಇದಕ್ಕೆ ಇನ್ನೊಂದು ನಿದರ್ಶನವಾಗಿದೆ.

ಕನ್ನಡ ಸಾಹಿತ್ಯದಲ್ಲಿ ಒಗಟಿನ ಹುಟ್ಟನ್ನು (ಮೂಲವನ್ನು) ಗಮನಿಸಿದಾಗ ಕವಿರಾಜ ಮಾರ್ಗಕಾರನ ಹೇಳಿಕೆಯನ್ನು ಮೊದಲುಗೊಂಡು ಸರ್ವಜ್ಞನ ಒಗಟುಗಳವರೆಗೆ ಪರಂಪರೆಯನ್ನೇ ಕಾಣಬಹುದು. ಹರಿಹರ ಮತ್ತು ದಾಸರ ಮುಂಡಿಗೆಗಳು, ಅಲ್ಲಮ-ಸರ್ವಜ್ಞರ ಬೆಡಗಿನ ವಚನಗಳಲ್ಲಿ ಒಗಟುಗಳ ವಿವಿಧ ಸ್ವರೂಪಗಳನ್ನು ಕಾಣಬಹುದು. ನಮ್ಮ ಕಾವ್ಯಗಳಲ್ಲಿ ಸಾಂಕೇತಿಕ ಭಾಷೆಯ ಬಳಕೆಯ ಸಂದರ್ಭದಲ್ಲಿ ಎಷ್ಟೋ ಕವಿತೆಗಳು ಶ್ಲೇಷಾರ್ಥದ ಮೂಲಕ ಒಗಟಿನ ಸ್ವರೂಪ ಹೊಂದಿರುವುದನ್ನು ಕಾಣಬಹುದು. ಆದರೆ ಶಿಷ್ಟ ಸಾಹಿತ್ಯದಲ್ಲಿ ಬಂದ ಒಗಟು, ಬೆಡಗು, ಮುಂಡಿಗೆಯ ಅಷ್ಟಕ, ಮುಂಡಿಗೆಗಳಿಗೆ ಜಾನಪದ ಒಗಟುಗಳೇ ಪ್ರೇರಣೆ, ಆಕರಗಳಾದರೂ ಕೆಲವೊಮ್ಮೆ ಶಿಷ್ಟ ಸಾಹಿತ್ಯದ ಒಗಟುಗಳೂ ಜಾನಪದದಲ್ಲಿ ಕಂಡುಬರುವುದು ಅಸಂಭವವೇನಲ್ಲ. ಕುಮಾರವ್ಯಾಸನ ಕಾವ್ಯದಲ್ಲಿ ಕಂಡುಬರುವ ಹಲವು ಬಗೆಯ ಒಗಟುಗಳಿಗೆ ಆ ಕಾಲದಲ್ಲಿ ಬಳಕೆಯಲ್ಲಿದ್ದ ಜಾನಪದ ಒಗಟುಗಳೇ ಆಕರವಾಗಿವೆ ಎನ್ನಬಹುದು.

---

೧. ಜನಪದ ಒಗಟುಗಳು : ಎಸ್. ಜಿ. ಇಮ್ರಾಪುರ, ಪು. ೧೪೯

**ಗಾದೆಗಳು**

ಜನಪದ ಸಾಹಿತ್ಯದ ಪ್ರಕಾರಗಳಲ್ಲಿ ಒಂದಾದ ಗಾದೆಯು, ಸರಳವಾಗಿ ಸಂಕ್ಷಿಪ್ತವಾಗಿ, ಧ್ವನಿಪೂರ್ಣವಾಗಿ, ತೀಕ್ಷ್ಣವಾಗಿ ಪ್ರಾಸಬದ್ಧವಾಗಿ ಮೂಡಿಬಂದ ಜನಪದರ ಅನುಭವಗಳ ರಸಘಟ್ಟಿಗಳಾಗಿವೆ. 'ಹತ್ತು ಕಟ್ಟುವ ಕಡೆ ಒಂದು ಮುತ್ತು ಕಟ್ಟು' ಎಂಬ ಗಾದೆ, ಗಾದೆಯ ಸಂಕ್ಷಿಪ್ತತೆಯನ್ನು ತಿಳಿಸುತ್ತದೆ. "ಗಾದೆ ಎಂದರೆ ಹಳೆಯ ಮಾತು, ಜನ ಆಡಿರೂಢಿಸಿದ ಮಾತು, ಸುಭಾಷಿತ ರೂಪಕ, ಅಲಂಕಾರಯುಕ್ತವಾದ ಮಾತು"[೧] ಇವೇ ಮೊದಲಾದ ಲಕ್ಷಣಗಳನ್ನೊಳಗೊಂಡ ಹಿತಮಿತವಚನ ಎನ್ನಬಹುದು. ಸಂಸ್ಕೃತದ "ಗಾಥಾ" ಪದದಿಂದ ಕನ್ನಡದ 'ಗಾದೆ' ಪದ ಬಂದಿದೆ. "ಜನಪದ ಗೀತೆಗಳನ್ನು ಅಜ್ಞಾತಕವಿಗಳ ಅಮರಗೀತೆ"ಗಳೆಂದು ಕರೆದಂತೆ, ಗಾದೆಗಳನ್ನು "ಜನಪದದ ಜೀವಂತನಾಡಿ"[೨] ಎಂದು ಕರೆದಿದ್ದಾರೆ. ಗಾದೆಗಳನ್ನು ಸಾಮತಿ, ನಾಣ್ನುಡಿ (ನಾಟ್ + ನುಡಿ= ನಾಡಿನನುಡಿ) ಎಂದೂ ಕರೆಯುತ್ತಾರೆ.

ಗಾದೆಗಳು ಜಗತ್ತಿನ ಎಲ್ಲ ದೇಶಗಳಲ್ಲೂ, ಭಾಷೆಗಳಲ್ಲೂ ಕಂಡುಬರುತ್ತವೆ. 'ಕಿರಿದರೊಳ್ ಪಿರಿದರ್ಥಮಂ ಪೊಂದಿರುವ' ಗಾದೆಗಳನ್ನು ಜನಸಾಮಾನ್ಯರ ವೇದವೆನ್ನಬಹುದು. ತಲೆಮಾರಿನಿಂದ ತಲೆಮಾರಿಗೆ ಹರಿದುಬಂದ ಅನುಭವದ ಸಂಪತ್ತು. ಗಾದೆಗಳು ಬದುಕಿಗೆ ಹೇಗೋ ಹಾಗೆ ಭಾಷೆಗೂ ಸಂಜೀವಿನಿ, ಕಲ್ಪವೃಕ್ಷ, ಕಾಮಧೇನು."[೩] ಸಾಮಾನ್ಯವಾಗಿ ಬಳಕೆಯಾಗುವ ಬಹಳಷ್ಟು ಗಾದೆಗಳು ದಿನನಿತ್ಯದ ಜೀವನದಿಂದ ಅಥವಾ ಪ್ರಕೃತಿಯ ಪ್ರತೀಕ್ಷೆಯಿಂದ ಪಡೆದುಕೊಂಡಂಥ ರೂಪಕಗಳು ಅಥವಾ ಅನುಭವದ ಸಂಕ್ಷಿಪ್ತಸಾರಗಳಾಗಿರುತ್ತವೆ."[೪]

ಕಾವ್ಯಗಳಲ್ಲಿ ಬರುವ ಗಾದೆಗಳನ್ನು ಕುರಿತು ಹೇಳುವುದಾದರೆ "ಗಾದೆಯು ಅಡಕವಾದ ಒಂದು ವಾಕ್ಯವಾಗಿದ್ದು, ಕಟು ಸತ್ಯವೊಂದನ್ನು ಸಂಗ್ರಹವಾದ ರೀತಿಯಲ್ಲಿ ಹೇಳುತ್ತದೆ. ಈ ಸತ್ಯದ ಹೇಳಿಕೆಯು ಅಪೂರ್ಣವಾಗಿರುತ್ತದೆ, ಅತಿಶಯೋಕ್ತಿಯಿಂದ

---

೧. ಗಾದೆಗಳು : ಎ.ಕೆ. ರಾಮಾನುಜಂ, ಪು. ೮

೨. ಬರೆಯುವ ದಾರಿ: ಡಾ.ಎಸ್. ಎಮ್. ವೃಷಭೇಂದ್ರಸ್ವಾಮಿ, ಪು. ೪೮.

೩. ಜನಪದ ಒಗಟುಗಳು : ಸೋಮಶೇಖರ ಇಮ್ರಾಪುರ, ಪು. ೩೩.

೪. ಕ.ಜಾ.ವಿ. ಸಂ-೧, ಪು. ೭೩೮.

ಕೂಡಿರುತ್ತದೆ, ಮತ್ತು ಆಲಂಕಾರಿಕವಾಗಿ ಹೇಳಲ್ಪಡುತ್ತದೆ.[೧] ಎಂಬ ಮಾತು ಅನ್ವಯವಾಗುತ್ತದೆ.

ಸಂಸ್ಕೃತದ ಲೋಕೋಕ್ತಿ, ಸುಭಾಷಿತ, ಸೂಕ್ತಿ, ಆಭಾಣಕ, ಲೌಕಿಕ ಪ್ರವಾದ ಮೊದಲಾದ ಪದಗಳನ್ನು ಗಾದೆಗೆ ಸಮಾನಾರ್ಥಕ ಪದಗಳನ್ನಾಗಿ ಬಳಸುತ್ತಾರೆ.

ಗಾದೆಗಳು ವಿಷಯ ವೈವಿಧ್ಯಕ್ಕೆ ತಕ್ಕಂತೆ ನಾನಾ ಬಗೆಗಳಾಗಿವೆ. ಕೃಷಿ ಗಾದೆಗಳು, ವೈದ್ಯಕೀಯ ಗಾದೆಗಳು, ಆಹಾರ ಗಾದೆಗಳು, ವೃತ್ತಿಗಾದೆಗಳು, ಪ್ರಾಣಿಗಾದೆಗಳು, ಧಾರ್ಮಿಕಗಾದೆಗಳು ಇತ್ಯಾದಿ. ಭಾಷಾ ಶೈಲಿಯ ದೃಷ್ಟಿಯಿಂದ ಹಾಸ್ಯದ ಗಾದೆಗಳೂ, ಉಪಮೆಗಾದೆಗಳೂ, ಪ್ರಾಸಾನುಪ್ರಾಸ ಗಾದೆಗಳೂ, ಚಾಟುನುಡಿಯ ಗಾದೆಗಳೂ, ವಿರೋಧಾಭಾಸ ಗಾದೆಗಳೂ, ಅತ್ಯುಕ್ತಿ ಗಾದೆಗಳೂ ಎಂದು ಮೊದಲಾಗಿ ವರ್ಗೀಕರಿಸುತ್ತಾರೆ.

ಕುಮಾರವ್ಯಾಸನ ಕಾವ್ಯದಲ್ಲಿ ಸಾಕಷ್ಟು ಗಾದೆಗಳು ಕಂಡುಬರುತ್ತವೆ. ಇವು ಗ್ರಾಮೀಣ ಜೀವನ ಮತ್ತು ಅರಮನೆಯ ಬದುಕಿಗೆ ಸಂಬಂಧಿಸಿರುವುದರ ಜೊತೆಗೆ ಜನಸಾಮಾನ್ಯರ ಬದುಕಿನಲ್ಲಿ ಕಂಡುಬರುವ ಅನುಭವಗಳನ್ನು ಹೇಳುತ್ತವೆ. ಕಾವ್ಯದ ಸಂದರ್ಭಗಳ ಹಿನ್ನೆಲೆಯಲ್ಲಿ ಈ ಗಾದೆ ಮಾತುಗಳು ರೂಪಕ, ಉತ್ಪ್ರೇಕ್ಷೆ, ಉಪಮೆ, ವಿರೋಧಾಭಾಸಾಲಂಕಾರಗಳಾಗಿ ಹಲವಾರು ರೂಪಗಳಲ್ಲಿ ಕಾಣಿಸುತ್ತವೆ. ಅನೇಕ ವೇಳೆ ಸೂಕ್ತಿಗಳ ರೂಪದಲ್ಲೂ ಕಾಣಿಸಿಕೊಳ್ಳುತ್ತವೆ. ಕೆಲವೊಂದು ಗಾದೆಗಳು ಆಡುಮಾತಿನ ಗಾದೆಗಳ ಶಿಷ್ಟರೂಪದಂತೆ ಭಾಸವಾಗುತ್ತವೆ. ಕೆಲವು ಆಡುಮಾತಿನ ಗಾದೆಗಳೇ ನೇರವಾಗಿ ಪದ್ಯರೂಪದಲ್ಲಿ ಬಳಕೆಯಾಗಿವೆ ಎನ್ನಬಹುದು. ಒಟ್ಟಿನಲ್ಲಿ ಜನಪದ ಸಾಹಿತ್ಯ ಪ್ರಕಾರವಾದ ಗಾದೆಯನ್ನು ಶಿಷ್ಟ ಕಾವ್ಯವಾದ ತನ್ನ ಭಾರತ ಕೃತಿಯಲ್ಲಿ ಕುಮಾರವ್ಯಾಸನು ಸಂದರ್ಭಾನುಸಾರ ಧಾರಾಳವಾಗಿ ಬಳಸಿಕೊಂಡಿದ್ದಾನೆ ಎನ್ನಲಡ್ಡಿಯಿಲ್ಲ. ಇಲ್ಲಿ ಕವಿ ತನ್ನ ಕಾವ್ಯದಲ್ಲಿ ಬಳಸಿರುವ ಗಾದೆಗಳಲ್ಲಿ ಕೆಲವನ್ನು ವರ್ಗೀಕರಿಸಿ ಕೊಡಲಾಗಿದೆ.

**ಪಶುಪಕ್ಷಿ ಸಂಬಂಧದ ಗಾದೆಗಳು :**

೧. **ಕುಪಿತ ಸಿಂಹವನಂಜಿಸದೆ ನಾಯ್ಗಳು** (ಸ.ಪ. ೧೦-೮)

---

೧. ಭಾರತೀಯ ಜಾನಪದ ಸಮೀಕ್ಷೆ, ದುರ್ಗಾಭಾಗವತ್, ಪು. ೫೬

೨. ಕುಮತಿ ಕಪಿಗೇಕಮಲ ಮಾಣಿಕ (ಸ.ಪ. ೯-೧೧)

೩. ಗರಳವಿಲ್ಲದ ಕುಪಿತಫಣಿ ಹಲುಮೊರೆದು ಮಾಡುವುದೇನು (ದ್ರೋ.ಪ. ೧೬-೫೫)

೪. ಗರುಡನೂರವರು ಎರೆವರೇ ನಾಗರಿಗೆ ತನಿಯನು (ದ್ರೋ.ಪ. ೮-೫೪)

೫. ಟಗರೆರಡ ಖತಿಗೊಳಿಸಿ ಬಲುಕಾಳಗವ ನೋಡುವಂತೆ (ಉ.ಪ. ೧-೩೦)

೬. ಉರಗನಿಕ್ಕಡಿಗಾರ ಹುಲ್ಲಿನ ಸರವಿಗಂಜುವುದುಂಟೆ (ದ್ರೋ. ಪ. ೫-೨೮)

೭. ಉರಿಯ ಪೇಟೆಗಳಲಿ ಪತಂಗದ ಸರಕು ಮಾರದೆ ಮರುಳುವುದೆ (ಕ.ಪ. ೧೦-೨೮)

೮. ನಾಲುವರ ನಡುವಣ ಹಾವು ಸಾಯದು (ವಿ.ಪ. ೩-೧೮)

೯. ನಾಯಿ ಸಿಂಹಕ್ಕಿದಿರೆ (ವಿ.ಪ. ೨-೩೮)

೧೦. ಮುಳಿದು ಬೊಗಳುವ ನಾಯ್ಗೆ ಚಂದ್ರಮನಳುಕುವನೆ (ಉ.ಪ. ೬-೫೧)

೧೧. ನೊಣವೆರಗಿದೊಡೆ ಕುಲಗಿರಿಗಳಲ್ಲಾಡುವವೆ (ಉ.ಪ. ೬-೫)

೧೨. ಕೂಳಿನಾಸೆಯ ಕುನ್ನಿಗಳು (ಕ.ಪ. ೩-೧)

೧೩. ಹುಲ್ಲೆಯ ಮರಿಗಳಿಗೆ ಖತಿಗೊಂಬುದೇ ಮದಕರಿ (ಕ.ಪ. ೩-೨)

೧೪. ವಿಷದ ಹೊಟ್ಟೆಯೊಳೆರಗಿ ನೊಣ ಜೀವಿಸುವುದೇ (ದ್ರೋ. ಪ. ೬-೪೦)

೧೫. ಕೋಗಿಲೆಯಾದರಿಸಿದಡೆ ಬೇವು ಮಾವಹುದೆ (ಕ.ಪ. ೮-೪)

**ಸಸ್ಯಸಂಬಂಧ ಗಾದೆಗಳು :**

೧. ಯೆಲವಲಕಾಯಿ ಗೋಸುಗ ಕಲ್ಪವೃಕ್ಷವ ಕಡಿವವನಲ್ಲ (ಆ.ಪ. ೩-೨)

೨. ಬೆಂದ ಹುಣ್ಣಲಿ ಸಾಸಿವೆಯ ಬಳಿಯದಿರು (ದ್ರೊ. ಪ. ೧-೮)

೩. ಲತೆಯಯೆಳಗುಡಿ ಮಾಳಿಗೆಗೆ ತೊಲೆಯೆ (ಭೀ.ಪ. ೩-೮೪)

೪. ಎಳೆಯ ಬಾಳೆಯ ಸುಳಿಗೆ ಸೀಗೆಯ ಮೆಳೆಯೊಡನೆ ಸರಸವೆ (ದ್ರೋ. ಪ. ೧೨-೨೯)

೫. ಗರಗಸದನಡು ಬಡವಾದರೆಯು ಕುಯಿದಿಕ್ಕದೇ ತರುವ (ಆ.ಪ. ೮.೨೮)

೬. ಎಮ್ಮಪುಣ್ಯದ ಬೆಳೆಗಳೊಣಗಿದಡವ್ವಿ ಮಾಡುವುದೇನು? (ಕ.ಪ. ೧-೨೬)

೭. ಗಾಳಿಯ ಹೊರಳಿಗೊಡ್ಡಿದ ಹೊಟ್ಟು ಹಾರುವುದರಿಂದೆ (ದ್ರೋ.ಪ. ೧೪-೨೬)

೮. ಕೃಷಿ ವಿಹೀನನ ದೇಶವದು ದುರ್ದೇಶ (ಸ.ಪ. ೧-೬೪)

ವ್ಯಕ್ತಿಸಂಬಂಧದ ಗಾದೆಗಳು:

೧. ಅಗಡು ಮಕ್ಕಳ ತಾಯ್ಗೆ ತಪ್ಪದು ಬೆಗಡು ಬೇಗೆ (ಗ.ಪ. ೧೧-೪೭)

೨. ಅಹಿತರೇ ಜನಿಸಿದರೆ ಸುತರೆನಬಹುದೇ (ಗ.ಪ. ೧೧-೧೨)

೩. ಅಳಿದವರಿಗಳುವುದು ಸಲ್ಲದು (ಗ.ಪ. ೧೧-೪೯)

೪. ಆಳಿನೊಂದಪಮಾನ ಆಳ್ದಂಗೆ (ಸ.ಪ. ೧೪-೧೩೧)

೫. ಇರುಳುಗಳ್ಳರಕೂಡೆ ಸೇರಿದ ಮರುಳನಂತೆ (ದ್ರೋ.ಪ ೧೩-೩೨)

೬. ಏಕೆ ಕನ್ನಡಿ ಕುರುಡರಿಗೆ (ಸ.ಪ. ೯-೩೬)

೭. ಏಕೆ ಸಾಳಗ ಶುದ್ಧ ಬಧಿರರಿಗೆ (ಸ.ಪ. ೯-೩೬)

೮. ಒಳಗೆ ಕುಜನರು ಹೊರಗೆ ಧರಣೀವಲಯಮಾನ್ಯರು (ಸ.ಪ. ೧-೩೪)

೯. ಕರಣಿಕನ ಹಗೆಗೊಂಡವಂಗೈಶ್ವರ್ಯ ಹಾನಿ (ಉ.ಪ. ೩-೧೮)

೧೦. ನೃಪತಿ ತಪ್ಪಿದೊಡಾರು ಕಾಯ್ವವವರು (ವಿ.ಪ. ೩-೨೬)

೧೧. ಬಡವರ ಕೋಪವೌಡಿಗೆ ಮೃತ್ಯು (ವಿ.ಪ. ೨-೨೯)

೧೨. ಬಲಹೀನರಿಗಾಪ್ತರಿಲ್ಲ (ವಿ.ಪ. ೩-೧೬)

೧೩. ಭಾರತದ ಕಥನ ಪ್ರಸಂಗವ ಕ್ರೂರಕರ್ಮಿಗಳೆತ್ತಬಲ್ಲರು (ಆ.ಪ.೧-೨೨)

೧೪. ಭಂಡರ ಬೈದು ಫಲವೇನು? (ದ್ರೋ.ಪ. ೫-೩೯)

೧೫. ಸಿರಿಯನುಳ್ಳವನೇ ಕುಲಜ (ಉ.ಪ. ೩-೩೮)

೧೬. ಕೆಲಬರು ಗಳಿಸಿದೊಡೆ ಕೆಲರುಂಡು ಜಾರುವರು (ವಿ.ಪ. ೩-೪೫)

೧೭. ಹಿರಿಯರಿಲ್ಲದ ಸಭೆ ಮನುಷ್ಯರ ನೆರವಿಯದು ಸಭೆಯಲ್ಲ (ಸ.ಪ. ೧೪-೮೧)

೧೮. ಕುರುಬರೂರಲಿ ಗಾಜು ಮಾಣಿಕ (ಸ.ಪ. ೮-೩೪)

೧೯. ಕುಲಹೀನರಲಿ ಗುಣವನರಸಲೇಕೆ? (ಕ.ಪ. ೨೫-೪೨)

೨೦. ಕೈದು ಮುರಿದಡೆ ಹಗೆಗೆ ತನ್ನಯ ಕೈದುಕೊಟ್ಟವರುಂಟೆ (ಅ.ಪ. ೨೫-೩೨)

೨೧. ಕೈದು ಹಿಡಿದರೆ ಕಲಿಗಳೇ ದ್ವಿಜರು? (ದ್ರೋ.ಪ ೫-೩೮)

೨೨. ಖಳರ ಹೃದಯದ ಕಾಳಕೂಟದ ಹುಳುಕುಬಲ್ಲರೆ ಮಾನ್ಯರು (ಸ.ಪ. ೧೩-೧೪)

೨೩. ಖೂಳರಿಗೆ ಭಂಡರಿಗೆ ತೆರುವರು ಧನವನೀಧರೆಯರಸುಗಳಿಗೆ ಸಹಜ (ಸ.ಪ. ೧-೩೩)

**ನಿಸರ್ಗಸಂಬಂಧದ ಗಾದೆಗಳು:**

೧. ಕೆಂಡದ ಮಳೆಯ ತಡೆವುದೇ ಕೊಡೆ (ಕ.ಪ. ೨೪-೪೮)

೨. ಜಿನುಗು ಮಳೆಯಲಿ ಪರ್ವತದ ಶಿಲೆ ನೆನೆವುದೇ (ಗ.ಪ. ೧-೫೫)

೩. ಆಲವಟ್ಟದ ಗಾಳಿಯಲಿ ಮೇಘಾಳಿ ಮುರಿವುದೇ (ದ್ರೋ.ಪ. ೧-೨೯)

೪. ಅರಗಿನರಸನ ಬಾಗಿಲಲಿ ದಳ್ಳುರಿಗೆ ತಡವೇ (ದ್ರೋ.ಪ. ೫-೪೧)

೫. ದಿನಪನಿದಿರಲಿ ದಿಟ್ಟತನವೇ ತಮದಗಾವಳಿಗೆ (ವಿ.ಪ. ೫-೧೪)

೬. ನೀರು ಹೊರಗಿಕ್ಕುವುದು ಮೂರೇ ಬಾರಿ (ವಿ.ಪ. ೩-೨೬)

೭. ಇರುಳು ಹಗಲಿನ ಬೀಜ (ದ್ರೋ.ಪ. ೭-೩೦)

೮. ಗಗನಕ್ಕಲಗನುಗಿದಡೆ ಗಗನವಳುಕುವುದೆ (ಭೀ.ಪ. ೩-೪೬)

೯. ದಿನೇಶನ ಮೇಳವನು ಮುದಿಗೂಬೆ ಮೆಚ್ಚದು (ಗ.ಪ. ೨೨-೨೪)

೧೦. ಬತ್ತಿದ ಕೆರೆಯೊಳಗೆ ಬಲೆಯೇಕೆ? (ದ್ರೋ.ಪ. ೧-೭)

೧೧. ಗಾಳಿಯುಪಶಮಿಸಿದೊಡೆ ವಹ್ನಿಜ್ವಾಲೆ ತಾನೇ ನಿಲುವುದು (ಉ.ಪ. ೯-೪೨)

೧೨. ಬೀತ ತರುಶುಕನಿಕರಕೀವುದೆ ಔತಣವ (ಅ.ಪ. ೧೬-೩೬)

**ಮಾನವಸ್ವಭಾವದ ಗಾದೆಗಳು:**

೧. ಹೋದ ಮಾರಿಯ ಕರೆದು ಮನೆಯೊಳಗಾದರಿಸಿದವರುಂಟೇ (ಅ.ಪ. ೨೨-೩೨)

೨. ಕೋಪವೆಂಬುದನರ್ಥ ಸಾಧನ (ಉ.ಪ. ೩-೧೩)

೩. ಗುಣಕೇಕೆ ಮತ್ಸರ (ವಿ.ಪ. ೮-೩೭)

೪. ವಾರಣಾಸಿಯ ಹೆಳವ ನಿಂದಿಸಿನಕ್ಕರೇನಹುದು (ಆ.ಪ. ೧-೨೫)

೫. ಬೆಂದುದ ಬೆದಕಿ ನೋಯಿಸಬೇಡ (ವಿ.ಪ. ೯-೩೧)

೬. ಮನುಜ ಧರ್ಮದ ಚಿತ್ತ ಚಪಲವಲ (ವಿ.ಪ. ೨-೨೬)

೭. ಸೇವಿಸುವುದೇ ಕಷ್ಟವೆಂಬುದು ಕೋವಿದರ ಮತ (ವಿ.ಪ. ೩-೪)

೮. ದುರ್ಜನರಿಗಂಜುವುದು ಲೋಕವು (ಉ.ಪ. ೪-೨೦)

೯. ಮಾನಧನರಿಗೆ ವಧೆಯೆನಿಪುದಭಿಮಾನ ಭಂಜನ (ಅ.ಪ. ೨೨-೪೦)

ಹೀಗೆ ಕುಮಾರವ್ಯಾಸನ ಕಾವ್ಯದಲ್ಲಿ ಹಲವಾರು ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಗಾದೆಗಳನ್ನು ಗಮನಿಸಬಹುದಾಗಿದೆ. ಈ ಗಾದೆಗಳಲ್ಲಿ ಗ್ರಾಮೀಣ ಬದುಕಿಗೆ ಸಂಬಂಧಿಸಿದ ಅಂಶಗಳನ್ನು ಗುರುತಿಸಬಹುದಾಗಿದೆ. ನಿತ್ಯಜೀವನದಲ್ಲಿ ಜನಬಳಕೆಯಲ್ಲಿ ಕಂಡು ಬರುವ ಗಾದೆಗಳನ್ನು ಹೋಲುವ ಸೂಕ್ತಿಗಳು ಸಾಕಷ್ಟು ಕಂಡುಬರುತ್ತದೆ. ಉದಾ:

೧. ಏಕೆ ಸಾಳಗ ಶುದ್ಧಬಧಿರರಿಗೆ (ಕಿವುಡನ ಮುಂದೆ ಕಿನ್ನರಿ ಬಾರಿಸಿದಂತೆ)

೨. ಕರಣಿಕನ ಹಗೆಗೊಂಡವನ ಐಶ್ವರ್ಯ ಹಾನಿ (ಶಾನುಭೋಗರ ಜೊತೆ ಹಗೆ ಬೇಡ)

೩. ಖೂಳರಿಗೆ ಭಂಡರಿಗೆ ತೆರುವವರು ಧನವನೀ ಧರೆಯರಸುಗಳು (ಪಾಪಿಗಳಿಸಿದ್ದು ಪರರ ಪಾಲು)

೪. ಕೈದು ಹಿಡಿದರೆ ಕಲಿಗಳೇ ದ್ವಿಜರು (ನರಿಗೆ ಬರೆ ಹಾಕಿದರೆ ಹುಲಿಯಾದೀತೆ)

೫. ಒಳಗೆ ಥಗೆ ನಗೆ ಹೊರಗೆ (ಬಾಯಲ್ಲಿ ಬೆಲ್ಲ ಬಗಲಲ್ಲಿ ಕತ್ತರಿ).

೬. ಕಾಲು ಮೆಟ್ಟಿನ ತೋಟಿ ಮಸಗಿತು (ಕಾಲು ಕೆರೆದ, ಜಗಳ ತೆಗೆದ)

೭. ನಾದ ಕೆಂಡವನುರುಹಿ ಮುಡಿದವರುಂಟೆ? (ಕೊಳ್ಳಿ ತೊಗೊಂಡು ತಲೆಯಲ್ಲಿಟ್ಟು ಕೊಂಡಂತೆ)

೮. ಬೇವು ತಾ ಪರಿಪಕ್ವವಾದರೆ ಹಾವು ಮೆಕ್ಕೆಗೆ ಸಾಕ್ಷಿಗಡ! (ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿ)

೯. ಹೋದಮಾರಿಯ ಕರೆದು ಮನೆಯೊಳಗಾದರಿಸಿದವರುಂಟೆ (ಬೀದೀಲಿ ಹೋಗೋ ಮಾರಮ್ಮ ಮನೆಗೆ ಬಂದು ಹೋಗಮ್ಮ ಅಂದಂತೆ)

೧೦. ಕೈದು ಮುರಿದರೆ ಹಗೆಗೆ ತನ್ನಯ ಕೈದು ಕೊಟ್ಟವರುಂಟೆ (ಕಾಸುಕೊಟ್ಟ ಚೇಳಿನಿಂದ ಕಡಿಸಿಕೊಂಡಂತೆ)

ಈ ರೀತಿ ಜನಸಾಮಾನ್ಯ ಗಾದೆಗಳನ್ನು ನೆನಪಿಸುವ ಸೂಕ್ತಿಗಳನ್ನು ಕಂಡಾಗ ಕುಮಾರವ್ಯಾಸನು ತನ್ನ ಕಾವ್ಯದಲ್ಲಿ ನಾಣ್ನುಡಿಗಳನ್ನು ಬಳಸಲು ಜನಪದ ಗಾದೆಗಳನ್ನು ಹಿನ್ನೆಲೆಯಾಗಿಟ್ಟುಕೊಂಡಿದ್ದಾನೆಂದರೆ ತಪ್ಪಿಲ್ಲ. ಶಿಷ್ಟ ಕವಿಗಳು ತಮ್ಮ ಕಾವ್ಯಗಳಲ್ಲಿ ಕೆಲವೊಮ್ಮೆ ನೇರವಾಗಿ ಗ್ರಾಮೀಣ ಗಾದೆಗಳನ್ನೇ ಬಳಸುವುದನ್ನು ಹಳಗನ್ನಡ ಮತ್ತು ನಡುಗನ್ನಡ ಕಾವ್ಯಗಳಲ್ಲಿ ಸಾಕಷ್ಟು ಕಾಣಬಹುದಾಗಿದೆ.

ಒಟ್ಟಿನಲ್ಲಿ ಕುಮಾರವ್ಯಾಸನು ಶಿಷ್ಟಕವಿಯಾಗಿ ಶಿಷ್ಟಕಾವ್ಯರಚಿಸಿದ್ದರೂ ಅದರ ಹೊರಕವಚ ಶಿಷ್ಟವಾಗಿದ್ದು ಒಳ ಹೊರಗೂ ಅಪ್ಪಟ ಜಾನಪದವಾಗಿದೆ ಎಂದು

ಹೇಳಬಹುದು. ಕೇವಲ ಭಾಷೆಯನ್ನಷ್ಟೆ ಅಲ್ಲದೆ ತನ್ನ ಕಾಲದ ಜನಜೀವನದ ದೇಸಿಯನ್ನು, ಸಂಸ್ಕೃತಿಯ ಸೊಗಸನ್ನು ಕಾವ್ಯದುದ್ದಕ್ಕೂ ತಂದಿದ್ದಾನೆ. ಜಾನಪದ ಸತ್ವವನ್ನು ಶ್ರೇಷ್ಠ ರೀತಿಯಲ್ಲಿ ಹೀರಿಕೊಂಡ ಸಮರ್ಥ ಶಿಷ್ಟಕವಿ. ಎಷ್ಟು ಸೊಗಸಾಗಿ ಜನತಾಮಹಾಕಾವ್ಯ ರಚಿಸಿ ಜನಗಳಿಗೆ ಆಡಿದಂತೆ ಆತ್ಮೀಯ ಅನುಭವ ಉಂಟುಮಾಡಬಲ್ಲದು ಎಂಬುದಕ್ಕೆ ಕರ್ಣಾಟ ಭಾರತ ಕಥಾಮಂಜರಿ ಶ್ರೇಷ್ಠ ಮಾದರಿ ಆಗಿದೆ. ಶಿಷ್ಟ ಮತ್ತು ಜಾನಪದ ಸಮನ್ವಯ ಕಾವ್ಯದಲ್ಲಿ ಹೇಗಿರಬೇಕು ಎಂಬುದಕ್ಕೆ ಆದರ್ಶಕಾವ್ಯ ನಾರಣಪ್ಪನ ಭಾರತವಾಗಿದೆ.

## ಗ್ರಂಥಋಣ


೧. ಕರ್ಣಾಟ ಭಾರತ ಕಥಾಮಂಜರಿ: ಸಂ. ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್, ೧೯೫೮, ಮೈಸೂರು ಸಂಸ್ಥಾನದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ.

೨. ಕನ್ನಡ ಶಿಷ್ಟ ಸಾಹಿತ್ಯದಲ್ಲಿ ಜಾನಪದ : ವಿವಿಧ ಲೇಖಕರು, ೧೯೯೩, ಕ.ಸಾ.ಪ.ಬೆಂ.

೩. ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು : ಡಾ. ವಿ.ಜಿ. ಪೂಜಾರ, ೧೯೯೭, ಪುಸ್ತಕ ಅಕಾಡೆಮಿ ಕಲ್ಬುರ್ಗಿ.

೪. ಜನಪದ ಒಗಟುಗಳು: ಡಾ. ಎಸ್. ಜಿ. ಇಮ್ರಾಪುರ, ೧೯೮೯, ಕ.ವಿ.ವಿ. ಧಾರವಾಡ.

೫. ಗ್ರಂಥಸ್ಥ ಗಾದೆಗಳು : ಸಂ. ಹೆಚ್. ಎಸ್. ಅಚ್ಚಪ್ಪ, ೧೯೬೯, ಪ್ರ: ಹೆಚ್. ಎಸ್. ಅಚ್ಚಪ್ಪ. ಮೈಸೂರು.

೬. ಗಾದೆಗಳು: ಡಾ. ಎ.ಕೆ. ರಾಮಾನುಜಂ, ೧೯೫೫, ಕ.ವಿ.ವಿ. ಧಾರವಾಡ.

೭. ಭಾರತೀಯ ಜಾನಪದ ಸಮೀಕ್ಷೆ: ಲೇ. ದುರ್ಗಾ ಭಾಗವತ್ ೧೯೭೪, ಅನು. ಕೆ.ಮರುಳಸಿದ್ದಪ್ಪ, ಬೆಂ.ವಿ.ವಿ.

೮. ಉತ್ತರ ಕರ್ನಾಟಕ ಜಾನಪದ ಸಾಹಿತ್ಯ: ಡಾ.ಎಮ್. ಎಮ್. ಕಲ್ಬುರ್ಗಿ, ೧೯೭೮, ಸಮಾಜ ಪುಸ್ತಕಾಲಯ, ಧಾರವಾಡ.

೯. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ: ಸಂ. ೪, ಬೆಂ.ವಿ.ವಿ.
೧೦. ಕಂನುಡಿಯ ಹುಟ್ಟು: ಡಾ. ಶಂ.ಭಾ.ಜೋಶಿ, ೧೯೮೧, ಕ.ಸಾ.ಪ. ಬೆಂ.
೧೧. ಕುಮಾರವ್ಯಾಸಭಾರತ: ಒಂದು ನೋಟ, ಸಿ.ಪಿ.ಕೆ. ೧೯೮೮, ಸುವಿದ್ಯಾಪ್ರಕಾಶನ, ಬೆಂಗಳೂರು.
೧೨. ಕುಮಾರವ್ಯಾಸ ನಿಘಂಟು: ಎನ್ಕೆ, ೧೯೭೧, ಸಮಾಜ ಪುಸ್ತಕಾಲಯ, ಧಾರವಾಡ.
೧೩. ಜಾನಪದ ಸೌಂದರ್ಯ: ದೇಜಗೌ, ೧೯೭೭, ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಮೈಸೂರು
೧೪. ಭಾರತೀಯ ಪರಂಪರೆ ಹಾಗೂ ಸಾಹಿತ್ಯದಲ್ಲಿ ಒಗಟು: ದುರ್ಗಾಭಾಗವತ್ (ಕನ್ನಡಕ್ಕೆ), ಡಾ. ಬಿ.ಎ. ವಿವೇಕರೈ, ೧೯೮೮, ಮಂಗಳೂರು.
೧೫. ವಿಮರ್ಶಾತ್ಮಕ ಲೇಖನಗಳು: ಭಾಗ-೨, ಕೊಟ್ರಶೆಟ್ಟಿ, ೧೯೭೬, ಕನ್ನಡ ಅಧ್ಯಯನ ಪೀಠ, ಕ.ವಿ.ವಿ. ಧಾರವಾಡ
೧೬. ಹಣತಿ ಉರಿಯುತಿದೆ: (ಜನಪದ ಗೀತೆ ಸಂಗ್ರಹ), ಕ.ರಾ.ಕೃ.
೧೭. ಕನ್ನಡ ವೃತ್ತಿ ಗಾಯಕ ಕಾವ್ಯಗಳು: ಸಂ. ಹಂಪ ನಾಗರಾಜಯ್ಯ
೧೮. ಕರ್ನಾಟಕ ಜನಜೀವನ: ಬೆಟಗೇರಿ ಕೃಷ್ಣಶರ್ಮ, ೧೯೮೨, ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
೧೯. ಜಾನಪದ ಸಾಹಿತ್ಯದರ್ಶನ: ಸಂ. ಡಾ.ಆರ್. ಹಿರೇಮಠ, ೧೯೭೪, ಕ.ವಿ.ವಿ. ಧಾರವಾಡ.
೨೦. ಕಾವ್ಯಾರಾಧನೆ: ಸಿಪಿಕೆ ೧೯೬೩, ಭಾರತೀ ಪ್ರಕಾಶನ, ಮೈಸೂರು
೨೧. ಕುಮಾರವ್ಯಾಸ ಪ್ರಶಸ್ತಿ: ಕ.ಸಾ.ಪ. ೧೯೭೮ ಬೆಂಗಳೂರು.
೨೨. ಕರ್ನಾಟಕ ಸಂಸ್ಕೃತಿ: ದೇವುಡು ೧೯೮೮, ಶಾರದಾ ಪ್ರಕಾಶನ, ಬೆಂ.
೨೩. ಕುಮಾರವ್ಯಾಸ ಸಂಕಿರಣ: ವಿವಿಧ ಲೇಖಕರು, ೧೯೮೦, ಕ.ಸಾ.ಪ. ಬೆಂ.
೨೪. ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ: ಡಾ. ಎಂ.ಜಿ. ಈಶ್ವರಪ್ಪ, ೧೯೯೫, ಕ.ಸಾ.ಪ. ಬೆಂ.

೨೫. ತಾಂಬೂಲಮಂಜರಿ: ಅನು, ಜಿ.ವಿ.ಜಿ. ನಾಯ್ಡು, ೧೯೬೩, ಉಷಾಸಾಹಿತ್ಯ ಮಾಲೆ, ಮೈಸೂರು.

೨೬. ಮಹಾಭಾರತದ ಬೆಳವಣಿಗೆ: ಎನ್.ಎಸ್. ೧೯೭೨, ಕಾವ್ಯಾಲಯ, ಮೈಸೂರು.

೨೭. ಕನ್ನಡ ಸಾಹಿತ್ಯದಲ್ಲಿ ಪ್ರಧಾನ ಮತ್ತು ಅಧೀನ ಸಂಸ್ಕೃತಿ: ವಿವಿಧ ಲೇಖಕರು, ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂ.

೨೮. ಜನಪದ ಗೀತೆಗಳಲ್ಲಿ ಮಹಾಭಾರತ: ಮೂಲ ಸಂಗ್ರಹ ಕ.ರಾ.ಕೃ. ನಿರೂಪಣೆ, ಸಿ.ಎನ್. ಚೆನ್ನವೀರಯ್ಯ, ಜನಪದ ಅಕಾಡೆಮಿ, ಬೆಂ.

೨೯. ಕನ್ನಡ ಸಾಹಿತ್ಯದಲ್ಲಿ ದೇಶೀಯತೆ: ವಿವಿಧ ಲೇಖಕರು, ೧೯೯೪, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂ.

೩೦. ಜಾನಪದ ಸಾಹಿತ್ಯದರ್ಶನ: ಭಾಗ-೨, ಡಾ.ಎಂ.ಎಸ್. ಸುಂಕಾಪುರ, ಕ.ವಿ.ವಿ. ಧಾರವಾಡ.

೩೧. ಕರ್ನಾಟಕ ಜಾನಪದ ಸಮೀಕ್ಷೆ: ಸಂ. ಡಾ.ಜಿ.ಶಂ. ಪರಮಶಿವಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು.

೩೨. ಸುವರ್ಣ ಸಂಚಯ: ಸಂ. ದೇಜಗೌ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

೩೩. ಜಾನಪದ ದರ್ಶನ: ಗೊರುಚ, ಬೈರಮಂಗಲ ರಾಗೌ, ಚಕ್ಕರೆ ಶಿವಶಂಕರ್, ಕ.ಸಾ.ಪ.ಬೆಂಗಳೂರು.

೩೪. ಮಹಾಭಾರತ ಸಮೀಕ್ಷೆ: ನ. ಸುಬ್ರಹ್ಮಣ್ಯಂ, ೧೯೭೩, ತಳುಕಿನ ವೆಂಕಣ್ಣಯ್ಯನವರ ಸ್ಮಾರಕ ಗ್ರಂಥಮಾಲೆ, ಮೈಸೂರು.

೩೫. ಕನ್ನಡ ಜಾನಪದ ವಿಶ್ವಕೋಶ: ಸಂ. ಡಾ. ಚಂದ್ರಶೇಖರಕಂಬಾರ, (ಭಾಗ ೧ ಮತ್ತು ೨) ಕ.ಸಾ.ಪ.ಬೆಂ.

೩೬. ಪ್ರಾಚೀನ ಜೈನ ಕನ್ನಡ ಸಾಹಿತ್ಯದಲ್ಲಿ ಜಾನಪದ ಕಥೆಗಳ ಅಧ್ಯಯನ: ಡಾ.ಎಂ.ಎ. ಜಯಚಂದ್ರ, ೧೯೯೪, ಕ.ಸಾ.ಪ.ಬೆಂ.

೩೭. ಒಳನೋಟಗಳು: ಅ.ರಾ.ಮಿತ್ರ, ಕನ್ನಡ ಸಂಘ, ಶೇಷಾದ್ರಿಪುರಂ ಕಾಲೇಜು ಬೆಂಗಳೂರು.

೩೮. ವಚನ ಭಾರತ: ಎ.ಆರ್. ಕೃಷ್ಣಶಾಸ್ತ್ರಿ, ಶಾರದಾ ಮಂದಿರ, ಮೈಸೂರು.

೩೯. ತ್ರಿಪದಿ ರಗಳೆ ಮತ್ತು ಜನಪದ ಸಾಹಿತ್ಯ: ಕಾಳೇಗೌಡ ನಾಗವಾರ, ಬೆಂ.ವಿ.ವಿ.

೪೦. ಜಾನಪದ ವಿಜ್ಞಾನ: ಡಾ. ಸೋಮಶೇಖರ ಇಮ್ರಾಪುರ, ಸಮಾಜ ಪುಸ್ತಕಾಲಯ ಧಾರವಾಡ

೪೧. ಜಾನಪದ ಸ್ವರೂಪ: ಡಾ.ಹಾಮಾನಾ.

೪೨. ಗದುಗಿನ ಭಾರತ, ಸಾಂಸ್ಕೃತಿಕ ಅಧ್ಯಯನ: ಡಾ. ದೇಜಗೌ, ೧೯೭೮, ಕ.ವಿ.ವಿ. ಧಾರವಾಡ.

೪೩. ಕುಮಾರವ್ಯಾಸ: ಕೀರ್ತಿನಾಥ ಕುರ್ತಕೋಟಿ, ೧೯೮೯, ಸಾಹಿತ್ಯ ಅಕಾಡೆಮಿ, ದೆಹಲಿ

೪೪. ಬರಹ-ಬಾಗಿನ (ಹಂಪನಾ ಅಭಿನಂದನಗ್ರಂಥ): ೧೯೯೬, ಸಹನಾ ಪ್ರಕಾಶನ, ಶಿವಮೊಗ್ಗ.

೦

ಸಾವಿರಾರು ವರ್ಷಗಳ ಕನ್ನಡ ಸಾಹಿತ್ಯವನ್ನು ಅಭ್ಯಸಿಸಿದಾಗ ಕೂಡ ನಮ್ಮ ಜಾನಪದದ ವಿವಿಧ ಮುಖಗಳು ಇದರಲ್ಲಿ ಅಂತರ್ಗತವಾಗಿರುವುದನ್ನು ಮತ್ತು ಅದಕ್ಕೆ ಒಂದು ಜೀವಶಕ್ತಿಯನ್ನು ಒದಗಿಸಿರುವುದನ್ನು ಗುರುತಿಸಬಹುದಾಗಿದೆ. ಪಂಪ, ರನ್ನ, ನಾಗವರ್ಮ, ನಯಸೇನ, ಬಂಧುವರ್ಮ, ಶಿವಕೋಟ್ಯಾಚಾರ್ಯ, ಬ್ರಹ್ಮಶಿವ, ಮುಂತಾದ ಎಲ್ಲಾ ಪ್ರಾಚೀನ ಕವಿಗಳಲ್ಲಿ, ವಚನ ಕೀರ್ತನೆ ರಗಳೆಗಳಲ್ಲಿ; ಕುಮಾರವ್ಯಾಸ, ಲಕ್ಷ್ಮೀಶ, ಸರ್ವಜ್ಞ; ಆಧುನಿಕ ಕತೆ, ಕಾದಂಬರಿ, ನಾಟಕ, ಕವಿತೆಗಳಲ್ಲಿ ಒಂದಲ್ಲ ಒಂದು ಪ್ರಮಾಣದಲ್ಲಿ ಈ ಜಾನಪದ ಅಂಶಗಳು ಜೀವಸತ್ವಗಳಾಗಿರುವುದನ್ನು ಸೂಕ್ಷ್ಮ ಪರಿಶೀಲನೆಯಿಂದ ಗುರುತಿಸಬಹುದಾಗಿದೆ.

ಸಾಹಿತ್ಯ ಹಿಡಿ ಮಂದಿಗಲ್ಲ, ಬಹುಮಂದಿಗೆ ಮತ್ತು ಬಹುಮಂದಿಯ ಜೀವನ ಸಾಕ್ಷಾತ್ಕಾರಕ್ಕೆ ಎಂಬ ಪ್ರಧಾನ ಕಾಳಜಿಯನ್ನು ವಚನಕಾರರು ಅನನ್ಯವಾಗಿ ತಮ್ಮ ವಚನಗಳಲ್ಲಿ ಪುನರವತಾರ ಮಾಡಿಸಿದ ಕಾರಣದಿಂದಾಗಿ ಸಹಜವಾಗಿ ವಚನ ಸಾಹಿತ್ಯ ಮತ್ತು ಅದರ ಜಾಡನ್ನೇ ಹಿಡಿದ ರಗಳೆ, ತ್ರಿಪದಿ ಸಾಹಿತ್ಯಗಳು ತಮ್ಮ ಸಾಹಿತ್ಯದ ಕೇಂದ್ರ ನೆಲೆಗಳನ್ನಾಗಿ ಜನರ ಭಾಷೆ, ಅನುಭವ ಮತ್ತು ಆಶಯಗಳನ್ನು ಆಶ್ರಯಿಸಿದವು. ಹಾಗೆಯೇ ರಾಜರನ್ನು ರಾಜಾಸ್ಥಾನವನ್ನು ಧಿಕ್ಕರಿಸಿ ಉದ್ದೇಶಪೂರ್ವಕವಾಗಿ ಜನದೆಡೆ ಕಣ್ಣು ತೆರೆದ ಕವಿಗಳು ಪುರಾಣ ಲೋಕಕ್ಕಿಂತ ವಿಶಿಷ್ಟವಾದ ಭಿನ್ನವಾದ ಮತ್ತು ಜೀವಂತವಾದ ಹೊಸ ಅನುಭವ ಲೋಕವನ್ನು ತಮ್ಮದನ್ನಾಗಿ ಮಾಡಿಕೊಂಡರು. ಹೀಗಾಗಿ ಸಾಹಿತ್ಯದ ವಸ್ತುವಿನಲ್ಲಿ, ಭಾಷೆಯಲ್ಲಿ, ಛಂದಸ್ಸಿನಲ್ಲಿ, ಪಾತ್ರ ಸೃಷ್ಟಿಯಲ್ಲಿ, ಆವರಣ ನಿರ್ಮಾಣದಲ್ಲಿ ಹಾಗೂ ನಿರೂಪಣೆಯಲ್ಲಿ ಜಾನಪದ ಆಶಯಗಳನ್ನು ಸಹಜವಾಗಿ ತುಂಬಿಕೊಂಡು ಈ ಸಾಹಿತ್ಯವನ್ನು ಜಡ್ಡು ಕಟ್ಟಿದ ರಾಜಾಸ್ಥಾನ ಸಾಹಿತ್ಯದ ಸಂಕೋಲೆಗಳಿಂದ ಹೊರಗೆಳೆದು ಜನರ ನಡುವೆ ತಂದವು.

ನಮ್ಮ ಸಾವಿರ ವರ್ಷಕ್ಕೂ ಹೆಚ್ಚುಕಾಲ ಬೆಳೆದು ಬಂದಿರುವ ಕನ್ನಡದ ಶಿಷ್ಟ ಸಾಹಿತ್ಯ ಎಷ್ಟು ಮತ್ತು ಹೇಗೆ ಜಾನಪದ ಸಂವೇದನೆಯನ್ನು ಕಲಾಪೂರ್ಣವಾಗಿ ಪ್ರಕಟಿಸಿದೆ ಎಂಬುದನ್ನು ತೌಲನಿಕವಾಗಿ ಅಧ್ಯಯನ ಮಾಡುವುದು ಅತ್ಯಂತ ಫಲಪ್ರದವೆಂದು ಭಾವಿಸಲಾಗಿದೆ. ಆದ್ದರಿಂದ ಅಕಾಡೆಮಿ 'ಶಿಷ್ಟ ಸಾಹಿತ್ಯ ಮತ್ತು ಜಾನಪದ ಸಂವೇದನೆ' ಎಂಬ ವಿಶಿಷ್ಟ ಮಾಲಿಕೆಯನ್ನು ಆರಂಭಿಸಿ ಪ್ರಾಚೀನ ಸಾಹಿತ್ಯದಿಂದ ಹಿಡಿದು ಇತ್ತೀಚಿನ ಸಾಹಿತ್ಯವನ್ನು ಜಾನಪದೀಯ ದೃಷ್ಟಿಯಿಂದ ತೌಲನಿಕವಾಗಿ ಅಧ್ಯಯನಕ್ಕೆ ಒಳಪಡಿಸುವ ಪ್ರಯತ್ನವೊಂದನ್ನು ಮಾಡುತ್ತಿದೆ. ಅದರ ಫಲವೇ ಈಗ ಬೆಳಕು ಕಾಣುತ್ತಿರುವ ಹನ್ನೆರಡು ಪುಸ್ತಕಗಳು.

ಡಾ. ಎಚ್. ಜೆ. ಲಕ್ಕಪ್ಪಗೌಡ